To M.R.Ry

Please send ...
purpose ...

...VDA

With compliments of the author.
31.7.26

ಮಾಗಡಿ ಕೆಂಪೇಗೌಡ.

ಬೆಂಗಳೂರು ಸ್ಥಾಪಕ ಮತ್ತು ಆತನ ವಂಶೀಕರು.

(ದ್ವಿತೀಯ ಮುದ್ರಣ.)

ಎಸ್. ಕೆ. ನರಸಿಂಹಯ್ಯ.

...ಟು ಪ್ರತ್ಯೇಕ.

To
M. R. Ry
R. H. Despondhe. M. A

MAGADI KEMPE GOWDA

With the best compliments of the author. 31·7·24

The Founder of Bangalore and his Ancestors.

ಮಾಗಡಿ ಕೆಂಪೇಗೌಡ

ಬೆಂಗಳೂರು ಸ್ಥಾಪಕ ಮತ್ತು ಆತನ ಪೂರ್ವೀಕರು.

ಎಸ್. ಕೆ. ನರಸಿಂಹಯ್ಯನವರಿಂದ
ರಚಿಸಲ್ಪಟ್ಟಿತು.

ದ್ವಿತೀಯ ಮುದ್ರಣ ೩೦೦೦ ಪ್ರತಿಗಳು.

ಬೆಂಗಳೂರು
ಒಕ್ಕಲಿಗರ ಸಂಘದ ಮುದ್ರಾಲಯ,
೧೯೨೪.

ಕ್ರಯ ೦-೮-೦. ಪೋಸ್ಟೇಜು ಪ್ರತ್ಯೇಕ.

ಉಪೋದ್ಘಾತ.

ಈ ಭರತಭೂಮಿಯ ನಾಭಿಯಂತಿರುವ ಕರ್ಣಾಟ ಮಂಡಲದಲ್ಲಿ ಹಲವು ನಾಡುಗಳನ್ನು ಸ್ಥಾಪಿಸಿ ಐದುನೂರು ವರ್ಷಗಳ ವರೆಗೆ ಪ್ರಭುತ್ವ ಮಾಡಿ ಕೀರ್ತಿಶೇಷರಾದ ಗೌಡರಸರ ಚರಿತೆಯು ಇದುವರೆಗೆ ಕನ್ನಡ ನುಡಿಯಲ್ಲಿ ಪ್ರಕಟವಾಗಿರುವುದಿಲ್ಲ. ಈಗಣ ಮೈಸೂರು ಸಂಸ್ಥಾನಕ್ಕೆ ಉಪರಾಜಧಾನಿಯೆನಿಸಿ ಸಕಲ ವೈಭವದಿಂದ ಶೋಭಿಸುತ್ತಿರುವ ಕಲ್ಯಾಣಪುರವೆಂಬ ಅನ್ವರ್ಥನಾಮಧೇಯವುಳ್ಳ ಬೆಂಗಳೂರು ನಗರವನ್ನೂ, ಮಾಗಡಿ, ಹೊಸಕೋಟೆ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಕೊರಟಗೆರೆ ಮುಂತಾದ ಊರುಗಳನ್ನೂ, ದಕ್ಷಿಣ ಕಾಶಿಯೆನಿಸಿದ ಶಿವಗಂಗೆ, ಚೆನ್ನರಾಯನದುರ್ಗ, ಸಾವನದುರ್ಗ, ರಾಮಗಿರಿ ಮುಂತಾದ ಗಿರಿದುರ್ಗಗಳನ್ನೂ, ದೇವಾಲಯ ತಟಾಕಾರಾಮಗಳನ್ನೂ ನಿರ್ಮಿಸಿ, ಬ್ರಾಹ್ಮಣ, ಲಿಂಗಾಯತ, ವಿದ್ವಜ್ಜನ, ಶೂರಭಟಾದಿಗಳಿಗೆ ಗ್ರಾಮ, ಭೂಮಿ, ಮಾನ್ಯ, ಮಿರಾಸೆಗಳನ್ನು ಏರ್ಪಡಿಸಿ, ವ್ಯವಸಾಯ ವ್ಯಾಪಾರ ಮುಂತಾದ ಪ್ರಜೆಗಳ ಐಹಿಕಸಾಧನೆಗೆ ಬೇಕಾದ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿಕೊಟ್ಟು, ಧರ್ಮದ ಮೇರೆಯನ್ನು ಮೀರದಂತೆ ಜನವತ್ಸಲರೆನಿಸಿ ರಾಜ್ಯವಾಳಿ ಬಾಳಿದ ಮಾಗಡಿಯ ಕೆಂಪೇಗೌಡನ ಮತ್ತು ಆತನ ವಂಶದವರ ಚರಿತ್ರೆಯು ಈಗಣ ಪಾಠಶಾಲೆಗಳಲ್ಲಿ ನಡೆಯುತ್ತಿರುವ ಲವ ಚರಿತ್ರಗ್ರಂಥದಲ್ಲಿಯೂ ಕಂಡುಬರುವುದಿಲ್ಲ. ಈಗ ಮೂರು ನೂರು ವರ್ಷಗಳ ಹಿಂದೆ ನಮ್ಮ ದೇಶದಲ್ಲಿಯೇ ನಾಡನ್ನು ಕಟ್ಟಿ ಸದ್ಗುಣಿಗಳೆನಿಸಿ ರಾಜ್ಯವಾಳಿ ಬಾಳಿದ ಗೌಡರಸರ ಚರಿತ್ರೆಯು ಈ ದೇಶದ ಬಾಲಕ ಬಾಲಕಿಯರಿಗೆ ಲೇಶಮಾತ್ರವೂ ತಿಳಿಯದಿದೆ ಎಂದರೆ ತುಂಬ ವ್ಯಾಕುಲವುಂಟಾಗುತ್ತದೆ. ಈ ಕುಂದನ್ನು ಪರಿಹರಿಸಬೇಕೆಂದು ಬಗೆದು ಈಯರಸರಾಳಿದ ನಾಡುಗಳಲ್ಲಿ ಸಂಚಾರಮಾಡಿ, ಇವರ ರಾಜ್ಯವಿಚಾರದಲ್ಲಿ ದೊರೆಯುವ ಶಾಸನ, ಕಾವ್ಯ, ಚರಿತ್ರೆ, ಇತರ ಪತ್ರಗಳು ಮುಂತಾದುವುಗಳನ್ನೆಲ್ಲ ಸಂಗ್ರಹಿಸಿ ಈ ಚರಿತೆಯನ್ನು ಬರೆದಿದ್ದೇನೆ. ಈ ವಿಷಯದಲ್ಲಿ ಹೆಚ್ಚಾಗಿ ಸಂಗತಿಗಳನ್ನು ಬಲ್ಲ ಮಹ

ನೀಯರೂ ಇತರ ವಿಧವಾದ ನಿದರ್ಶನಗಳನ್ನಿಟ್ಟುಕೊಂಡಿರುವ ದೇಶಾಭಿಮಾನಿಗಳೂ ಅನುಗ್ರಹಿಸಿ ತಮತಮಗೆ ತಿಳಿದಿರುವ ವಿಷಯಗಳನ್ನೂ ತಮ್ಮ ಬಳಿಯಲ್ಲಿರುವ ಪತ್ರ ಮುಂತಾದ ಇತರ ನಿದರ್ಶನಗಳನ್ನೂ ಕಳುಹಿಸಿಕೊಟ್ಟರೆ, ಈ ಚರಿತ್ರೆಯನ್ನು ಕಾಲಕ್ರಮದಲ್ಲಿ ತಿದ್ದಿ ಸರಿಪಡಿಸಿಕೊಳ್ಳುತ್ತೇನೆ.

ಈ ಕಾರ್ಯದಲ್ಲಿ ನನಗೆ ಶಕ್ತಿಯಿಲ್ಲ ; ನಮ್ಮ ದೇಶಭಾಗದಲ್ಲಿ ಪ್ರಭುಗಳಾಗಿದ್ದ ಇಂಥ ಮಹನೀಯರ ವಿಚಾರವನ್ನು ಕನ್ನಡ ನಾಡಿನವರಿಗೆ ತಿಳುಹಬೇಕೆಂಬ ಉದ್ದೇಶದಿಂದಲೂ, ಯಥಾಮತಿಯಾಗಿ ದೇಶಸೇವೆ ಭಾಷಾಸೇವೆಗಳನ್ನು ಮಾಡಬೇಕೆಂಬ ಉತ್ಸಾಹದಿಂದಲೂ ಅಲ್ಪಮತಿಯಾದ ನಾನು ಈ ಕೆಲಸಕ್ಕೆ ಕೈಯಿಕ್ಕಿದೆನು.

ಭಾಷಾಭಿಮಾನಿಗಳೂ ದೇಶಾಭಿಮಾನಿಗಳೂ ಆದ ಕನ್ನಡ ನಾಡಿನ ಸಕಲರೂ ಇದರಲ್ಲಿರುವ ಗುಣಲೇಶವನ್ನು ಗ್ರಹಿಸಿದರೆ ನನ್ನ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಈ ಚರಿತ್ರೆಯನ್ನು ಬರೆಯುವ ಕಾಲದಲ್ಲಿ ನನಗೆ ಸಹಾಯ ಮಾಡಿದ ಸಕಲರಿಗೂ ತಲೆಬಾಗಿ ವಂದಿಸುತ್ತೇನೆ.

ಮೊದಲನೆಯ ಮುದ್ರಣದ ಪ್ರತಿಗಳೆಲ್ಲವೂ ಮುಗಿದುಹೋದುವು. ಪ್ರತಿಗಳು ಬೇಕೆಂದು ಹಲವರು ಕೇಳುತ್ತ ಬಂದುದರಿಂದ, ಈವರೆಗೆ ನಮಗೆ ತಿಳಿದು ಬಂದ ಕೆಲವು ಹೊಸದಾದ ವಿಷಯಗಳನ್ನು ಸೇರಿಸಿ ಈ ಚರಿತ್ರೆಯನ್ನು ಎರಡನೆಯ ಆವೃತ್ತಿ ಮುದ್ರಿಸಲಾಯಿತು.

ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಒಕ್ಕಲಿಗರ ಸಂಘದ ಮುದ್ರಾಲಯಾಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಇತಿ
ಸಜ್ಜನ ವಶಂವದ
ಎಸ್. ಕೆ. ನರಸಿಂಹಯ್ಯ.

"ಸಿದ್ಧರಾಮ ವಿಲಾಸ"
ಶಂಕರಪುರ, ಬೆಂಗಳೂರು.

OPINIONS.

From

RAJASABHABHUSHANA DEWAN BAHADUR

K. P. PUTTANNA CHETTY, ESQ., C. I. E.

DEAR SIR,

I have glanced through your " HISTORY OF MAGADI KEMPE GOWDA and his Ancestors " in Kannada with much pleasure. I believe this is the first attempt to write a historical account of the famous warrior and ruler whose name, even after the lapse of so many centuries, is a household word in this part of Mysore. Monuments of his administration and piety are to be seen all over the tract ruled by him. The inam lands and villages granted by him are to this day enjoyed in grateful remembrance. We cannot afford to forget the great deeds of our former rulers and you have done a public service in compiling this record and rescuing from oblivion an interesting period of Mysore's early history.

This book is written in popular style.

From

RAJAKARYA PRASAKTHA, RAO BAHADUR

M. SHAMA RAO, ESQ., M. A.,

Retd. Inspector-General of Education in Mysore, Bangalore.

DEAR SIR,

I thank you very much for your kindness in sending me your monograph on MAGADI KEMPE GOWDA.

His name is well-known even now in Bangalore and all the adjacent parts and he is remembered with grateful appreciation by the people on account of his numerous good qualities and on account of his many charities.

Your book bears ample testimony to the good deeds of KEMPE GOWDA and his Ancestors. Tbe book is written in a very readable style and includes many facts not generally known hitherto. I hope other Palegars also will receive attention at your hands.

From

B. RAMA RAO, Esq., M. A., LL.B.

Senior Translator to Government of Madras

DEAR SIR,

I have to thank you for the advance copy of your Kannada 'History of the MAGADI KEMPEGOWDA and his family' so kindly sent to me. I read the book with much interest and found a good deal in it which deserves to be widely known among the Kannada public. I have always felt it a shame that the Kannada people have lagged far behind their Andhra, Maratha and Bengal brethern in the matter of publishing the historical records pertaining to their conntry. I cannot think of a more direct method of rousing the patriotism of a people than by publishing the past records of the greatness of their ancestors. I therefore, congratulate you most heartily upon the valuable work you have begun and trust that your labours will be amply rewarded.

It may interest you to know that I am also engaged in doing work of the same kind.

From

N. VENKATESA IYENGAR, Esq, B.A.

DEAR SIR,

Many thanks for the copy of the History of MAGADI KEMPE GOWDA and his Ancestors you have so kindly sent me.

I have read it with great interest and much profit to myself.

The history of this line of rulers is traced to its source in the work and a flood of light is thrown on a little known period in the history of a part of the present Mysore State, over which these Vokkaligar chiefs held sway.

The many Temples, tanks, hill forts and topes that still exist in large numbers in the Districts of Kolar, Bangalore and Tumkur bear eloquent testimony to the foresight, wisdom and beneficence of these rulers. Every Vokkaligar, nay every Kannadiga, should be proud of the achievements of Kempe Gowda and his Ancestors'

The language is vigorous.

You have done a service to Kannada historical literature by the publication of this work. It is hoped many more similar works will follow from your pen.

From RAO BAHADUR

R. NARASIMHA CHAR Esqr., M.A.,

Director of Archæological Researches in Mysore, Bangalore.

DEAR SIR,

It was with great pleasure that I went through your book on MAGADI KEMPEGOWDA and his Ancestors. The book contains much useful information culled from various sources and bears unmistakable testimony to your industry and patriotism.

You have treated of only three chiefs of the family, but there were several others. If you had given a pedigree of the family, it would have been very useful but this can be done in a future edition of the book.

(Accordingly eight chiefs were included in this second edition.)

Author.

From

Sir M. VISWESWARAYA, Esq., K. C. I. E.

Late Dewan of Mysore.

DEAR SIR,

I thank you for your courtesy in sending me a copy of the History of MAGADI KEMPE GOWDA and his ancestors.

I am glad you are putting your opportunities and knowledge to good purpose. You must not mind if I am not able to find time to give a considered opinion of your book.

ಮ|| ರಾ|| ಬಿ. ಪುಟ್ಟಯ್ಯ, ಬಿ. ಎ., ಗವರ್ನ್ಮೆಂಟ್ ಪ್ರೆಸ್ ಸೂಪ್ರಿಂಟೆಂಡೆಂಟ್‍ರವರು ಬರದ ಅಭಿಪ್ರಾಯ.

ತಾವು ದಯವಿಟ್ಟು ಕಳುಹಿಸಿಕೊಟ್ಟ "ಕೆಂಪೇಗೌಡರ ಚರಿತ್ರೆ" ಯನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದ್ದೇನೆ. ಅದನ್ನು ಆಮೂಲಾಗ್ರವಾಗಿ ಓದಿ ಬಹಳ ಆನಂದಪಟ್ಟೆನು. ಎಲ್ಲರಿಗೂ ತಿಳಿಯುವ ಹಾಗೆ ಸುಲಭವೂ ಸುಲಭ ಲಲಿತವೂ ಆದ ಶೈಲಿಯಲ್ಲಿ ಬರೆದಿರುವಿರಿ. ಅಲ್ಲಲ್ಲಿ ಉತ್ಸಾಹ ಪೂರಿತವೂ, ಉತ್ತೇಜನಕಾರಿಯೂ, ಮತ್ತು ವಾತ್ಸಲ್ಯವರ್ಧಕವೂ, ಆದ ವಾಗ್ವೈಖರಿಯ ಸೊಬಗು ಕಂಡುಬರುವುದು.

ಜೀವಿನ ಚರಿತ್ರೆಗಳು ಕನ್ನಡದಲ್ಲಿ ಅತಿವಿರಳ. ಅದರಲ್ಲಿಯೂ ನಮ್ಮ ಮೈಸೂರು ಸಂಸ್ಥಾನದ ನಿರ್ಮಾಣಕ್ಕೆ ಆದಿಕರ್ತರಾದ ಕೆಂಪೇಗೌಡರವರ ಜೀವನಚರಿತ್ರೆಯನ್ನು ಸವಿಸ್ತಾರವಾಗಿ ಬರೆದಿರುವದು ಇದೇ ಮೊದಲು. ಇದಕ್ಕಾಗಿ ದೇಶವತ್ಸಲರಾದ ಕನ್ನಡಿಗರೆಲ್ಲರೂ ತಮಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ.

ಈ ಪುಸ್ತಕದಲ್ಲಿ ಕೆಂಪೇಗೌಡರ ಚರಿತೆಯೊಂದನ್ನಲ್ಲದೆ, ಅವರ ವಂಶೀಕರಲ್ಲಿ ಪ್ರಖ್ಯಾತರಾದ ವೀರರೂ ಶೂರರೂ, ಆದ ಗೌಡರುಗಳ ಚರಿತ್ರೆಗಳನ್ನೆಲ್ಲಾ ಸಂಕ್ಷೇಪವಾಗಿ ತಿಳಿಸಿರುವಿರಿ. ಈಗ ಮೈಸೂರು ಸಂಸ್ಥಾನವೆಂದು ಹೆಸರ್ಗೊಂಡಿರುವ ದೇಶವೆಲ್ಲವನ್ನೂ ಆದಿಯಲ್ಲಿ ನಮ್ಮ ಒಕ್ಕಲಿಗ ಗೌಡರುಗಳು, ತಮ್ಮ ಸಾಹಸ ಪರಾಕ್ರಮಗಳಿಂದ ಸಾಧಿಸಿ ಕಟ್ಟಿರುವರೆಂಬುದನ್ನು ತಮ್ಮ ಪುಸ್ತಗದಿಂದ ಓದಿ ತಿಳಿದುಕೊಳ್ಳಬಹುದು. ಸಂಸ್ಥಾನಕ್ಕೆ ಬೆಂಬಲ ಪ್ರಾಯರೆಂದು ಈಗಲೂ ಪ್ರಸಿದ್ಧಿಗೊಂಡಿರುವ ಸಮಸ್ತ ಒಕ್ಕಲಿಗರಿಗೂ, ಈ ತಿಳುವಳಿಕೆಯು ತುಂಬಾ ಹೆಮ್ಮೆಯನ್ನುಂಟುಮಾಡತಕ್ಕದಾಗಿರುವುದು. ಇದರ ಮೇಲೆ ಈ ಮಹನೀಯರಿಂದ ಗೌಡರಾಜರುಗಳು ಮಾಡಿರತಕ್ಕ ದಾನಧರ್ಮಪರೋಪಕಾರಗಳನ್ನೂ, ಕಟ್ಟಿಸಿರುವ ಆಶ್ಚರ್ಯಕರವಾದ ದೇವಸ್ಥಾನಗಳನ್ನೂ, ಕೆರೆಗಳನ್ನೂ, ಗವಿಗಳನ್ನೂ, ಗೋಪುರಗಳನ್ನೂ ಮತ್ತು ಬಿಟ್ಟು ಹೋಗಿರುವ ಪೂರ್ವದ ಸೊಬಗನ್ನು ಸೂಚಿಸುವ ಕೋಟೆ, ಕೊತ್ತಲ, ಗಿರಿ ದುರ್ಗಗಳನ್ನೂ ನೋಡಿರುವ ನಮಗೆ, ನಮ್ಮ ಪೂರ್ವಿಕರ ಪರಾಕ್ರಮ, ದೈವಭಕ್ತಿ, ಸ್ವಾರ್ಥತ್ಯಾಗಗಳು ಸ್ಫೂರ್ತಿಗೆ ಬಂದು ತುಂಬಾ ಪ್ರೋತ್ಸಾಹ, ಉತ್ಸಾಹ, ಸನ್ಮಾರ್ಗಪ್ರದರ್ಶಕಗಳಾಗಿರುವುವು.

ತಮ್ಮ ಪುಸ್ತಕವು ಈ ರೀತಿ ಬಹು ಉಪಯುಕ್ತವಾದುದಾಗಿರುವುದು. ತಾವು ಅದನ್ನು ಕೈಗೊಂಡು ಬಹಳ ಶ್ರಮವಹಿಸಿ ಸಾಮಗ್ರಿಗಳನ್ನು ಸಂಗ್ರಹಿಸಿ, ಕನ್ನಡಿಗರ ಪ್ರಯೋಜನಕ್ಕೋಸ್ಕರ ಪ್ರಕಟಿಸಿರುವುದು, ತಮಗೆ ಹಿರಿಯರ ಮೇ

ಲಿರುವ ಅಸಾಧಾರಣವಾದ ಭಕ್ತಿಯನ್ನೂ, ನಮ್ಮ ಸಂಸ್ಥಾನದ ಮೇಲಿರುವ ಅಸದೃಶವಾದ ವಾತ್ಸಲ್ಯವನ್ನೂ, ಮತ್ತು ಪ್ರಜಾ ಪಾಲನೆಯಲ್ಲಿರುವ ವಾತ್ಸಲ್ಯವನ್ನೂ ಚನ್ನಾಗಿ ಪ್ರಕಾಶಕ್ಕೆ ತಂದು ತಮಗೆ ಕೀರ್ತಿಯನ್ನುಂಟುಮಾಡಿರುವುದು. ತಾವು ಮಾಡಿರುವ ಉಪಕಾರಕ್ಕೋಸ್ಕರ ನಾವೆಲ್ಲರೂ ತಮಗೆ ಬಹಳ ಕೃತಜ್ಞರಾಗಿರುವೆವು.

ಮ|| ರಾ|| ಎಂ. ಸುಬ್ಬಯ್ಯ, ಬಿ. ಎ., ಜನರಲ್ ಸೆಕ್ರೆಟರಿ, ಒಕ್ಕಲಿಗರ ಸಂಘ ಯವರಿಂದ.

ನೀವು ಒಕ್ಕಲಿಗ ಗೌಡರ ಆಳಿಕೆ ಮತ್ತು ಮಾಗಡಿ ಕೆಂಪೇಗೌಡನ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸಿರುವ ಪುಸ್ತಕವು ಕರಗತವಾಯ್ತು. ಇದಕ್ಕಾಗಿ ನೀವು ಮೂರು ವರ್ಷಗಳಿಂದ ಸಾವನದುರ್ಗ, ಶಿವಗಂಗೆ, ಮಾಗಡಿ ಮೊದಲಾದ ಅನೇಕ ಸ್ಥಳಗಳಿಂದ ಸಂಗ್ರಹಿಸಿರುವ ನಾನಾ ಸಂಗತಿಗಳನ್ನೂ, ಶಿಲಾಶಾಸನಗಳಿಂದಲೂ, ನೂತನ ವಿಷಯುಗಳನ್ನೂ, ಪ್ರಕಟಪಡಿಸಿ ಅಮೂಲ್ಯವಾದೊಂದು ಚರಿತ್ರೆ ಮಾಡಿರುವಿರಿ. ಹಿಂದುಳಿದು ಹೋಗಿ ಈಗೀಗ ಒಂದೊಂದು ಸೋಪಾನವನ್ನೇರುತ್ತಿರುವ ನಮ್ಮ ಒಕ್ಕಲಿಗರ ಜನಾಂಗಕ್ಕಿದು ಸಕಾಲಕ್ಕೆ ಸರಿಯಾಗಿ ಹೊರಹೊರಟ ಪುಸ್ತಕವಾಗಿರುತ್ತದೆ. ಈ ಪುಸ್ತಕದಲ್ಲಿನ ಸಂಕ್ಷೇಪ ಚರಿತ್ರೆಯು ಇದೇ ಫೆಬ್ರುವರಿ ತಾರೀಖು ೨೨ ರ ನಮ್ಮ ಪತ್ರಿಕೆಯ ೮ ನೇ ಪುಟದಲ್ಲಿ ಬಂದಿರುತ್ತೆ. ನೋಟಕರಿಗೆ ಆಶ್ಚರ್ಯಕರವಾದ ಗುಡಿಗೋಪುರಗಳನ್ನೂ, ಕೋಟೆ ಕೊತ್ತಲಗಳನ್ನೂ ಕಟ್ಟುವಂತಹ ಗೌಡದೊರೆಗಳ ಧರ್ಮಬುದ್ಧಿಯನ್ನೂ, ಸಾವನದುರ್ಗದ ನೆಲಪಟ್ಟಣದ ವೈಚಿತ್ರವನ್ನೂ, ಮೈಸೂರಿನ ಸೂರ್ಯನಂತೆ ರಾರಾಜಿಸುತ್ತಿರುವ ಬೆಂಗಳೂರನ್ನು ಕಟ್ಟಿದ ಶಕ್ತಿಯನ್ನೂ, ಪ್ರಜೆಗಳ ಕಷ್ಟನಿಷ್ಠೂರಗಳಿಗೆ ಮನಗೊಟ್ಟು ಅವರಿಗೆ ನಾನಾ ವಿಧದಲ್ಲಿ ಹಿತಚಿಂತಕರಾಗಿರುವಂತಹ ಪ್ರಜಾರಂಜನೈಕಪರಾಯಣತೆಯನ್ನೂ ಈ ಚರಿತ್ರೆಯು ಸೂಚಿಸುತ್ತಿದೆ. ಅಮೌಲ್ಯವಾದ ಪುಸ್ತಕವನ್ನೋದಿ ತಿಳಿಯುವುದರಿಂದ ಯಾವ ಒಕ್ಕಲಿಗರಿಗೆ ತಾನೆ ರೋಮಾಂಚ ಉಂಟಾಗದು? ಈ ಚರಿತ್ರೆಯನ್ನು ವಿಶೇಷ ಶ್ರಮದಿಂದ ರಚಿಸಿದುದಕ್ಕಾಗಿ ಒಕ್ಕಲಿಗರ ಜನಾಂಗವೇ ನಿಮಗೆ ಋಣಿಯಾಗಿರಬೇಕಾಗಿದೆ. ಕೈಗೆ ಸಕ್ಕಿದ ಚಿಕ್ಕ ಪುಟ್ಟ ಕಟ್ಟು ಕಥೆಗಳನ್ನು ಓದಿ ಆನಂದಿಸುವ ನಮ್ಮ ಜನರು ಇದನ್ನೋದಲು ಕುತೂಹಲಪಡದೇ ಇರಲಾರರು. ಈ ಪುಸ್ತಕ ಪಠನದಿಂದ ನಮ್ಮವರ ಹಿಂದಿನ ಚರಿತ್ರೆಯು ತಿಳಿದು ನಾವು ಅಂತಹವರ ವಂಶೀಯರೆಂಬುದು ವೇದ್ಯವಾಗುವುದು.



ಅಕಾಲ ಮೃತ್ಯುಗ್ರಸ್ತನಾದ ನನ್ನ ಅಳಿಯ

ಎಸ್. ಕೆಂಪಣ್ಣನ (S. K. Gowd)

ಜ್ಞಾಪಕಾರ್ಥವಾಗಿ

ಈ ಗ್ರಂಥವನ್ನು ಅರ್ಪಿಸಿರುತ್ತೇನೆ.

ವಿಷಯಸೂಚನೆ.

ಮಾಗಡಿ ಕೆಂಪೇಗೌಡ-ಆತನ ಪೂರ್ವಿಕ ವಂಶಾವಳಿ.

ಆವತಿನಾಡ ಪ್ರಭುಗಳು. ಪೇ. ೧೫

೧೩ ನೆ ಶತಮಾನದ ಅಂತ್ಯ.

೧ ರಣಭೈರೇಗೌಡ (ಮೂಲಪುರುಷ) ಯಲಹಂಕ, ಬೆಂಗಳೂರು, ಮಾಗಡಿ

೨ ಮಲ್ಲಭೈರೇಗೌಡ (ದೇವನಹಳ್ಳಿ, ದೊಡ್ಡಬಳ್ಳಾಪುರ ಸ್ಥಾಪಕ)

೩ ಸಣ್ಣಭೈರೇಗೌಡ (ದೇವನಹಳ್ಳಿ ರಾಜತ್ವಕ)

೪ ವೀರೇಗೌಡ }
೫ ಮರೇಗೌಡ } ಚಿಕ್ಕಬಳ್ಳಾಪುರ ಸ್ಥಾಪಕರು

೬ ಗಿಡ್ಡೇಗೌಡ

೭ ತಮ್ಮೇಗೌಡ (ಸುಗಟೂರನಾಡು ಹೊಸಕೋಟೆ ಮುಂತಾದವುಗಳ ಸ್ಥಾಪಕ)

೮ ಗಿಡ್ಡಪ್ಪಗೌಡ

ದೇವಂಡಹಳ್ಳಿ ದೊಡ್ಡಬಳ್ಳಾಪುರದ ನಾಡುಗೌಡರ ವಂಶಾವಳಿ.

ಪೇ. ೫೦, ೫೧, ೫೨, ೫೩

೧ ಮಲ್ಲಭೈರೇಗೌಡ ೧೫೦೧

|

ಸಹೋಧರ

೨ ಸಣ್ಣಭೈರೇಗೌಡ ೪೦ ವರ್ಷ ಆಳಿಕೆ

|

೩ ಭೈರೇಗೌಡ ೨೫ ,, ,,

|

೪ ದಯ್ಯಾಲ ಭೈಚೇಗೌಡ ೩೭ ,, ,,

|

೫ ಮುದ್ದುಭೈರೇಗೌಡ ೨೦ ,, ,,

|

೬ ಇಮ್ಮಡಿ ಸಣ್ಣಭೈರೇಗೌಡ ೩೭ ,, ,,

|

೭ ಗೋಪಾಲಗೌಡ ೩೫ ,, ,,

|

೮ ದೊಡ್ಡಭೈರೇಗೌಡ ೫೪ ,, ,,

|

೯ ರಂಗಪ್ಪಗೌಡ ೧೦ ತಿಂಗಳು ,,

|

೧೦ ಚಿಕ್ಕಪ್ಪಗೌಡ ೩ ತಿಂಗಳು ,,

ಯೆಲಹಂಕ, ಬೆಂಗಳೂರು, ಮಾಗಡಿ ನಾಡು ಪ್ರಭುಗಳ

ವಂಶಾವಳಿ.

ಪೇ. ೧೮

ರಣಭೈರೇಗೌಡ ೧೩ ನೆ ಶತಮಾನ.

ಜಯಗೌಡ, ಸಣ್ಣಭೈರೇಗೌಡ, ಹಾವಳಿ ಭೈರೇಗೌಡ, ಸಣ್ಣಮಲಭೈರೇಗೌಡ,
೧೪೧೮—೧೪೩೩

ಗಿಡ್ಡೇಗೌಡ ೧೪೩೩—೧೪೪೩

ಕೆಂಪನಂಜೇಗೌಡ (ಕೆಂಪನಾಚೆಗೌಡ) ೧೪೪೩—೧೫೧೩—(ದೀರ್ಘಕಾಲ ಆಳಿದವನು.)

ಹಿರಿಯ ಕೆಂಪೇಗೌಡ ೧೫೧೩—೧೫೬೯

ಇಮ್ಮಡಿ ಕೆಂಪಭೂಪ ೧೫೬೯—೧೬೫೮ (ಶ್ರೀರಂಗರಾಯನನ್ನು ಗೆದ್ದವನು)

(ಇವನ ಪತ್ನಿಯರು)

ಕೆಂಪಮಾಂಬಾ —————— ಲಿಂಗಮಾಂಬಾ

ಮುಮ್ಮಡಿ ಕೆಂಪಭೂಪ ೧೬೫೮—೭೮
ಷಹಜಿಯಂನು ಗೆದ್ದವನು (ಮಳೆ ಕೆಂಪರಾಯ)

ಸುಬ್ರಮಣ್ಯಭೂಪ.

ಹಲಸಭೂಪ.

ಕೆಂಪವೀರರಾಜ

ಇಮ್ಮಡಿ ಹಿರಿಯ ಕೆಂಪೆಗೌಡ, (ಅನೇಕ ಭಾಷೆಯಲ್ಲಿ ಕವಿತ್ವಕ)

ಮುಮ್ಮಡಿ ಕೆಂಪರಾಜ.

ಪತ್ನಿಯವರು

ಬಸವಾಂಬೆ

ಇಮ್ಮಡಿ ಕೆಂಪನೃಪತಿ
ಮುದ್ದುವೀರಮ್ಮನ ಗರ್ಭದಲ್ಲಿ

ಮುಮ್ಮಡಿ ಕೆಂಪಭೂಪಾಲ
(ಇವನು ಭೂಷಣ ಪ್ರಾಯನು ಮತ್ತು
ಗ್ರಂಥಕರ್ತನು)

ತೋಟದಮ್ಮ

ದೊಡ್ಡವೀರಭೂಪ ೧೬೭೮—೧೭೦೫
ವೀರಭದ್ರದೇವರ ರಥೋತ್ಸವಕ್ಕೆ ಹೋಗಿದ್ದವನು

ಮುಮ್ಮಡಿ ಕೆಂಪವೀರಪ್ಪಗೌಡ ೧೭೦೫—೧೭೨೮
ಕಡೇ ದೊರೆ.

ಬೈಯಮಾಂಬೆ

ಚಿಕ್ಕವೀರಭೂಪಾಲ

ಸುಗಟೂರುನಾಡು ಪ್ರಭುಗಳ ವಂಶಾವಳಿ.

ಪೇ. ೭೨—೭೯

ತಮ್ಮೇಗೌಡ (ರಾಯಲು)

|

ಇಮ್ಮಡಿ ಚಿಕ್ಕರಾಯಲು ತಮ್ಮೇಗೌಡ

|

ಮುಮ್ಮಡಿ ಚಿಕ್ಕರಾಯಲು ತಮ್ಮೆಗೌಡ (ಪ್ರೌಢಕವಿ)

|

ತಮ್ಮೆಗೌಡ

|

ಶಿವನಪ್ಪಗೌಡ

|

ಆನೆಕಲ್ಲು—೬೯—೭೦

ಚಿಕ್ಕತಿಮ್ಮೇಗೌಡ ೩೦ ವರ್ಷಗಳು

|

ತಿಮ್ಮೇಗೌಡ ೨೦ ,,

|

ದೊಡ್ಡತಿಮ್ಮೇಗೌಡ

|

ವೀರನಂಜತಿಮ್ಮೇಗೌಡ

|

ಚಾಮೇಗೌಡ

|

ಆಯಪ್ಪಗೌಡ

|

ವಂಶೀಯರು

|

ವೀರ ಚಿಕ್ಕರಾಯ

ಸಿಡ್ಲಘಟ್ಟದ ಆಳಿಕೆ—ಪೇ ೮೦—೮೧

ಕೆಂಪೇಗೌಡ

|

ಪತ್ನಿ ಹಲಸೂರಮ್ಮ (ಸ್ಥಾಪಕಳು) ೧೫ ವರ್ಷ

|

ಶಿವನೇಗೌಡ ೪೩ ವರ್ಷ ಆಳಿಕೆ

|

ಇಮ್ಮಡಿ ಶಿವನೇಗೌಡ ೪೦ ,,

ಹುಲಿಕಲ್ಲು, ಭೈರವನದುರ್ಗ ನಾಡನ್ನು ಆಳಿದವರು.

ಪೇ. ೪೯

ಹೊನ್ನಪ್ಪಗೌಡ ಶಕ ೧೫೫೦—೧೫೯೪

|

ಅಂಕಣ್ಣಗೌಡ ೧೮ ವರ್ಷಗಳು

|

ಗಿರಿಯಪ್ಪಗೌಡ ಶಕ ೧೬೧೨—೧೬೪೦

|

ಮುದ್ದಪ್ಪಗೌಡ (ಮುದ್ದುಕೃಷ್ಣರಾಜಗೌಡ) ಶಕ ೧೬೪೦—೧೬೮೩

|

ಮುದ್ದಪ್ಪಗೌಡ

|

....

|

ಚಿಕ್ಕಪ್ಪಯ್ಯಗೌಡ

ಕೊರಟಿಗೆರೆ, ಹೊಳವನಹಳ್ಳಿ ನಾಡುಗಳನ್ನಾಳಿದವರು.

ಪೇ. ೫೯, ೬೦, ೬೧

ಇಮ್ಮಡಿ ರಣಭೈರೇಗೌಡ

|

ವೀರೇಗೌಡ

|

ಮುಮ್ಮಡಿ ರಣಭೈರೇಗೌಡ

|

ಅಂಕೇಗೌಡ

|

ಸಣ್ಣಭೈರೇಗೌಡ

|

ದೊಡ್ಡಭೈರೇಗೌಡ

|

ದೊಡ್ಡರಾಮ ಭೈರೇಗೌಡ

|

ಕರಿಯಪ್ಪಗೌಡ

|

ವೆಂಕಟರಮಣಸ್ವಾಮಿ

|

ಚಿಕ್ಕಪ್ಪಯ್ಯ

|

ಕಿರೀಟಪ್ಪಯ್ಯ

|

ಭೈರೆಗೌಡ

ಚಿಕ್ಕಬಳ್ಳಾಪುರದ ನಾಡು ಪ್ರಭುಗಳ ವಂಶಾವಳಿ.

ಪೇ. ೮೧—೮೯

ವೀರೇಗೌಡ
|
ತಮ್ಮ
ಮರೇಗೌಡ
|
ದೊಡ್ಡಬೈರೇಗೌಡ ೩ ವರ್ಷಗಳು
|
ರಂಗಪ್ಪಗೌಡ ೪೨ ,,
|
ತಮ್ಮ ಜೋಗಿ ಬೈರೆಗೌಡ ೩೦ ,,
|
ದೊಡ್ಡಭೈರೇಗೌಡ ೪೭ ,,
|
ಪತ್ನಿ—ವೆಂಕಟಮ್ಮ ೧೫ ,,
|
ದತ್ತು ಮರೇಗೌಡ ೪೫ ,,
|
ಅಣ್ಣ-ಅಣ್ಣೇಗೌಡ ೧೮ ,,

(ಶಿಡ್ಲಗಟ್ಟವನ್ನು ೧ ಲಕ್ಷ ವರಹಗಳಿಗೆ ಕೊಂಡವನು. ೨೧ ಲಕ್ಷ ವರಹವನ್ನು ಸೇರಿಸಿದ್ದನು.)
|
ಹಾವಳಿ ಬೈರೇಗೌಡ ೪ ತಿಂಗಳು
|
ಜ್ಞಾತಿ—ಬೈಚೇಗೌಡ ೧೬ ವರ್ಷಗಳು
|
ದೊಡ್ಡಬೈರೇಗೌಡ ೨ ,,
|
ತಮ್ಮ
ವೆಂಕಟನಾರಾಯಣಗೌಡ ೩೩ ,,

ಬೈಚೇಗೌಡ
|
ಚಿಕ್ಕತಂದೆ-ಚಿಕ್ಕಪ್ಪಗೌಡ ೩ ,,
|
ಬೈಚೇಗೌಡನ ಸಂತತಿ-ನಾರಾಯಣ
ಗೌಡ
|
ರಾಯಲು ಬಚ್ಚೆಗೌಡ
|
(ವಂಶೀಯರು)
|
ವೆಂಕಟರಮಣಸ್ವಾಮಿ
|
ರಾಮಸ್ವಾಮಿ
|
ರಂಗಪ್ಪಯ್ಯ
|
ಪಾರ್ವತಮ್ಮ
|
ಚರಣಪ್ಪಯ್ಯ
|
ಚಿಕ್ಕಪಯ್ಯ
|
ರಂಗಪ್ಪಯ್ಯ
|
ವೆಂಕಟರಮಣಸ್ವಾಮಿ
|
ಲಕ್ಷ್ಮಮ್ಮಣ್ಣಿ
|
ಚಿಕ್ಕಪ್ಪಯ್ಯ—ಇ.



ಕೆಂಪೇಗೌಡ.

''ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೪೩೧ ನೆಯ ಕೀಲಕ ಸಂವತ್ಸರದ ಕಾರ್ತೀಕ ಬಹುಳ ೧೦ ರಲ್ಲು ಬೆಂಗಳೂರ ಕೆಂಪ ನಂಜೇಗೌಡರ ಕುಮಾರ ಕೆಂಪಯ್ಯಗೌಡನು ಗಂಗಾಧರಸ್ವಾಮಿಯ ಪಾದಕ್ಕೆ ನಮಸ್ಕಾರ'' ಎಂದು ಶಿವಗಂಗಾ ಕ್ಷೇತ್ರದಲ್ಲಿರುವ ವಿಗ್ರಹದ ಪೀಠದಲ್ಲಿ ಬರೆದಿದೆ.

ಶ್ರೀಃ

ಮಾಗಡಿ ಕೆಂಪೇಗೌಡ.

ಅಧ್ಯಾಯ—೧.

ಪೀಠಿಕಾಪ್ರಕರಣ.

ಈ ಭರತಖಂಡದಲ್ಲಿ ಷಟ್ಚಕ್ರವರ್ತಿಗಳೂ ಷೋಡಶಮಹಾರಾಜರುಗಳೇ ಮೊದಲಾದ ಸೂರ್ಯಚಂದ್ರವಂಶಜರೆಂದು ಸುಪ್ರಸಿದ್ಧರಾದ ಕ್ಷತ್ರಿಯಮಹಾನುಭಾವರೂ, ರಾಜರ್ಷಿಗಳೆಂದೆನ್ನಿಸಿಕೊಂಡು, ಕೇವಲನಿಸ್ಪೃಹರಾಗಿ, ಪ್ರಜಾಹಿತ, ದೇಶಹಿತ, ಧರ್ಮರಕ್ಷಣೆಗಳಿಗಾಗಿಯೇ ರಾಜ್ಯವಾಳುತ್ತಿದ್ದ ಕಾಲದಲ್ಲಿ ಪ್ರಜೆಗಳು ಸಂತುಷ್ಟರಾಗಿ ದೇಶದ ರೀತಿ, ನೀತಿ, ಧರ್ಮಗಳನ್ನನುಸರಿಸಿ ನಡೆಯುತ್ತಾ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳನ್ನು ಪಡೆದುಕೊಂಡು, ಸ್ವಾತಂತ್ರ್ಯಸುಖವನ್ನನುಭವಿಸುತ್ತಿದ್ದರು. ಆ ಕಾಲವು ಕಳೆದು ಹೋಗಿ ಮುಹಮ್ಮದೀಯರು ಈ ದೇಶಕ್ಕೆ ಕಾಲಿಟ್ಟಂದಿನಿಂದ ಎಂದರೆ, ಕ್ರಿಸ್ತಶಕ ೬೬೪ ರಲ್ಲಿ ಭಾರತೀಯರ ಸುಕೃತಫಲಾನುಭವವು ಮುಗಿದು "ಸುಖಸ್ಯಾನಂತರಂ ದುಃಖಂ" ಎಂಬಂತೆ ಕಾಲಚಕ್ರದ ಪರಿವರ್ತನೆಯಿಂದ ಕಷ್ಟಾನುಭವವು ಮೊದಲಾಯಿತು.

ಅಫ್ಘಾನಿಸ್ಥಾನ, ಅರಬ್ಬಿಸ್ಥಾನ, ತುರ್ಕಿಸ್ಥಾನ, ಮಂಗೋಲಿಯಾದೇಶಗಳಿಂದ ಮುಸಲ್ಮಾನರು ಆಗಾಗ ದಂಡೆತ್ತಿ ಬಂದು ಊರುಗಳನ್ನು ಕೊಳ್ಳೆ ಹೊಡೆದು, ಪಟ್ಟಣಗಳನ್ನು ದೋಚಿ, ದೇವಸ್ಥಾನಗಳನ್ನು ಲೂಟಿಮಾಡಿ, ಪುಣ್ಯ

ಕ್ಷೇತ್ರಗಳನ್ನು ಅಪವಿತ್ರಮಾಡಿ, ಪುಸ್ತಕಭಂಡಾರಗಳನ್ನು ಸುಟ್ಟು, ಸ್ತ್ರೀಯರ ಪಾತಿವ್ರತ್ಯವನ್ನು ಕೆಡಿಸಿ ಇದಿರುಬಿದ್ದವರನ್ನು ಚಿತ್ರಹಿಂಸೆಮಾಡಿ, ಕೊಂದು, ಕೈಗೆ ಸಿಕ್ಕಿದುದನ್ನು ಹೊತ್ತುಕೊಂಡು ಧ್ವಂಸಮಾಡಿ ಹೋಗುತ್ತಿದ್ದರು. ಈ ರೀತಿ ಸವಿಗಂಡವರು ಸುಖನಿವಾಸವಾದ ಈ ದೇಶದಲ್ಲಿಯೇ ನೆಲೆಯಾಗಿ ನಿಲ್ಲಬೇಕೆಂಬ ಇಚ್ಛೆಯಿಂದ ಪ್ರಬಲವಾದ ಸೈನ್ಯಗಳನ್ನು ತೆಗೆದುಕೊಂಡು ಬಂದು, ಉತ್ತರ ಹಿಂದುಸ್ಥಾನದಲ್ಲಿ ಐಕಮತ್ಯವಿಲ್ಲದೆ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದ ದೇಶೀಯರಾಜರ ಮೇಲೆ ಬಿದ್ದು ಒಬ್ಬೊಬ್ಬರನ್ನಾಗಿ ಅಧರ್ಮಯುದ್ಧದಿಂದ ಕೊಂದರು. ಕ್ರಿ. ಶ. ೧೨೦೫ ರ ವರೆಗೆ ಯವನರು ಕೆಲವು ರಾಜ್ಯಗಳ ಹೊರತು ಉತ್ತರದೇಶವನ್ನೆಲ್ಲಾ ಸ್ವಾಧೀನಮಾಡಿಕೊಂಡಿದ್ದರು. ಪ್ರಭುತ್ವಬಂದ ಮೇಲಂತೂ ಅಕ್ಬರ್ ಪಾದಷಹಾ ವಿನಾ ಉಳಿದವರು ಮತವೈರದಿಂದ ಹಿಂದುಗಳನ್ನು ಬಲಾತ್ಕರಿಸಿ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಾ, ಗೋವಧೆ, ತಲೆಗಂದಾಯ ಮೊದಲಾದ ಅತಿಕ್ರೂರಕೃತ್ಯಗಳಿಂದ ಬಹುವಾಗಿ ಹಿಂಸೆಪಡಿಸುತ್ತಿದ್ದರು. ಆ ಕಾಲದಲ್ಲಿ ಅವರಿಂದ ಈ ದೇಶಕ್ಕೆ ಸಂಭವಿಸಿದ ಕಷ್ಟ, ನಷ್ಟ, ಅವಗುಣಗಳೆಲ್ಲವೂ ಇತಿಹಾಸದಲ್ಲಿ ಸ್ಪಷ್ಟವಾಗಿರುವುವು.

ಆಲೋಚನೆಯುಳ್ಳ ಮುಹಮ್ಮದೀಯರಿಗೆ ಈಗತಾನೇ ದೇಶೀಯರಲ್ಲಿ ಪ್ರೀತಿ ಮತ್ತು ಐಕಮತ್ಯಗಳಿಂದ ನಡೆದುಕೊಳ್ಳಬೇಕೆಂಬ ಸೌಜನ್ಯಭಾವವು ಅಂಕುರಿಸಿರುವುದು. ಹಿಂದಿನವರಿಗೆ ಅಷ್ಟರ ಮುಂದಾಲೋಚನೆಯೇ ಇರಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಮುಂದಿನವರಿಗಾದರೂ ಹಿಂದುಗಳಲ್ಲಿ ಅಕಾರಣ ದ್ವೇಷವೂ, ಧೂರ್ತತ್ವವೂ, ಕ್ರೌರ್ಯವೂ, ಮತವೈರವೂ ನಿಶ್ಶೇಷವಾಗಿ ತೊಡೆದು ಹೋದಲ್ಲಿ ಉಭಯರಿಗೂ ಶುಭವಾಗುವುದರಲ್ಲಿ ಸಂದೇಹವೇ ಇಲ್ಲ. ಬಹುಕಾಲ ಮುಹಮ್ಮದೀಯರ ಸಂಗಡ ಹೋರಾಡಿ ಅಸಂಖ್ಯ ಕ್ಷತ್ರಿಯವೀರರು ನಷ್ಟರಾದರು; ದೇಶದಲ್ಲಿಯ ಮಹಾಕ್ಷೋಭೆಯನ್ನು ಸಹಿಸಲಾರದೆ ಉಳಿದವರು ತಮ್ಮ ಮಟ್ಟಿಗಾದರೂ ಹೆಂಗುಸರು ಮಕ್ಕಳನ್ನು ನೆಟ್ಟಗಿಟ್ಟುಕೊಂಡು ನೆಮ್ಮದಿಯಾಗಿದ್ದರೆ ಸಾಕೆಂದೆಣಿಸಿ ಮುಹಮ್ಮದೀಯರ ಕೈಕೆಳಗೆ ನಿಂತು ಸ್ವಾರ್ಥವನ್ನುನೋಡಿಕೊಂಡರಲ್ಲದೆ ಮುಸಲ್ಮಾನರ ಜಾತ್ಯಭಿಮಾನ, ಐಕಮತ್ಯ, ಶೌರ್ಯ, ಧೈರ್ಯ, ಔದಾರ್ಯಾದಿಸುಗುಣಗಳನ್ನು ಅನುಸರಿಸದೆ ಹೋದರು. ಈ ರೀತಿಯಾಗಿ ಪ್ರಮುಖರನೇಕರು ಅವರ ಸೇವಕರಾಗಿ ನಿಂತು ಸ್ವಜನರನ್ನು ನಿರಾಕರಿಸಿ, ದೇಶಾಭಿಮಾನ ಧರ್ಮಾಭಿಮಾನಶೂನ್ಯರಾಗಿ ಸ್ವಸುಖಪರಾಯಣರಾಗುತ್ತಾ ಬಂದರು.

ಕಳ್ಳರೂ, ಪುಂಡರೂ ಎಲ್ಲೆಲ್ಲಿಯೂ ಹೆಚ್ಚಿ ಪ್ರಜಾಪೀಡನೆಯನ್ನು ಮಾಡು ತ್ತಿದ್ದುದರಿಂದ ದೇಶದ ನೆಮ್ಮದಿಗೆ ಭಂಗವುಂಟಾಗಿ ಯವನರ ನಿರಂಕುಶಪ್ರಭು ತ್ವವು ಕೊನೆಗಾಣುವುದಕ್ಕೆ ಮೊದಲಾಯಿತು. ಇಂಗ್ಲಿಷ್ ಪ್ರಭುಗಳ ಧರ್ಮ ವಾದ ಸಾಂಕುಶಪ್ರಭುತ್ವವು ನೆಲೆಗೊಳ್ಳುವುದಕ್ಕೆ ಮಾರ್ಗವಾಯಿತು. ಅದುವರೆಗೆ ಮುಸಲ್ಮಾನರು ತುಂಗಭದ್ರೆಯಿಂದ ದಕ್ಷಿಣಕ್ಕೆ ದಂಡಯಾತ್ರೆ ಬಂದು ಅಲ್ಲ ಲ್ಲಿ ದೋಚಿಕೊಂಡು ಹೋಗುತ್ತಿದ್ದರೇ ಹೊರತು ರಾಜ್ಯವನ್ನು ಕಟ್ಟಿರಲಿಲ್ಲ. ಆ ಯವನರ ಪ್ರಚಂಡಸೈನ್ಯಸಮುದ್ರಕ್ಕೆ ಅಡ್ಡಗಟ್ಟೆಯನ್ನು ಹಾಕಿ ಬಹುಕಾಲ ತಡೆದಿದ್ದವರಲ್ಲಿ ಪೂನಾದ ಮಹಾರಾಷ್ಟ್ರರೂ, ಓರಗಲ್ಲಿನ ಆಂಧ್ರಚಕ್ರವರ್ತಿ ಗಳಾದ ಕಾಕತೀಯರೂ, ವಿಜಯನಗರದ ಕರ್ಣಾಟಕ ಚಕ್ರವರ್ತಿಗಳೂ ಪ್ರಸಿದ್ಧ ರು. ಇವರಲ್ಲದೆ ಉತ್ತರ ದಕ್ಷಿಣಗಳಲ್ಲಿ ಇನ್ನೂ ಕೆಲವರಸರು ಧರ್ಮೋದ್ಧಾರ ದೇಶೋದ್ಧಾರಕ್ಕಾಗಿಯೇ ಅವತರಿಸಿ ಧರ್ಮಸಂಸ್ಥಾಪನೆಯನ್ನು ಮಾಡಿ ಪ್ರೀತಿ ಯಿಂದ ಪ್ರಜಾಪರಿಪಾಲನೆಯನ್ನು ಮಾಡಿರುವುದು ಆಯಾ ಇತಿಹಾಸಗಳಲ್ಲಿ ವ್ಯಕ್ತಗೊಂಡಿದೆ.

ಪ್ರಜಾವತ್ಸಲರಲ್ಲದ ಪರದೇಶದವರ, ಯವನರ ಸ್ವೇಚ್ಛಾಧಿಪತ್ಯದಿಂದ ನಾನಾ ಸಂಕಟಗಳನ್ನು ಅನುಭವಿಸಿ ಬೇಸತ್ತು, ಧರ್ಮದಿಂದ ಪ್ರಜಾನುಕೂಲ ವಾದ ಪ್ರಭುತ್ವವನ್ನು ಮಾಡತಕ್ಕ ರಾಜ್ಯಭಾರವನ್ನಪೇಕ್ಷಿಸಿದ್ದ ಪ್ರಜೆಗಳಿಗೆ, ದೈವ ಕೃಪೆಯಿಂದ ದಕ್ಷಿಣಕರ್ಣಾಟಕದಲ್ಲಿ ಕ್ರಿ. ಶ. ೧೪೦೦—೧೭೨೮ರ ವರೆಗೆ ಒಕ್ಕ ಲಿಗ ಗೌಡರ ಆಳ್ವಿಕೆಯು ಲಭಿಸಿತು.

ತೆಲುಗರಲ್ಲಿ ಧರ್ಮಪ್ರಭುಗಳೆಂದು ಪ್ರಸಿದ್ಧರಾಗಿ ಕ್ರಿ. ಶ. ೧೩೨೧ ರ ವರೆಗೆ ಓರಗಲ್ಲಿನಲ್ಲಿ ಚಕ್ರವರ್ತಿಗಳಾಗಿ ರಾಜ್ಯವಾಳಿದ ತೆಲುಗು ಒಕ್ಕಲಿಗರಾದ ಕಾಕತೀಯರಲ್ಲದೆ ವಿಜಯನಗರದ ಕರ್ಣಾಟಕಚಕ್ರಾಧಿಪತ್ಯಕ್ಕೆ ಸೇರಿದ ಶೂರಪರಿ ವಾರದಲ್ಲಿ ಸೇನಾನಾಯಕರಾಗಿಯೂ, ವೀರಭಟರಾಗಿಯೂ, ರೆಡ್ಡಿಗಳೇ ಮೊದ ಲಾದ ಒಕ್ಕಲಿಗರನೇಕರಿದ್ದರು. ಕರ್ಣಾಟಕದಲ್ಲಿ ಕದಂಬ, ಬಲ್ಲಾಳ, ಗಂಗ, ರಾಷ್ಟ್ರಕೂಟ, ಚಾಲುಕ್ಯರೇ ಮೊದಲಾದ ಧರ್ಮಪ್ರಭುಗಳ ರಾಜ್ಯಭಾರದಲ್ಲಿ ಒಕ್ಕಲಿಗ ಗೌಡರು ರಾಜಕಾರ್ಯಪಟುಗಳಾಗಿ ಪ್ರಖ್ಯಾತರಾಗಿದ್ದರು. ಅವರಲ್ಲಿ ರಾಜ್ಯ ವನ್ನು ಕಟ್ಟಿ ವಿಸ್ತರಿಸಿ ಪ್ರಭುತ್ವಮಾಡಿ ಪ್ರಸಿದ್ಧಿಗೆ ಬಂದವರು ಮೈಸೂರು ದೇಶದ

ಪೂರ್ವಭಾಗದಲ್ಲಿ ಈಗ ವಿಶೇಷವಾಗಿರುವ ಮೊರಸು ಒಕ್ಕಲಿಗರ ಸದ್ವಂಶಜಾತರಾದ ಮಾಗಡಿಯ ಕೆಂಪೇಗೌಡರೂ ಆತನ ಪೂರ್ವ ಸಂತತಿಯವರೂ.

ಮಾಗಡಿಯ ಕೆಂಪೇಗೌಡನು ಆರು ? ಇವನ ರಾಜ್ಯವೆಲ್ಲಿದ್ದಿತು ಎಂಬ ಪ್ರಶ್ನೆಗಳು ಹುಟ್ಟಬಹುದು. ಅದಕ್ಕೆ ಕಾರಣವು ಇಲ್ಲದೇ ಇಲ್ಲ. "ಪಂಚಾಂಗ ಹೋದರೆ ನಕ್ಷತ್ರ ಹೋಯಿತೆ'' ಎಂಬಂತೆ ಪುಸ್ತಕದಲ್ಲಿಲ್ಲದಿದ್ದರೆ ನಡೆದುದೆಲ್ಲಿ ಹೋದೀತು ? ಮುಸಲ್ಮಾನರು ಈ ದೇಶಕ್ಕೆ ಬಂದ ಒಂದು ಸಾವಿರ ವರ್ಷಗಳ ತರುವಾಯ ಬಿಜಾಪುರದ ನವಾಬನು ಫೆರಿಸ್ತಾ ಎಂಬವನಿಂದ ತನ್ನ ಚರಿತ್ರೆಯನ್ನು ಬರೆಸಿದನು. ಅದರಲ್ಲಿ ಮೊದಲಿನಿಂದಲೂ ಮುಹಮ್ಮದೀಯರು ಈ ದೇಶದಲ್ಲಿ ದಿಗ್ವಿಜಯ ಮಾಡಿದುದನ್ನು ಅವನು ತನಗೆ ತೋರಿದ ಹಾಗೆ ಅವರ ಪ್ರತಾಪವನ್ನೇ ಹೊಗಳಿ ವಿಸ್ತರಿಸಿ, ಹಿಂದುಗಳ ಸತ್ಯ, ಶೌರ್ಯ, ಪರಾಕ್ರಮಾದಿಗಳನ್ನು ಬಿಟ್ಟು ಬರೆದಿಟ್ಟನು. ಅದನ್ನೇ ಆಧಾರವಾಗಿಟ್ಟುಕೊಂಡು ಇಂಗ್ಲಿಷ್ ಚರಿತ್ರಲೇಖಕರು ತಮಗೆ ತೋರಿದ ರೀತಿಯಲ್ಲಿ ಕೆಲವನ್ನು ಬಿಟ್ಟು ಕೆಲವನ್ನು ಬದಲಾಯಿಸಿ, ಕೆಲವನ್ನು ಸೇರಿಸಿ ಬರೆದಿಟ್ಟಿರುವರು. ಈಗ ಅವುಗಳೇ ಮುಖ್ಯಚರಿತ್ರೆಗಳಾಗಿವೆ.

ಫೆರಿಸ್ತಾ ಬರೆದ ಮೂಲಗ್ರಂಥದಲ್ಲಿಯೇ ಎಷ್ಟೋ ಅಂಶಗಳು ಕೈಬಿಟ್ಟು ಹೋಗಿರುವಲ್ಲಿ ಎಷ್ಟೋ ಕಾಲಕ್ಕೆ ಮುಂಚೆ ನಡೆದಿರುವ ಸಂಗತಿಗಳ ನಿಜಾಂಶವು ಇಂಗ್ಲಿಷ್ ಭಾಷೆಯಲ್ಲಿ ಚರಿತ್ರೆಗಳನ್ನು ಬರೆದಿರುವ ವಿದೇಶೀಯರಿಗೆ ಗೋಚರವಾಗುವುದು ಸಾಧ್ಯವೆ ? ಅದನ್ನೆಲ್ಲಾ ಶೋಧಿಸಿ ಬರೆಯಬೇಕೆಂಬ ಆವಶ್ಯಕವಾದರೂ ತಾನೇ ಏನಿದ್ದೀತು ? ಈಚೆಗೆ ನಡೆದ ಸಂಗತಿಗಳು ಆ ಚರಿತ್ರೆಗಳಲ್ಲಿ ಸೇರಲು ಹೇಗೆ ತಾನೇ ಸಾಧ್ಯ ? ಆದುದರಿಂದ ಅವು ನಮ್ಮ ವಿದ್ಯಾರ್ಥಿಗಳಲ್ಲನೇಕರನ್ನು ಸ್ವದೇಶ, ಸ್ವಮತ, ಸ್ವಭಾಷೆ, ಸ್ವತಂತ್ರಾಭಿಮಾನ ಲೇಶವೂ ಇಲ್ಲದಂತೆ ನಿಶ್ಚೈತನ್ಯರನ್ನಾಗಿ ಮಾಡಿರುವುವು. ಇದುವರೆಗೆ ಕನ್ನಡಭಾಷೆಯಲ್ಲಿ ಪ್ರಕಟವಾಗಿರುವ ಈ ಚರಿತ್ರಾಂಶವನ್ನು ಓದಿ, ಇಂತಹ ಮಹಾಪುರುಷರು ಅವತರಿಸಿ ರಾಜ್ಯವಾಳಿದರೆ? ಇವರ ರಾಜ್ಯಭಾರವು ಸರ್ವಜನಾದರಣೀಯವಾಗಿದ್ದಿತೆ? ನಮ್ಮವರಲ್ಲಿ ಅಂತಹ ಶಕ್ತಿ ಸಾಹಸಗಳಿದ್ದುವೆ ಎಂಬ ಸಂಶಯಗಳುಂಟಾಗಬಹುದು. ಆದರೆ ಈ ಚರಿತ್ರೆಯು ಕಲ್ಪನೆಯಿಂದಾಗಲಿ ಸ್ವಪ್ರತಿಷ್ಠೆ ಸ್ವಲಾಭಗಳನ್ನೇ ಗುರಿಯಾಗಿಟ್ಟುಕೊಂಡಿರುವುದರಿಂದಾಗಲಿ, ಬರೆದಿರತಕ್ಕುದಲ್ಲವು.

ನಮ್ಮ ಪೂರ್ವಿಕರಲ್ಲಿ ದಿನಚರಿತೆ, ಸ್ವಚರಿತೆ, ವ್ಯಕ್ತಿಚರಿತೆಗಳನ್ನು ಬರೆಯುವ
ಪದ್ಧತಿಯಿಲ್ಲ. ದೇಶೋದ್ಧಾರ, ಧರ್ಮಪ್ರಚಾರ, ಶಿಷ್ಟರಕ್ಷಣೆ ಮೊದಲಾದ
ಪುಣ್ಯಕಾರ್ಯಗಳಿಗೋಸ್ಕರ ತಮ್ಮ ತನುಮನಧನಗಳನ್ನು ಧಾರೆಯೆರೆದು ಕೀರ್ತಿ
ಶೇಷರಾದ ಮಹಾಪುರುಷರ ವಿಷಯವಾಗಿ ಪದ, ಪದ್ಯ, ಗಾದೆ, ಕಥೆ ಇತ್ಯಾದಿ
ಗಳಿಂದ ಅವರನ್ನು ಸ್ಮರಿಸುತ್ತಿದ್ದರು. ಆಗಿನವರು ಮಾಡಿದ ದಾನಧರ್ಮಗಳ
ನ್ನೂ, ಕಟ್ಟಿಸಿದ ಗುಡಿ, ಗೋಪುರ, ಗುಹಾ, ಮಠ, ಛತ್ರ, ಸರಸ್ತಟಾಕಾದಿಗಳ
ನ್ನೂ, ಕುರಿತು ಶಿಲಾಶಾಸನ ತಾಮ್ರಶಾಸನಗಳಲ್ಲಿ ಬರೆಯಿಸುತ್ತಿದ್ದರು. ಅನೇಕ
ಮಹಾಪುರುಷರು ವಾಸಮಾಡಿದ ಸ್ಥಾನಗಳೂ, ತಪಸ್ಸನ್ನು ಮಾಡುತ್ತಿದ್ದ
ಪ್ರದೇಶಗಳೂ, ಪುಣ್ಯ ಕ್ಷೇತ್ರಗಳಾಗಿಯೂ ಯಾತ್ರಾಸ್ಥಳಗಳಾಗಿಯೂ ಇವೆ. ಆ
ದೇಶೋದ್ಧಾರಕರು ಕಟ್ಟಿಸಿದ ಪಟ್ಟಣ, ಗ್ರಾಮ, ಕೋಟೆ, ಕೊತ್ತಲ, ಜಲಾ
ಶಯಾದಿಗಳು ಎಂದಿಗೂ ಅಚ್ಚಳಿಯದಂತೆ ಶಾಶ್ವತವಾಗಿ ನೋಡತಕ್ಕವರಿಗೆ
ಆಶ್ಚರ್ಯಕರವಾಗಿ, ಸ್ವಪುಣ್ಯವನ್ನೂ, ಅಭಿಮಾನೌದಾರ್ಯಗಳನ್ನೂ ಅವರ
ಸಚ್ಚರಿತೆಗಳನ್ನೂ, ಸೂಚಿಸುತ್ತಿವೆ. ಮುಸಲ್ಮಾನರಿಂದ ಭಗ್ನಾವಶೇಷವಾಗಿ,
ಧರ್ಮಿಷ್ಠರಾದ ಬ್ರಿಟಿಷ್ ಪ್ರಭುಗಳಿಂದ ಕಾಪಿಡಲ್ಪಟ್ಟಿರುವ ಪುರಾತನ ಕಟ್ಟಡ
ಗಳೂ, ಶಾಸನಗಳೂ, ಕಾವ್ಯ ನಾಟಕಾದಿ ಗ್ರಂಥಗಳೂ ಹಳೆಯ ನಾಣ್ಯಗಳೂ,
ಸ್ಥಳಚಿಹ್ನೆಗಳೂ, ಇತರವಿಧವಾದ ದೃಷ್ಟಾಂತಗಳೂ ಪೂರ್ವಿಕರ ಚರಿತ್ರೆಗಳನ್ನು
ಪರಿಶೀಲನೆಮಾಡಿ ತಿಳಿಯುವುದಕ್ಕೆ ಸಾಧಕಗಳಾಗಿ ಇನ್ನೂ ಇರುವುವು. ಈ
ಸಾಧನಸಾಮುಗ್ರಿಗಳ ದೆಸೆಯಿಂದ ಸಾಧ್ಯವಾದ ಮಟ್ಟಿಗೆ ಶೋಧನೆಮಾಡಿ ಬರೆ
ದಿರುವ ಮುಂದಣ ಚರಿತ್ರಭಾಗವು ಪಾಠಕರಿಗೆ ಉಂಟಾಗಬಹುದಾದ ಸಂಶಯ
ಗಳನ್ನು ನಿವಾರಣೆಮಾಡುವುದು.

ಬ್ರಹ್ಮಜ್ಞಾನಿಯಾದವನು ಬ್ರಾಹ್ಮಣನೆಂದು ಕರೆಯಿಸಿಕೊಳ್ಳುವ ರೀತಿಯ
ಲ್ಲಿಯೇ, ಒಕ್ಕಲುತನವನ್ನು ಮಾಡುವವರು ಒಕ್ಕಲಿಗರೆಂದು ಹೆಸರ ಪಡೆದಿರು
ವರು. ವ್ಯವಸಾಯದಿಂದ ಜೀವನಮಾಡುವ ಹಲವು ಪಂಗಡಗಳಿಗೆ ಒಕ್ಕಲಿ
ಗರೆಂಬ ಹೆಸರು ವಾಡಿಕೆಯಾಗಿದೆ. ಮೈಸೂರು ದೇಶದ ಒಂದೊಂದು ಭಾಗ
ದಲ್ಲಿ ಅವರನ್ನು ಒಂದೊಂದು ಹೆಸರಿನಿಂದ ಗುರ್ತಿಸಬಹುದಾಗಿದೆ. ಕೋಲಾರ,
ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ತೆಲುಗು ಮಾತಾಡುವ ರಡ್ಡಿ
ಗಳು; ಬೆಂಗಳೂರು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಮೊರಸು ಒಕ್ಕಲಿಗರು;
ಮೈಸೂರು ಹಾಸನ ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಭಾಗದಲ್ಲಿ

ಗಂಗಡಿಕಾರರು ; ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸೊಣಬರು; ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ನಾಮಧಾರಿ ಒಕ್ಕಲಿಗರು ; ತುಮಕೂರು ಡಿಸ್ಟ್ರಿಕ್ಟಿನಲ್ಲಿ ಉಪ್ಪಿನ ಕೊಳಗದ ಒಕ್ಕಲಿಗರು ಮುಂತಾದ ಪಂಗಡಗಳು ಇರುವುವು. ಈ ಪಂಗಡಗಳಲ್ಲದೆ ಕುಂಚಿಟಿಗ ಗೌಡರು, ಹಳ್ಳಿಕಾರರು, ನಾಮಗೌಡರು, ಲಿಂಗವಂತಗೌಡರು, ಹಾಲು ಒಕ್ಕಲಿಗರು ಇನ್ನೂ ಬೇರೆ ಪಂಗಡಗಳು ಇರುವುವು. ಈ ಸಮುದಾಯಗಳಿಗೆ ಒಕ್ಕಲಿಗರೆಂತಲೂ, ಒಕ್ಕಲ ಮಕ್ಕಳೆಂತಲೂ ರೂಢನಾಮವು. ಆ ಒಂದೊಂದು ಪಂಗಡದವರೂ ಒಂದೊಂದು ಗುಂಪಿನವರಾಗಿದಾರೆ. ಒಂದೊಂದು ಬುಡಕಟ್ಟೂ ಗುರುವು ಉಂಟಾಗಿ ಬಂದಿರುವುದು. ಅವರವರ ಗುಂಪಿನಲ್ಲಿಯೇ ಇದುವರೆಗೂ ಬಾಂಧವ್ಯಗಳು ನಡೆದುಬರುತ್ತಾ ಇದ್ದುವು. ಈಗೀಗ ಕಾಲಾನುಸಾರವಾಗಿ ಒಂದು ಪಂಗಡದವರು ಮತ್ತೊಂದು ಪಂಗಡದಲ್ಲಿ ಬಾಂಧವ್ಯಗಳನ್ನು ನಡೆಸುತ್ತಲೂ, ನಡೆಸಲು ಪ್ರಯತ್ನ ಪಡುತ್ತಲೂ ಇರುವರು. ಮೊರಸು ಒಕ್ಕಲಿಗರು ಮೊರಸು ನಾಡಿನಿಂದ ಬಂದವರಾಗಿದ್ದಾರೆ. ಇವರಿಗೆ ಗೌರವವಾದ ಹೆಸರುಗಳು, ಗೌಡ,ರೆಡ್ಡಿ, ಹೆಗ್ಗಡೆ,; ಹೆಂಗುಸರಿಗೆ ಗೌಡಸಾನಿ, ರೆಡ್ಡಿಸಾನಿ,ಹೆಗ್ಗಡಿತಿ ಎಂದು ಪುರಾತನಕಾಲದಿಂದ ರೂಢನಾಮವಾಗಿದೆ. ಗೌಡ, ರೆಡ್ಡಿ ಎಂಬವರು ಗ್ರಾಮದ ಸರ್ವಾಧಿಕಾರವನ್ನೂ ನಡೆಸುತ್ತಾ ಆರ್ಷೇಯವಾಗಿ ಬಂದಿರುತ್ತಾರೆ.

ಈ ಕಥಾನಾಯಕರು ಮೊರಸು ಒಕ್ಕಲಿಗರು. ಆ ಜನರ ಪುರಾತನವಿಷಯವನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸಬೇಕಾಗಿದೆ. ಅವರು ಮೈಸೂರು ದೇಶದ ಪೂರ್ವಭಾಗದಲ್ಲಿಯೂ ಬ್ರಿಟಿಷ್ ಶೀಮೆಯ ಪಕ್ಕದಲ್ಲಿಯೂ ಉತ್ಪನ್ನರಾಗಿರುವರು. ಕಂಜೀವರಂ ಡಿಸ್ಟ್ರಿಕ್ಟಿನ ಭಾಗಕ್ಕೆ ಪೂರ್ವದಲ್ಲಿ ಮೊರಸುನಾಡು ಎಂದು ಹೆಸರಿದ್ದಿತು. ಅಲ್ಲಿ ವಾಸವಾಗಿದ್ದ ಒಕ್ಕಲಿಗರು ಮೊರಸು ಒಕ್ಕಲಿಗರೆಂತ ಕರೆಯಲ್ಪಡುತ್ತಿದ್ದರು. ಇದರಂತೆಯೇ ಅಲ್ಲಿನ ನಿವಾಸಿಗಳಾದ ಬ್ರಾಹ್ಮಣರು ಮೊರಸುನಾಡಿನವರೆಂತ ಕರೆಯಲ್ಪಡುತ್ತಾರೆ.

ಅಧ್ಯಾಯ—೨.

ರಣಭೈರೇಗೌಡ—ಪೂರ್ವ ವೃತ್ತಾಂತ.

ದಕ್ಷಿಣದಲ್ಲಿ ಪ್ರಸಿದ್ಧವಾದ ಕಾಂಚೀಪುರದ ಬಳಿ ಯಣಮಂಜಿ ಪುತ್ತೂರೆಂಬ ಗ್ರಾಮದಲ್ಲಿ, ನಮ್ಮ ಕಥಾನಾಯಕನ ಮೂಲಪುರುಷನಾದ ರಣಭೈರೇ

ಗೌಡನು ಕ್ರಿ. ಶ. ೧೩ನೆಯ ಶತಮಾನದ ಅಂತ್ಯಭಾಗದಲ್ಲಿ ನೆಲಸಿದ್ದನು. ಅವನಿಗೆ ಅನುಕೂಲಳಾದ ಭಾರ್ಯೆಯೂ, ಏಳುಮಂದಿ ಭ್ರಾತೃಗಳೂ, ಸಂಪನ್ನೆಯಾದ ದೊಡ್ಡಮ್ಮನೆಂಬ ಕನ್ಯಾರತ್ನವೂ ಇದ್ದರು. ಆತನು ಆ ಗ್ರಾಮದಲ್ಲಿ ಪ್ರಮುಖನಾಗಿ, ಧನವಂತನೂ, ಧರ್ಮಿಷ್ಠನೂ, ಧೈರ್ಯಶಾಲಿಯೂ ಆಗಿದ್ದು ಖ್ಯಾತಿಗೊಂಡಿದ್ದನು. ಆತನ ಕುಮಾರಿಯ ಸೌಂದರ್ಯಾತಿಶಯಗಳು ಪ್ರಸಿದ್ಧವಾಗಿದ್ದುವು. ಆ ಪ್ರಾಂತ್ಯದ ಕಿರಾತ ಪಾಳೆಯಗಾರನು ಇದನ್ನು ಕೇಳಿ ಹೇಗಾದರೂ ಆ ಕನ್ಯಾರತ್ನವನ್ನು ಅಪಹರಿಸಿ ತಾನು ವರಿಸಬೇಕೆಂಬ ದುರಾಲೋಚನೆಯನ್ನು ಮಾಡುತ್ತಿದ್ದನು. ಗೌಡನಿಗೆ ಆಪ್ತರ ಮುಖದಿಂದ ಮೊದಲೇ ಇದು ತಿಳಿದು ಅವನು ತಕ್ಕ ಪ್ರಯತ್ನದಲ್ಲಿದ್ದನು. ಆ ಗೌಡನ ಮನೋಭಾವವನ್ನರಿಯದ ನೀಚನಾದ ಕಿರಾತನು ತನ್ನ ಕಡೆಯ ನಿಪುಣರಾದ ನಿಯೋಗಿಗಳನ್ನು ಕನ್ಯಾಘಟನಾರ್ಥವಾಗಿ ಕಳುಹಿಸಿ ಸುಲಭವಾಗಿ ತನ್ನಿಷ್ಟಾರ್ಥವು ನೆರವೇರೀತೆಂದು ಮನಸ್ಸಿನಲ್ಲಿಯೇ ಸಂತೋಷಪಡುತ್ತಿದ್ದನು.

ಪಾಳೆಯಗಾರನ ಕಡೆಯಿಂದ ಬಂದ ಜನಗಳು ರಣಭೈರೇಗೌಡನನ್ನು ಕಂಡು ತಾವು ಬಂದ ಸಂಗತಿಯನ್ನು ತಿಳಿಸಿ ತಮ್ಮ ಪಾಳೆಯಗಾರನ ಪ್ರತಾಪವನ್ನೂ ದರ್ಪವನ್ನೂ ಐಶ್ವರ್ಯಾತಿಶಯಗಳನ್ನೂ ಹೊಗಳಿ “ ಆತನು ಅಳಿಯನಾದರೆ ನಿಮ್ಮ ಪುಣ್ಯಕ್ಕೆ ಎಣೆಯೇ ಇಲ್ಲವು. ನಮ್ಮ ರಾಜನಿಗೆ ನಿಮ್ಮ ಮಗಳನ್ನು ಕೊಟ್ಟು ಬಾಂಧವ್ಯವನ್ನು ಬೆಳೆಸುವುದು ಉತ್ತಮ'' ಎಂದು ಪ್ರಾರ್ಥಿಸಿದರು. ಆ ಮಾತುಗಳನ್ನು ಕೇಳಿ ಗೌಡನು ಕೋಪೋದ್ರೇಕಿತನಾಗಿ ಅವರನ್ನು ಕುರಿತು—“ಹೀನಕುಲದಲ್ಲಿ ಹುಟ್ಟಿದವನಿಗೆ ಮಗಳನ್ನು ಕೊಟ್ಟು ನನ್ನ ಉತ್ತಮವಾದ ವಂಶವನ್ನು ಕಳಂಕಮಾಡಿಕೊಳ್ಳಲಾರೆನು. ಮದಾಂಧನಾದ ನಿಮ್ಮ ಪಾಳೆಯಗಾರನ ಕೆಟ್ಟ ನಡತೆಗೆ ತಕ್ಕ ಫಲವನ್ನು ದೇವರು ಕೊಡುವನು. ನೀವು ನಮ್ಮ ಕುಲಮರ್ಯಾದೆಯನ್ನು ತಿಳಿಯದೆ ಈರೀತಿ ವರ್ತಿಸಿದಿರಿ. ಆದರೂ ಚಾರರಾದುದರಿಂದ ಕ್ಷಮಿಸಿರುವೆನು'' ಎಂದು ಹೇಳಿ ಅವರನ್ನು ತಳ್ಳಿಸಿಬಿಟ್ಟನು. ಆ ಕಾಲದಲ್ಲಿ ವಿವಾಹಸಂಸ್ಕರಣ, (ಮ್ಯಾರಿಯೇಜ್ ರಿಫಾರಂ), ಸಂಘಪರಿಷ್ಕರಣ (ಸೋಷಿಯಲ್ ರಿಫಾರಂ), ಜಾತ್ಯಂತರವಿವಾಹ (ಇಂಟರ್ ಮ್ಯಾರಿಯೇಜ್) ಮುಂತಾದುವೂ, ಕೊಟ್ಟು ತರುವಲ್ಲಿ ಜಾತಿ ನೀತಿಗಳನ್ನೂ ಸಾಂಪ್ರದಾಯವನ್ನೂ ನೋಡದೆ ಕೇವಲ ಐಶ್ವರ್ಯ, ಅಟ್ಟಹಾಸ, ಡಾಂಭಿಕಾದಿಗಳನ್ನೇ

ನೋಡಿ ಸಂಬಂಧ ಬೆಳೆಸುವ ಪದ್ಧತಿಯೂ ಇರಲಿಲ್ಲ. ಆದುದರಿಂದ ಪಾಳೆಯ ಗಾರನ ಸಂಬಂಧವನ್ನು ಗೌಡನು ತುಚ್ಛೀಕರಿಸಿದನು.

ರಣಭೈರೇಗೌಡನು, ತನ್ನನ್ನು ನೀಚ ಜಾತಿಯವನೆಂದು ನಿಂದಿಸಿ ನಿಯೋಗಿಗ ಳನ್ನು ತಳ್ಳಿಸಿ ಅಪಮಾನಗೊಳಿಸಿದ ಸಂಗತಿಯನ್ನು ಕೇಳಿ ಪಾಳೆಯಗಾರನು ತನ್ನ ಮನೋರಥವು ನೆರವೇರದಿರಲು ಕೋಪದಿಂದ ಯುದ್ಧಸನ್ನದ್ಧನಾಗಿ, ರಣಭೈ ರೇಗೌಡನನ್ನು ಸಂಸಾರಸಮೇತವಾಗಿ ಹಿಡಿದು ತಂದು ಸೆರೆಯಲ್ಲಿಟ್ಟು ಅವನ ಮಗಳನ್ನು ಬಲಾತ್ಕಾರದಿಂದಲಾದರೂ ಮದುವೆಯಾಗಬೇಕೆಂದು, ಯಣಮಂಜಿ ಪುತ್ತೂರಿಗೆ ಹೊರಡುವ ಪ್ರಯತ್ನದಲ್ಲಿದ್ದನು.

ಆ ಸಮಾಚಾರವನ್ನು ತಿಳಿದು ಜಾಗರೂಕನಾಗಿದ್ದ ರಣಭೈರೇಗೌಡನು ಶತ್ರುವು ಪ್ರಬಲನಾಗಿದ್ದುದರಿಂದ ಅವನ ಕೈಗೆ ಸಿಕ್ಕದೆ ದೇಶತ್ಯಾಗಮಾಡಿ ತನ್ನ ಕುಲದ ಪವಿತ್ರತೆಯನ್ನು ಉಳಿಸಿಕೊಳ್ಳಬೇಕೆಂದು ನಿಶ್ಚಯಿಸಿ, ತನ್ನ ಮನೋ ಭಾವವನ್ನು ಮನೆಯವರಿಗೆ ತಿಳಿಸಿದನು. ಅವರೆಲ್ಲರೂ ಸೇರಿ ಆಲೋಚನೆಯನ್ನು ಮಾಡಿ ಒಂದೇ ಮನಸ್ಸಿನಿಂದ ಪ್ರಯಾಣಸನ್ನದ್ಧರಾದರು.

ಒಂದು ದಿನ ಕೃಷ್ಣಪಕ್ಷದ ರಾತ್ರಿ ರಣಭೈರೇಗೌಡನು ಜನ್ಮಭೂಮಿ ಯಾದ ಯಣಮಂಜಿ ಪುತ್ತೂರನ್ನು ಬಿಟ್ಟು ಹೋಗಬೇಕಾಗಿ ಬಂದುದಲ್ಲಾ ಎಂದು ಬಹುವಾಗಿ ಸಂಕಟಪಟ್ಟು ಮತ್ತೆ ಧೈರ್ಯಗೊಂಡು ಆ ಗ್ರಾಮದ ಆಪ್ತರನ್ನು ಬರಮಾಡಿಕೊಂಡು ತನಗೆ ಸಂಭವಿಸಿರುವ ಸಂಕಟವನ್ನೂ, ತಾನು ಗ್ರಾಮ ವನ್ನು ಬಿಡದಿರುವುದರಿಂದ ಒದಗಬಹುದಾದ ಕೇಡುಕನ್ನೂ ಅದರ ನಿವಾರಣಾರ್ಥ ವಾಗಿ ತಲೆ ತಪ್ಪಿಸಿಕೊಂಡು ಮಾನರಕ್ಷಣೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿರುವ ತನ್ನ ಉಪಾಯವನ್ನೂ ವಿಶದವಾಗಿ ತಿಳಿಸಿದನು. ಸತ್ಪುರುಷನಾಗಿ ಪರೋಪ ಕಾರನಿರತನಾಗಿದ್ದ ರಣಭೈರೇಗೌಡನನ್ನು ಅಗಲಲಾರದೆ, ಧೂರ್ತನಾದ ದುಷ್ಟಾಧಿ ಕಾರಿಯಿಂದ ಪ್ರಾಪ್ತವಾದ ಅಧರ್ಮಸಂಕಟಕ್ಕಾಗಿ ವ್ಯಥೆಪಟ್ಟು, ಅವರು ವಿಧಿಯಿ ಲ್ಲದೆ ಭೈರೇಗೌಡನ ಪ್ರಯಾಣಕ್ಕನುಮತಿಯನ್ನಿತ್ತರು.

ಕೂಡಲೇ ಭೈರೇಗೌಡನು ತನ್ನ ಇಷ್ಟದೇವರನ್ನು ಧ್ಯಾನಮಾಡಿ, ಬಡ ಬಗ್ಗರಿಗೆಲ್ಲಾ ವಿಶೇಷವಾಗಿ ದಾನಧರ್ಮಗಳನ್ನು ಮಾಡಿ ಇಷ್ಟಮಿತ್ರರನ್ನೂ ಆಶ್ರಿ

ತವರ್ಗವನ್ನೂ ಸಮಾಧಾನಪಡಿಸಿ, ಆ ದಿನ ಅರ್ಧರಾತ್ರಿಯಲ್ಲಿ ಧನಧಾನ್ಯ ವಸ್ತ್ರಭೂಷಣಾದಿಗಳನ್ನು ಏಳು ಬಂಡಿಗಳಲ್ಲಿ ತುಂಬಿಸಿಕೊಂಡು ತನ್ನ ಏಳು ಮಂದಿ ಸಹೋದರರ ಅವರವರ ಪತ್ನೀಪುತ್ರರ ಸಮೇತನಾಗಿ ಊರನ್ನು ಬಿಟ್ಟು ದೈವಪ್ರೇರಣೆಯಂತೆ ಉತ್ತರದಿಕ್ಕನ್ನು ಕುರಿತು ಅರಣ್ಯಮಾರ್ಗವಾಗಿ ತೆರಳಿ ನಿರ್ಮಲಾಕಾಶದಲ್ಲಿ ತಳತಳಿಸುತ್ತಿರುವ ನಕ್ಷತ್ರಗಳ ಪ್ರಕಾಶದಿಂದ ಗಿಡುಮರಗಳನ್ನು ಗುರ್ತಿಸುತ್ತಲೂ, ಕಾಡುಮಿಗಗಳ ಭೀಕರಧ್ವನಿಗಳನ್ನಾಲಿಸುತ್ತಲೂ, ಶತ್ರುಭೀತಿ ಯಿಂದ ವೇಗವಾಗಿ ಪ್ರಯಾಣಮಾಡುತ್ತಲೂ ಬಹುದೂರ ಬಂದನು. ಎತ್ತುಗಳಿಗೂ ಜನಗಳಿಗೂ ಉಂಟಾಗಿದ್ದ ಬಳಲಿಕೆಯನ್ನು ಪರಿಹರಿಸುವುದಕ್ಕಾಗಿಯೋ ಎಂಬಂತೆ ತಂಗಾಳಿಯು ಹಿತಕರವಾಗಿ ಬೀಸಿತು. ಅರುಣೋದಯವಾಗಲು ಸುತ್ತಲೂ ಇರುವ ಪುಷ್ಪಲತಾವಿಶೇಷಗಳೂ ವೃಕ್ಷಗಳೂ ಕಣ್ಣಿಗೆ ಗೋಚರಿಸುತ್ತಾ ಬಂದುವು. ಕ್ರೂರಮೃಗಗಳ ಭಯಂಕರಶಬ್ದಗಳಡಗಿ, ಪಕ್ಷಿಗಳ ಇಂಪಾದ ಧ್ವನಿಗಳು ಕಿವಿಗಳಿಗೆ ಕೇಳಿಸುತ್ತಿರಲು ಸೂರ್ಯೋದಯವಾಯಿತು. ಆಗ ಎಲ್ಲರೂ ಬಂಡಿಯಿಂದಿಳಿದು ಒಂದೆಡೆಯಲ್ಲಿ ಸೇರಿ ಮುಂದಿನ ಕರ್ತವ್ಯವನ್ನು ಯೋಚಿಸಿ, ಶ್ರಮವನ್ನು ಲೆಕ್ಕಿಸದೆ ತ್ವರಿತವಾಗಿ ಮುಂದುವರಿಯುತ್ತಿದ್ದರು. ಅವರಲ್ಲಿ ಕೆಲವರು ಆಗಾಗ ಹಿಂತಿರುಗಿ ನೋಡುತ್ತಲೂ, ಸುತ್ತಮುತ್ತ ಗಿಡುಮರಗಳ ಸಂದುಗಳಲ್ಲಿ ಕೇಳಿಸುತ್ತಿದ್ದ ಶಬ್ದವನ್ನು ಲಕ್ಷ್ಯಗೊಟ್ಟು ಕೇಳುತ್ತಲೂ, ಬಂಡಿಗಳ ಹಿಂದೆಯೂ ಉಭಯಪಾರ್ಶ್ವಗಳಲ್ಲಿಯೂ ನಡೆದು ಬರುತ್ತಿದ್ದರು. ಬಂಡಿಗಳಲ್ಲಿ ಕುಳಿತಿದ್ದ ಗಂಡಸರು, ಹೆಂಗುಸರು, ಮಕ್ಕಳು ಸಹಾ ಒಬ್ಬ ರೊಡನೊಬ್ಬರು ಮಾತನಾಡದೆ ಮೌನದಿಂದಿದ್ದರು. ಈ ರೀತಿ ಕೆಲವು ದೂರ ಪ್ರಯಾಣನಡೆದ ಮೇಲೆ ಅಡವಿಯ ಪ್ರದೇಶವನ್ನು ದಾಟಿ ಬಯಲು ಪ್ರದೇಶಕ್ಕೆ ಬಂದರು. ಬೇಗನೆ ದಾರಿ ಸಾಗೀತೇ ಎಂದು ಯೋಚಿಸುತ್ತಾ ಪ್ರಯಾಣಮಾಡುತ್ತಿರುವಲ್ಲಿ, ಮುಂದೆ ಸ್ವಲ್ಪದೂರದಲ್ಲಿ ಅಡ್ಡವಾಗಿ ತುಂಬಿ ಹರಿಯುತ್ತಿದ್ದ ಕ್ಷೀರನದಿ (ಪಾಲ ಹೊಳೆ)ಯು ಕಾಣಿಸಿತು. ಹಿಂಗಡೆಯಲ್ಲಿ ಬರುತ್ತಿದ್ದವರಿಗೆ ಶತ್ರುಗಳು ಬೆನ್ನಟ್ಟಿ ಬರುವ ಸುಳಿವು ಗೋಚರವಾಯಿತು. ಮುಂದೆ ನದಿಯ ಪ್ರವಾಹ, ಹಿಂದೆ ಪಾಳೆಯಗಾರನ ದಂಡು, ಈ ಮಧ್ಯೆ ಇಲಿಯು ಅಡೆಗಲ್ಲಿನಲ್ಲಿ ಸಿಕ್ಕಿದಂತಾಗಿ ಏನೂ ತೋರದೆ ಅವರು ಭಯಾಕ್ರಾಂತರಾದರು. ಮಗಳನ್ನು ಕೊಟ್ಟು ಸಂಬಂಧವನ್ನು ಬೆಳೆಸುವುದಕ್ಕಿಷ್ಟಪಡದೆ ರಣಭೈರೇಗೌಡನು ತನ್ನನ್ನು ತಿರಸ್ಕರಿಸಿದ ಸಂಗತಿಯನ್ನು ಕೇಳಿದೊಡನೆಯೇ ಪಾಳೆಯಗಾರನು ಅತಿಕ್ರುದ್ಧ

ಸಾಗಿ ತನ್ನ ದಂಡನ್ನು ಕೂಡಿಸಿಕೊಂಡು ಯಣಮಂಜೆಪುತ್ತೂರಿಗೆ ಬಂದು ರಣಭೈರೇಗೌಡನ ಮನೆಯನ್ನು ಮುತ್ತಿ ಒಳಗೆ ನುಗ್ಗಿ ನೋಡಲು ಗೃಹವು ಶೂನ್ಯವಾಗಿದ್ದಿತು. ಗೌಡನು ಸಂಸಾರಸಮೇತನಾಗಿ, ಆರಿಗೂ ತಿಳಿಯದ ಹಾಗೆ ರಾತ್ರಿಯ ವೇಳೆಯಲ್ಲಿ ಪಲಾಯನಮಾಡಿದ ಸಂಗತಿಯನ್ನು ತಿಳಿದು ಪಾಳೆಯಗಾರನು ಅಡವಿಯ ಮಾರ್ಗವಾಗಿ ಹುಡುಕಿಕೊಂಡು ಬರುತ್ತಿದ್ದನು.

ಆ ಸಮಯದಲ್ಲಿ ರಣಭೈರೇಗೌಡನು ವಿಪತ್ತಿಗೆ ಹೆದರಿ ಅಧೈರ್ಯದಿಂದ ಮೂಢನಂತೆ ವ್ಯರ್ಥಪ್ರಲಾಪವನ್ನು ಮಾಡುತ್ತ ಕೈಕಟ್ಟಿ ಕುಳಿತುಕೊಳ್ಳದೆ ಆಪದ್ಬಾಂಧವನಾದ ದೇವರಲ್ಲಿ ಮೊರೆಯಿಟ್ಟು ಧೈರ್ಯವನ್ನು ತಾಳಿ ಮಲಾಪಹಾರಿಣಿಯಾದ ಗಂಗೆಯನ್ನು ಕುರಿತು ನಮಗೆ ದಾರಿಯನ್ನು ಕೊಟ್ಟು ವಿಪತ್ತಿನಿಂದ ಪಾರಗಾಣಿಸಿ ನಮ್ಮನ್ನು ಸಂರಕ್ಷಿಸಬೇಕೆಂದು ದೃಢಭಕ್ತಿಯಿಂದ ಬೇಡಿಕೊಳ್ಳುತ್ತಿದ್ದನು. ತನ್ನ ನಿಮಿತ್ತವಾಗಿ ಬಂಧುವರ್ಗವು ಕಷ್ಟಕ್ಕೀಡಾದುದಕ್ಕೆ ಮೊದಲೇ ಚಿಂತಾಕ್ರಾಂತಳಾಗಿದ್ದ ದೊಡ್ಡಮ್ಮನು ಪ್ರವಾಹಕ್ಕೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ತನ್ನ ಕಿವಿಯಲ್ಲಿದ್ದ ಬಂಗಾರದ ಓಲೆಗಳನ್ನು ನದಿಗೆ ಅರ್ಪಿಸಿ, " ಪ್ರವಾಹವು ನಿಂತು ನಮ್ಮನ್ನು ಆಚೆಯ ದಡಕ್ಕೆ ಸೇರಿಸಿ ಕಾಪಿಡಬೇಕು " ಎಂದು ಅತಿ ದೈನ್ಯದಿಂದ ಬೇಡಿಕೊಂಡಳು. ಈ ತಂದೆ ಮಗಳ ಪ್ರಾರ್ಥನೆಗಳನ್ನಂಗೀಕರಿಸಿತೋ ಎಂಬಂತೆ ಅತ್ಯಾಶ್ಚರ್ಯಕರವಾಗಿ ನದಿಯ ಪ್ರವಾಹವು ತಗ್ಗಿ ಬಂಡಿಗಳೂ, ಜನಗಳೂ, ಆಚೆಯ ದಡಕ್ಕೆ ಹೋಗುವಹಾಗಾಯಿತು. ಆಕ್ಷಣವೇ ರಣಭೈರೇಗೌಡನ ಪರಿವಾರವೆಲ್ಲವೂ ಪರಮಸಂತೋಷದಿಂದ ಆಚೆಯ ದಡವನ್ನು ಸೇರಿತು. ಪಾಳೆಯಗಾರನು ಅದನ್ನು ದೂರದಿಂದಲೇ ಗುರ್ತಿಸಿ ಅತಿ ವೇಗದಿಂದ ಹೋಗಿ ಹಿಡಿದುಕೊಳ್ಳಿರೆಂದು ರಾವುತರನ್ನು ಮುಂದಾಗಿ ಓಡಿಸಿದನು. ಅವರು ನದಿಯ ಸಮೀಪಕ್ಕೆ ಬರುವಷ್ಟರಲ್ಲಿಯೇ ಪ್ರವಾಹವು ಏರಿ ಎರಡು ದಡಗಳನ್ನೂ ತುಂಬಿ ಹರಿಯತೊಡಗಿತು. ಈ ಅದ್ಭುತವನ್ನು ನೋಡಿ ಬೆರಗಾಗಿ, ತಮ್ಮನ್ನು ಹಿಡಿಯುವುದಕ್ಕೆ ಬಂದ ಶತ್ರುಗಳಿಗೆ ದಾರಿಯಿಲ್ಲದಹಾಗೆ ಅಡ್ಡಿಮಾಡಿ ಪಾರಗಾಣಿಸಿದ ಭಗವಂತನ ಮಹಿಮೆಗಳನ್ನು ಕೊಂಡಾಡುತ್ತಾ ಭ್ರಷ್ಟನಾದ ನೀಚಪಾಳೆಯಗಾರನ ರಾಷ್ಟ್ರವನ್ನೇ ಬಿಟ್ಟು ನಿರಾತಂಕವಾಗಿರೋಣವೆಂದು ಗೌಡನು ಮುಂದೆ ಸಾಗಿದನು.

ಪಾಳೆಯಗಾರನು ನದಿಯನ್ನು ದಾಟಲರಿಯದೆ ಗೌಡನ ಮಗಳನ್ನು ಬಲಾ

ತ್ಕಾರದಿಂದ ಮದುವೆಯಾಗುವುದು ಸಾಧ್ಯವಲ್ಲವೆಂದರಿತು, ತನ್ನ ದುರಾಲೋಚನೆಗೆ ತಕ್ಕ ಕ್ಲೇಶವನ್ನೂ, ಅಪಕೀರ್ತಿಯನ್ನೂ ಪಡೆದು, ಭಗ್ನಮನೋರಥನಾಗಿ ಹಿಂತಿರುಗಿದನು. ಅವನ ಸಂಗಡಿಗರಲ್ಲಿ ಕೆಲವರು ಸತ್ಪುರುಷನಾದ ಆ ಗೌಡನ ಗುಣಾತಿಶಯಗಳನ್ನು ಹೊಗಳುತ್ತಲೂ, ಆತನು ದುಷ್ಟನ ಕೈಯಿಂದ ಪಾರಾದುದಕ್ಕಾಗಿ ಕೆಲವರು ಸಂತೋಷಪಡುತ್ತಲೂ, ಮತ್ತೆ ಕೆಲವರು ತಮ್ಮ ದಣಿಯ ಇಷ್ಟಾರ್ಥವು ನೆರವೇರದ ಚಿಂತೆಯಿಂದ ಗೌಡನನ್ನು ದೂಷಿಸುತ್ತಲೂ, ಅವರವರಿಗೆ ತೋರಿದಂತೆ ಮಾತನಾಡಿಕೊಂಡು ಹಿಂತಿರುಗಿ ಸ್ಥಳವನ್ನು ಸೇರಿದರು.

ವೈರಿಯ ಭಯವಿಲ್ಲದಂತಾಗಲು ಗೌಡನು ತನ್ನವರನ್ನು ಸಮಾಧಾನಗೊಳಿಸುತ್ತಾ, ಅಲ್ಲಲ್ಲಿ ಅನುಕೂಲವಿದ್ದ ಸ್ಥಳಗಳಲ್ಲಿಳಿದು ಸ್ನಾನಭೋಜನಾದಿಗಳನ್ನು ತೀರಿಸಿಕೊಳ್ಳುತ್ತಾ, ವಿಶ್ರಾಂತಿಯನ್ನು ಹೊಂದುತ್ತಾ ಬರುತ್ತಿದ್ದನು. ಕೆಲವು ದಿನಗಳ ತರುವಾಯ, ಶರತ್ಕಾಲದ ಒಂದು ದಿನ ಮೈಸೂರು ಕರ್ಣಾಟಕದ ಪೂರ್ವಭಾಗವಾದ ಶ್ರೀಗೌತಮಗಿರಿ (ಯಂಬರಹಳ್ಳಿ ತಿಮ್ಮರಾಯಸ್ವಾಮಿ ಬೆಟ್ಟ)ಯ ಬಳಿ ಈಗ ದೇವನಹಳ್ಳಿ ತಾಲ್ಲೂಕ್ ಆವತಿ ಗ್ರಾಮವಿರುವ ಪ್ರದೇಶಕ್ಕೆ ಬಂದು ಸೇರಿದನು. ಆ ಸ್ಥಳವು ನಿಬಿಡವಾದ ವೃಕ್ಷಗಳಿಂದಲೂ, ತೃಣ ಜಲ ಕಾಷ್ಠ ಸಮೃದ್ಧಿಯಿಂದಲೂ ಫಲವತ್ತಾದ ಪ್ರದೇಶವಾಗಿದ್ದುದರಿಂದ, ಅಲ್ಲಿ ಕೆಲವು ಕಾಲವಿದ್ದು ಮುಂದೆ ವಸತಿಯಾದ ಸ್ಥಳವನ್ನು ನೋಡಿಕೊಳ್ಳೋಣವೆಂದು, ಪರ್ಣಕುಟೀರಗಳನ್ನು ನಿರ್ಮಿಸಿ ಅವುಗಳಲ್ಲಿ ಕಾಲಹರಣೆ ಮಾಡುತ್ತಿದ್ದನು.

ಅಧ್ಯಾಯ—೩.

ರಾ ಜ್ಯ ಸ್ಥಾ ಪ ನೆ.

ಮೈಸೂರು ಕರ್ಣಾಟಕದ ಪೂರ್ವಭಾಗದಲ್ಲಿ, ಈಗ ಜನಭರಿತವಾಗಿರುವ ಬಹುಭಾಗವು ಆಗ ಕಾಡಾಗಿ ದೂರದೂರಕ್ಕೆ ಒಂದೊಂದು, ಸಣ್ಣ ಸಣ್ಣ ಹಳ್ಳಿಗಳಿದ್ದುವು. ಉತ್ತರಕ್ಕೆ ವಿಜಯನಗರರಾಜ್ಯವೂ, ದಕ್ಷಿಣಕ್ಕೆ ಮೈಸೂರು ರಾಜ್ಯವೂ, ಕರ್ಣಾಟಕರಾಜರ ಆಳ್ವಿಕೆಯಲ್ಲಿ ಪ್ರಾಮುಖ್ಯವಾಗಿದ್ದುವು. ಉತ್ತರ ಹಿಂದೂಸ್ಥಾನವೆಲ್ಲವೂ ಕ್ರಿ. ಶ. ೧೨೦೫ ರ ವರೆಗೆ ಮಹಮ್ಮದೀಯರ ವಶವಾಗಿ

ದ್ದಿತು. ಮುಸಲ್‌ಮಾನರು ಕ್ರಿ. ಶ. ೧೩೨೧ ರಲ್ಲಿ ಓರಗಲ್ಲನ್ನು ಸೂರೆಮಾಡಿ ಆಂಧ್ರರ ಕಾಕತೀಯರಾಜ್ಯವನ್ನೂ, ಕ್ರಿ. ಶ. ೧೩೨೭ ರಲ್ಲಿ ದ್ವಾರಸಮುದ್ರವನ್ನು ಧ್ವಂಸಮಾಡಿ, ಹೊಯಿಸಳರಾಜ್ಯವನ್ನೂ, ನಾಶಗೊಳಿಸಿದ ತರುವಾಯ, ದೇಶವು ಅನಾಯಕವಾಗಿ, ಕಳ್ಳಕಾಕರು ಪ್ರಬಲರಾಗಿ ಪ್ರಜೆಗಳನ್ನು ಪೀಡಿಸುತ್ತಿದ್ದರು. ಮುಸಲ್ಮಾನರಾದರೋ ಅಧಿಕಾರಬಲದಿಂದಲೂ, ಮತವೈರದಿಂದಲೂ ಹಿಂದುಗಳನ್ನು ಚಿತ್ರಹಿಂಸೆಮಾಡುವುದೇ ತಮ್ಮ ಶಾಸ್ತ್ರೋಕ್ತಸದಾಚಾರವೆಂದು ಇದ್ದರು. ಈ ವಿಧವಾಗಿ ಕ್ಷುದ್ರರಾಜರುಗಳಿಂದ ನಿರಪರಾಧಿಗಳಾದ ದೇಶೀಯಪ್ರಜೆಗಳಿಗೆ ಸಂಭವಿಸುತ್ತಿದ್ದ ಕಷ್ಟಪರಂಪರೆಗಳೂ, ಸ್ವತಃ ಅನುಭವಿಸುತ್ತಿರುವ ಕ್ಲೇಶಗಳೂ, ಒಂದರ ಮೇಲೆ ಒಂದು ಮನಸ್ಸಿಗಂಟಿ, ರಣಭೈರೇಗೌಡನನ್ನೂ ಅವನ ಸಹೋದರರನ್ನೂ ಚಿಂತಾಕ್ರಾಂತರನ್ನಾಗಿ ಮಾಡಿದುವು.

ತಾವು ಅಲ್ಲಿ ನಿರಾತಂಕವಾಗಿ ಸುಖದಿಂದ ಇರಬಹುದಾಗಿದ್ದರೂ, ಸ್ವಸುಖಪರಾಯಣರಲ್ಲದ ಆ ಪುಣ್ಯಾತ್ಮರು ಧರ್ಮರಕ್ಷಣೆಯೂ, ದೇಶಹಿತವೂ, ಪ್ರಜೆಗಳ ದುಃಖನಿವಾರಣೆಯೂ ಎಂದಿಗೆ ಆಗುವುದೆಂದೂ, ಅದಕ್ಕಾಗಿ ತಾವೇನ ಮಾಡಿದರಾದೀತೆಂದೂ ಚಿಂತಿಸುತ್ತಿದ್ದರು.

ಅವರು ಪ್ರತಿನಿತ್ಯವೂ ಎದ್ದು ಪ್ರಾತರ್ವಿಧಿಗಳನ್ನು ನೆರವೇರಿಸಿಕೊಂಡು, ಅವರವರಿಗೆ ಇಷ್ಟಬಂದ ದಿಕ್ಕಿಗೆ ಹೋಗಿ, ಹಳ್ಳಿ ಬೆಟ್ಟ ಕಾಡು ಮೇಡುಗಳಲ್ಲಿ ಸಂಚಾರಮಾಡಿ ಆಯಾಸ್ಥಳವಿದ್ಯಮಾನಗಳನ್ನು ತಿಳಿಯುತ್ತಲೂ, ಅಲ್ಲಿನ ಜನಗಳನ್ನು ಪ್ರೀತಿಯಿಂದ ಕಂಡು ಅವರ ಕ್ಷೇಮಲಾಭಗಳನ್ನು ವಿಚಾರಿಸಿ ಆದರಿಸುತ್ತಲೂ, ಬಡಬಗ್ಗರಿಗೆ ಯಥೋಚಿತವಾಗಿ ಸಹಾಯಮಾಡುತ್ತಲೂ ಇದ್ದರು. ಅಲ್ಪಕಾಲದಲ್ಲಿಯೇ ಅಲ್ಲಿನವರು ಅವರ ನಿಸ್ಪೃಹತೆಯನ್ನೂ, ತೇಜಸ್ಸನ್ನೂ, ಧರ್ಮಗುಣವನ್ನೂ ಅರಿತು ಎಲ್ಲರೂ ಅವರನ್ನು ಪ್ರೀತಿಗೌರವಗಳಿಂದ ಕಾಣುತ್ತಾಬಂದರು. ಈ ರೀತಿಯಾಗಿ ಹೊಸ ಜನಗಳು ನೈಜವಾದ ಅಂತಃಕರಣದಿಂದ, ತಮ್ಮಲ್ಲಿ ಬಂದುಹೋಗುತ್ತಾ ಬಳಕೆಯಾದರು. ರಣಭೈರೇಗೌಡನ ಸ್ತ್ರೀಪುತ್ರಾದಿಗಳೆಲ್ಲಾ ಇದರಿಂದ ಸ್ವಜನಗಳನ್ನಗಲಿ ಬಂದ ದುಃಖವನ್ನು ಮರೆಯುತ್ತಾ ಸಮಾಧಾನವಾಗಿರುತ್ತಿದ್ದರು. ಒಂದು ದಿನ ಶುಭಮುಹೂರ್ತದಲ್ಲಿ ಪೂರ್ಣಗರ್ಭಿಣಿಯಾಗಿದ್ದ ರಣಭೈರೇಗೌಡನ ಧರ್ಮಪತ್ನಿಯು, ಸಕಲರಾಜ

ಲಕ್ಷಣಸಂಪನ್ನನಾದ ಸುಕುಮಾರನನ್ನು ಹಡೆದಳು. ಪುತ್ರೋತ್ಸವದಿಂದ ಪರಮಾನಂದಭರಿತನಾಗಿ ರಣಭೈರೇಗೌಡನು ಭವಿಷ್ಯತ್ಸೂಚನೆಗಳಿಗನುಸಾರವಾಗಿ "ಜಯಗೌಡ" ನೆಂದು ನಾಮಕರಣಮಾಡಿದನು. ಶಿಶುವಿನ ತೊಟ್ಟಿಲನ್ನು ಒಂದು ಹತ್ತಿಯ ಮರಕ್ಕೆ ಕಟ್ಟುತ್ತಿದ್ದರು. ಆ ಮರದ ಪೊಟ್ಟರೆಯಿಂದ ಒಂದು ಕೃಷ್ಣಸರ್ಪವು ಬಂದು ತೊಟ್ಟಿಲ ಬಳಿ ಆರೂ ಇಲ್ಲದಿದ್ದಾಗ ಮಗುವಿನ ಮುಖಕ್ಕೆ ಬಿಸಿಲು ತಾಕದಂತೆ ಹೆಡೆಯನ್ನು ಮರೆಯಾಗಿಟ್ಟು ಕೊಂಡು ಮಗುವನ್ನು ಆಡಿಸಿಕೊಂಡಿರುತ್ತ, ಜನಗಳ ಸದ್ದಾದ ಕೂಡಲೇ ಮರೆಯಾಗುತ್ತ ಇದ್ದಿತು. ಈ ರೀತಿಯಾಗಿ ನಡೆಯುತ್ತಿದ್ದುದನ್ನು ರಣಭೈರೇಗೌಡನು ಅಕಸ್ಮಾತ್ತಾಗಿ ನೋಡಿ, ಹಾವು ಹತ್ತಿಯ ಮರವನ್ನೇರಿ ಶಿಶುವಿನೊಡನೆ ಕ್ರೀಡಿಸುತ್ತಿದ್ದ ಮಹತ್ತುಳ್ಳ ಆ ಸ್ಥಳಕ್ಕೆ, "ಹಾವು ಹತ್ತಿ" ಎಂದು ಹೆಸರಿಟ್ಟು ಊರನ್ನು ಕಟ್ಟಿದನು. ಅದೇ ಈಗ "ಆವತಿ" ಎಂದು ಪ್ರಸಿದ್ಧವಾಗಿರುವ ಗ್ರಾಮವು.

ಒಂದು ದಿನ ಬೇಸಗೆಯಲ್ಲಿ ನಾಗಂಭಟ್ಟನೆಂಬ ಬ್ರಾಹ್ಮಣನೊಬ್ಬನು ದಾರಿಯನ್ನು ನಡೆದು ಬಳಲಿ, ಅಷ್ಟರಲ್ಲಿ ಮಧ್ಯಾಹ್ನವಾಗಲು, ಮುಂದಕ್ಕೆ ಪ್ರಯಾಣಮಾಡುವ ಶಕ್ತಿಯಿಲ್ಲದೆ ರಣಭೈರೇಗೌಡನ ಮನೆಗೆ ಬಂದನು. ಆತನನ್ನು ಗೌಡನು ಆದರದಿಂದ ಉಪಚರಿಸಿ, ಅಡುಗೆಯ ಪದಾರ್ಥಗಳನ್ನು ಕೊಡಿಸಿ, ಭೋಜನಾನಂತರ ವಿಶ್ರಾಂತಿಯನ್ನು ಪಡೆದು ಮುಂದಕ್ಕೆ ಬಿಜಯಮಾಡಿಸಬಹುದೆಂದು ಹೇಳಿದನು. ಅದರಂತೆ ಆ ಬ್ರಾಹ್ಮಣನು ಆಯಾಸವನ್ನು ಪರಿಹರಿಸಿಕೊಂಡು, ಗೌಡನ ಸೌಜನ್ಯಕ್ಕೆ ಕೃತಜ್ಞನಾಗಿ, ತಾನು ಶಾಸ್ತ್ರಜ್ಞನಾಗಿದ್ದುದರಿಂದ ಶಿಶುವಿನ ಅಂಗಲಕ್ಷಣಗಳನ್ನು ನೋಡಿ, ಜಾತಕಭಾವಗಳನ್ನು ಪರೀಕ್ಷಿಸಿ ಭವಿಷ್ಯತ್ತನ್ನು ತಿಳಿದು, ರಣಭೈರೇಗೌಡನನ್ನು ಕುರಿತು-"ಎಲೆ ಸುಕೃತಶಾಲಿಯೇ, ಇಂದಿಗೆ ನಿನ್ನ ಕರ್ಮಶೇಷಗಳೆಲ್ಲವೂ ಕೊನೆಗಂಡುವು. ಮುಂದೆ ನಿನ್ನ ದೆಸೆಯಿಂದ ದೇಶೋನ್ನತಿಯೂ, ಪ್ರಜಾಕ್ಷೇಮವೂ ಉಂಟಾಗಿ, ತೀರ್ಥಕ್ಷೇತ್ರಗಳಲ್ಲಿಯೂ ದೇವಾಲಯಗಳಲ್ಲಿಯೂ, ನಿರಾತಂಕವಾಗಿ ದೇವತಾರಾಧನೆಗಳು ನಡೆಯುತ್ತಾ ಧರ್ಮರಕ್ಷಣವಾಗುವ ಸುಯೋಗವು ಸನ್ನಿಹಿತವಾಗಿರುತ್ತದೆ. ನಿನ್ನ ವಂಶೋದ್ಭವರೆಲ್ಲರೂ ಧರ್ಮರಕ್ಷಕರಾಗಿ, ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವರು. ಈ ಶಿಶುವನ್ನು ಜಾಗರೂಕನಾಗಿ ಸಂರಕ್ಷಿಸಬೇಕು" ಎಂದು ಹೇಳಿದನು. ಅದನ್ನು ಕೇಳಿ ಎಲ್ಲರೂ ಸಂತೋಷಭರಿತರಾದರು. ವಯೋವೃದ್ಧನೂ

ಜ್ಞಾನವೃದ್ಧನೂ, ಶಾಂತನೂ ಆಗಿದ್ದ ಆ ಬ್ರಾಹ್ಮಣನನ್ನು ತಮ್ಮ ಕುಲಪುರೋಹಿತನಾಗಿರಬೇಕೆಂದು ರಣಭೈರೇಗೌಡನು ಪ್ರಾರ್ಥಿಸಲು, ಆತನು ಅದಕ್ಕೊಪ್ಪಿ ಅಂದಿನಿಂದಲೂ ಅವರಿಂದ ಸತ್ಕರ್ಮಗಳನ್ನು ಮಾಡಿಸುತ್ತಲೂ, ಭಾರತ ರಾಮಾಯಣಾದಿ ಇತಿಹಾಸಗಳಲ್ಲಿ ಉಕ್ತವಾಗಿರುವ ಸತ್ಯ, ಜ್ಞಾನ, ಭಕ್ತಿ, ಪರಾಕ್ರಮಾದಿಗಳಲ್ಲಿ ಪ್ರಸಿದ್ಧರಾದ ಪೂರ್ವಿಕರ ಚರಿತ್ರೆಗಳನ್ನು ಶ್ರವಣಮಾಡಿಸುತ್ತಲೂ, ಅವರ ಬಳಿಯಲ್ಲಿಯೇ ನಿಂತು, ಆ ಸುತ್ತುಮುತ್ತಲೂ ಇರುವ ಗೌತಮಗಿರಿ, ದಿವ್ಯಗಿರಿ, ಸ್ಕಂದಗಿರಿ, ಬ್ರಹ್ಮಗಿರಿ, ಚನ್ನಗಿರಿ, ನಂದಿಗಿರಿ ಮೊದಲಾದ ಗಿರಿಗಳಿಗೂ ಅವುಗಳಲ್ಲಿರುವ ದಿವ್ಯತೀರ್ಥಗಳಿಗೂ, ನದೀಮೂಲಗಳಿಗೂ, ಋಷಿಗಳ ವಾಸಸ್ಥಳಗಳಾಗಿದ್ದ ಗುಹೆಗಳಿಗೂ, ರಂಗಸ್ಥಳವೆಂಬ ರಂಗನಾಥಕ್ಷೇತ್ರವೇ ಮೊದಲಾದ ಮಹಾಸ್ಥಳಗಳಿಗೂ ಪುಣ್ಯದಿನಗಳಲ್ಲಿ ರಣಭೈರೇಗೌಡನನ್ನೂ ಆತನ ಸಹೋದರರನ್ನೂ, ಕರೆದುಕೊಂಡು ಹೋಗಿ ತೀರ್ಥಸ್ನಾನ ದೇವತಾರಾಧನೆಗಳನ್ನು ಮಾಡಿಸುತ್ತಲೂ, ಸ್ಥಳಮಾಹಾತ್ಮ್ಯಗಳನ್ನು ಹೇಳುತ್ತಲೂ ಇದ್ದುದರಿಂದ, ಆ ಪುರೋಹಿತನು ದೊರೆತುದು ಸತ್ಕಾಲಕ್ಷೇಪಕ್ಕೂ, ಇತಿಹಾಸಜ್ಞಾನಕ್ಕೂ, ಪುರೋಭಿವೃದ್ಧಿಗೂ ಸಾಧಕವಾಗಿ, ಅವರಲ್ಲಿದ್ದ ಧೈರ್ಯಸಾಹಸಾದಿಸದ್ಗುಣಗಳಿಗೆ ಪ್ರೋತ್ಸಾಹವನ್ನುಂಟುಮಾಡಿತು.

ಒಂದು ದಿನ ರಾತ್ರಿ ವಿಶೇಷವಾಗಿ ಮಳೆ ಸುರಿದು ಗೌಡನ ಮನೆಯ ಹೊರಭಾಗದಲ್ಲಿಟ್ಟಿದ್ದ ಹುಲ್ಲು, ಸೌದೆ ಮೊದಲಾದುವು ಕೊಚ್ಚಿಕೊಂಡು ಹೋದುವು. ಬೆಳಗಾಗುತ್ತಲೆ ಗೌಡನು ಹೊರಗೆ ಬಂದು ನೋಡಿದನು. ತಾನಿಟ್ಟಿದ್ದ ಪದಾರ್ಥಗಳು ಕೊಚ್ಚಿಕೊಂಡು ಹೋಗಿದ್ದ ಜಾಡನ್ನು ಹಿಡಿದು, ಅಲ್ಲಿಂದ ಮುಂದಕ್ಕೆ ಹೋಗಲು ಒಂದು ಕಸಪೊರಕೆಯು ನೆಲದಲ್ಲಿ ಅರ್ಧ ಮಟ್ಟಿಗೆ ಹೂತುಕೊಂಡು ಅಗ್ರಭಾಗವು ನೆಟ್ಟಗೆ ನಿಂತಿದ್ದುದನ್ನು ಕಂಡನು. ಅದನ್ನು ಸಮೀಪಿಸಿ ಆಶ್ಚರ್ಯದಿಂದ ‹‹ಇದೇನು ? ಕಸಪೊರಕೆಯು ಹೀಗೆ ನೆಟ್ಟಗೆ ನಿಂತಿದೆ,'' ಎಂದು ಅದನ್ನು ಕೈಯಿಂದ ಹಿಡಿದೆಳೆದನು. ಅದು ಕದಲಲಿಲ್ಲ. ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದೆಳೆದರೂ ಬರಲಿಲ್ಲ. ಗೌಡನು ಆಶ್ಚರ್ಯಯುಕ್ತನಾಗಿ ಅದನ್ನು ಕಿತ್ತು ಪರೀಕ್ಷಿಸಲೇ ಬೇಕೆಂದು, ಆಳನ್ನು ಕರೆಯಿಸಿ ಅಗೆಯುವಂತೆ ಹೇಳಿದನು. ಪೊರಕೆಯ ಬುಡಕ್ಕೆ ಗುದ್ದಲಿಯು ತಾಗಿದೊಡನೆಯೇ ‹‹ಝಣ ಝಣ'' ಎಂದು ಶಬ್ದವಾಯಿತು. ಕೌತುಕದಿಂದ ಶೋಧಿಸಲಾಗಿ ಪೊರಕೆಯ ಕೆಳಗಡೆ ಕೊಪ್ಪರಿಗೆಗಳಲ್ಲಿ ಧನರಾಶಿಯಿದ್ದಿತು. ಅದ

ರಲ್ಲಿ ಬಂದು ಕೊಪ್ಪರಿಗೆಯಲ್ಲಿ ಶ್ರೀಭೂದೇವೀಸಮೇತನಾದ ಚೆನ್ನಕೇಶವಸ್ವಾಮಿಯ ವಿಗ್ರಹವೂ ಅದರ ಅಡಿಯಲ್ಲಿದ್ದ ಮತ್ತೊಂದು ಕೊಪ್ಪರಿಗೆಯ ಧನರಾಶಿಯ ಮಧ್ಯದಲ್ಲಿ, ಶ್ರೀ ವೇಣುಗೋಪಾಲಸ್ವಾಮಿಯ ವಿಗ್ರಹವೂ ದೊರೆತುವು. ಬಾಲಕರಾದ ಇಬ್ಬರು ದಿವ್ಯಪುರುಷರು ಬಂದು ಮಲಗಿದ್ದ ತನ್ನನ್ನು ಎಚ್ಚರಗೊಳಿಸಿದ ಹಾಗೂ, ಮೇಲಕ್ಕೆದ್ದು ಅವರೊಡನೆ ಮಾತನಾಡಬೇಕೆಂದು ಸಮೀಪಕ್ಕೆ ಬರಲು, ಅವರಿಬ್ಬರೂ ತಮ್ಮ ಅಭಯಹಸ್ತಗಳನ್ನು ಶಿರಸ್ಸಿನ ಮೇಲಿಟ್ಟು ಅದೃಶ್ಯರಾದ ಹಾಗೂ, ಅವರನ್ನು ಹುಡುಕಬೇಕೆಂದು ಮುಂದಕ್ಕೆ ಬರಲು ಅಶ್ಲೊಂದು ಪೊರಕೆಯು ಕಾಣಿಸಿದ ಹಾಗೂ, ಹಿಂದಿನ ರಾತ್ರಿ ಗೌಡನು ಸ್ವಪ್ನವನ್ನು ಕಂಡನಂತೆ; ಅದನ್ನು ಸ್ಮರಿಸಿಕೊಂಡು ತಮ್ಮಂದಿರೊಡನೆ ರಾತ್ರೆ ತಾನು ಕಂಡ ಸ್ವಪ್ನವನ್ನೂ, ಅದಕ್ಕನುಸಾರವಾಗಿ ನಡೆದ ಸಂಗತಿಯನ್ನೂ ಹೇಳಲಾಗಿ ಎಲ್ಲರೂ ಸೇರಿ ಅತ್ಯಂತಭಕ್ತಿಯಿಂದ ಆ ವಿಗ್ರಹಗಳನ್ನು ಪೂಜೆಮಾಡಿ ಧನವನ್ನು ಗೋಪ್ಯವಾಗಿಟ್ಟುಕೊಂಡರು. ಪೂಜೆಮಾಡುವುದಕ್ಕೆ ದೇವರೂ ಲೋಕಸೇವೆಮಾಡುವುದಕ್ಕೆ ಧನವೂ ತಮ್ಮ ಪುಣ್ಯವಿಶೇಷದಿಂದ ದೊರೆಯಲಾಗಿ, ಹರ್ಷೋತ್ಸಾಹಗಳಿಂದ ಪುರೋಹಿತರನ್ನು ಮುಂದಿಟ್ಟುಕೊಂಡು ಆಪ್ತವರ್ಗದ ಒಂದು ಸಭೆಯನ್ನು ಕೂಡಿಸಿ ಅವರವರಿಗೆ ತೋರಿದಂತೆ ಚರ್ಚೆಗಳನ್ನು ವಿಶೇಷವಾಗಿ ನಡೆಸಿ ಕಡೆಗೆ ಸ್ವತಂತ್ರವಾಗಿ ರಾಜ್ಯಸ್ಥಾಪನೆಮಾಡಬೇಕೆಂದು ಸರ್ವಾನುಮತದಿಂದ ನಿಶ್ಚಯಿಸಿಕೊಂಡರು.

ಹಿರಿಯನಾದ ರಣಭೈರೇಗೌಡನೂ, ಮಲ್ಲಭೈರೇಗೌಡನೂ, ಸಣ್ಣಭೈರೇಗೌಡನೂ, ವೀರೇಗೌಡನೂ, ಮರೀಗೌಡನೂ, ಗಿಡ್ಡೇಗೌಡನೂ, ತಮ್ಮೇಗೌಡನೂ, ಗಿಡ್ಡಪ್ಪಗೌಡನೂ ಸತ್ಯಶೌರ್ಯಧೈರ್ಯವಿನಯಾದಿಸದ್ಗುಣಭರಿತರಾಗಿದ್ದರು. ರಣಭೈರೇಗೌಡನಿಗೆ ಜಯಗೌಡನಲ್ಲದೆ, ಸಣ್ಣಭೈರೇಗೌಡ, ಹಾವಳಿ ಭೈರೇಗೌಡ, ಮಲ್ಲಭೈರೇಗೌಡ ಎಂಬ ಮಕ್ಕಳಿದ್ದರು. ಒದಗಿದ ದ್ರವ್ಯದಿಂದ ಈ ನಾಲ್ಕು ಮಂದಿ ಮಕ್ಕಳೂ ಏಳು ಮಂದಿ ಸಹೋದರರೂ ಆವತಿಯಲ್ಲಿ ನಿಲ್ಲದೆ ಒಬ್ಬೊಬ್ಬನೂ ಬೇರೆ ಬೇರೆ ಸ್ಥಳಗಳಲ್ಲಿ ಪ್ರತ್ಯೇಕವಾಗಿ ನಾಡುಗಳನ್ನು ಸ್ಥಾಪಿಸಲು ಕೆಲವರು ಆವತಿ, ಯಲಹಂಕ, ಬೆಂಗಳೂರ ಕಡೆಗೂ ಕೆಲವರು ದೇವಂಡಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಇವುಗಳಿಗೂ ಕೆಲವರು ಹೊಳವನಹಳ್ಳಿ, ಕೊರಟಗೆರೆ, ಕುಣಿಗಲು, ಗುಬ್ಬಿಯ ಕಡೆಗೂ, ಮಿಕ್ಕವರು ಹೊಸಕೋಟೆ, ಸುಗಟೂರು, ಗುಡಿಬಂಡೆ ಮುಂತಾದ ಕಡೆಗೂ ಹೋಗಿ ರಾಜ್ಯ

ಸ್ಥಾಪನೆಮಾಡಿದರು. ಈ ಚರಿತ್ರೆಯು ಆಯಾ ನಾಡುಗಳ ವರ್ಣನೆಯಲ್ಲಿ ಮುಂದೆ ಬಂದಿದೆ. ಅವರು ತಮ್ಮ ಹಿರಿಯರ ಹೆಸರುಗಳನ್ನೇ ವಾಡಿಕೆಯಾಗಿ ಮಕ್ಕಳು ಮೊಮ್ಮಕ್ಕಳಿಗೆ ಇಟ್ಟುಕೊಂಡು ಬಂದಿರುವುದರಿಂದ ಅವರವರ ವಂಶೀಯರು ಇವರಿವರೇ ಎಂದು ಗುರ್ತಿಸಲು ಕಷ್ಟವಾಗಿರುತ್ತದೆ.

ವಿದ್ಯಾರಣ್ಯರು—ದಕ್ಷಿಣದೇಶದ ಕರ್ಣಾಟಕರಾಜರುಗಳನ್ನೂ, ಅವರ ದೇಶಗಳನ್ನೂ ಒಂದುಗೂಡಿಸಿ ಅವರವರ ದೇಶಗಳನ್ನು ಬೇರೆ ಬೇರೆ ಮಾಡಿ ರಾಜ್ಯಸ್ಥಾಪನೆಮಾಡಿಸಿದರು. ಮಹಾಪ್ರಖ್ಯಾತವಾಗಿದ್ದ ವಿಜಯನಗರದ ರಾಜ್ಯವನ್ನು ಪ್ರಶಸ್ತವಾದ ಸ್ಥಳದಲ್ಲಿ ಸ್ಥಾಪಿಸಿ ವಿಸ್ತರಿಸಿದರು. ಹರಿಹರರಾಯ, ಬುಕ್ಕ ಮುಂತಾದ ಶೂರರಾದ ಗೌಡ ದೊರೆಗಳಿಗೆ ಇವರು ಗುರುಗಳಾಗಿ ಮಹಾವೈಭವವುಳ್ಳವರೆಂದು ಪ್ರಸಿದ್ಧಿಯಾಗಿದೆ. ಆ ರಾಜರುಗಳ ಆಳ್ವಿಕೆಯ ಮಧ್ಯಭಾಗದಲ್ಲಿ ವಿಜಯನಗರದ ಅರಸನಿಗೂ, ಬಹಮನಿಯ ಸುಲ್ತಾನನಿಗೂ ಉಂಟಾಗಿದ್ದ ಘೋರಕಲಹಗಳನ್ನು ವಿದ್ಯಾರಣ್ಯರು ತಿಳಿದು ಉಭಯತ್ರರನ್ನೂ ಸಮಾಧಾನಪಡಿಸಲು ಮಹಾಪ್ರಯತ್ನಪಟ್ಟು ಒಂದುಗೂಡಿಸಿದರು. "ಮುಸಲ್ಮಾನರು ಪೂರ್ವದಂತೆ ಹಿಂದೂದೇಶವನ್ನು ಕೊಳ್ಳೆ ಹೊಡೆದು ನಿಧಿಯನ್ನು ಟರ್ಕಿಗೆ ಸಾಗಿಸುವುದಿಲ್ಲ. ಇಂಡಿಯದಲ್ಲೇ ನೆಲಸಿರುವರು. ಅವರು ನಮ್ಮಂತೆಯೇ ಸ್ವದೇಶೀಯರಾಗಿ ಇರುವುದರಿಂದ ಅವರ ಮೇಲೆ ಕಲಹಬೇಡ" ವೆಂದು ಹಿಂದೂ ರಾಜರಿಗೆ ಬೋಧಿಸಿದರು. ವಿಜಯನಗರದ ಅರಸರಿಂದ ಒಂದು ಬೆಲೆಯುಳ್ಳ ಮಾಣಿಕ್ಯವನ್ನು ಬಹಮನಿ ನವಾಬನಿಗೆ ಕೊಡಿಸಿ ಇಬ್ಬರಿಗೂ ವಿಶ್ವಾಸವನ್ನು ವೃದ್ಧಿಗೊಳಿಸಿದರು. ಮತವೈರದಿಂದ ಶತ್ರುಭಾವನೆಯಲ್ಲಿದ್ದ ರಾಮಾನುಜಾಚಾರ್ಯರ ಮತಸ್ಥರನ್ನೂ, ಜೈನಮತಸ್ಥರನ್ನೂ ಒಂದುಗೂಡಿಸಿ ಸಮಾಧಾನಪಡಿಸಿದರು. ಶ್ರೀ ಶೃಂಗೇರೀಮಠವನ್ನು ಜೀರ್ಣೋದ್ಧಾರಮಾಡಿ ಕೀರ್ತಿಯನ್ನು ಪಡೆದರು. ಇವರು ೧೨೦ ವರ್ಷಗಳು ಜೀವಿಸಿ ಸ್ವರ್ಗಸ್ಥರಾದರು. ಅಲ್ಲಿಂದೀಚೆಗೆ ವಿಜಯನಗರದ ಕರ್ಣಾಟಕ ಸಾರ್ವಭೌಮರು ರಾಜ್ಯವನ್ನು ವಿಸ್ತರಿಸಲು ಕಾಡುಗಳನ್ನು ಕಡಿದು ಊರುಗಳನ್ನು ಕಟ್ಟಿದರು. ದೇಶೀಯಪ್ರಜೆಗಳಿಗೆ ಪರಕೀಯರ ಬಾಧೆಯಿಲ್ಲದಂತೆ ಧರ್ಮದಿಂದ ಪ್ರಭುತ್ವಮಾಡುತ್ತಿದ್ದರು. ಶೂರರನ್ನು ಆಶ್ರಿತಸಂಸ್ಥಾನಾಧಿಪತಿಗಳನ್ನಾಗಿಯೂ ಪಾಳೆಯಗಾರರನ್ನಾಗಿಯೂ ಅಂಗೀಕರಿಸಿ ಬಿರುದಗಳಿಂದಲೂ, ವಿಶೇಷ ಸನ್ಮಾನಗಳಿಂದಲೂ ಪ್ರೋತ್ಸಾಹಿಸುತ್ತ, ರಾಜ್ಯವನ್ನು ವಿಸ್ತರಿಸುತ್ತಿದ್ದರು. ಈ

ಗೌಡದೊರೆಗಳು ಅವರ ಕೃಪಾಪಾತ್ರರಾಗಿ ರಾಜ್ಯವನ್ನು ಕಟ್ಟಿದರು. ಅವರಲ್ಲಿ ಆವತಿ, ಸುಗಟೂರು, ಯಲಹಂಕ, ಚಿಕ್ಕಬಳ್ಳಾಪುರ, ಈ ನಾಲ್ಕು ನಾಡುಗಳ ಸಂತತಿಯವರು ಮುಖ್ಯರು. ಆವತಿನಾಡ ಪ್ರಭುಗಳ ವಂಶೀಯರನೇಕರು ಬಹಳವಾಗಿ ಊರುಗಳನ್ನು ಕಟ್ಟಿ, ಎಷ್ಟೋ ಸ್ಥಳಗಳನ್ನು ಸ್ವಾಧೀನಮಾಡಿಕೊಂಡು, ಕೆರೆ ಕುಂಟೆಗಳನ್ನೂ, ಗುಡಿ ಗೋಪುರಗಳನ್ನೂ ಕಟ್ಟಿ ಪ್ರಜಾಸಮ್ಮತವಾಗಿ ರಾಜ್ಯಭಾರಮಾಡಿರುತ್ತಾರೆ. ಅವರುಗಳ ಕಾಲವೂ, ಕ್ರಮವಾದ ಹೆಸರುಗಳೂ ಗೊತ್ತಾಗಿರುವುದಿಲ್ಲ. ಸುಪ್ರಸಿದ್ಧವಾದ ಈ ನಾಲ್ಕು ಸಂತತಿಗಳಲ್ಲಿ ಆವತಿನಾಡ ಪ್ರಭುಗಳ ವಿಷಯವು ಈ ಭಾಗದಲ್ಲಿ ವಿವರಿಸಲ್ಪಡುತ್ತದೆ.

ಆವತಿ—ಇದು ದೇವನಹಳ್ಳಿಯ ಉತ್ತರಕ್ಕೆ ೪ ಮೈಲಿಗಳ ದೂರದಲ್ಲಿದೆ. ರಣಭೈರೇಗೌಡನು ಮೊದಲು ಈ ದೇಶಕ್ಕೆ ಬಂದು ನೆಲೆಗೊಂಡ ಪುಣ್ಯಭೂಮಿಯು ಇದೇ ಎಂದು ಮೊದಲೇ ವಿವರಿಸಿದ್ದೇವೆ. ಕ್ರಿ. ಶ. ೧೪ ನೆಯ ಶತಮಾನದ ಮಧ್ಯದಲ್ಲಿ ಈ ಗ್ರಾಮವು ಕಟ್ಟಲ್ಪಟ್ಟಿತೆಂದು ಊಹಿಸಬೇಕಾಗಿದೆ. ಇದು ಕ್ರಿ. ಶ. ೧೪೭೮ ರವರೆಗೆ ಪ್ರಸಿದ್ಧವಾದ ರಾಜಧಾನಿಯಾಗಿದ್ದಿತು. ಅನಂತರ ಚಿಕ್ಕಬಳ್ಳಾಪುರ ಮುಂತಾದವುಗಳನ್ನು ಕಟ್ಟಿ ಇಲ್ಲಿಯ ದೊರೆಗಳು ಅವನ್ನೇ ರಾಜಧಾನಿಯಾಗಿ ಮಾಡಿಕೊಂಡರು. ಆವತಿಯಲ್ಲಿದ್ದ ರಾಜಪರಿವಾರವೂ, ಅಧಿಕಾರಿಗಳೂ, ವಿದ್ವಾಂಸರೂ, ವರ್ತಕರೂ ಆಯಾ ಊರುಗಳನ್ನು ಸೇರಿಕೊಂಡರು. ಅಂದಿನಿಂದ ಆವತಿಯು ಹೀನಸ್ಥಿತಿಗೆ ಬಂದಿತು. ಅದು ಈಗ ಸಾಮಾನ್ಯಗ್ರಾಮವಾಗಿ, ಉರುಳಿಗಡ್ಡೆ, ರೇಷ್ಮೆಗಳ ವ್ಯಾಪಾರ ನಡೆಯುತ್ತಿದೆ. ಗೌಡದೊರೆಗಳ ಅರಮನೆ, ಕೋಟೆ ಮುಂತಾದುವುಗಳಿದ್ದ ಗುರುತು ಈಗಲೂ ಅಲ್ಲಲ್ಲಿ ಕಾಣಬರುತ್ತಿವೆ.

ಈ ದೊರೆಗಳು ರಣಭೈರೇಗೌಡನಿಗೆ ಮೊದಲು ದೊರೆತಿದ್ದ ಶ್ರೀ ಚೆನ್ನಕೇಶವಸ್ವಾಮಿ ವಿಗ್ರಹವನ್ನು ಅದಕ್ಕಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಮಹಾವೈಭವದಿಂದ ಪ್ರತಿಷ್ಠಿಸಿದರು. ಪ್ರಜಾನುರಾಗದಿಂದ ರಾಜ್ಯವಾಳುತ್ತಿದ್ದುದರಿಂದ ಇವರು ಆವತಿನಾಡ ಪ್ರಭುಗಳೆಂದು ಪ್ರಖ್ಯಾತಿಪಡೆದರು.

ಆವತಿ ಬೆಟ್ಟದ ಒಂದು ಪಾರ್ಶ್ವವನ್ನು ದೊಡ್ಡಬೀಡೆಂದು ಕರೆಯುತ್ತಾರೆ. ಇದು ಗೌಡಪ್ರಭುಗಳು ವಾಸಮಾಡಿಕೊಂಡಿದ್ದ ಸ್ಥಳ. ಮತ್ತೊಂದು ಪಾರ್ಶ್ವದಲ್ಲಿ ವೀರಕೆಂಪಮ್ಮನೆಂಬ ರಾಜಪುತ್ರಿಯು ವಾಸಮಾಡುತ್ತಿದ್ದಳು. ಬೆಟ್ಟದ ಕೆಳ

ಗಡೆ ಅರಮನೆಗಳು ಇದ್ದುವು. ಆವತಿ ಬೆಟ್ಟಕ್ಕೂ ಕೋಳಿ ಗುಡ್ಡಕ್ಕೂ ಮಧ್ಯೆ ಅನೇಕ (Cromlechs) ಇವೆ. (ಒರಟುಕಲ್ಲುಗಳನ್ನು ನಟ್ಟು ಅದರ ಮೇಲೆ ೧ ಅಡಿ ದಪ್ಪವೂ ೧೦ ಅಡಿ ಚದರವೂ ಉಳ್ಳ ಚಪ್ಪಡಿ ಕಲ್ಲುಗಳನ್ನು ಹಾಸಿವೆ.) ಆಯಾ ಸ್ಥಳಗಳಿಗೆ ದೊಡ್ಡ ದೊಡ್ಡ ಚಪ್ಪಡಿಗಳನ್ನು ತಂದು ಜೋಡಿಸಿರುವುದು ಆಶ್ಚರ್ಯಕರವಾಗಿದೆ. ಪೂರ್ವದಲ್ಲಿ ಆರ್ಥರ್ ಕೋಲ್ ದೊರೆಯು ಪರಿಕ್ಷಾರ್ಥವಾಗಿ ಚಪ್ಪಡಿಯನ್ನು ಹೊಡೆಸಿ ನೋಡಿದನಂತೆ; ಅದರ ಒಳಗೆ ಹಳೆಯ ಕಾಲದ ಮಣ್ಣು ಮಡಿಕೆಗಳೂ, ಕಬ್ಬಿಣದ ಪಾದರಕ್ಷೆಗಳೂ, ಭರ್ಜಿಗಳು ದಪ್ಪವಾದ ಎಲುಬುಗಳೂ ಇದ್ದುವಂತೆ. ಅಲ್ಲಲ್ಲಿ ಬೂದಿಯ ಗುಂಡಿಗಳು ಹಲವಿವೆ. ಪೂರ್ವಕಾಲದಲ್ಲಿ ಆವತಿನಾಡಿನಲ್ಲಿ ಅನೇಕ ಯುದ್ಧಗಳು ನಡೆದು ಇರುವುದಕ್ಕೆ ಮೇಲಿನವೇ ಕುರುಹುಗಳಾಗಿವೆ. ಬೆಟ್ಟದ ಕೊನೆಯಲ್ಲಿ ಕೆಲವು ಗುಂಡುಗಳು ಇವೆ. ಇವು ಗೌಡರಾಜರುಗಳ ಕಾಲದಲ್ಲಿ ಕರಗದ ದೇವರುಗಳನ್ನು ಮಾಡುತ್ತಿದ್ದ ಗುರುತುಗಳೆಂದು ಹೇಳುತ್ತಾರೆ. ಇನ್ನೊಂದು ಗುಂಡಿನ ಮೇಲೆ ಒಂದೂಕಾಲು ಅಡಿ ಎತ್ತರದ ಹೆಣ್ಣು ಪ್ರತಿಮೆಯು ಕೆತ್ತಲ್ಪಟ್ಟಿದೆ. ಇದು ವೀರಕೆಂಪಮ್ಮನೆಂಬುವ ರಾಜಪುತ್ರಿಯ ವಿಗ್ರಹ. ಈಕೆಯು ಜನನವಾದಂದಿನಿಂದ ಗೌಡರು ಅಭಿವೃದ್ಧಿಗೆ ಬಂದರೆಂಬ ಪ್ರತೀತಿಯಿದೆ.

ಅಧ್ಯಾಯ—೭.

ಯಲಹಂಕನಾಡು, ಬೆಂಗಳೂರು—ಕ್ರಿ. ಶ ೧೪೧೮ ರಲ್ಲಿ ಆವತಿ ನಾಡ ಪ್ರಭುವಾದ ರಣಭೈರೇಗೌಡನ ಕುಮಾರ ಜಯಗೌಡನು ಸ್ವರಾಜ್ಯವನ್ನು ಸ್ಥಾಪಿಸಬೇಕೆಂಬ ಅಭಿಲಾಷೆಯಿಂದ ಆಪ್ತಾಮಾತ್ಯಪರಿವಾರದೊಡನೆ ದಕ್ಷಿಣಕ್ಕೆ ವಿಜಯಯಾತ್ರೆ ಹೊರಟು ಯಲಹಂಕದ ಬಳಿಗೆ ಬಂದು ಪ್ರಶಸ್ತವಾಗಿದ್ದ ಆ ಸ್ಥಳವನ್ನು ನೋಡಿ, ಅಲ್ಲಿಯೇ ನೆಲೆಗೊಂಡರೆ ತನ್ನ ಇಷ್ಟಾರ್ಥವು ನೆರವೇರಬಹುದೆಂದು ತೋರಲಾಗಿ, ಸಾಮೋಪಾಯದಿಂದ ಅದನ್ನು ಆಕ್ರಮಿಸಿದನು. ಒಂದೆರಡು ಸಂವತ್ಸರಗಳಲ್ಲಿಯೇ ಪ್ರಜಾನುರಾಗದಿಂದ ಸುತ್ತ ಮುತ್ತಣ ಪ್ರದೇಶವನ್ನೂ ವಶಪಡಿಸಿಕೊಂಡು ಕ್ರಿ. ಶ. ೧೪೨೦ ರಲ್ಲಿ ಯಲಹಂಕನಾಡ ಪ್ರಭುವೆಂದು ಪ್ರಸಿದ್ಧಿಗೆ ಬಂದನು.

ಈ ಯಲಹಂಕವು ಚೋಳರಾಜರು ಪ್ರಭುತ್ವಮಾಡುತ್ತಿದ್ದ ಕಾಲದಲ್ಲಿ "ಇಳೈಪಕ" ಎಂದೂ, ಹೊಯಿಸಳರ ಕಾಲದಲ್ಲಿ "ಯಲಹಕ್ಕ" ಎಂದೂ ಕರೆ

ಯಲ್ಪಡುತ್ತಿದ್ದಿತು. ಜಯಗೌಡನ ಕಾಲದಲ್ಲಿ ಇದಕ್ಕೆ ‘‘ಯಲಹಂಕ’’ ವೆಂಬ ಹೆಸರು ಸ್ಥಿರವಾಯಿತು.

ಜಯಗೌಡನು ಯಲಹಂಕನಾಡನ್ನು ಸ್ಥಾಪಿಸಿ ೧೫ ಸಂವತ್ಸರಗಳ ಕಾಲ ಸುಖದಿಂದ ಆಳಿ ಕ್ರಿ. ಶ. ೧೪೩೩ ರಲ್ಲಿ ಸ್ವರ್ಗಸ್ಥನಾದನು. ಇವನಿಗೆ ಗಿಡ್ಡೇಗೌಡ, ಮಾಚಯ್ಯಗೌಡರೆಂಬ ಇಬ್ಬರು ಮಕ್ಕಳು. ಗಿಡ್ಡೇಗೌಡನು ಪಟ್ಟಕ್ಕೆ ಬಂದನು. ಈತನಿಗೆ ಮಕ್ಕಳಿಲ್ಲದಿರಲು, ಮನೆದೇವರಾದ ಭೈರೇದೇವರನ್ನೂ ಕೆಂಪಮ್ಮನೆಂಬ ದೇವತೆಯನ್ನೂ ಪ್ರಾರ್ಥಿಸಿ, ನನಗೆ ಗಂಡು ಸಂತಾನವನ್ನು ದಯೆಪಾಲಿಸಿದರೆ, ಮಗುವಿಗೆ ಆ ದೇವರ ಹೆಸರಿಡುತ್ತೇನೆ. ಮುಂದಿನ ಸಂತತಿಯವರಿಗೂ ಅದೇ ಹೆಸರಿಂದಲೇ ಅದಕ್ಕೆ ನಾಮಕರಣ ಮಾಡುತ್ತೇನೆಂದು ಹರಸಿಕೊಂಡನು. ಹಾಗೆಯೇ ಕೆಂಪಮ್ಮದೇವತೆಯ ವರದಿಂದ ಗಂಡು ಶಿಶು ಜನಿಸಿ ಕೆಂಪನಂಜೇಗೌಡನೆಂದು ನಾಮಕರಣಮಾಡಿದನು. ಗಿಡ್ಡೇಗೌಡನು ೧೦ ಸಂವತ್ಸರಗಳ ಕಾಲ ರಾಜ್ಯವಾಳಿ ಕ್ರಿ. ಶ. ೧೪೪೩ರಲ್ಲಿ ಕಾಲವಾದನು. ಕೆಂಪನಂಜೇಗೌಡನು ೧೫೧೩ ರ ವರೆಗೆ ೭೦ ಸಂವತ್ಸರಗಳು ದೀರ್ಘಕಾಲ ಧರ್ಮದಿಂದಲೂ, ದರ್ಪದಿಂದಲೂ, ಪ್ರಭುತ್ವಮಾಡಿ ಕೀರ್ತಿಶೇಷನಾದನು. ಈತನ ಕುಮಾರನೇ ಬೆಂಗಳೂರನ್ನು ಕಟ್ಟಿದ ಪ್ರಸಿದ್ಧಪುರುಷನಾದ ಮೊದಲನೆಯ ಕೆಂಪೇಗೌಡನು. ಯಲಹಂಕವು ಕ್ರಿ. ಶ, ೧೬೫೦ರ ವರೆಗೆ ಎಂದರೆ ೨೩೭ ಸಂವತ್ಸರಗಳ ವರೆಗೂ ಗೌಡದೊರೆಗಳ ಆಳ್ವಿಕೆಯಲ್ಲಿದ್ದು ಬಳಿಕ ಮೈಸೂರು ರಾಜ್ಯಕ್ಕೆ ಸೇರಿಹೋಯಿತು.

ಜಯಗೌಡನು ಯಲಹಂಕಕ್ಕೆ ದಂಡಯಾತ್ರೆ ಬರುವಾಗ ಆತನ ಸಂಬಂಧಿಯಾದ ವೀರಣ್ಣ ಅಥವಾ ವೀರೇಗೌಡನು ಅವನಿಗೆ ಬೆಂಬಲವಾಗಿ ಬಂದು ಸೇರಿದನು. ಈ ವೀರಣ್ಣನು ಬಾಲ್ಯದಿಂದಲೂ ಹೆಸರಿಗೆ ತಕ್ಕಂತೆ ವೀರಾಲಾಪಗಳನ್ನಾಡುತ್ತ ಸಾಹಸಕೃತ್ಯಗಳನ್ನು ಮಾಡುತ್ತಿದ್ದನು. ಸೈನ್ಯಾಧಿಪತಿಯಾಗಿ ಮಹಾವೀರನೆನಿಸಿಕೊಳ್ಳಬೇಕೆಂದು ಚಿಂತಿಸುತ್ತಿದ್ದನು. ಯೌವನಸ್ಥನಾದ ಮೇಲೆ ಆವತಿಯಿಂದ ಹೊರಟು ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡ ಬೆಳವಂಗಲದ ಕರಣೀಕ ನಾರಣಪ್ಪನವರ ಮನೆಗೆ ಬಂದನು. ಅವರು ಆತನನ್ನು ವಿಶ್ವಾಸದಿಂದ ಕಂಡು ಆದರಿಸಿದರು. ಇಬ್ಬರಿಗೂ ಪ್ರೇಮವುಂಟಾಗಿ ವೀರಣ್ಣನು ಸಾಮಾನ್ಯಮನುಷ್ಯನಂತೆ ಕರಣೀಕ ನಾರಣಪ್ಪನವರ ಮನೆಯಲ್ಲಿ ನಿಂತನು.

ಆತನು ಗರಡೀಸಾಧನೆ, ಕತ್ತಿಯ ಸಾಮು, ದೊಣ್ಣೆಯ ವರಿಸೆ ಇವುಗಳಲ್ಲಿ ಪ್ರವೀಣನಾದನು. ಗುಣವಂತನೂ, ಸುಂದರನೂ, ಮೃದುಭಾಷಿಯೂ ಆಗಿದ್ದುದರಿಂದ ಆತನನ್ನು ನೋಡಿದ ತರುಣರೆಲ್ಲಾ ಅಂಗಸಾಧನೆ ಆಯುಧಪ್ರಯೋಗಾದಿಗಳನ್ನು ಕಲಿಯಬೇಕೆಂದು ಅವನಿಗೆ ಶಿಷ್ಯರಾಗಿ ವಿಧೇಯತೆಯಿಂದಿರುತ್ತಿದ್ದರು. ಅವರುಗಳಿಗೆಲ್ಲಾ ಆತನು ತನಗೆ ತಿಳಿದ ವಿದ್ಯವನ್ನು ನಿರ್ವಂಚನೆಯಿಂದ ಹೇಳಿಕೊಡುತ್ತ, ಹಿತಚಿಂತಕನಾಗಿದ್ದ ಕಾರಣ ಶೂರರಾದ ಬಹುಜನತರುಣರು ಅವನ ವಶರಾದರು. ಆ ಕಾಲಕ್ಕೆ ತಕ್ಕಂತೆ ವೀರಣ್ಣನು ಒಂದು ಸಣ್ಣ ಸೈನ್ಯಕ್ಕೆ ಅಧಿಪತಿಯಾಗಿದ್ದನು. ತನ್ನ ಶ್ರೇಯೋಭಿವೃದ್ಧಿಗೆ ಸಾಧಕವಾದ ಸಲಹೆಗಳನ್ನು ಕೊಡುತ್ತ ಮನೆಯಲ್ಲಿ ಆಶ್ರಯಕೊಟ್ಟು ಸುಖದಿಂದ ಪೋಷಿಸುತ್ತಿದ್ದ ನಾರಣಪ್ಪನ ಸಹಾಯದಿಂದ ವೀರಣ್ಣನು ಯಲಹಂಕನಾಡನ್ನು ಸ್ಥಾಪಿಸುವುದರಲ್ಲಿ ಜಯಗೌಡನಿಗೆ ಮುಖ್ಯಸಹಾಯಕನಾದನು. ಜಯಗೌಡನ ವಿಜಯಕ್ಕೆಲ್ಲಾ ವೀರಣ್ಣನೂ ಆತನ ಶೂರಪರಿವಾರವೂ, ಆಪ್ತನಾದ ನಾರಣಪ್ಪನೂ ಕಾರಣಭೂತರು. ಈ ನಾರಣಪ್ಪನವರ ವಂಶಸ್ಥರು ಮುಮ್ಮಡಿ ಕೆಂಪೇಗೌಡನ ಆಳ್ವಿಕೆಯ ಕೊನೆಯವರೆಗೂ, ಯಲಹಂಕ, ಬೆಂಗಳೂರು, ಮಾಗಡಿ, (ಸೆಲಪಟ್ಟಣ) ಸಾವನದುರ್ಗ ಪ್ರಾಂತಗಳ ಗೌಡದೊರೆಗಳಿಗೆ ಆಪ್ತಮಂತ್ರಿಗಳೂ, ಕರಣೀಕರೂ, ಶ್ರೇಯೋಭಿಲಾಷಿಗಳೂ ಆಗಿ ಇದ್ದು ಅವರೊಡನೆ ಅನೇಕಕಷ್ಟಸುಖಗಳನ್ನನುಭವಿಸಿ ಕೀರ್ತಿಶೇಷರಾದರು. ಈಗ ಬೆಂಗಳೂರಲ್ಲಿ ಇರುವ ಮಾಗಡಿ ಕರಣೀಕರು ಮ॥ ರಾ॥ ಕೃಷ್ಣಮೂರ್ತಿರಾಯರೇ ಆ ನಾರಾಯಣಪ್ಪನವರ ವಂಶಸ್ಥರು. ಗೌಡದೊರೆಗಳಂತೆ ಅವರ ಮಂತ್ರಿಗಳೂ ಧರ್ಮಿಷ್ಠರೆಂಬುದಕ್ಕೆ ಮಾಗಡಿ ಕರಣೀಕರ ಮನೆಯಲ್ಲಿ ನಡೆಯುತ್ತಿದ್ದ ಅನ್ನದಾನವೂ, ಅವರು ಮಾಡಿಸಿರುವ ಧರ್ಮಕಾರ್ಯಗಳೂ ನಿದರ್ಶನವಾಗಿವೆ. ಗೌಡದೊರೆಗಳು ಸ್ಥಾಪಿಸಿರುವ ದೇವಸ್ಥಾನಗಳನ್ನು ಅವರು ಜೀರ್ಣೋದ್ಧಾರ ಮಾಡಿರುತ್ತಾರೆ.

ಬೆಂಗಳೂರು.

೧ ನೇ ಕೆಂಪೇಗೌಡ ೧೫೧೩—೧೫೬೯.

ಯಲಹಂಕದ ಕೆಂಪನಂಜೇಗೌಡನ ಕುಮಾರ ಕೆಂಪೇಗೌಡನು ಬಾಲ್ಯದಿಂದಲೂ ವಿದ್ಯಾವಿನಯಸಂಪನ್ನನಾಗಿ ಪ್ರಭುಪದವಿಗೆ ತಕ್ಕ ಲಕ್ಷಣಗಳಿಂದೊಡ

ಗೂಡಿ, ಹಿರಿಯರಿಗಿಂತಲೂ ಹೆಚ್ಚಾಗಿ ರಾಜ್ಯವನ್ನು ವಿಸ್ತರಿಸಿ, ಯಶೋವಂತನಾಗ ಬೇಕೆಂಬ ಮಹತ್ಕಾಂಕ್ಷೆಯುಳ್ಳವನಾಗಿದ್ದನು. ಅದಕ್ಕನುಸಾರವಾಗಿ ತಕ್ಕ ಉಪಕರಣಗಳೆಲ್ಲಾ ಒದಗಿದವು. ತಂದೆಯ ಕಾಲಾನಂತರ ಯಲಹಂಕನಾಡು ಪ್ರಭುವಾಗಿ ರಾಜ್ಯಭಾರಮಾಡುತ್ತಿರುವಲ್ಲಿ, ಒಂದಾನೊಂದು ದಿನ ವಿಹಾರಾರ್ಥ ವಾಗಿ ಮಿತಪರಿವಾರದೊಡನೆ ದಕ್ಷಿಣ ದಿಕ್ಕಿಗೆ ಹೊರಟು ೧೦ ಮೈಲಿ ಬರು ವಾಗ್ಗೆ "ಶಿವನಸಮುದ್ರ" ಎಂಬ ಹಳ್ಳಿಯನ್ನು ಕಂಡನು. ವಿಶಾಲವಾದ ಮರದ ನೆರಳಿನಲ್ಲಿಳಿದು ಶ್ರಮಪರಿಹಾರಮಾಡಿಕೊಳ್ಳುತ್ತಿರಲು, ಆ ಸ್ಥಳದಲ್ಲಿ ಒಂದು ದೊಡ್ಡ ಪಟ್ಟಣವನ್ನು ಕಟ್ಟಿ ತನ್ನ ರಾಜಧಾನಿಯಾಗಿ ಮಾಡಿಕೊಳ್ಳಬೇ ಕೆಂಬ ತೀವ್ರವಾದ ಇಚ್ಛೆಯುಂಟಾಗಿ ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತ ಹಿಂತಿ ರುಗಿದನು.

ಶಿವನ ಸಮುದ್ರವೆಂಬ ಗ್ರಾಮಕ್ಕೆ ವಾಯುವ್ಯ ಮೂಲೆಯಲ್ಲಿ ಹೆಬ್ಬಾಳದ ಒಳಗೆರೆಗೆ ದಕ್ಷಿಣದಲ್ಲಿ ಈಗ ಕೊಡಿಗೇಹಳ್ಳಿ ಗ್ರಾಮವಿರುವ ಸ್ಥಳದಲ್ಲಿ ಕಾಡಿನ ನಡುವೆ ಬೆಂಗಳೂರೆಂಬ ಕೆಲವು ಗುಡಿಸಲುಗಳುಳ್ಳ ಒಂದು ಹಳ್ಳಿಯಿದ್ದಿತು. ಶಕ ೯೦೦ ರಲ್ಲಿ ಒಬ್ಬ ಬಲ್ಲಾಳರಾಜನು ಬೇಟೆಗಾಗಿ ಆ ಕಾಡಿಗೆ ಬಂದಿ ದ್ದು ಪರಿವಾರದವರು ತಪ್ಪಿಹೋಗಲು ಒಬ್ಬನೇ ಅಶ್ವಾರೂಢನಾಗಿ ತಿರಿಗಿ, ದಣಿದು, ಹಸಿವು ಬಾಯಾರಿಕೆಗಳನ್ನು ತಾಳಲಾರದೆ, ಒಂದು ಗುಡಿಸಲ ಬಳಿಗೆ ಬಂದು ಅಲ್ಲಿದ್ದ ಮುದುಕಿಯನ್ನು ಕುರಿತು "ನನಗೇನಾದರೂ ಆಹಾರವನ್ನೂ ಕುಡಿಯುವುದಕ್ಕೆ ನೀರನ್ನೂ ಕೊಡು" ಎಂದು ಕೇಳಿದನಂತೆ. ಆ ಮುದುಕಿಯು ತನ್ನಲ್ಲಿದ್ದ ಬೆಂದ ಕಾಳನ್ನೂ ನೀರನ್ನೂ ಕೊಟ್ಟು ಉಪಚರಿಸಿದಳಂತೆ. ಅದಕ್ಕೆ ರಾಜನು ಸಂತುಷ್ಟನಾಗಿ ಆ ಮುದುಕಿಗೆ ವಿಶೇಷ ಬಹುಮಾನಮಾಡಿ, ಆ ಹಳ್ಳಿಗೆ ಅಂದಿನಿಂದ "ಬೆಂಗಾಳೂರು" ಎಂದು ಹೆಸರಿಟ್ಟನಂತೆ. (ಬೆಂಗಾಳು + ಊರು = ಬೆಂಗಾಳೂರು)

ಕೆಂಪೇಗೌಡನು ಶಿವನ ಸಮುದ್ರವಿದ್ದ ಪ್ರದೇಶದಲ್ಲಿ ದೊಡ್ಡ ಪಟ್ಟಣ ವನ್ನೂ ಕೋಟೆ ಕೊತ್ತಲಗಳನ್ನೂ ಕಟ್ಟಿಕೊಳ್ಳುವಂತೆ ವಿಜಯನಗರದ ಚಕ್ರವರ್ತಿ ಗಳ ಅಪ್ಪಣೆಯನ್ನು ಪಡೆದು ಕ್ರಿ. ಶ. ೧೫೩೭ರಲ್ಲಿ ಬೆಂಗಳೂರ ಪಟ್ಟಣವನ್ನೂ, ಮಣ್ಣಿನ ಕೋಟೆಯನ್ನೂ ಕಟ್ಟಿ ಅದನ್ನೇ ರಾಜಧಾನಿಯಾಗಿ ಮಾಡಿಕೊಂ ಡನು.

ಈಚೆಗೆ ಟಿಪ್ಪೂಸುಲ್ತಾನನು ಆ ಕೋಟೆಯನ್ನು ಕಲ್ಲಿನಿಂದ ಭದ್ರವಾಗಿ ಕಟ್ಟಿಸಿದನು. ಈಗ ಆ ಕೋಟೆಯನ್ನೆಲ್ಲ ಒಡೆದು ಕಂದಕವನ್ನು ಮುಚ್ಚಿಸಿ ನೆಲಮಟ್ಟಮಾಡಿರುತ್ತಾರೆ. ಗುರುತಿಗಾಗಿ ಸ್ವಲ್ಪಭಾಗ ಮಾತ್ರ ಉಳಿದಿರುತ್ತದೆ.

ಕೋಟೆಯನ್ನು ಕಟ್ಟುವಕಾಲದಲ್ಲಿ ನಡೆದ ಒಂದು ವಿಷಯವನ್ನು ಜನರು ಆಡಿಕೊಳ್ಳುವುದೇನೆಂದರೆ.—

ಗೌಡನು ಕೋಟೆಯನ್ನು ಕಟ್ಟಿ ಬಾಗಿಲನ್ನು ಇಡುತ್ತಿರುವಾಗ ಅದು ನಿಲ್ಲದೆ ಪ್ರತಿನಿತ್ಯವೂ ಬಿದ್ದು ಹೋಗುತ್ತಿದ್ದತು. ಇದರಿಂದ ಭಗ್ನಮನೋರಥನಾಗಿ ಚಿಂತಿಸುತ್ತಿರುವಾಗ ಕೆಲವರು, ಗರ್ಭಿಣಿ ಸ್ತ್ರೀಯನ್ನು ಬಲಿಕೊಟ್ಟರೆ ಕಾರ್ಯವು ನೆರವೇರುವುದೆಂದು ಅರಿಕೆಮಾಡಿದರು. ಗೌಡನು ಸ್ತ್ರೀಹತ್ಯಕ್ಕೆ ಒಡಂಬಡದೆ ಪುನಃ ಕೆಲಸಕ್ಕೆ ಪ್ರಾರಂಭಮಾಡಲು, ಹಿಂದಿನಂತೆಯೇ ನಿಲ್ಲದೆ ಹೋಯಿತು. ಇದನ್ನು ತಿಳಿದು ವ್ಯಸನಾಕ್ರಾಂತನಾಗಿರುವಾಗ ತನ್ನ ಸೊಸೆಯಾದ ಲಕ್ಷ್ಮಮ್ಮನೆಂಬಾಕೆಯು ಬಂದು ವಿನಯದಿಂದ ಗೌಡನನ್ನು ಕುರಿತು "ಮಾವನವರೇ, ಚಿಂತಿಸಲೇಕೆ ? ತಾವು ಮಾಡುತ್ತಿರುವ ಪಟ್ಟಣಾಭಿವೃದ್ಧಿಯ ಮಹತ್ಕಾರ್ಯಕ್ಕೆ ಒಬ್ಬ ಸ್ತ್ರೀಯಿಂದ ವಿಘ್ನಬಂದಿರುವುದಲ್ಲವೆ ? ನನ್ನನ್ನು ಬಲಿಕೊಡಿಸಿ ನಿಮ್ಮ ಉದ್ದೇಶದಂತೆ ಕೋಟೆ ಕೊತ್ತಲುಗಳನ್ನು ಭದ್ರಪಡಿಸಬಹುದು" ಎಂದು ಬೇಡಿಕೊಂಡಳು. ಗೌಡನು ಸೊಸೆಯನ್ನು ಕುರಿತು, "ಅಮ್ಮಾ, ನಾನು ಆವ ಅಲ್ಪಪ್ರಾಣಿಯನ್ನೂ ಬಲಿಕೊಡಲು ಒಪದೆ ಇರುವಾಗ ಲಕ್ಷ್ಮಿಗೆ ಸಮಾನಳಾದ ನಿನ್ನನ್ನು ಬಲಿಕೊಡುವುದಕ್ಕೆ ಒಪ್ಪುವೆನೇ ? ನಿನ್ನ ಮನೋದಾರ್ಢ್ಯಕ್ಕೂ ದೇಶವಾತ್ಸಲ್ಯಕ್ಕೂ ಮೆಚ್ಚಿದೆನು. ನೀನು ದೀರ್ಘಾಯುವಾಗಿ ಬಾಳು" ಎಂದು ಆಶೀರ್ವದಿಸಿದನು.

ಆ ಬಳಿಕ ಎಷ್ಟು ದಿನಗಳಾದರೂ ಕೋಟೆಯ ಕೆಲಸವು ಪೂರೈಸದೆ ನಿತ್ಯವೂ ಹಗಲೆಲ್ಲಾ ಮಾಡಿದ ಕೆಲಸವು ರಾತ್ರಿಯಲ್ಲಿ ಬಿದ್ದುಹೋಗಿ ತನ್ನ ಮಾವನಿಗೆ ನಷ್ಟವೂ ವ್ಯಥೆಯೂ ಹೆಚ್ಚುತ್ತ ಬಂದುದನ್ನು ನೋಡಿ ಲಕ್ಷ್ಮಮ್ಮನು ಸಹಿಸಲಾರದೆ, ಒಂದು ದಿನ ರಾತ್ರಿ ಆರಿಗೂ ತಿಳಿಯದಂತೆ ಕೋಟೆಯ ಮಹಾದ್ವಾರದ ಬಳಿಗೆ ಬಂದು ದೃಢಭಕ್ತಿಯಿಂದ "ನನ್ನ ದೇಹವನ್ನು ನಿನಗರ್ಪಿಸುವೆನು. ಈ ಕೋಟೆಯ ಮಹಾದ್ವಾರವನ್ನು ನಿಲ್ಲಿಸಿ ನನ್ನ ಮಾವನಿಗೆ ಸತ್ಕೀರ್ತಿಯನ್ನು ದಯೆಪಾಲಿಸು" ಎಂದು ದೇವತೆಯನ್ನು ಪ್ರಾರ್ಥಿಸಿ ಶಿರವನ್ನು ತರಿದುಕೊಂಡು ಪ್ರಾಣ ಬಿಟ್ಟಳಂತೆ !

ಬೆಳಗಾಗುತ್ತಲೇ ಆಳುಗಳು ಬಂದು ಮಹಾದ್ವಾರವು ನಿಂತಿರುವುದನ್ನು ದೂರದಿಂದ ನೋಡಿ ಆಶ್ಚರ್ಯದಿಂದ ಓಡಿಹೋಗಿ ದೊರೆಗೆ ಅರಿಕೆಮಾಡಿದರು. ಕುತೂಹಲದಿಂದ ದೊರೆಯೂ ಬಂದು ನೋಡುವಲ್ಲಿ ಕುಲದೀಪಕಳಾದ ಲಕ್ಷ್ಮಮ್ಮನ ರುಂಡವೂ, ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಬಿದ್ದಿದ್ದ ಮುಂಡವೂ ಮಹಾದ್ವಾರದ ಮುಂದೆ ಕಾಣಿಸಿದುವು. ಅದರಿಂದ ಬಹು ಚಿಂತಾಕ್ರಾಂತನಾಗಿ ದೊರೆಯೂ ಮಾರಿಹೋದುದಕ್ಕೆ ಉಪಾಯಕಾಣದೆ ಸಮಾಧಾನವನ್ನು ತಂದುಕೊಂಡು ತಮ್ಮ ಕುಲದೇವತೆಯಂತೆ ಪೂಜ್ಯಳಾದ ಲಕ್ಷ್ಮಮ್ಮನ ಕೀರ್ತಿಯು ಸ್ಥಿರವಾಗಿರಬೇಕೆಂದು ಬೆಂಗಳೂರಿಗೆ ಪೂರ್ವದಿಕ್ಕಿನಲ್ಲಿರುವ ಕೋರಮಂಗಲ ಗ್ರಾಮಮಧ್ಯದಲ್ಲಿ ಗುಡಿಯನ್ನು ಕಟ್ಟಿ ಅವಳ ವಿಗ್ರಹವನ್ನಿಟ್ಟು ಅದಕ್ಕೆ ಪೂಜಾದಿಗಳು ನಡೆಯುವಂತೆ ಏರ್ಪಡಿಸಿದನು. ಈಗಲೂ ಲಕ್ಷ್ಮಮ್ಮನ ಗುಡಿಯಲ್ಲಿ ಗ್ರಾಮಸ್ಥರಿಂದ ಪೂಜಾದಿಗಳು ನಡೆಯಿಸಲ್ಪಡುತ್ತಿವೆ. ಅಂದಿನಿಂದ ಕೋಟೆಯ ದ್ವಾರವು ಭದ್ರವಾಗಿ ನಿಂತು ಕೆಂಪೇಗೌಡನ ಮುಂದಿನ ಮಹತ್ಕಾರ್ಯಗಳಿಗೆ ನಿರ್ವಿಘ್ನತೆಯುಂಟಾಯಿತು.

ಕೆಂಪೇಗೌಡನು ಬೆಂಗಳೂರು ಪಟ್ಟಣವನ್ನು ಕಟ್ಟಿದ ವಿಧಾನವೂ, ಉದ್ದೇಶವೂ ಶ್ರೇಷ್ಠವಾಗಿ ವಿಚಾರಾರ್ಹವಾಗಿದೆ. ಈ ಪಟ್ಟಣಕ್ಕೆ ನವದ್ವಾರಗಳೂ, ಒಂಭತ್ತು ಕೆರೆಗಳೂ, ದೇವಾಲಯಗಳೂ, ಚತುರ್ದಿಕ್ಕುಗಳಲ್ಲಿ ಪಟ್ಟಣದ ವಿಶಾಲವನ್ನು ತೋರಿಸುವ ವೈಯಾಲ್ ಮುಂತಾದ ನಾಲ್ಕು ಶಿಖರಗಳೂ ನಿರ್ಮಿಸಲ್ಪಟ್ಟು ಈಗಿರುವ ದೊಡ್ಡ ಮತ್ತು ಚಿಕ್ಕಪೇಟೆಗಳು ಸಂಧಿಸುವ ಚೌಕದಿಂದ ನಾಲ್ಕು ದಿಕ್ಕುಗಳಿಗೂ ನಾಲ್ಕು ರಾಜಬೀದಿಗಳನ್ನು ಏರ್ಪಡಿಸಿ, ಒಂದೊಂದು ಮತ ವೃತ್ತಿಯವರಿಗೆ ಒಂದೊಂದು ಪೇಟೆಯಾಗಿ ವಿಂಗಡಿಸಿ, ಅಲ್ಲಲ್ಲಿ ಆಯಾ ಜನಗಳು ತಕ್ಕ ಅನುಕೂಲತೆಗಳಿಂದ ತಮ್ಮ ತಮ್ಮ ವ್ಯಾಪಾರ, ಕೈಗಾರಿಕೆಗಳನ್ನು ನಡೆಸಿಕೊಂಡು ಸುಖದಿಂದಿರುವಂತೆ ಏರ್ಪಡಿಸಿದನು. ಆಗ ಮಾಡಿದ ಈ ಸ್ಥಳದ ನಕ್ಷೆಯು ಈಗಿನ ಕಾಲದಲ್ಲಿ ಭರತಖಂಡದಲ್ಲೆಲ್ಲಾ ಬೆಂಗಳೂರು ಪಟ್ಟಣವೇ ಆರೋಗ್ಯ ಸ್ಥಳವೆಂದು ಖ್ಯಾತಿಗೊಂಡಿದೆ. ಈಗ ಪಾಶ್ಚಾತ್ಯಪ್ರಮುಖರು ಸಹಾ ಒಪ್ಪಲಿಕ್ಕೂ, ಈ ಸಂಸ್ಥಾನದ ಮುಖ್ಯರಾಜಕಾರ್ಯಸ್ಥಾನವಾಗಿ, ಸ್ವದೇಶೀಯ ಕೈಗಾರಿಕೆ ಮತ್ತು ವ್ಯಾಪಾರಗಳಿಗೆ ಪ್ರಸಿದ್ಧವಾಗಲಿಕ್ಕೂ, ವೇದವೇದಾಂಗ ಸಂಗೀತಸಾಹಿತ್ಯಕೋವಿದರಾದ ವಿದ್ವನ್ಮಣಿಗಳು ಇರಲಿಕ್ಕೂ ಆ ನಕ್ಷೆಯೇ ಕಾರಣ. ದೇಶ ಕಾಲ ಪಾತ್ರವನ್ನರಿತು ದೇವತಾಸೇವೆಗಳನ್ನೂ ಪರೋಪಕಾರ

ಕಾರ್ಯಗಳನ್ನೂ ಸದಾ ನೆರವೇರಿಸುತ್ತಿರುವ ಧನಿಕರಾದ ವರ್ತಕಮಹಾಜನಗಳು ಇರಲಿಕ್ಕೂ, ಭಕ್ತಿ, ಜ್ಞಾನ, ದೇಶಾಭಿಮಾನ, ಧೈರ್ಯೋತ್ಸಾಹ, ಉದ್ಯೋಗತತ್ಪರತೆಗಳನ್ನು ವೃದ್ಧಿಗೊಳಿಸುವ ಆಸ್ತಿಕಧರ್ಮಸಂಘಗಳು, ಮಠಗಳು, ಧರ್ಮ ಸತ್ರಗಳು, ಅನಾಥರಕ್ಷಣಾಲಯಗಳು, ವಿವಿಧ ವಿದ್ಯಾನಿಲಯಗಳು ಇವೇ ಮೊದಲಾದುವುಗಳಿಂದ ಏಕರೀತಿಯಾಗಿ ಅಭಿವೃದ್ಧಿಯನ್ನೈದುತ್ತ ಕಲ್ಯಾಣಪಟ್ಟಣವೆಂಬ ಅನ್ವರ್ಥನಾಮವನ್ನು ಪಡೆಯಲಿಕ್ಕೂ ಅನುಕೂಲವೆನಿಸಿದ ಈ ಪುರನಿರ್ಮಾಣಕರ್ತೃವಾದ ಆ ಕೆಂಪೇಗೌಡನೇನು ಧನ್ಯನೋ ? ಪುರನಿರ್ಮಾಣಕ್ಕೆ ಇಟ್ಟಿದ್ದ ಲಗ್ನವೆಂತಹುದೋ ? ಆ ಕಾಲದಲ್ಲಿ ಲಗ್ನವನ್ನು ಕಟ್ಟಿದ ಜ್ಯೋತಿಷ್ಕನೆಷ್ಟು ಜ್ಞಾನಿಯೋ ? ಕೆಂಪೇಗೌಡನು ಪಟ್ಟಣವನ್ನು ಕಟ್ಟುವುದಕ್ಕುಪಕ್ರಮಮಾಡುವಾಗ ಶಾಸ್ತ್ರೋಕ್ತವಾಗಿ ಪೂಜಾಹೋಮಗಳನ್ನು ಮಾಡಿಸಿ, ದೊಡ್ಡಪೇಟೆಯ ಚೌಕದಿಂದ ನಾಲ್ಕು ದಿಕ್ಕುಗಳಿಗೂ ಎತ್ತುಗಳನ್ನು ಕಟ್ಟಿಸಿ ಸಿದ್ಧವಾಗಿ ನಿಲ್ಲಿಸಿದ್ದ ನೇಗಿಲುಗಳಿಂದ, ಲಗ್ನಕಾಲವನ್ನು ಸೂಚಿಸಿದ ವೇಳೆಗೆ ಸರಿಯಾಗಿ, ಪೂರ್ವಕ್ಕೆ ಹಲಸೂರು ಬಾಗಿಲ ವರೆಗೂ, ಪಶ್ಚಿಮಕ್ಕೆ ಅರಳೇಪೇಟೆಯ ಕೊನೆಯ ವರೆಗೂ, ಉತ್ತರಕ್ಕೆ ಯಲಹಂಕದ ಬಾಗಿಲ ವರೆಗೂ, ದಕ್ಷಿಣಕ್ಕೆಕೋಟೆಯ ತೆಂಕಣ ಬಾಗಿಲ ವರೆಗೂ ಉಳಿಸಿ ಆ ನೇಗಿಲ ಸಾಲುಗಳನ್ನೇ ಮುಖ್ಯ ಬೀದಿಗಳನ್ನಾಗಿ ಏರ್ಪಡಿಸಿ ಒಂದೊಂದು ಬೀದಿಯನ್ನೂ ಪಟ್ಟಣದ ಇತರ ಭಾಗಗಳನ್ನೂ ವಿಂಗಡಿಸಿ ಕಟ್ಟಿಸಿದನು.

ಕೋಟೆಯ ಉತ್ತರ ಮಹಾದ್ವಾರದಲ್ಲಿ ಶ್ರೀ ವಿನಾಯಕ ಮತ್ತು ಶ್ರೀ ಆಂಜನೇಯಸ್ವಾಮಿಯವರ ದೇವಾಲಯಗಳನ್ನು ಕಟ್ಟಿಸಿದನು. ಶ್ರೀವೆಂಕಟರಮಣ ಸ್ವಾಮಿಯ ದೇವಾಲಯವಿರುವ ಸ್ಥಳದಲ್ಲಿ ಬಸವೇಶ್ವರ ದೇವಾಲಯವನ್ನೂ ಕೋಟೆಯ ದಕ್ಷಿಣಕ್ಕೆ ಕಾರಂಜೀ ಕೆರೆಗೆ ಅಸ್ತಿಭಾರವನ್ನೂ ಉತ್ತರದಲ್ಲಿ ಕಾಶೀಕೆಲಸದಿಂದ ಅತಿ ವಿಶಾಲವಾದ ಕಲ್ಯಾಣಿಯನ್ನೂ ಕಟ್ಟಿಸಿದನು.

ಅದು ಈಗ ಕೋಟೆಯನ್ನು ಒಡೆದ ಮಣ್ಣಿನಿಂದ ಮುಚ್ಚಲ್ಪಟ್ಟು ಮಾರ್ಕೆಟ್ಟಿನಿದಿರಿಗೆ ಜಟಕಾಬಂಡಿಗಳು ನಿಲ್ಲುವ ಸ್ಥಳವಾಗಿದೆ.

ಪಟ್ಟಣದ ಸುತ್ತಲೂ ಹೊಲ, ಗದ್ದೆ, ತೋಟಗಳ ವ್ಯವಸಾಯವನ್ನು ಹೆಚ್ಚಿಸಿ, ತೋಪುಗಳನ್ನೂ, ಶೃಂಗಾರವಾದ ಹೂ ತೋಟಗಳನ್ನೂ ಮಾಡಿಸಿ, ನಾನಾ ದೇಶಗಳಿಂದ ಜನರನ್ನು ಕರೆಸಿ ಅವರುಗಳಿಗೆ ಬೇಕಾದ ಅನುಕೂಲತೆಗಳನ್ನೂ




ಬಸವಾಪುರದಲ್ಲಿರುವ ವಿಘ್ನೇಶ್ವರ ಮತ್ತು ದೊಡ್ಡಬಸವಣ್ಣ, ದೇವಾಲಯುಗಳು



ನಾಲ್ಕು ಶಿಖರಗಳಲ್ಲಿ ಒಂದಾದ
ಹಲಸೂರು ಶಿಖರ.



ಹಲಸೂರು ಸೋಮೇಶ್ವರ
ದೇವಾಲಯ,



ಕೆಂಪಾಂಬುಧಿ ಕೆರೆಯ ಬಳಿ ರುದ್ರದೇವಸ್ಥಾನ.



ಗವಿ ಗಂಗಾಧರೇಶ್ವರ ದೇವಸ್ಥಾನದ ಮಹಾದ್ವಾರ.



ಗವೀಪುರದ ಪೂರ್ವಭಾಗದ ನೋಟ.



ಬಸವಾಪುರದ ದೊಡ್ಡ ಆಂಜನೇಯ ದೇವಸ್ಥಾನ.

ದಗಿಸಿಕೊಟ್ಟು ಪಟ್ಟಣವನ್ನು ಜನಭರಿತವನ್ನಾಗಿ ಮಾಡಿ ಪ್ರಜೆಗಳನ್ನು ಸಂರಕ್ಷಿಸುತ್ತ ಪ್ರಸಿದ್ಧಿಗೆ ಬಂದನು.

ವಿಜಯನಗರದ ಚಕ್ರವರ್ತಿಗಳಾದ ಅಚ್ಯುತರಾಯ, ಕೃಷ್ಣರಾಯರು ಕೆಂಪೇಗೌಡನ ಸುಗುಣಾತಿಶಯಗಳನ್ನು ಕೇಳಿ ಸಂತೋಷಪಟ್ಟು ಬೆಂಗಳೂರಿಗೆ ಸುತ್ತಲೂ ಇರುವ, ಹಲಸೂರು, ವರ್ತೂರು, ಬೇಗೂರು, ಜಿಗಣಿ, ತಲಘಟ್ಟಪುರ, ಕುಂಬಳಗೋಡು, ಕೆಂಗೇರಿ, ಹೆಸರುಘಟ್ಟ, ಬಾಣಾವರ ಮೊದಲಾದ ಗ್ರಾಮಗಳನ್ನೂ ಸಂವತ್ಸರಕ್ಕೆ ೩೦ ಸಾವಿರ ವರಹಗಳ ಸುವರ್ಣಾದಾಯವುಳ್ಳ ೧೨ ಹೋಬಳಿಗಳನ್ನೂ ಕೊಟ್ಟು, ವಿಶೇಷಬಹುಮಾನಗಳಿಂದ ಅವನನ್ನು ಪ್ರೋತ್ಸಾಹಿಸಿದರು.

ಆ ಮಹನೀಯನು ಹೊಸದಾಗಿ ಚಕ್ರವರ್ತಿಗಳಿಂದ ಕೊಡಲ್ಪಟ್ಟ ಸೀಮೆಯ ಉತ್ಪತ್ತಿಯೆಲ್ಲವನ್ನೂ ಪ್ರತ್ಯೇಕವಾಗಿಟ್ಟು ಒಂದು ಕಾಸನ್ನೂ ಸ್ವಂತಕ್ಕೆ ಉಪಯೋಗಪಡಿಸಿಕೊಳ್ಳದೆ, ತನ್ನ ಕುಲದೇವತೆಯಾದ ಕೆಂಪಮ್ಮ ದೇವತೆಯ ಹೆಸರಿನಲ್ಲಿ ಕೆಂಪಾಂಬುಧಿ ಕೆರೆಯನ್ನೂ, ಕೋಟೆಯ ತೆಂಕಣ ಕಡೆ ದೊಡ್ಡ ಬಸವಣ್ಣ, ದೊಡ್ಡ ಆಂಜನೇಯ, ವಿಘ್ನೇಶ್ವರ, ವೀರಭದ್ರದೇವಾಲಯ, ಗವೀಪುರದ ಶ್ರೀ ಗಂಗಾಧರೇಶ್ವರ ದೇವಾಲಯ, ಇವುಗಳನ್ನೂ ಒಂದೇ ಕಲ್ಲಿನಿಂದ ಅತಿಸುಂದರವಾಗಿ ಮಾಡಿ, ಬಂಡೆಯ ಮೇಲೆ ಗಾರೆ ಮೊದಲಾದುವಿಲ್ಲದೆ ದೇಶವಿದೇಶಗಳ ಶಿಲ್ಪಿಗಳಿಗಾಶ್ಚರ್ಯವನ್ನುಂಟುಮಾಡುತ್ತಿರುವ ತ್ರಿಶೂಲ, ಡಮರುಗ, ಛತ್ರಿಗಳನ್ನೂ ನಿಲ್ಲಿಸಿ ಅನೇಕವಾದ ಶಾಶ್ವತಧರ್ಮಕಾರ್ಯಗಳನ್ನೂ ಮಾಡಿಸಿರುವನು. ಮಾಂಡವ್ಯಕ್ಷೇತ್ರವಾದ ಹಲಸೂರಿನಲ್ಲಿ ಶ್ರೀ ಸೋಮೇಶ್ವರದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯಗಳಲ್ಲೆಲ್ಲಾ ಪೂಜೆ, ಉತ್ಸವಾದಿಗಳು ಸದಾ ನಡೆಯುವಂತೆ ಮಾನ್ಯ, ಮಿರಾಸಿಗಳನ್ನೇರ್ಪಡಿಸಿದನು.

ಬಸವಣ್ಣನು ೧೧ ಅಡಿ ಎತ್ತರವೂ, ವಿಘ್ನೇಶ್ವರನು ೧೪ ಅಡಿ ಎತ್ತರವೂ ಇವೆ. ಬಸವೇಶ್ವರ ದೇವಸ್ಥಾನದ ಹಿಂದೆ ವೃಷಭಾವತೀ ನದಿಯು ಹುಟ್ಟಿ ಪಶ್ಚಿಮದಿಕ್ಕಿಗೆ ಹರಿಯುತ್ತದೆಂದು ಶಾಸನವಿದೆ. ದೇವಸ್ಥಾನಗಳ ಪ್ರತಿಷ್ಠೆ ದೇವಕಾರ್ಯ ನಡೆಯುವುದಕ್ಕೆ ಸಹಾ ಸ್ಥಾಪಿಸಿದ ಶಾಸನಗಳಿವೆ. ವರ್ಷಂಪ್ರತಿ ಕಾರ್ತೀಕಮಾಸದ ಕಡೆದಿನ ಪರ್ಷೆ, ದೀಪೋತ್ಸವ ನಡೆಯಲು ಏರ್ಪಡಿಸಿದನು. ಅದು ಈಗಲೂ ನಡದುಬರುತ್ತಿದೆ.

ಪಟ್ಟಣವು ಉತ್ತರೋತ್ತರ ಅಭಿವೃದ್ಧಿಗೆ ಬರುವುದಕ್ಕೆ ತಕ್ಕ ಸಲಕರಣೆಗಳನ್ನು ರಚಿಸಿ. ದೇಶವನ್ನುಅಭಿವೃದ್ಧಿಗೆ ತಂದು ಟಂಕಸಾಲೆಯನ್ನಿಟ್ಟು ಭೈರವನಾಣ್ಯಗಳನ್ನು ಮುದ್ರಿಸಿ ಬಳಕೆಗೆ ತಂದನು.

ದೈವಭಕ್ತಿ, ಪ್ರಜಾಪ್ರೀತಿ, ದೇಶವಾತ್ಸಲ್ಯಗಳಿಂದ ಮೊದಲನೆಯ ಕೆಂಪೇಗೌಡನು ನಾನಾವಿಧಸತ್ಕಾರ್ಯಗಳನ್ನು ಮಾಡಿ, ತನ್ನ ದೇಶದ ಮತ್ತು ಇತರ ದೇಶಗಳ ಪ್ರಜೆಗಳ ಪ್ರೀತಿ ಗೌರವಗಳನ್ನು ಪಡೆದು ಬಹು ಪ್ರಸಿದ್ಧಿಗೆ ಬಂದನು.

ಇವನಲ್ಲಿ ಅಭಿಮಾನಶಾಲಿಗಳಾಗಿದ್ದ ವಿಜಯನಗರದ ಪೂರ್ವಚಕ್ರವರ್ತಿಗಳು ದೈವಾಧೀನರಾಗಿ, ಸದಾಶಿವರಾಯರು ಪಟ್ಟಕ್ಕೆ ಬಂದಿದ್ದರು. ಅವರು ಆವ ಕಾರಣದಿಂದಲೋ ಮೊದಲನೆಯ ಕೆಂಪೇಗೌಡನನ್ನು ವಿಜಯನಗರಕ್ಕೆ ಕರೆಸಿಕೊಂಡು ಆನೆಗೊಂದಿಯಲ್ಲಿ ನಿರ್ಬಂಧದಲ್ಲಿಟ್ಟು ಬೆಂಗಳೂರ ನಾಡನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ನಿರೀಕ್ಷಣೆಯಿಲ್ಲದೆ ಒದಗಿದ ಆ ಸಂಕಟದಿಂದ ಕೆಂಪೇಗೌಡನು ಧೈರ್ಯಗುಂದದೆ, ಚಕ್ರವರ್ತಿಗಳ ದಯೆಯನ್ನು ಸಂಪಾದಿಸಿ, ಪುನಃ ಯಥಾಪ್ರಕಾರ ರಾಜ್ಯವನ್ನು ಪಡೆಯುವ ಪ್ರಯತ್ನಮಾಡಿ, ಮುಂದೆ ರಾಜ್ಯದಲ್ಲಿ ರೂಢಿಗೆ ತರಬೇಕಾದ ಕ್ರಮಗಳನ್ನು ಕುರಿತು ಸದಾ ಚಿಂತಿಸುತ್ತಾ ಕಾಲಹರಣಮಾಡುತ್ತಿದ್ದನು.

ವಿಜಯನಗರದ ದರ್ಬಾರಿಗೆ ಹೋದ ತಮ್ಮ ದೊರೆಯು ಸುರಕ್ಷಿತವಾಗಿ ಬೆಂಗಳೂರಿಗೆ ಬಾರದೆ ಆನೆಗೊಂದಿಯಲ್ಲಿ ನಿರ್ಬಂಧಿಸಲ್ಪಟ್ಟನೆಂಬ ಸಮಾಚಾರವನ್ನು ಕೇಳಿ ಕೆಂಪೇಗೌಡನ ಪ್ರಜೆಗಳೆಲ್ಲಾ ಬಹುಸಂಕಟಪಟ್ಟು ರಾಜನನ್ನು ಬಿಡಿಸಿ ಕರೆತರುವ ಉಪಾಯವನ್ನು ಚಿಂತಿಸಿ ತಕ್ಕ ಪ್ರಯತ್ನದಲ್ಲಿದ್ದರು. ಅಷ್ಟರಲ್ಲಿ ಚಕ್ರವರ್ತಿಗಳಿಗೆ ಕೆಂಪೇಗೌಡನ ಸದ್ಗುಣಗಳೂ ಆತನ ಪ್ರಜೆಗಳ ಅನುತಾಪವೂ ಮನವರಿಕೆಯಾಗಿ, ತಾವುಮಾಡಿದ ಅಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟು ೫ ಸಂವತ್ಸರಗಳ ತರುವಾಯ ಅವನಿಂದ ಕೆಲವು ದ್ರವ್ಯವನ್ನು ಮಾತ್ರ ತೆಗೆದುಕೊಂಡು ಪುನಃ ರಾಜ್ಯವನ್ನು ಕೊಟ್ಟು ಬೆಂಗಳೂರಿಗೆ ಕಳುಹಿಸಿದರು.

ರಾಹುವಿನಿಂದ ಬಿಡಲ್ಪಟ್ಟ ಸೂರ್ಯನಂತೆ ಪ್ರಕಾಶಮಾನನಾಗಿ ಕೆಂಪೇಗೌಡನು ಆನೆಗೊಂದಿಯಿಂದ ಬೆಂಗಳೂರಿಗೆ ಬಂದು ಸಿಂಹಾಸನಾರೂಢನಾದನು. ದೇಶದ ವಿಶಿಷ್ಟ ಪ್ರಜೆಗಳೂ ತಮ್ಮ ದೊರೆಯು ಪುನಃ ಪಟ್ಟಕ್ಕೆ ಬಂದ ಸಂತೋಷವಾರ್ತೆಯನ್ನು ಕೇಳಿ ದೇವತಾಪ್ರಾರ್ಥನೆಗಳನ್ನೂ ಆನಂದೋತ್ಸವಗಳನ್ನೂ ನೆರವೇರಿಸಿದರು.

ಕೆಂಪೇಗೌಡನು ದೇಶದ ಪ್ರಜಾಪ್ರಮುಖರೂ, ಮುಖ್ಯಾಧಿಕಾರಿಗಳೂ, ಸೆಟ್ಟಿವರ್ತಕರೂ, ವಿದ್ವಾಂಸರೂ, ನಾನಾವಿಧಕುಶಲವಿದ್ಯಾನಿಪುಣರೂ ಮೊದ

ಲಾದ ಮಹಾಜನಗಳನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿ, ತನ್ನ ದೇಶದ ಸಮಸ್ತ ಪ್ರಜೆಗಳೂ ಧರ್ಮನಿರತರಾಗಿ, ಸ್ವಾವಲಂಬನೆಯಿಂದ ಸುಖವಾಗಿರುವುದಕ್ಕೆ ಸಾಧಕವಾದ ಸಲಹೆಗಳನ್ನು ಕೇಳಿ ಅವರ ವಿಜ್ಞಾಪನೆಯನ್ನನುಸರಿಸಿ ವ್ಯವಸಾಯಾಭಿವೃದ್ಧಿಗೆ ಎಲ್ಲೆಲ್ಲಿಯೂ, ಕೆರೆ ಕುಂಟೆಗಳನ್ನೂ, ದೇವಾಲಯ, ಅಗ್ರಹಾರ ಮೊದಲಾದುವುಗಳನ್ನೂ ಕಟ್ಟಿಸಿ ಸಂತುಷ್ಟರನ್ನಾಗಿ ಮಾಡಿ ರಾಜ್ಯವನ್ನು ಅಭಿವೃದ್ಧಿಗೆ ತಂದನು. ರಾಜ್ಯಭಾರದಲ್ಲಿ ಅಧಿಕಾರಿಗಳೂ, ಪ್ರಜೆಗಳೂ ಅನುಸರಿಸಬೇಕಾದ ಹಲವು ನಿಬಂಧನೆಗಳನ್ನು ಮಾಡಿ, ಸರ್ಕಾರಕ್ಕೆ ಪ್ರಜೆಗಳಿಂದ ಸಲ್ಲತಕ್ಕ ರಾಜದಾಯವನ್ನು ನಿಗುದಿಮಾಡಿದನು.

ಅರಮನೆಯಲ್ಲಿ ನಡೆಯತಕ್ಕ ಶುಭಶೋಭನಾದಿಗಳಿಗೂ, ಹವ್ಯಕವ್ಯ ಮೊದಲಾದುವುಗಳಿಗೂ ಆಭಾಸವಾಗದಂತೆ ರಾಜಮರ್ಯಾದೆಗೆ ಸರಿಯಾಗಿ ಕೆಲವು ಕ್ರಮಗಳನ್ನು ಆಚರಣೆಗೆ ತಂದನು. ಭೈರೇದೇವರೆಂದು ಕರೆಯುತ್ತಿದ್ದ ಮನೆದೇವರನ್ನು ದೇವದೇವನಾದ ಮಹೇಶ್ವರನೆಂದು ಶಿವಲಿಂಗರೂಪವಾಗಿ ಅರ್ಚಿಸುತ್ತ, ಶಿವಾಲಯಗಳನ್ನು ಕಟ್ಟಿಸಿ ಪ್ರಜೆಗಳಲ್ಲಿ ಶಿವಭಕ್ತಿಯನ್ನು ಹೆಚ್ಚಿಸಿದನು. ಹೆಣ್ಣುಮಕ್ಕಳು ವಿವಾಹವಾಗುವುದಕ್ಕೆ ಮೊದಲು ಬಂಡಿದೇವರನ್ನು ಮಾಡಿ ಬೆರಲನ್ನು ಕತ್ತರಿಸುತ್ತಿದ್ದ ಪದ್ಧತಿಯನ್ನು ತಪ್ಪಿಸಿ, ಪರಮೇಶ್ವರನಾದ ಮಹಾದೇವನನ್ನು ಇಷ್ಟದೈವವೆಂದೂ, ಕುಲದೈವವೆಂದೂ ಆರಾಧನೆಮಾಡಿ ಧನ್ಯರಾಗಬೇಕಲ್ಲದೆ ಸಾಮಾನ್ಯರಂತೆ ಸಿಕ್ಕಿದ ದೇವರುಗಳನ್ನು ಅಲೌಕಿಕವಾದ ಹೆಸರುಗಳಿಂದ ಪೂಜಿಸತಕ್ಕುದು ಸರಿಯಲ್ಲವೆಂದು ತನ್ನವರಿಗೆ ಬೋಧಿಸಿದನು. ಶಿವವಿಷ್ಣು ಭೇದವಿಲ್ಲದೆ, ಶಿವನನ್ನಾಗಲಿ, ವಿಷ್ಣುವನ್ನಾಗಲಿ ಆರಾಧಿಸುತ್ತ, ಪರೋಪಕಾರನಿರತರಾಗಿ, ದೇಶಾಭಿಮಾನವುಳ್ಳವರಾಗಿರಬೇಕೆಂಬುದೇ ಈತನ ಮತವಾಗಿದ್ದಿತು.


ಶಿವಗಂಗೆ—ದಕ್ಷಿಣ ಕಾಶಿಯೆಂದು ಸುಪ್ರಸಿದ್ಧವಾದ ಈ ಪುಣ್ಯಸ್ಥಳವು ಹೊಯಸಳ, ವಿಷ್ಣುವರ್ಧನ, ಬಿಜ್ಜಳ, ಬಸವೇಶ್ವರ ಈ ರಾಜರುಗಳ ಭಕ್ತಿ ಗೌರವಗಳನ್ನು ಪಡೆದಿದ್ದಿತು. ಇಲ್ಲಿ ಬೆಟ್ಟದ ತುದಿಯಲ್ಲಿರುವ ಧ್ವಜಸ್ತಂಭದಲ್ಲಿ ಮಕರ ಸಂಕ್ರಮಣ ಹುಟ್ಟುವಾಗ ಗಂಗೋತ್ಪತ್ತಿಯಾಗುವುದೂ, ಶ್ರೀ ಗಂಗಾಧರೇಶ್ವರ, ಶ್ರೀ ಹೊನ್ನಾದೇವಿಯರ ದೇವಸ್ಥಾನಗಳೂ, ಅಷ್ಟತೀರ್ಥ ಶ್ರೀ ಜಗದ್ಗುರು ಶೃಂಗೇರಿಶಾಖಾಮಠವೂ, ಮೇಲಣ ಗವಿಮಠ, ಕೆಳಗಿನ ಗವಿ ಮಠ ಎಂಬ ಲಿಂಗಾಯತ ಮಠಗಳೂ ಮುಖ್ಯವಾದುವು. ಶಿವ ವಿಷ್ಣು

ದೇವಾಲಯುಗಳೂ, ಶ್ರೀ ಶಾರದಾ ದೇವಸ್ಥಾನವೂ ಇರುವುವು. ಪುರಾತನವಾದ ಈ ಕ್ಷೇತ್ರವು ಬ್ರಾಹ್ಮಣ ಲಿಂಗಾಯುತರೇ ಮೊದಲಾದ ಸಮಸ್ತ ಆಸ್ತಿಕ ಮಹಾ ಜನಗಳಿಗೂ ಪವಿತ್ರತಮವಾದ ಯಾತ್ರಾಸ್ಥಳವಾಗಿರುತ್ತದೆ.


ಸುಮಾರು ಕ್ರಿ. ಶ. ೧೫೫೦ ರಲ್ಲಿ ಈ ಸ್ಥಳವು ಮೊದಲನೆಯ ಕೆಂಪೇಗೌಡನ ಆಳ್ವಿಕೆಗೆ ಸೇರಿದ್ದಿತು. ಆತನು ಮೊದಲನೇ ಸಲ ಬಂದು ಈ ಕ್ಷೇತ್ರದರ್ಶನ ಮಾಡುತ್ತಲೇ ಅಧಿಕಭಕ್ತಿಯುಂಟಾಗಿ, ಗುಡಿ, ಗೋಪುರಗಳನ್ನು ಕಟ್ಟಿಸುವುದಕ್ಕೂ, ಯಾತ್ರಿಕರ ಸೌಕರ್ಯಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಸುವುದಕ್ಕೂ ಅಲ್ಲಿಯೇ ನಿಂತು ರಾಜಕಾರ್ಯವನ್ನು ನಿರ್ವಹಿಸುತ್ತ ಬಂದನು. ಮಕರಸಂಕ್ರಮಣದಲ್ಲಿ ನಡೆಯುವ ಗಂಗೋತ್ಪತ್ತಿ, ಕಲ್ಯಾಣೋತ್ಸವಗಳೂ, ಚೈತ್ರಮಾಸದಲ್ಲಿ ನಡೆಯುವ ರಥೋತ್ಸವ, ನಿತ್ಯ ಪೂಜೆಗಳೂ, ವಿಶೇಷೋತ್ಸವಗಳೂ, ಮಠಗಳಲ್ಲಿ ಪೂಜಾದಿಗಳೂ ಯಥಾಕ್ರಮವಾಗಿ ವೈಭವದಿಂದ ನಿರಂತರವೂ ನಡೆಯುವಂತೆ ಏರ್ಪಡಿಸಿದನು.

ಪರ್ವತಾರೋಹಣವು ಅತಿಗಹನವಾಗಿದ್ದುದರಿಂದ ಊರಿನ ನಡುಬೀದಿಯಿಂದ ಬೆಟ್ಟಕ್ಕೆ ಸೋಪಾನಗಳನ್ನು ಕಟ್ಟಿಸಿದನು. ಗುಂಡುಗಳ ಮಧ್ಯೆ ಸಣ್ಣದಾಗಿದ್ದ ಶ್ರೀ ಗಂಗಾಧರೇಶ್ವರ ಮತ್ತು ಸ್ವರ್ಣಾಂಬಾದೇವಾಲಯುಗಳಿಗೆ ಗರ್ಭಗೃಹ, ಯಾಗಶಾಲಾ, ಕಲ್ಯಾಣಮಂಟಪ, ಪಟ್ಟಸಾಲೆ ಮೊದಲಾದುವನ್ನು ವಿಶಾಲವಾಗಿಯೂ, ಮನೋಹರವಾಗಿಯೂ, ಇರುವಂತೆ ವಿಚಿತ್ರತರಶಿಲ್ಪನೈಪುಣ್ಯದಿಂದಲೂ ಅಸಂಖ್ಯದ್ರವ್ಯವ್ಯಯದಿಂದಲೂ, ಕಟ್ಟಿಸಿದನು. ಈ ದೇವಸ್ಥಾನಕ್ಕೆ ಪೂರ್ವಭಾಗದಲ್ಲಿ ತಾನು ರಾಜಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕಟ್ಟಿಸಿರುವ ಮಂಟಪವು ಕೆಂಪೇಗೌಡನ ಹಜಾರವೆಂದು ಈಗಲೂ ಕಂಗೊಳಿಸುತ್ತಿದೆ. ಬೆಟ್ಟಕ್ಕೆ ಸೋಪಾನಗಳಾಗಿ ದೇವಸ್ಥಾನವು ದೊಡ್ಡದಾದ ಮೇಲೆ ಉತ್ಸವಕಾಲಗಳಲ್ಲಿ ಯಾತ್ರಾರ್ಥಿಗಳು ವಿಶೇಷವಾಗಿ ಬಂದು ಸೇರುವುದಕ್ಕಾರಂಭವಾಯಿತು.

ಮೊದಲನೆಯ ಕೆಂಪೇಗೌಡನು ಶಿವಸಾಯುಜ್ಯವನ್ನು ಪಡೆದರೂ ಆತನು ಮಾಡಿಸಿರುವ ಧರ್ಮಕಾರ್ಯಗಳು ಶಾಶ್ವತವಾಗಿ ಶಿವಗಂಗೆಯಲ್ಲಿ ನಿಂತಿವೆ. ಆತನ ತರುವಾಯ ಬಂದ ೨ ನೆಯ ಕೆಂಪೇಗೌಡನು ಬಹುಭಕ್ತಿ ಶ್ರದ್ಧೆಯಿಂದ ಶಿವಗಂಗೆಯ ಮಹತ್ಕಾರ್ಯಗಳನ್ನು ಪೂರ್ತಿಗೊಳಿಸಿ, ದೇವತಾಕಾರ್ಯಗಳು



ಶಿವಗಂಗೆ ಬೆಟ್ಟವು ಕೆಂಪೇಗೌಡನು ಕಟ್ಟಿಸಿರುವ ದೇವಾಲಯ ಮುಂತಾದುವುಗಳು.



ಬೆಂಗಳೂರು ಕೋಟೆಯಿಂದ ಉತ್ತರ ಭಾಗದ ಪಟ್ಟಣದ ನೋಟ.

ಶಾಶ್ವತವಾಗಿ ನಡೆದುಕೊಂಡು ಬರಲು ದೇವಸ್ಥಾನಗಳಿಗೂ ಮಠಗಳಿಗೂ, ಬ್ರಾಹ್ಮಣರಿಗೂ ಲಿಂಗಾಯುತರಿಗೂ ಮಾನ್ಯಗಳನ್ನೂ ಕ್ಷೇತ್ರಗಳನ್ನೂ, ಮರ್ಯಾದೆಗಳನ್ನೂ, ಕಲ್ಪಿಸಿಕೊಟ್ಟನು. ಈಗಲೂ ಅವು ನಮ್ಮನ್ನಾಳುತ್ತಿರುವ ಶ್ರೀಮನ್ಮಹಾರಾಜರವರಿಂದ ಪರಿಪಾಲಿಸಲ್ಪಡುತ್ತಿವೆ.

ಇಲ್ಲಿರುವ ಲಿಂಗಾಯುತ ಮಠದ ಸ್ವಾಮಿಗಳೊಬ್ಬರು ಸಂಕ್ರಮಣ ಮತ್ತು ರಥೋತ್ಸವ ಕಾಲಗಳಲ್ಲಿ ಎತ್ತಿನ ಪರಿಷೆಗೆ ಸೇರುವ ಸಾವಿರಾರು ಜನಗಳಿಗೆ ಅನ್ನ ಸಂತರ್ಪಣೆಯನ್ನು ನಡೆಸುತ್ತಾರೆ,

ಊರಲ್ಲಿ ಅಗಸ್ತ್ಯತೀರ್ಥದ ಬಳಿಯಲ್ಲಿದ್ದ ಶ್ರೀಮಠವು ಹಳೆಯ ಕಟ್ಟಡವಾಗಿ ಕಿಷ್ಕಿಂಧವಾಗಿದ್ದುದರಿಂದ ಕೈ|| ಶ್ರೀ ಸುಬ್ರಹ್ಮಣ್ಯಾಭಿನವಸಚ್ಚಿದಾನಂದ ಭಾರತೀಸ್ವಾಮಿಗಳವರು ಉತ್ತರ ದಿಕ್ಕಿನಲ್ಲಿ ಹೊಸ ಮಾದರಿಯ ಮಠವನ್ನೂ, ಶ್ರೀ ಶಾರದಾ ಅಮ್ಮನವರ ದೇವಸ್ಥಾನವನ್ನೂ ಕಟ್ಟಿಸಿ, ಅಮೃತಶಿಲಾ ನಿರ್ಮಿತವಾದ ಅಮ್ಮನವರ ವಿಗ್ರಹವನ್ನು ಪ್ರತಿಷ್ಠೆಮಾಡಿಸಿ ಪೂಜೆ ಉತ್ಸವಾದಿಗಳು ಕ್ರಮವಾಗಿ ನಡೆಯುವಂತೆ ಏರ್ಪಡಿಸಿರುತ್ತಾರೆ.

೨ ನೆಯ ಕೆಂಪೇಗೌಡನ ಭಕ್ತಿ ವಿಗ್ರಹವೂ, ಗೌಡರ ವಂಶೀಯರು ದೇವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿರುವ ೪ ಭಾರೀ ಘಂಟೆಗಳೂ ಈಗಲೂ ಇರುವುವು. ಶಿವಗಂಗಾಕ್ಷೇತ್ರದ ಅಭಿವೃದ್ಧಿಗೆ ಗೌಡರು ಕೊಟ್ಟಿರುವ ದಾನಶಾಸನಗಳು ಏಳಿರುವವು. ಈ ಪೈಕಿ (ಮಾಗಡಿ ತಾಲ್ಲೋಕಿನಲ್ಲಿ ೨. ಶಿವಗಂಗೆ-ನೆಲಮಂಗಲದಲ್ಲಿ ೫,) ಇವೆ. ಗೌಡ ಪ್ರಭುಗಳ ವಂಶೀಯರು ತಮ್ಮ ಕಾಲಗಳಲ್ಲಿ ಅನೇಕ ಶಾಶ್ವಿತ ಕಾರ್ಯಗಳನ್ನು ಮಾಡಿಸಿ ಅಭಿವೃದ್ಧಿಗೆ ತಂದರು.

ಸರ್ವಜನಸ್ತುತ್ಯನಾದ ಮೊದಲನೆಯ ಕೆಂಪೇಗೌಡನು ಸೆರೆಯಲ್ಲಿದ್ದ ೫ ಸಂವತ್ಸರಗಳಲ್ಲದೆ ೪೩ ಸಂವತ್ಸರಗಳು ಶ್ರೇಷ್ಠವಾಗಿ ಪ್ರಭುತ್ವಮಾಡಿ ಕ್ರಿ. ಶ. ೧೫೬೯ ರಲ್ಲಿ ಕೈಲಾಸವಾಸಿಯಾದನು.

ಈತನ ಸಂಕಲ್ಪಪ್ರಭಾವದಿಂದ ಬೆಂಗಳೂರು ಪಟ್ಟಣವು ನಿಜವಾದ ಕಲ್ಯಾಣಪಟ್ಟಣವಾಗಿ, ಈಗ ಚತುಶ್ಶಿಖರಗಳನ್ನೂ ದಾಟಿ ಮುಂದುವರಿದಿದೆ. ಇಷ್ಟು ಮಾತ್ರವಲ್ಲದೆ ನಾಸ್ತಿಕತ್ವಪ್ರಧಾನವಾದ ಈ ಕಾಲದಲ್ಲಿ, ನಾನಾ ದೇಶಗಳ ನಾನಾ ಮತದವರು ಬಂದು ನೆಲಸಿದ್ದರೂ, ಸನಾತನಧರ್ಮೋಜ್ಜೀವನಕ್ಕೆ ಸಾಧಕವಾದ ನಿತ್ಯದೇವತಾರ್ಚನೆಗಳೂ, ಸಂತರ್ಪಣೆಗಳೂ, ದಾನಧರ್ಮಗಳೂ, ದೇವಾಲಯಗಳಲ್ಲಿ ನಿತ್ಯೋತ್ಸವ, ಪಕ್ಷೋತ್ಸವ, ಸಂವತ್ಸರೋತ್ಸವಾದಿಗಳಲ್ಲಿ ನಡೆಯುವ

ಸೇವಾಲಂಕಾರ ಉತ್ಸವ ವೈಭವಗಳೂ, ಭಜನೆ, ಪುರಾಣ, ಕಥಾಶ್ರವಣ, ಉಪನ್ಯಾಸಗಳೂ ಸದಾ ನಾನಾ ಸ್ಥಳಗಳಲ್ಲಿ ನಡೆಯುತ್ತಿವೆ. ಸತ್ರ, ಧರ್ಮಶಾಲೆಗಳು ದೀನಾನಾಥರಿಗೆ ಎಡೆಗೊಟ್ಟಿವೆ. ಅನೇಕಧರ್ಮಸಂಘಗಳು ನಾನಾವರ್ಗದ ಮಹಾ ಜನಗಳಿಂದ ಸ್ಥಾಪಿಸಲ್ಪಟ್ಟು, ಭಕ್ತಿ, ಮತ್ತು ಪರೋಪಕಾರ ತತ್ವಗಳನ್ನು ಪ್ರಚಾರಪಡಿಸುತ್ತಿವೆ. ಇವಲ್ಲದೆ ಲೋಕವ್ಯವಹಾರ, ಸಂಪದಭಿವೃದ್ಧಿಗೆ ಸಾಧಕವಾದ ಪರಸ್ಪರಸಹಾಯಕಸಂಘಗಳೂ, ವ್ಯಾಪಾರಸಂಘಗಳೂ, ಕಾರ್ಯಾಗಾರಗಳೂ ಏರ್ಪಟ್ಟು ವ್ಯಾಪಾರ, ಕೈಗಾರಿಕೆ, ವ್ಯವಸಾಯಾದಿಗಳು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿವೆ. ವಿವಿಧದಿವ್ಯಭವನಗಳೂ, ಉದ್ಯಾನಗಳೂ ಪಟ್ಟಣದ ಅಂದವನ್ನು ಹೆಚ್ಚಿಸಿವೆ. ಹೆಸರುಘಟ್ಟದ ಕೆರೆಯಿಂದ ನೀರ್ಕೊಳವೆಗಳ ಮೂಲಕ ಬೀದಿ ಬೀದಿಗೂ ಮನೆ ಮನೆಗೂ ಶುದ್ಧವಾದ ಜಲವು ಹರಿಯುತ್ತಿದೆ. ಶಿವನ ಸಮುದ್ರದಲ್ಲಿ ಕಾವೇರಿಯ ಜಲಪತನದಿಂದ ಉದ್ಭವಿಸುವ ವಿದ್ಯುಚ್ಛಕ್ತಿಯ ದೀಪಮಾಲೆಗಳಿಂದ ಪಟ್ಟಣವು ಅಲಂಕರಿಸಲ್ಪಟ್ಟು, ಪ್ರಕಾಶಿಸುತ್ತಿರುವುದಲ್ಲದೆ, ಯಂತ್ರಸಹಾಯದಿಂದ ನಡೆಯತಕ್ಕ ಅನೇಕಕಾರ್ಯಾಗಾರಗಳ ಕೆಲಸಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತಿವೆ. ಇನ್ನೂ ಅನೇಕ ಸೌಕರ್ಯಗಳಿಂದ ಬೆಂಗಳೂರು ಪಟ್ಟಣವು ಸುಖಾವಾಸವಾಗಿರುವ ಕಾರಣ, ನಾನಾ ದೇಶಗಳ ಕೈ ಕೆಲಸಗಳವರೂ, ಬಂಡವಾಳಸ್ಥರಾದ ವ್ಯಾಪಾರಗಾರರೂ ಬಂದು ನೆಲೆಗೊಳ್ಳುತ್ತಿದಾರೆ. ಈ ಪಟ್ಟಣದ ನಾನಾ ದಿಕ್ಕುಗಳಿಗೂ, ಒಳದೇಶ, ಹೊರದೇಶಗಳ ರೈಲ್ ಮಾರ್ಗಗಳಿರುವುದಲ್ಲದೆ ಹೊಸ ಹೊಸ ಶಾಖಾಮಾರ್ಗಗಳು ಹೆಚ್ಚುತ್ತಿವೆ. ದೇಶ ವಿದೇಶಗಳ ವಿವಿಧ ವ್ಯಾಪಾರಗಳು ವಿಶೇಷವಾಗಿ ನಡೆಯುತ್ತಿರುವುದಲ್ಲದೆ ವೃದ್ಧಿಗೊಳ್ಳುತ್ತಿವೆ. ನಾನಾ ವಿದ್ಯಾಶಾಲೆಗಳೂ, ಕುಶಲಕಲಾಶಾಲೆಗಳೂ, ವಿದ್ಯಾರ್ಥಿನಿಲಯಗಳೂ ಇರುವುದರಿಂದ ವಿದ್ಯಾರ್ಥಿಗಳ ತಂಡವೂ, ಅವರ ವ್ಯಾಸಂಗಗಳೂ ಕಾಣಬರುತ್ತಿವೆ.

ಪ್ರಜಾಸಂಖ್ಯೆಯು ಹೆಚ್ಚಿದ ಹಾಗೆಲ್ಲಾ ಪೌರಕಾರ್ಯನಿರ್ವಾಹಕಸಂಘದವರು ನಗರಾಭಿವೃದ್ಧಿಯನ್ನೂ, ತಕ್ಕ ಸೌಕರ್ಯಗಳನ್ನೂ ಮಾಡಿಸುತ್ತಿದಾರೆ. ದಿನೇ ದಿನೇ ಹೆಚ್ಚುತ್ತಿರುವ ಐಹಿಕ, ಆಮುಷ್ಮಿಕ ಸಾಧನಗಳನ್ನು ಈ ಪಟ್ಟಣದಲ್ಲಿ ನೋಡಿ ತಣಿಯಬೇಕಾಗಿದೆ. ಇಲ್ಲಿ ಸಕಲಸೌಕರ್ಯಸಮೃದ್ಧಿಗಳಿಂದ ಭೋಗಭಾಗ್ಯಗಳನ್ನನುಭವಿಸುತ್ತಿರುವ ಪ್ರಜೆಗಳಿಗೆ "ನಮ್ಮ ಸುಖಕ್ಕೆ ಮೂಲವಾದ

ಈ ಪಟ್ಟಣವನ್ನು ನಿರ್ಮಿಸಿದವನು ಕೆಂಪೇಗೌಡನು, ಆತನ ಸತ್ಸಂಕಲ್ಪಪ್ರಭಾವದಿಂದ ಈ ಪಟ್ಟಣವು ಇಷ್ಟು ಮುಂದುವರಿಯುತ್ತಿದೆ'' ಎಂಬಂಶವು ತಿಳಿದಿರುವುದೆ? ಸ್ವರಾಜ್ಯವನ್ನು ಸ್ಥಾಪಿಸಿ, ಸ್ವದೇಶೋದ್ಧಾರಮಾಡಿದ ಆ ಪುಣ್ಯಪುರುಷನ ಸ್ಮಾರಕವಿಗ್ರಹವು ಇಲ್ಲಾಗಲಿ, ಈ ದೇಶದ ಇನ್ನಾವ ಸ್ಥಳದಲ್ಲಾಗಲಿ ಇರುವುದೇ ? ಈಗ ಇಲ್ಲಿರುವ ಸ್ಮಾರಕವಿಗ್ರಹ ಮೊದಲಾದುವುಗಳಿಂದ ಪ್ರಖ್ಯಾತರಾದವರಷ್ಟು ಪ್ರಜೋಪಕಾರಕಾರ್ಯಗಳನ್ನು ಕೆಂಪೇಗೌಡನು ಮಾಡಿರಲಿಲ್ಲವೇನು ? ನಮ್ಮ ಊರನ್ನು ಕಟ್ಟಿ, ನಮ್ಮ ದೇಶವನ್ನುದ್ಧರಿಸಿ. ನಮ್ಮನ್ನಾಳಿದವರ ಚರಿತ್ರೆಯೇ ನಮಗೆ ತಿಳಿಯದಂಥ ಚರಿತ್ರಗ್ರಂಥಗಳನ್ನೋದಿ ನಾವು ಪಡೆಯುವ ಪುರುಷಾರ್ಥವೇನು ? ಪಾಶ್ಚಿಮಾತ್ಯರ ದೇಶದಲ್ಲಿ ಇಂಥ ಸ್ಥಾಪಕರನ್ನು ಸ್ಮಾರಕವಿಗ್ರಹ ಮೊದಲಾದವುಗಳಿಂದ ತೋರ್ಪಡಿಸಿ ಮುಂದಿನ ಸಂತತಿಯವರಿಗೆ ಮಾರ್ಗದರ್ಶಕವಾಗಿರುವಂತೆ ಅವರನ್ನು ಪ್ರಶಂಸೆ ಮಾಡುತ್ತಾರೆ. ನಮ್ಮ ಪೂರ್ವಿಕರ ಸ್ಮರಣೆಗೆ ಅವಕಾಶವಿಲ್ಲದಿರುವ ಪಾಠಪುಸ್ತಕಗಳನ್ನು ಓದಿ ನಿರ್ವೀರ್ಯರೆನಿಸಿಕೊಂಡು ಹತಭಾಗ್ಯರಾಗಿರುವ ನಮಗೆ ಆ ಪುಣ್ಯವು ಎಂದಿಗೆ ಲಭಿಸುವುದು ?

ಹಲಸೂರು—ಈಗ ಹಲಸೂರಿರುವ ಪ್ರದೇಶವು ಪೂರ್ವದಲ್ಲಿ ಅರಣ್ಯವಾಗಿ, ಮಹರ್ಷಿಗಳಾದ ಮಾಂಡವ್ಯರು ತಪಸ್ಸನ್ನು ಮಾಡುತ್ತಿದ್ದ ಪುಣ್ಯಾಶ್ರಮವಾಗಿದ್ದು ಅವರು ಅರ್ಚನೆ ಮಾಡುತ್ತಿದ್ದ ಶ್ರೀ ಸೋಮೇಶ್ವರ ಲಿಂಗವು ಭೂಸ್ಥಾಪನೆಯಾಗಿದ್ದಿತು. ಯಲಹಂಕನಾಡು ಪ್ರಭುವಾದ ಜಯಪ್ಪಗೌಡನು ಒಂದಾನೊಂದು ದಿನ ದೈವಪ್ರೇರಣೆಯಿಂದ ಬೇಟೆಗಾಗಿ ಈ ಸ್ಥಳಕ್ಕೆ ಬಂದಿದ್ದು ಆಯಾಸದಿಂದ ಒಂದು ಮರದ ಕೆಳಗೆ ಮಲಗಿಕೊಂಡನು. ಕೂಡಲೇ ಗಾಢನಿದ್ರೆ ಬಂದು ಸ್ವಪ್ನದಲ್ಲಿ ಶ್ರೀ ಸೋಮೇಶ್ವರನು ಪ್ರತ್ಯಕ್ಷನಾಗಿ "ಈ ಸ್ಥಳದಲ್ಲಿ ಹಿಂದೆ ಮಾಂಡವ್ಯಮಹರ್ಷಿಗಳಿಂದ ಪೂಜಿಸಲ್ಪಡುತ್ತಿದ್ದ ನಾನು—ಈಗ ಕಲಿಪ್ರಾಬಲ್ಯದಿಂದ ಜನರಲ್ಲಿ ಭಕ್ತಿಯು ಕ್ಷೀಣವಾಗುತ್ತಾ ಬಂದು, ಐಕಮತ್ಯ, ದೇಶಾಭಿಮಾನ, ಸತ್ಯ, ಪರಾಕ್ರಮಗಳಿಲ್ಲದೆ ಈ ಪುಣ್ಯಭೂಮಿಯಲ್ಲಿ ಮತದ್ವೇಷ, ದೈವದ್ವೇಷದಿಂದ ಪೂಜಾ ವಿಗ್ರಹಗಳನ್ನೂ, ದೇವಾಲಯಗಳನ್ನೂ, ಪುಣ್ಯಕ್ಷೇತ್ರಗಳನ್ನೂ ಸನಾತನ ಧರ್ಮವನ್ನೂ ವಿಧರ್ಮಿಗಳು ನಾಶಮಾಡುತ್ತಿರುವುದರಿಂದಲೂ, ಈ ದೇಶದಲ್ಲಿ ಧರ್ಮವನ್ನುದ್ಧಾರಮಾಡಿ, ಪ್ರಜೆಗಳನ್ನು ನ್ಯಾಯದಿಂದ ಪರಿಪಾಲನೆಯನ್ನು ಮಾಡುವ ಪ್ರಭುವಿಲ್ಲದಿದ್ದುದರಿಂದಲೂ ಇಲ್ಲಿರುವ ಹುತ್ತದಲ್ಲಿ ಅಡಗಿರುವೆನು. ನೀನು ನನ್ನ ನಿಜವಾದ ಭಕ್ತನೂ, ಧರ್ಮಪರಿಪಾಲಕನೂ ಆಗಿರು

ವುದರಿಂದ ನನ್ನನ್ನು ಹೊರಕ್ಕೆ ತೆಗೆದು ಪೂಜಿಸಿ ಶ್ರೇಯೋವಂತನಾಗು '' ಎಂದು ಅಪ್ಪಣೆಕೊಡಿಸಿ ಅಂತರ್ಧಾನನಾದನು. ಅನಂತರ ಗೌಡನು ನಿದ್ರೆಯಿಂದೆಚ್ಚತ್ತು ಕಣ್ಣ ಬಿಡಲು ಇದಿರಿಗೆ ಹುತ್ತವು ಕಾಣಿಸಿತು. ಸ್ವಪ್ನವೃತ್ತಾಂತವನ್ನು ಸ್ಮರಿಸಿ ಕೊಂಡು ಹರ್ಷಾಶ್ಚರ್ಯದಿಂದ ಪರಮೇಶ್ವರನನ್ನು ಕೊಂಡಾಡಿ, ಆ ಹುತ್ತಕ್ಕೆ ಪ್ರದಕ್ಷಿಣೆಮಾಡಿ, ಹತ್ತಿರಿದ್ದ ಸೇವಕರನ್ನು ಅಲ್ಲಿಯೇ ಕಾವಲಿಟ್ಟು ಯಲಹಂಕಕ್ಕೆ ಹಿಂತಿರುಗಿ ಆಪ್ತೇಷ್ಟರಿಗೆಲ್ಲಾ ಸ್ವಪ್ನದ ಸಂಗತಿಯನ್ನು ತಿಳಿಸಿ, ಒಂದು ಶುಭದಿನದಲ್ಲಿ ಮಂತ್ರಿ ಪುರೋಹಿತ, ಬಂಧು, ಮಿತ್ರರೊಡನೆ ಆ ಹುತ್ತದ ಬಳಿಗೆ ಬಂದು ಭಕ್ತಿ ಯಿಂದ ಪೂಜೆಮಾಡಿ ಹುತ್ತವನ್ನು ಭೇದಿಸಲು, ಅಸಂಖ್ಯಧನಸಹಿತವಾದ ಶ್ರೀ ಸೋಮೇಶ್ವರ ಲಿಂಗವು ದೊರೆಯಿತು. ಗೌಡನ ಭಕ್ತಿಸಂಭ್ರಮಗಳು ಉಕ್ಕೇರಿ ದುವು. ಅವನು ಆ ಹುತ್ತದ ಸುತ್ತಲೂ ಇದ್ದ ಕಾಡನ್ನು ಕಡಿಸಿ, ಮರದಿಂದ ಒಂದು ದೇವಸ್ಥಾನವನ್ನು ಕಟ್ಟಿಸಿ, ಶೈವಾಗಮಪ್ರಕಾರ ಶ್ರೀ ಸೋಮೇಶ್ವರನನ್ನು ಪ್ರತಿಷ್ಠೆಮಾಡಿಸಿದನು. ಆ ಗುಡಿಯ ಸುತ್ತಲೂ ಒಂದು ಅಗ್ರಹಾರವನ್ನು ಕಟ್ಟಿಸಿ ಬ್ರಾಹ್ಮಣರಿಗೆ ದಾನಮಾಡಿ ಅದಕ್ಕೆ '' ಹಲಸೂರು '' ಎಂದು ಹೆಸರಿಟ್ಟನು. ಜಯಪ್ಪಗೌಡನ ತರುವಾಯ ಗಿಡ್ಡಪ್ಪಗೌಡನೂ ದೇವಾಲಯವನ್ನು ಅಭಿವೃದ್ಧಿಗೆ ತಂದನು. ೧ ನೆಯ ಕೆಂಪೇಗೌಡನು ಹೊಸದಾಗಿ ಗರ್ಭಗುಡಿಯನ್ನೂ ಹಲಸೂರು ಕೆರೆಯನ್ನೂ ಕಟ್ಟಿಸಿ, ದೇವರಿಗೆ ನಿತ್ಯಪೂಜೆ, ದೀಪಾರಾಧನೆ ಉತ್ಸವಾದಿಗಳು ಕ್ರಮ ವಾಗಿ ನಡೆಯುವಂತೆ ಏರ್ಪಾಟ ಮಾಡಿದನು. ೨ ನೆಯ ಕೆಂಪೇಗೌಡನು ದೇವ ಸ್ಥಾನವನ್ನು ಪ್ರಾಕಾರಗಳಿಂದ ಪೂರ್ತಿಗೊಳಿಸಿದನು. ಮುಂದಿನ ಗೌಡವಂಶೀ ಯರು ಅದನ್ನು ಕ್ರಮವಾಗಿ ಅಭಿವೃದ್ಧಿಗೈಯುತ್ತಾ ಬಂದರು.

೨ ನೆಯ ಕೆಂಪೇಗೌಡ.

೧೫೬೯—೧೬೫೮.

ಇಮ್ಮಡಿ ಕೆಂಪೇಗೌಡನು ೧೫೬೯ ರಲ್ಲಿ ಪಟ್ಟಕ್ಕೆ ಬಂದು ರಾಜ್ಯವನ್ನು ವಿಸ್ತರಿಸಿ, ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆಮಾಡುತ್ತಾ ಉತ್ಪತ್ತಿಯಾದ ರಾಜದಾಯವನ್ನೆಲ್ಲಾ ದೇವಸ್ಥಾನಗಳಿಗೂ, ಕೆರೆ ಕುಂಟೆ ಮೊದಲಾದ ಪ್ರಜೋಪ ಕಾರಕಾರ್ಯಗಳಿಗಾಗಿಯೂ ವಿನಿಯೋಗಿಸಿದನು. ಈತನು ದೀರ್ಘಕಾಲ ರಾಜ್ಯ ವಾಳಿ ಅನೇಕದೇವಾಲಯಗಳನ್ನು ಕಟ್ಟಿಸಿದನು. ಅವುಗಳಲ್ಲಿ ಹಲಸೂರು ಶ್ರೀ ಸೋಮೇಶ್ವರ ದೇವಾಲಯವು ಮುಖ್ಯವಾದುದು. ಮೊದಲು ಜಯಪ್ಪಗೌಡನೂ



ಬೆಂಗಳೂರು ಶಂಕರಪುರದ ಬಡಾವಣೆ.



ಬೆಂಗಳೂರು ಬಸವಾಪುರದ ಬಡಾವಣೆ.

ಗಿಡ್ಡಪ್ಪಗೌಡನೂ ಮಣ್ಣಿನ ಗೋಡೆ, ಮರದ ಸ್ತಂಭ, ದೂಲಗಳಿಂದ ಕಟ್ಟಿಸಿದನು. ೧ ನೆಯ ಕೆಂಪೇಗೌಡನು ತನ್ನ ಪ್ರಭುತ್ವಕಾಲದಲ್ಲಿ ಗರ್ಭಗೃಹವನ್ನು ಮಾತ್ರ ಶಿಲ್ಪಶಾಸ್ತ್ರನಿಪುಣರಿಂದ ಅತಿಸುಂದರವಾಗಿ ಶಿಲೆಯಲ್ಲಿ ಕಟ್ಟಿಸಿದನು. ಇಮ್ಮಡಿ ಕೆಂಪೇಗೌಡನು ಪ್ರಸಿದ್ಧರಾದ ದಕ್ಷಿಣದೇಶದ ಶಿಲ್ಪಿಗಳಿಂದ ಈಗಿರುವ ದೇವಾಲಯ, ವಿಶಾಲವಾದ ಗೋಪುರ, ಪ್ರಾಕಾರ, ನವರಂಗ, ಹಜಾರ ಮೊದಲಾದುವನ್ನೂ, ಶ್ರೀಮಂಗಳಕಾಮಾಕ್ಷಿ ಅಮ್ಮನವರ ಅತಿಸುಂದರವಾದ ದೇವಸ್ಥಾನವನ್ನೂ ೧೬೦೫ ರಲ್ಲಿ ಕಟ್ಟಿಸಿದನು. ಈ ದೇವಸ್ಥಾನದ ಗೋಡೆಗಳಲ್ಲಿ ಕೆತ್ತಿರುವ ಗಿರಿಜಾಕಲ್ಯಾಣದ ವಿಗ್ರಹಗಳು ಬಲು ಚೆಂದವಾಗಿ ಇವೆ. ಆ ದೊರೆಯು ದೇವಸ್ಥಾನದಲ್ಲಿ ನಿತ್ಯಪೂಜೆ, ಉತ್ಸವಗಳೂ, ರಥೋತ್ಸವ ಮೊದಲಾದುವೂ ಯಥಾಕ್ರಮವಾಗಿ ನಡೆಯುವುದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಿಸಿ ಹಲಸೂರ ಹೋಬಳಿಗೆ ಸೇರಿದ ೩೩ ಗ್ರಾಮಗಳಲ್ಲಿಯ ಬೆಳೆಯಲ್ಲಿ ಶ್ರೀ ಸೋಮೇಶ್ವರ ದೇವಸ್ಥಾನಕ್ಕೆ ಖಂಡಿ ೧ಕ್ಕೆ ೧ ಕೊಳಗದ ಮೇರೆ ಮಿರಾಸೆ ಕೊಡುವಂತೆ ಕಟ್ಟು ಮಾಡಿಸಿದನು. ಬೆಂಗಳೂರಿಗೆ ಸಮೀಪದಲ್ಲಿರುವ ಕೆಂಪಾಪುರವನ್ನೂ ಹಲಸೂರಿಗೆ ಪಶ್ಚಿಮದಲ್ಲಿ ೧೨ ಮೈಲಿ ದೂರವಿರುವ ಐವರುಕಂಡ ಪುರವೆಂಬ ಗ್ರಾಮವನ್ನೂ ೪೦ ವೃತ್ತಿಗಳಾಗಿ ವಿಂಗಡಿಸಿ ಪ್ರತಿಸೋಮವಾರವೂ ಒಂದೊಂದು ವೃತ್ತಿಯಂತೆ ಶ್ರೀಸೋಮೇಶ್ವರ ಪ್ರೀತ್ಯರ್ಥವಾಗಿ ಆತನು ಬ್ರಾಹ್ಮಣರಿಗೆ ದಾನಮಾಡಿದನು. ಕೊನೆಯ ವೃತ್ತಿಯನ್ನು ಒಬ್ಬ ಬ್ರಾಹ್ಮಣನಿಗೆ ದಾನಮಾಡಬೇಕೆಂದಿರುವಷ್ಟರಲ್ಲಿ ಮತ್ತೊಬ್ಬನು ಬಂದನು. ಅವರಿಬ್ಬರಿಗೂ ಅರಸು ಒಂದು ವೃತ್ತಿಯನ್ನೇ ಎರಡು ಭಾಗ ಮಾಡಿ ಧಾರೆಯೆರೆದು ಹಿಂದೆ ದಾನಮಾಡಿರುವ ಒಂದೊಂದು ವೃತ್ತಿಯಲ್ಲಿ ಎಷ್ಟೆಷ್ಟು ಉತ್ಪತ್ತಿಯಾಗುತ್ತದೆಯೋ ಅಷ್ಟುಬೆಳೆಯು ಈ ಅರ್ಧ ವೃತ್ತಿಗಳಲ್ಲಿಯೇ ಬರುವುದೆಂದು ಹೇಳಿದನಂತೆ. ಅದರಂತೆ ಆ ಭೂಮಿಗಳಲ್ಲಿ ಹೆಚ್ಚು ಬೆಳೆಯಾಗುತ್ತಿದೆಯೆಂದು ಅದನ್ನು ಅನುಭವಿಸುತ್ತಿರುವವರು ಈಗಲೂ ಹೇಳುತ್ತಾರೆ. ಶ್ರೀಸೋಮೇಶ್ವರ ದೇವಾಲಯದಲ್ಲಿ ಆ ಮಹಾತ್ಮನ ಭಕ್ತವಿಗ್ರಹವು ಇದೆ. ಅವನು ಕೆಂಪಾಪುರದ ಅಗ್ರಹಾರದ ಬಳಿ ಗಿಡ್ಡಪ್ಪಗೌಡನ ಹೆಸರಿನ ಮೇಲೆ ಕೆರೆಯನ್ನು ಕಟ್ಟಿಸಿದನು. ಅದು ಎಂದಿಗೂ ಬತ್ತುವುದಿಲ್ಲ. ಅದು ಈಗ ಬಿನ್ನಿ ಮಿಲ್ಲಿಗೆ ನೀರನ್ನೊದಗಿಸುತ್ತಿದೆ. ಬೆಂಗಳೂರ ಕೋಟೆಯ ದಕ್ಷಿಣದಲ್ಲಿ ಕಾರಂಜಿ ಕೆರೆಯನ್ನು ಕಟ್ಟಿಸಿ ಗಾರೆ ಕಾಲ್ವೆಯಿಂದ ಕೋಟೆಯ ಒಳಕ್ಕೆ ನೀರನ್ನು ಒದಗಿಸಿದನು. ಆತನು ಕೆಂಪಾಂಬುಧಿ ಕೆರೆಯನ್ನು ಅಭಿವೃದ್ಧಿಮಾಡಿ ಕೆರೆಯ ನೀರನ್ನು ವ್ಯವಸಾಯಕ್ಕೆ ಅನುಕೂಲಪಡಿಸಿದ

ನು. ಅದರಲ್ಲಿ ಈಗಲೂ ಸರೋವರದಂತೆ ನೀರು ಇದ್ದು ಬೆಂಗಳೂರಪ್ರಜೆಗಳಿಗೆ ಉಪಕಾರಿಯಾಗಿದೆ. ಈ ರೀತಿ ಆತನು ರಾಜ್ಯವನ್ನು ಅಭಿವೃದ್ಧಿಗೆ ತಂದು ರಾಜರ್ಷಿಯಂತೆ ಧರ್ಮದಿಂದ ಬೆಂಗಳೂರಲ್ಲಿ ೫೫ ವರ್ಷಗಳ ಕಾಲ ಆಳಿದನು, ಈ ಮಧ್ಯೆ ಸುಮುಕಿ ಬಾಗೂರು ರಾಜನಿಗೂ ಅವನಿಗೂ ಮನಸ್ತಾಪಗಳುಂಟಾಗಲು, ಆ ರಾಜನು ಬಿಜಾಪುರದ ನವಾಬನಲ್ಲಿಗೆ ಹೋಗಿ ದೂರ ಹೇಳಿಕೊಂಡನು. ಬಿಜಾಪುರದ ಸೈನ್ಯಾಧಿಪತಿಯಾದ ರಣದುಲ್ಲಾಖಾನನು ವಿಶೇಷಸೈನ್ಯದೊಡನೆ ಬಂದು ಬೆಂಗಳೂರನ್ನು ಮುತ್ತಿದನು. ಆಗ ಮಂತ್ರಿಸೈನ್ಯಾಧಿಪತಿಗಳೊಡನೆ ಆಲೋಚನೆ ಮಾಡಿ, ತನ್ನಲ್ಲಿ ತಕ್ಕ ಸೈನ್ಯವೂ ಯುದ್ಧಸಾಮಗ್ರಿಗಳೂ ಕೊಂಚವಾಗಿದ್ದು ರಣದುಲ್ಲಾಖಾನನಲ್ಲಿ ತರಬಿಯತ್ತಾದ ಕುದುರೆಯ ಸೈನ್ಯವೂ, ಮದ್ದೂ, ಗುಂಡೂ ವಿಶೇಷವಾಗಿದ್ದುದರಿಂದ ಅವನನ್ನು ಸೋಲಿಸುವ ಭರವಸೆಯಿಲ್ಲದೆ ಕೆಂಪೆಯ ಗೌಡನು ಕೈಸೆರೆಯಾದನು. ವರ್ಷಂಪ್ರತಿ ಪೊಗದಿ ಕೊಡಲು ಒಪ್ಪಿದುದರಿಂದ ಅವರು ಅವನನ್ನು ಸೆರೆಯಿಂದ ಬಿಡುಗಡೆಮಾಡಿದರು. ಇಮ್ಮಡಿ ಕೆಂಪೇಗೌಡನು ೧೬೩೮ರಲ್ಲಿ ಬೆಂಗಳೂರ ಕೋಟೆಯನ್ನು ಬಿಟ್ಟು ಪರಿವಾರದೊಡನೆ ಬಂಡಾರವನ್ನು ಸಾಗಿಸಿಕೊಂಡು ಮಾಗಡಿಗೆ ಬಂದು ನಿಂತು ಅದನ್ನೇ ತನ್ನ ರಾಜಧಾನಿಯಾಗಿ ಮಾಡಿಕೊಂಡನು.

ಮಾಗಡಿ—ಇದು ಪೂರ್ವದಲ್ಲಿ ಮಹರ್ಷಿಗಳು ತಪಸ್ಸನ್ನು ಮಾಡುತ್ತಿದ್ದ ಪುಣ್ಯಾಶ್ರಮವು. ಚೋಳರಾಜರು ಈ ಭಾಗವನ್ನು ಸ್ವಾಧೀನಪಡಿಸಿಕೊಂಡು ಕ್ರಿ. ಶ. ೧೧೩೯ ರಲ್ಲಿ ತಿರುಮಲೆ ಗ್ರಾಮವನ್ನು ಕಟ್ಟಿ ಅನಂತರ ಮಾಗಡಿ ಪೇಟೆಯುನ್ನು ಕಟ್ಟಿದರು. ಹೊಯಿಸಳ ರಾಜರು ಚೋಳರನ್ನು ಜಯಿಸಿ ಇದನ್ನು ಸ್ವಾಧೀನಪಡಿಸಿಕೊಂಡು ಕೆಲವು ಕಾಲ ಪ್ರಭುತ್ವಮಾಡಿದರು. ಹೊಯಿಸಳರ ತರುವಾಯ ವಿಜಯನಗರದ ಅರಸರು ಈ ದೇಶವನ್ನು ವಶಪಡಿಸಿಕೊಂಡು ತಮ್ಮ ಕಡೆಯ ಅಧಿಕಾರಿಯನ್ನು ಇಟ್ಟರು. ಅನಂತರ ಇದು ಬಹುಕಾಲ ವಿಜಯನಗರದವರ ಆಳ್ವಿಕೆಯಲ್ಲಿದ್ದು ಗೌಡದೊರೆಗಳ ಕೈಸೇರಿತು.

ಇಮ್ಮಡಿ ಕೆಂಪೇಗೌಡನು ಮಣ್ಣಿನ ಕೋಟೆಯನ್ನೂ, ಅರಮನೆಯನ್ನೂ ಕಟ್ಟಿಸಿ ಮಾಗಡಿಯಲ್ಲಿಯೇ ನಿಂತ ಮೇಲೆ ಈ ಮನೆತನದವರಿಗೆ ಮಾಗಡಿ ಕೆಂಪೇಗೌಡನ ಸಂತತಿಯವರೆಂದು ಪ್ರಸಿದ್ಧಿಯಾಯಿತು. ಈತನು ತನ್ನ ಹಿರಿಯರಂತೆ ಭಗವದ್ಭಕ್ತನಾಗಿಯೂ, ಪ್ರಜಾಹಿತಚಿಂತಕನಾಗಿಯೂ ಇದ್ದು ಅತಿಶಯವಾಗಿ ದೇವಾಲಯ, ಕೆರೆ, ಕುಂಟೆ, ಗ್ರಾಮಗಳನ್ನು ಕಟ್ಟಿ, ಬ್ರಾಹ್ಮಣರಿಗೂ, ಶಿವಭಕ್ತ

ರಿಗೂ ವಿಶೇಷವಾಗಿ ಗ್ರಾಮಭೂಮಿಗಳನ್ನು ದಾನಮಾಡಿರುವನು. ಮಾಗಡಿಗೆ ಪಶ್ಚಿಮದಲ್ಲಿ ಶ್ರೀಸೋಮೇಶ್ವರದೇವಾಲಯವನ್ನು ಕಟ್ಟಿಸಿ, ದೇವರಿಗೆ ನಿತ್ಯ ಪೂಜೆ, ರಥೋತ್ಸವ ಮೊದಲಾದುವು ಕ್ರಮವಾಗಿ ನಡೆಯುವುದಕ್ಕಾಗಿ ಸಿಬ್ಬಂದಿಯನ್ನೇರ್ಪಡಿಸಿ ಅನೇಕಗ್ರಾಮಭೂಮಿಗಳನ್ನು ಮಾನ್ಯವಾಗಿ ಕೊಟ್ಟು ಆ ಬಗೆಗೆ ದೇವಸ್ಥಾನದಲ್ಲಿ ಶಿಲಾಶಾಸನವನ್ನು ಬರೆಸಿರುವನು. ಈ ದೇವಸ್ಥಾನದ ಮಹಾದ್ವಾರ, ಗೋಪುರ ಇವು ಪೂರ್ತಿಯಾಗಿಲ್ಲ. ದಕ್ಷಿಣದ್ವಾರದ ಗೋಪುರವನ್ನು ಈಗ ನಿಂತಿರುವುದಕ್ಕಿಂತಲೂ ಮೇಲಕ್ಕೆ ಕಟ್ಟುತ್ತಿರುವಾಗ ಬೆಳಗಿನಿಂದ ಸಾಯಂಕಾಲದ ವರೆಗೂ ಕಟ್ಟಿದ ಕಟ್ಟಡವು ಬೆಳಿಗ್ಗೆ ಬಂದು ನೋಡುವಾಗ ಬಿದ್ದು ಹೋಗುತ್ತಿದ್ದಿತಂತೆ. ಆದುದರಿಂದ ಅದು ಪೂರೈಸಲಿಲ್ಲ. ಈ ಗೋಪುರವು ತಿರುಮಲೆ ಶ್ರೀರಂಗನಾಥಸ್ವಾಮಿಯ ದೇವಾಲಯದ ಗೋಪುರಕ್ಕೆ ಅಭಿಮುಖವಾಗಿದೆ. ದೇವಸ್ಥಾನಕ್ಕೆ ಉತ್ತರದಲ್ಲಿ ಇರುವ ವಿಶಾಲವಾದ ಕೊಳವೂ, ವಿವಿಧಫಲವೃಕ್ಷಗಳ ದೊಡ್ಡ ತೋಪೂ ಅತಿರಮ್ಯವಾಗಿವೆ. ಶ್ರೀ ಸೋಮೇಶ್ವರದೇವಸ್ಥಾನಕ್ಕೆ ನೈಋತ್ಯದಲ್ಲಿ ಎತ್ತರವಾದ ಒಂದು ಗುಂಡಿನ ಮೇಲೆ ಬಸವಣ್ಣನೂ, ಆ ಬಸವಣ್ಣನ ಮೇಲೆ ಶಿಖರವೂ ಇವೆ. ರಾತ್ರಿಯ ಕಾಲದಲ್ಲಿ ಈ ಗುಂಡನ್ನು ಹತ್ತಿ ನೋಡಿದರೆ ಬೆಂಗಳೂರಿನ ವಿದ್ಯುಚ್ಛಕ್ತಿಯ ದೀಪಗಳು ಆಕಾಶದಲ್ಲಿ ನಕ್ಷತ್ರಗಳು ಮಿಣುಗುಟ್ಟುವಂತೆ ಮನೋಹರವಾಗಿ ಕಾಣುತ್ತವೆ. ಈ ಶಿಖರದ ಬಸವಣ್ಣನಿಗೆ ಇದಿರಾಗಿ ತಿರುಮಲೆಗೆ ಬಡಗಣ ಬೆಟ್ಟದಲ್ಲಿರುವ ಒಂದು ದೊಡ್ಡ ಗುಂಡಿನ ಮೇಲೆ ಈಶಾನ್ಯಮೂಲೆಯಲ್ಲಿ ಮತ್ತೊಂದು ಶಿಖರದ ಬಸವಣ್ಣನಿದೆ. ಈ ಶಿಖರಗಳೆರಡೂ ಮಾಗಡಿ ತಿರುಮಲೆ ಗ್ರಾಮಗಳನ್ನು ಮಧ್ಯೆ ಸೇರಿಸಿಕೊಂಡಿವೆ. ಬೆಂಗಳೂರಿಗೆ ವೈಯಾಲ್ ಶಿಖರಗಳು ಹೇಗೋ ಹಾಗೆ ಈ ಸುಂದರವಾದ ಶಿಖರದ ಬಸವಣ್ಣಗಳು ಇಲ್ಲಿ ಕಂಗೊಳಿಸುತ್ತಿವೆ.

ತಿರುಮಲೆಯ ಶ್ರೀರಂಗನಾಥದೇವರ ದೇವಸ್ಥಾನವು ಪುರಾತನವಾದುದು. ವಿಜಯನಗರದ ಚಕ್ರವರ್ತಿಗಳ ಕಡೆಯ ಅಧಿಕಾರಿಯಾಗಿದ್ದು ಅವರಿಂದ ಮಾಗಡಿಯನ್ನು ಜಹಗೀರಿಯಾಗಿ ಪಡೆದು ಅನುಭವಿಸುತ್ತಿದ್ದ ಸಾಮಂತರಾಯನ ಮಗ ಸಂಪಾಜರಾಯನೆಂಬರಸು ಈ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿ, ಇದರಲ್ಲಿ ಪ್ರಾಕಾರ, ಗೋಪುರ, ಕೊಳ ಮೊದಲಾದುವನ್ನು ದೊಡ್ಡದಾಗಿ ಕಟ್ಟಿಸಿದನು. ಇಲ್ಲಿ ತಪಸ್ಸನ್ನು ಮಾಡುತ್ತಿದ್ದ ಮಾಂಡವ್ಯಋಷಿಗಳಿಗೆ ತಿರುಪತಿಯ ಶ್ರೀ ವೆಂಕಟರಮಣದೇವರು ಪ್ರಸನ್ನನಾಗಿ "ಇನ್ನು ಮುಂದೆ ಇದು

ಪಶ್ಚಿಮತಿರುಪತಿಯೆನಿಸುವುದು. ನಾನು ಇಲ್ಲಿಯೇ ನಿಂತು ಭಕ್ತರನ್ನು ಕಾಪಿಡು ವೆನು'' ಎಂದು ಅಪ್ಪಣೆಕೊಡಿಸಿದನೆಂದು ಸ್ಥಳಪುರಾಣದಲ್ಲಿ ಉಕ್ತವಾಗಿದೆ. ದೇವರ ವಿಗ್ರಹವು ಪಶ್ಚಿಮಾಭಿಮುಖವಾಗಿದೆ. ಗರ್ಭಗುಡಿಯ ಹಿಂದಿನ ಗೋಡೆಯ ಕಲ್ಲು ಚಪ್ಪಡಿಯಲ್ಲಿ ಈಚೆಗೆ ಶೇಷಶಾಯಿಯಾದ ರಂಗನಾಥದೇವರು ಉದ್ಭವಿಸಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತ ಮಾಗಡಿ ರಂಗನಾಥನೆಂದು ಹೆಸರುಗೊಂಡಿದ್ದಾನೆ. ಈ ದೇವರಿಗೆ ವಿಶೇಷವಾಗಿ ಭಕ್ತಾದಿಗಳಿದಾರೆ. ರಥೋತ್ಸವವು ಬಲು ಚೆನ್ನಾಗಿ ನಡೆಯುತ್ತದೆ. ಆ ಕಾಲದಲ್ಲಿ ಚಾತುರ್ವರ್ಣದವರಿಗೂ ಭಕ್ತಾದಿಗಳು ಸಮಾರಾಧನೆಗಳನ್ನು ನಡೆಸುತ್ತಾರೆ.

ಕೆಂಪೇಗೌಡನು ವಿಶೇಷವೈಭವದಿಂದ ನಡೆಸುತ್ತಿದ್ದ ಶ್ರೀಸೋಮೇಶ್ವರ ದೇವರ ರಥೋತ್ಸವವು ನಿಂತು ಹೋಗಿದ್ದಿತು. ಅದು ಕೆಲವು ಸಂವತ್ಸರಗಳಿಂದೀಚೆಗೆ ಭಕ್ತಾದಿಗಳಿಂದ ನಡೆಸಲ್ಪಡುತ್ತಿದೆ. ತಸ್ತೀಕೂ ದೇವಸ್ಥಾನಕ್ಕೆ ಪೂರ್ವದಲ್ಲಿದ್ದ ಮಾನ್ಯ ಮಿರಾಸೆಗಳೂ ನಿಂತು ಹೋದುದರಿಂದ ರಥೋತ್ಸವವು ನಿಲ್ಲುವುದಕ್ಕೆ ಕಾರಣವಾಯಿತು. ಕೆಂಪೇಗೌಡನು ಪ್ರತಿಷ್ಠೆಮಾಡಿಸಿದ್ದ ಲಿಂಗವನ್ನು ಒಬ್ಬ ಮುಸಲ್ಮಾನರವನು ಕಿತ್ತುಹಾಕಿ, ಅಮ್ಮನವರ ವಿಗ್ರಹವನ್ನು ಭಿನ್ನಮಾಡಿದನು. ಅದನ್ನು ಸರ್ಕಾರದವರು ಬಂದೋಬಸ್ತುಮಾಡಿರುತ್ತಾರಂತೆ. ಈಗಿರುವ ಲಿಂಗವನ್ನು ಭಕ್ತಾದಿಗಳು ಕಾಶಿಯಿಂದ ತರಿಸಿ ಪ್ರತಿಷ್ಠೆಮಾಡಿದಾರೆ. ಕೆಂಪೇಗೌಡರ ದಿವಾನರ ಮತ್ತು ಕರಣೀಕರ ವಂಶೀಯರಾದ ಮಾಗಡಿ ಕರಣೀಕ ಕೃಷ್ಣಮೂರ್ತಿರಾಯರು ಶ್ರೀಸೋಮೇಶ್ವರದೇವರಲ್ಲಿ ಬಹು ಭಕ್ತಿಯುಳ್ಳವರಾಗಿ ರಥೋತ್ಸವ ಮೊದಲಾದ ದೇವಸ್ಥಾನದ ಅಭಿವೃದ್ಧಿಯ ಕಾರ್ಯಗಳನ್ನೆಲ್ಲಾ ಮುಂದಾಳಾಗಿ ನಿಂತು ನಡೆಸುತ್ತಿದಾರೆ. ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಇಲ್ಲಿಗೆ ಇತರ ದೇಶಗಳಿಂದ ಕರೆಸಲ್ಪಟ್ಟ ಶ್ರೋತ್ರಿಯಬ್ರಾಹ್ಮಣರೂ, ವೈಶ್ಯರೂ, ನೇಯಿಗೆಯವರೂ, ಇತರ ಕೆಲಸಗಾರರೂ ಪರಂಪರೆಯಾಗಿ ಆಯಾ ಕಸಬುಗಳನ್ನು ಮಾಡಿಕೊಂಡು ಈಗಲೂ ಪ್ರಸಿದ್ಧರಾಗಿದಾರೆ.

ಸಾವನದುರ್ಗ— ಇದಕ್ಕೆ ಮಾಗಡಿಯ ಬೆಟ್ಟವೆಂದು ಪೂರ್ವದ ಹೆಸರು. ಇದು ಮಾಗಡಿಗೆ ಅಗ್ನೇಯದಿಕ್ಕಿನಲ್ಲಿ ೭ ಮೈಲಿ ದೂರದಲ್ಲಿ ಸಮುದ್ರಮಟ್ಟಕ್ಕಿಂತ ೪೦೨೪ ಅಡಿ ಎತ್ತರವಿದೆ. ಬೆಟ್ಟದ ಬುಡದ ಸುತ್ತಳತೆ ೪ ಮೈಲಿಗಳು. ಬೆಟ್ಟವು ಬುಡದಲ್ಲಿ ಒಂದೇ ಆಗಿ ಮೇಲಕ್ಕೆ ಎರಡು ಶಾಖೆಗಳಾಗಿ ಬೆಳೆ

ದಿದೆ. ಪೂರ್ವದ ಕಡೆಯ ದುರ್ಗದ ಬಂಡೆಯು ಕಪ್ಪಗೆ ಕಾಣುವುದರಿಂದ ಕರಿಯ ಬೆಟ್ಟವೆಂದೂ, ಪಶ್ಚಿಮದ ಕಡೆಯ ದುರ್ಗವು ಬೆಳ್ಳಗೆ ಕಾಣುವುದರಿಂದ ಬಿಳಿಯ ಬೆಟ್ಟವೆಂದೂ ಕರೆಯಲ್ಪಡುತ್ತದೆ. ಬಂಡೆಯು ಏಕವಾಗಿ ಮೇಲಕ್ಕೆ ಬೆಳೆದು ಕರಿಯ ಬೆಟ್ಟಕ್ಕೆ ಎರಡು ಕೋಡುಗಳೂ, ಬಿಳಿಯ ಬೆಟ್ಟಕ್ಕೆ ೩ ಕೋಡುಗಳೂ ಇವೆ. ಶಿಖರದಲ್ಲಿ ಬಸವಣ್ಣನಿರುವ ಕರಿಯ ಬೆಟ್ಟವೇ ಎತ್ತರವಾದುದು. ಇಲ್ಲಿ ಟ್ರಿಗ್ನಾಮೆಟ್ರಿಕಲ್ ಸರ್ವೆಯು ಬಾಂದು ಕಲ್ಲು ಇದೆ. ಈ ಬೆಟ್ಟಗಳೆರಡರ ಮೇಲೆಯೂ ವಿಶಾಲವಾದ ಸ್ಥಳಗಳೂ, ವೃಕ್ಷಗಳೂ, ಹೂಗಿಡು ಬಳ್ಳಿಗಳೂ, ದಿವ್ಯೋದಕಪೂರಿತವಾದ ದೊಣೆಗಳೂ ಇವೆ. ಸಾಮಂತರಾಯನೊಬ್ಬನು ಮೊದಲು ಈ ದುರ್ಗದ ಮೇಲೆ ಕೋಟೆಯನ್ನು ಕಟ್ಟಿ ೮೦೦೦ ಸೈನ್ಯವನ್ನೂ ೪ ಮಂದಿ ಸೇನಾನಾಯಕರನ್ನೂ ಇಟ್ಟುಕೊಂಡು ದೊರೆತನಮಾಡುತ್ತಿದ್ದುದರಿಂದ ಇದಕ್ಕೆ ಸಾಮಂತದುರ್ಗವೆಂದು ಹೆಸರಾಯಿತು. ಅವನ ತರುವಾಯ ಆತನ ಸಂತತಿಯವರು ಕೆಲವು ಕಾಲ ರಾಜ್ಯಭಾರಮಾಡಿ ಸಂತತಿ ಇಲ್ಲದೆ ಹೋಗಲು ಗುಡೇಮಾರನಹಳ್ಳಿ ತಳವಾರ ಗಂಗನು ಇದನ್ನಾಕ್ರಮಿಸಿಕೊಂಡನು. ಇಮ್ಮಡಿ ಕೆಂಪೇಗೌಡನು ಗಂಗನನ್ನು ಕೊಂದು ಮಾಗಡಿ ಸಾಮಂತದುರ್ಗಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡನು. ಅಂದಿನಿಂದೀಚೆಗೆ ಇದಕ್ಕೆ ಸಾವನದುರ್ಗವೆಂದು ಹೆಸರಾಯಿತು. ಬೆಟ್ಟಕ್ಕೆ ದಕ್ಷಿಣದಲ್ಲಿ ಶ್ರೀವೀರಭದ್ರದೇವರ ಗುಡಿಯಿದೆ. ಇದು ಪುರಾತನವಾದುದು. ಯಲಹಂಕನಾಡ ಪ್ರಭುಗಳು ಈ ದೇವರಲ್ಲಿ ವಿಶೇಷಭಕ್ತಿಯನ್ನಿಟ್ಟು ಯಲಹಂಕದಿಂದಲೂ, ಬೆಂಗಳೂರಿಂದಲೂ ಇಲ್ಲಿಗೆ ಬಂದು ಉತ್ಸವಾದಿಗಳನ್ನು ನಡೆಸುತ್ತಿದ್ದರೆಂದು ವೀರಭದ್ರವಿಜಯವೆಂಬ ಸಂಸ್ಕೃತಚಂಪೂಗ್ರಂಥದಲ್ಲಿ ಬರೆದಿರುವುದು. ಆ ಗ್ರಂಥವಿಚಾರವು ಮುಂದಿನ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ.

ಶ್ರೀ ವೀರಭದ್ರ ದೇವರ ಗುಡಿಗೆ ಪೂರ್ವದಿಕ್ಕಿನಲ್ಲಿ ಶ್ರೀ ನರಸಿಂಹದೇವರ ವಿಗ್ರಹವು ಉದ್ಭವವಾಗಿ ಪ್ರಸಿದ್ಧವಾಗಿದೆ. ಈ ವೀರಭದ್ರದೇವರ ಗುಡಿಗೆ ನಾಲ್ಕು ದಿಕ್ಕುಗಳಲ್ಲಿಯೂ ಇಮ್ಮಡಿ ಕೆಂಪೇಗೌಡನು ದೊಡ್ಡ ಪಟ್ಟಣವನ್ನು ಕಟ್ಟಿ ಅದಕ್ಕೆ ನೆಲಪಟ್ಟಣವೆಂದು ಹೆಸರಿಟ್ಟಿದ್ದನು. ಆ ಪಟ್ಟಣವು ಮಹೋನ್ನತದಶೆಯಲ್ಲಿದ್ದಿತೆಂದು ಈಗಿರುವ ಗುರುತುಗಳಿಂದ ಸ್ಪಷ್ಟವಾಗುತ್ತದೆ. ದೇಶಭಕ್ತರು ಜೀರ್ಣವಿಜಯನಗರವನ್ನು ನೋಡಿ ಕಣ್ಣೀರ ಸುರಿಸುವಂತೆ ಅನೇಕರು ಸಾವನದುರ್ಗಕ್ಕೆ ಹೋಗಿ ನೆಲಪಟ್ಟಣದ ಗುರುತುಗಳನ್ನು ನೋಡಿ, ಕೆಂಪೇಗೌಡರ ಮಹ

ತ್ಕಾರ್ಯಗಳನ್ನು ಸ್ಮರಿಸಿಕೊಂಡು ವ್ಯಸನಪಟ್ಟು ಬರುತ್ತಿರುವರು. ಇಮ್ಮಡಿ ಕೆಂಪೇಗೌಡನು ಸಾವನದುರ್ಗದಲ್ಲಿಯೂ, ನೆಲಪಟ್ಟಣದಲ್ಲಿಯೂ, ಮಾಗಡಿಯಲ್ಲಿಯೂ ಇದ್ದುಕೊಂಡು, ಉದಾರಿಯೂ, ವಿವೇಕಶಾಲಿಯೂ ಎನಿಸಿ ಧರ್ಮದಿಂದ ೧೪ ವರ್ಷಗಳ ಕಾಲ ರಾಜ್ಯವನ್ನಾಳಿ ತರುವಾಯ ಕೀರ್ತಿಶೇಷನಾದನು. ಇವನು ೮೯ ವರ್ಷ ಬದುಕಿದ್ದನು. ಇವನ ತರುವಾಯ ೧೫೫೮-೧೭೦೫ ರ ವರೆಗೆ ಮುಮ್ಮಡಿ ಕೆಂಪೇಗೌಡ (ಮಳೆಯ ಕೆಂಪೇಗೌಡ) ನೆಂಬವನು ಆಳಿದನು. ಇವನು ಮಹಾಕ್ಷಾಮದಲ್ಲಿ ಪ್ರಜೆಗಳ ಗೋಳನ್ನು ನೋಡಿ ಮಳೆಗಾಗಿ ದೇವರನ್ನು ಪ್ರಾರ್ಥಿಸಿದನು. ಇವನ ಪ್ರಾರ್ಥನೆಯಂತೆ ಮರುದಿನ ವಿಶೇಷವಾಗಿ ಮಳೆ ಸುರಿದು ಪ್ರಜೆಗಳ ಕಷ್ಟವು ನಿವಾರಣೆಯಾಯಿತಂತೆ. ಈತನ ಮಾಹಾತ್ಮ್ಯೆಗೆ ಪ್ರಜೆಗಳು ವಿಸ್ಮಯಗೊಂಡು ಇವನನ್ನು ಬಹು ಭಕ್ತಿಭಾವನೆಗಳಿಂದ ಕಾಣುತ್ತ, ಮಳೆಯ ಕೆಂಪರಾಯನೆಂದು ಕರೆಯುತ್ತಿದ್ದರು.

ಅಧ್ಯಾಯ—೫.

೩ ನೆಯ ಕೆಂಪೇಗೌಡ, (ಕೆಂಪವೀರಪ್ಪಗೌಡ) ನೆಲಪಟ್ಟಣ.

ಇಮ್ಮಡಿ ಕೆಂಪೇಗೌಡನ ತರುವಾಯ ಪಟ್ಟಕ್ಕೆ ಬಂದು ಸುಪ್ರಸಿದ್ಧವಾಗಿ ರಾಜ್ಯವಾಳಿದ ೩ ನೆಯ ಕೆಂಪೇಗೌಡನೇ ಮಾಗಡಿಯ ಮನೆತನದ ಕೊನೆಯ ದೊರೆಯು. ಈತನ ಪ್ರಭುತ್ವಕಾಲದಲ್ಲಿ ವಿಜಯನಗರದ ಚಕ್ರಾಧಿಪತ್ಯವು ಹೋಗಿದ್ದು ಅವರ ಕೈಕೆಳಗಿದ್ದ ಸಾಮಂತರಾಜರುಗಳು ಸ್ವತಂತ್ರರಾಗಿ ಒಬ್ಬರ ಮೇಲೊಬ್ಬರು ಬೀಳುತ್ತಿದ್ದರು. ತರುವಾಯ ಮೈಸೂರ ದೊರೆಗಳು ಪ್ರಬಲರಾಗಿ ಕೆಲವು ಪಾಳೆಯಗಾರರನ್ನಡಗಿಸಿ ರಾಜ್ಯವನ್ನು ವಿಸ್ತರಿಸಿ ಮುಂದುವರಿಯುತ್ತಿದ್ದರು. ಶಿರ್ಯದ ನವಾಬರೂ ಮರಾಟೆಗರೂ, ಮೈಸೂರ ದೊರೆಗಳೂ ಇವನ ಮೇಲೆ ಕಣ್ಣಿಟ್ಟಿದ್ದ ಕಾರಣ ಈತನು ಆತ್ಮರಕ್ಷಣೆಗೆ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು. ಸ್ವಪ್ರತಿಷ್ಠೆ, ಸ್ವಲಾಭಾಪೇಕ್ಷೆಯಿಲ್ಲದೆ, ದೇಶಹಿತ ಪ್ರಭುಹಿತಗಳಿಗಾಗಿಯೇ ವಂಶಪಾರಂಪರ್ಯವಾಗಿ ಅಧಿಕಾರಗಳಲ್ಲಿದ್ದ ಆಪ್ತರೊಡನೆ ಆಲೋಚನೆಯನ್ನು ಮಾಡಿ, ಶತ್ರುಗಳು ಪ್ರವೇಶಿಸುವುದಕ್ಕೆ ದುಸ್ಸಾಧ್ಯವಾದ ಅರಣ್ಯದ ಮಧ್ಯೆ ಸಾವನದುರ್ಗದ ದಕ್ಷಿಣಪಾರ್ಶ್ವದಲ್ಲಿ ನೆಲಪಟ್ಟಣವನ್ನು ಕಟ್ಟಿದನು. ಬಿಳಿಯ ಬೆಟ್ಟದ ಬುಡದಿಂದ ಶ್ರೀ ವೀರಭದ್ರದೇವರ

ಗುಡಿಯ ವರೆಗೆ, ರಾಜಪಿಂಡೆಯವರೂ, ಅಧಿಕಾರಿಗಳೂ ವಾಸಮಾಡುತ್ತಿದ್ದ ದಿವ್ಯ ಭವನಗಳಿದ್ದುವು. ಪೂರ್ವಕ್ಕೆ ಹೊಲೆಯನ ಉಕ್ಕಡದಿಂದ ಪಶ್ಚಿಮಕ್ಕೆ ಅಲ್ಲೀನಗರದ ವರೆಗೆ ಸುಮಾರು ೫ ಮೈಲಿಗಳು, ಉತ್ತರಕ್ಕೆ ಬಿಳಿಯ ಬೆಟ್ಟ ಕರಿಯ ಬೆಟ್ಟಗಳ ಕಿಬ್ಬಿಯಿಂದ ದಕ್ಷಿಣಕ್ಕೆ ಪಾದದ ಅರೆಬಸವಣ್ಣನ ಬಾಗಿಲ ವರೆಗೆ ಸುಮಾರು ೨ ಮೈಲಿಗಳು. ಇದರ ನಡುವೆ ನೆಲಪಟ್ಟಣವು ಜನಭರಿತವಾಗಿದ್ದಿತು. ಈ ಪಟ್ಟಣಕ್ಕೆ ಮೂರು ಕೋಟೆಗಳೂ, ದುರ್ಗಕ್ಕೆ ಎರಡು ಕೋಟೆಗಳೂ ಇರುವುವು. ಅಲ್ಲದೆ ಅನೇಕ ಬುರುಜುಗಳಿರುವುವು. ಹೊರಕೋಟೆಯ ಎಂಟು ದಿಕ್ಕುಗಳಲ್ಲಿ ಎಂಟು ಮಂದಿ ಸೈನ್ಯಾಧಿಪತಿಗಳು ಸೈನ್ಯಸಮೇತ ಯುದ್ಧ ಸಾಮಗ್ರಿಗಳೊಡನೆ ಪಟ್ಟಣವನ್ನು ರಕ್ಷಿಸುತ್ತಿದ್ದರು.

ಮುಮ್ಮಡಿ ಕೆಂಪೇಗೌಡನು ಮಿತಪರಿವಾರದೊಡನೆ ಮಾಗಡಿಯ ಕೋಟೆಯಲ್ಲಿ ರಾಜ್ಯಭಾರಮಾಡುತ್ತ, ಶತ್ರುಗಳ ಸುಳಿವು ತೋರಿದಲ್ಲಿ ಸಾವನದುರ್ಗದ ನೈಋತ್ಯಭಾಗದ ಕೋಟೆಯ ದಿಡ್ಡಿಯ ಬಾಗಿಲಿಂದ ನೆಲಪಟ್ಟಣಕ್ಕೆ ಬಂದು ಸೇರುತ್ತಿದ್ದನು. ನೆಲಪಟ್ಟಣದಿಂದ ಬಿಳಿಯ ಬೆಟ್ಟವನ್ನು ಹತ್ತುವುದಕ್ಕೆ ಒಂದೇ ಮಾರ್ಗವಿರುವುದು. ಇಕ್ಕಟ್ಟಾದ ಆ ದಾರಿಯ ಮೆಟ್ಟಿಲುಗಳನ್ನು ಹತ್ತಿ ಹೋಗುತ್ತ ಹೋಗುತ್ತ ಅರ್ಧ ಬೆಟ್ಟವನ್ನು ಹತ್ತುವಾಗ್ಗೆ ಒಂದು ಸರಕೆ ಸಿಕ್ಕುವುದು. ಅದನ್ನು ದಾಟುವುದಕ್ಕೆ ಮರದ ಹಲಗೆಯನ್ನು ಹಾಕಿದ್ದು ಶತ್ರುಗಳು ಬಂದಾಗ ಅದನ್ನು ತೆಗೆದು ಈಚೆಯ ಕಡೆಯ ಮೆಟ್ಟಲಿನ ಮೇಲೆ ಒಬ್ಬನು ನಿಂತುಕೊಂಡು ಬಂದವರನ್ನು ತಳ್ಳುತ್ತಿದ್ದರೆ ಅವರು ಪಾತಾಳವನ್ನು ಸೇರುತ್ತಿದ್ದರು. ಆ ಸರಕೆಯು ಸಣ್ಣ ಸಂದಿನಂತೆ ತಳಕ್ಕೆ ಇಳಿದು ಕತ್ತಲು ಮುಚ್ಚಿಕೊಂಡು ಇದೆ. ಅದರ ಆಳವು ಸಿಕ್ಕುವುದಿಲ್ಲ. ಒಳಕ್ಕೆ ಬಿದ್ದವರ ಶಬ್ದವೂ ಕೇಳುವುದಿಲ್ಲ; ಗುರುತೂ ಸಿಕ್ಕುವುದಿಲ್ಲ. ಶತ್ರುಗಳು ಆ ಮಾರ್ಗವಾಗಿ ಸಾವನದುರ್ಗವನ್ನೇರುವುದಕ್ಕೆ ಅದು ಸ್ವಾಭಾವಿಕವಾದ ತಡೆಯಾಗಿದೆ. ಬೆಟ್ಟದ ಮೇಲಿನ ಕೋಟೆಯ ಬುರುಜುಗಳಿಂದ ನೋಡಿದರೆ ಕೆಳಗೆ ಬಹುದೂರದ ವರೆಗೆ ಶತ್ರುಗಳ ಗಮನಾಗಮನಗಳು ಚೆನ್ನಾಗಿ ತಿಳಿಯುತ್ತದೆ. ದೊರೆಯು ಈ ನೆಲಪಟ್ಟಣ ಸಾವನದುರ್ಗಕ್ಕೆ ೫ ಕೋಟೆಗಳನ್ನು ಕಟ್ಟಿಸಿರುತ್ತಾನೆ. ಬೆಟ್ಟದ ಕೆಳಗೆ ಪಟ್ಟಣಕ್ಕೆ ೩ ಕೋಟೆಗಳೂ, ಬೆಟ್ಟಕ್ಕೆ ಸುತ್ತಲೂ ತಳದಲ್ಲಿ ಒಂದು, ನೆಲ್ಲಗಡೆ ಒಂದು ಈ ರೀತಿ ಎರಡು ಕೋಟೆಗಳೂ, ಬುರುಜುಗಳೂ, ಮದ್ದಿನ ಮನೆಗಳೂ ಆಯುಧಶಾಲೆ

ಗಳೂ, ಗರಡಿಯ ಮನೆಗಳೂ, ಧನಧಾನ್ಯಗಳನ್ನಿಡುವ ಭದ್ರವಾದ ಕೋಣೆಗಳೂ, ಓಲಗದ ಹಜಾರಗಳೂ, ವಾಸದ ಮನೆಗಳೂ ರಚಿತವಾಗಿ ಬೆಟ್ಟದ ಮೇಲೆ ಆಸ್ತಿಗಳನ್ನು ಭದ್ರಪಡಿಸಿ, ಮುಮ್ಮಡಿ ಕೆಂಪೇಗೌಡನು ನೆಲಪಟ್ಟಣ ಮಾಗಡಿಗಳಲ್ಲಿ ವಾಸಮಾಡಿಕೊಂಡಿದ್ದನು. ಆಪ್ತರಾದ ಅಧಿಕಾರಿಗಳೆಲ್ಲರೂ ನೆಲಪಟ್ಟಣದ ೩ ನೆಯ ಕೋಟೆಯಲ್ಲಿ ವಾಸವಾಗಿದ್ದರು. ಅವನು ಮೂರನೆಯ ಕೋಟೆಯ ಬಾಗಿಲ ಬಳಿಯಲ್ಲಿ ಶ್ರೀಕಾಶೀವಿಶ್ವೇಶ್ವರದೇವಾಲಯವನ್ನು ಕಟ್ಟಿಸಿದನು. ಆ ದೇವಸ್ಥಾನವು ತುಂಬ ಮುದ್ದಾಗಿರುವುದು. ಈಚೆಗೆ ಭಕ್ತಾದಿಗಳು ಆ ಲಿಂಗವನ್ನು ತಂದು ಮಾಗಡಿ ಕೋಟೆಯಲ್ಲಿ ನೂತನವಾಗಿ ಕಟ್ಟಿಸಿದ ದೇವಾಲಯದಲ್ಲಿ ಪ್ರತಿಷ್ಠೆಮಾಡಿಸಿ ಅದನ್ನು ಶ್ರೀ ಕಾಶೀವಿಶ್ವೇಶ್ವರದೇವಾಲಯವೆಂದು ಕರೆಯುತ್ತಾರೆ. ನೆಲಪಟ್ಟಣದಲ್ಲಿ ಪಾಳುಬಿದ್ದ ಕಾಶೀವಿಶ್ವೇಶ್ವರದೇವಾಲಯದ ಮುಂದಣ ಭಾಗವನ್ನು ಕಿತ್ತುಕೊಂಡು ಬಂದು ಶ್ರೀ ವೀರಭದ್ರದೇವರ ಗುಡಿಗೆ ಪೂರ್ವದಿಕ್ಕಿನಲ್ಲಿ ನೆಲದಿಂದ ಮೇಲಕ್ಕೆದ್ದ ಒಂದು ಬಂಡೆಯಲ್ಲಿ ಉದ್ಭವಿಸಿರುವ ಶ್ರೀನರಸಿಂಹಸ್ವಾಮಿಯ ದೇವಾಲಯದ ಗರ್ಭಗುಡಿಯ ಮುಂದುಗಡೆಯನ್ನು ಕಟ್ಟಿಸಿರುತ್ತಾರೆ. ನೆಲಪಟ್ಟಣದ ೩ನೆಯ ಕೋಟೆಯ ಬಾಗಿಲಿಂದೊಳಗೆ ಅರಮನೆ ಮತ್ತು ಮುಖ್ಯಾಧಿಕಾರಿಗಳ ಮನೆಗಳಿದ್ದುವು. ಅವುಗಳ ಗುರುತುಗಳು ಈಗಲೂ ಚೆನ್ನಾಗಿ ತಿಳಿಯುತ್ತವೆ. ಶ್ರೀ ಕಾಶೀವಿಶ್ವೇಶ್ವರದೇವಾಲಯದ ಮತ್ತು ಕೋಟೆಯ ದ್ವಾರಗಳು ಮಾತ್ರ ಸರಿಯಾಗಿ ನಿಂತಿವೆ. ಉಳಿದ ಭಾಗವೆಲ್ಲಾ ಕಾಡು ಬೆಳೆದು ಹೋಗಿವೆ. ಈಗಲೂ ಹಳಬರು ಕೆಲವರು ನೆಲಪಟ್ಟಣದ ಆವ ಆವ ಭಾಗಗಳಲ್ಲಿ ಆವ ಜನಗಳು ವಾಸಮಾಡುತ್ತಿದ್ದರು ಎಂಬುದನ್ನೂ, ಅಂಗಡಿ, ಬೀದಿ ಮೊದಲಾದುವು ಇದ್ದ ಸ್ಥಳಗಳನ್ನೂ ತೋರಿಸುತ್ತಾರೆ. ಶ್ರೀ ವೀರಭದ್ರದೇವರ ಗುಡಿಗೆ ಪಶ್ಚಿಮದಲ್ಲಿ ಬಿದಿರು ಕಟ್ಟೆಯೆಂಬ ಕೆರೆಯಿದೆ. ಈ ಕೆರೆಯಲ್ಲಿ ಸದಾ ನೀರಿರುತ್ತದೆ. ನೆಲಪಟ್ಟಣವಿದುದಕ್ಕೆ ಗುರ್ತಾಗಿ ಈ ಪ್ರದೇಶದಲ್ಲಿ ಇಳಿಯುವ ಬಾವಿಗಳೂ, ಸೇದುವ ಬಾವಿಗಳೂ ವಿಶೇಷವಾಗಿವೆ. ಕಾಶೀ ಕಲ್ಲ ಕೆಲಸಮಾಡಿ ಅಂದವಾಗಿ ಕಟ್ಟಿರುವ ಕೆಲವು ಬಾವಿಗಳಲ್ಲಿ ಮಾತ್ರ ನೀರಿದೆ. ಕೆಲವು ಹೂಳುಬಿದ್ದುಹೋಗಿವೆ. ಪುರಾತನವಾದ ಶ್ರೀ ವೀರಭದ್ರದೇವರಲ್ಲಿ ವಿಶೇಷಭಕ್ತಿಯಿಂದ ಮುಮ್ಮಡಿ ಕೆಂಪೇಗೌಡನ ಹಿರಿಯರು ಯಲಹಂಕದಿಂದ ಇಲ್ಲಿಗೆ ಬಂದು ರಥೋತ್ಸವ ಮೊದಲಾದುವನ್ನು ಅತಿವೈಭವದಿಂದ ನಡೆಯಿಸುತ್ತಿದ್ದರು. ಈತನೂ ಹಿರಿಯರಂತೆ ದೇವರಲ್ಲಿ ಭಕ್ತಿಯೂ, ಪ್ರಜೆಗಳಲ್ಲಿ ಪ್ರೀತಿಯೂ ಉಳ್ಳವನಾಗಿದ್ದನು. ಈತನ ಕೈಕೆಳಗೆ

ಮುಸಲ್ಮಾನರ ದೊಡ್ಡ ಅಧಿಕಾರಿಗಳಾಗಿದ್ದರು.. ಹೋಬಳಿದಾರ್ ಕೆಲಸದಲ್ಲಿದ್ದ ಗುಲಾಂ ಹುಸೇಣ್ ಎಂಬ ಮಹಾತ್ಮನ ಗೋರಿಯು ವೀರಭದ್ರದೇವರ ಗುಡಿಗೆ ಇದಿರಿನಲ್ಲಿದೆ. ಮುಸಲ್ಮಾನರು ಬಹುದೂರದಿಂದ ಬಂದು ಈ ಗೋರಿಗೆ ಹರಕೆಗಳನ್ನೊಪ್ಪಿಸಿ ಪೂಜೆಮಾಡಿಕೊಂಡು ಹೋಗುತ್ತಿದಾರೆ. ಮುಮ್ಮಡಿ ಕೆಂಪೇಗೌಡನ ಸೇನಾನಾಯಕರಲ್ಲಿ ವೀರಭದ್ರನಾಯಕನು ಬಹುಸಮರ್ಥನಾಗಿ ದೊರೆಗೆ ಪ್ರಾಣಪ್ರಾಯನಾಗಿದ್ದನು. ಈತನು ಕೋಟೆ ಕೊತ್ತಳಗಳನ್ನೆಲ್ಲಾ ಶುಭ್ರವಾಗಿಟ್ಟುಕೊಂಡು, ಮುಖ್ಯವಾದ ಸ್ಥಳಗಳಲ್ಲೆಲ್ಲಾ ಬಹುಭದ್ರವಾಗಿ ಸರಿಯಾದ ಕಾವಲನ್ನಿಟ್ಟು ವೀರಭದ್ರದುರ್ಗವೆಂಬ ಪೂರ್ವದಿಕ್ಕಿನ ಉಕ್ಕಡದಲ್ಲಿ ತಾನೇ ಕಾವಲಿದ್ದನು. ಆಗಿನ ಕಾಲಕ್ಕೆ ಅಷ್ಟು ಭದ್ರವಾಗಿದ್ದ ಈ ದುರ್ಗವನ್ನು ಶತ್ರುಗಳು ಇಣಿಕಿ ನೋಡದ ಹಾಗಿದ್ದಿತು. ಮುಮ್ಮಡಿ ಕೆಂಪೇಗೌಡನ ಹಿರಿಯರೆಲ್ಲರೂ ಶಿವವಿಷ್ಣುಭೇದವಿಲ್ಲದೆ ಉಭಯದೇವರುಗಳಲ್ಲಿಯೂ ಭಕ್ತಿಯಿಟ್ಟುಕೊಂಡು ಶೈವರನ್ನೂ, ವೈಷ್ಣವರನ್ನೂ ಸಮವಾಗಿ ಕಾಣುತ್ತಿದ್ದರು. ಅಧಿಕಾರಿಗಳೂ ಪ್ರಜೆಗಳೂ ಒಂದೇ ಮನಸ್ಸಿನಿಂದ ರಾಜರಿಗೆ ಸಹಕಾರಿಗಳಾಗಿದ್ದರು. ಮುಮ್ಮಡಿ ಕೆಂಪೇಗೌಡನ ಕಾಲಕ್ಕೆ ವಿಷ್ಣುದ್ವೇಷವಂಕುರಿಸಿ ಶೈವರಲ್ಲಿ ಅನುರಾಗವೂ ಇತರರಲ್ಲಿ ಔದಾಸೀನ್ಯವೂ ಹೆಚ್ಚಿತು. ಮುಖ್ಯಾಧಿಕಾರಿಗಳಲ್ಲಿ ಕೆಲವರಿಗೆ ವೈಮನಸ್ಯವುಂಟಾಯಿತು. ಈ ಸಂಧಿಯನ್ನು ಕಾದಿದ್ದ ಮೈಸೂರ ದೊರೆಗಳು ಗುಪ್ತವಾಗಿ ಸೈನ್ಯವನ್ನು ತಂದು ಮುಖ್ಯಮಾರ್ಗಗಳನ್ನು ಬಿಟ್ಟು ಪಶ್ಚಿಮಭಾಗದಲ್ಲಿ ಜೆನ್ನರಾಯನ ಬಾಗಿಲ ಬಳಿ ಕೋಟೆಯ ಗೋಡೆಗೆ ಕನ್ನವಿಕ್ಕಿ ಸೈನ್ಯವನ್ನು ಒಳಕ್ಕೆ ತಂದು ವೀರಭದ್ರನಾಯಕನನ್ನು ಸೆರೆಹಿಡಿದರು. ಮಾಗಡಿಯಲ್ಲಿದ್ದ ಮುಮ್ಮುಡಿ ಕೆಂಪೇಗೌಡನಿಗೆ ಈ ಸಮಾಚಾರವು ತಿಳಿಯಲು ತಕ್ಷಣ ಅವನು ಏಕಾಂಗಿಯಾಗಿ ಹೊರಟು ದಿಡ್ಡಿ ಬಾಗಿಲಿನಿಂದ ನೆಲಪಟ್ಟಣಕ್ಕೆ ಪ್ರವೇಶಮಾಡಿ ತನ್ನ ಸೈನ್ಯವನ್ನು ಕೂಡಿಕೊಂಡು ಮೈಸೂರ ಸೈನ್ಯದ ಮೇಲೆ ಬೀಳಬೇಕೆಂದು ಬರುತ್ತಿರುವಷ್ಟರಲ್ಲಿ ಮೈಸೂರ ದಳವಾಯಿಯು ಅವನನ್ನೂ ಸೆರೆಹಿಡಿದನು. ಈ ಸಮಾಚಾರವು ತಕ್ಷಣದಲ್ಲಿಯೇ ಹರಡಿ, ಗಡಿಗಳಲ್ಲಿಯೂ ದುರ್ಗದ ಮೇಲೆಯೂ ಇದ್ದ ಸೈನ್ಯವೆಲ್ಲಾ ಒಟ್ಟುಗೂಡಿ ಮೈಸೂರ ಸೈನ್ಯದ ಮೇಲೆ ಬಿದ್ದು ವೀರಾವೇಶದಿಂದ ಯುದ್ಧಮಾಡುತ್ತಿದ್ದಿತು. ಹೊಸದಾಗಿ ಹಿಂದಿನಿಂದ ಮೈಸೂರ ಸೈನ್ಯವು ಬಂದು ಕೂಡಿತು. ಗೌಡನೂ ಮುಖ್ಯಸೈನ್ಯಾಧಿಪತಿಯೂ ಶತ್ರುಗಳ ಕೈವಶವಾದುದರಿಂದ ಹತಶೇಷರಾದ ಸೈನಿಕರು ನಿರುತ್ಸಾಹಿಗಳಾಗಿ, ಶಕ್ತಿಯಿದ್ದಷ್ಟೂ ಕಾದಿ ಪರಾಜಿತರಾದರು. ಮೈಸೂರ

ದೊರೆಯು ದುರ್ಭೇದ್ಯವಾಗಿದ್ದ ನೆಲಪಟ್ಟಣ ಸಾವನದುರ್ಗಗಳನ್ನು ಸುಲಭವಾಗಿ ಸ್ವಾಧೀನಪಡಿಸಿಕೊಂಡು ಅಲ್ಲಿದ್ದ ಸಕಲಸಂಪತ್ತಿನೊಡನೆ ಕೆಲವು ಮಂದಿ ಮುಖ್ಯಾಧಿಕಾರಿಗಳನ್ನೂ, ಕೆಂಪೇಗೌಡನನ್ನೂ ಹಿಡಿದುಕೊಂಡುಹೋಗಿ ಸಂಸಾರಸಮೇತ ಶ್ರೀರಂಗಪಟ್ಟಣದಲ್ಲಿ ೧೭೨೮ಲ ರಲ್ಲಿ ಸೆರೆಯಿಟ್ಟನು. ಅಂದಿನಿಂದ ಅವನ ದೊರೆತನವು ಕೊನೆಗಂಡಿತು.

ಮಾಗಡಿ ರಾಜ್ಯವು ಮೈಸೂರಿಗೆ ಸೇರಿಹೋಯಿತು. ನೆಲಪಟ್ಟಣವು ಪಾಳು ಬಿದ್ದಿತು. ಮಹಾರಣ್ಯಮಧ್ಯದಲ್ಲಿರುವ ಈ ಪ್ರದೇಶವು ವಿವಿಧವೃಕ್ಷಲತೆಗಳಿಂದ ಫಲಪುಷ್ಪಭರಿತವಾಗಿ, ಗೆಡ್ಡೆ ಗೆಣಸುಗಳೂ, ಜಲಾಶಯಗಳೂ ಉಳ್ಳದಾಗಿ ನಾನಾ ವಿಧ ಪಕ್ಷಿಸಮೂಹಗಳಿಂದಲೂ, ಹುಲಿ, ಕರಡಿ, ಚಿರತೆ, ಹಂದಿ ಮೊದಲಾದ ಕಾಡು ಮೃಗಗಳಿಂದಲೂ ಕೂಡಿದುದಾಗಿ ಮಹರ್ಷಿಗಳ ತಪೋವನವಾಗಿ ಶಾಂತಸ್ಥಳವಾಗಿರುತ್ತದೆ. ಈಗ ೨೦ ಸಂವತ್ಸರಗಳ ಹಿಂದೆಯೂ ಈ ಸ್ಥಳದಲ್ಲಿ ಹುಲಿ, ಚಿರತೆಗಳೊಡನೆ ಹಸು, ಕುರಿ, ಮೇಕೆಗಳು ನಿರ್ಭಯವಾಗಿ ಸಂಚರಿಸುತ್ತಿದ್ದುವಂತೆ. ಈಗಲೂ ರಾತ್ರಿ ಶ್ರೀನರಸಿಂಹಸ್ವಾಮಿಯ ದೇವಸ್ಥಾನದ ಬಳಿಗೆ ನಿತ್ಯವೂ ದೊಡ್ಡ ಹುಲಿಗಳು ಬಂದು ಹೋಗುತ್ತಿವೆ. ಅಲ್ಲಿರುವ ಅರ್ಚಕರ ಮನೆಗಳಲ್ಲಿರುವ ಹಸು, ಎತ್ತು, ಕುದುರೆ, ಕುರಿ, ಮೇಕೆಗಳನ್ನು ಅವು ಕೊಲ್ಲುವುದಿಲ್ಲ. ಶ್ರೀ ವೀರಭದ್ರದೇವರಿಗೆ ಮಾಘಮಾಸದಲ್ಲಿಯೂ, ಶ್ರೀ ನರಸಿಂಹದೇವರಿಗೆ ಫಾಲ್ಗುಣಮಾಸದಲ್ಲಿಯೂ ರಥೋತ್ಸವವಾಗುತ್ತಿದೆ. ಶ್ರೀ ವೀರಭದ್ರದೇವರಿಗೆ ಸರ್ಕಾರದ ತಸ್ತೀಕಿದೆ. ಶ್ರೀ ನರಸಿಂಹದೇವರಿಗೆ ಭಕ್ತಾದಿಗಳಿರುವುದರಿಂದ ಉತ್ಸವಾದಿಗಳು ಬಹುವಿತರಣೆಯಿಂದ ನಡೆಯುತ್ತಿವೆ. ಶ್ರೀ ವೀರಭದ್ರದೇವಸ್ಥಾನಕ್ಕೆ ಉತ್ತರದಿಕ್ಕಿನಲ್ಲಿ ಒಂದು ಸಣ್ಣ ಕೊಳವೂ, ಕಲ್ಲು ಕಟ್ಟಿರುವ ಸೇದುವ ಭಾವಿಯೂ, ಬಯಲಿನಲ್ಲಿ ಎಡದ ಕೈಯನ್ನು ಎತ್ತಿಕೊಂಡು ನಿಂತಿರುವ ಶ್ರೀ ಆಂಜನೇಯದೇವರ ಮೂರ್ತಿಯೂ ಇವೆ. ಈ ದೇವರುಗಳ ಸೇವೆಗಾಗಿ ಭಕ್ತಾದಿಗಳು ವಿಶೇಷವಾಗಿ ಬರುತ್ತಿರುತ್ತಾರೆ. ಇಲ್ಲಿರುವ ಸಾತ್ವಿಕವೈಷ್ಣವರು ಬಹು ಭಕ್ತಿಯಿಂದ ದೇವರ ಪೂಜೆಯನ್ನು ಮಾಡಿಕೊಂಡು ಕೇಳಿದವರಿಗೆ ಸ್ಥಳರಹಸ್ಯಗಳನ್ನು ತಿಳಿಸುತ್ತಾರೆ. ಈ ಸ್ಥಳಕ್ಕೆ ಬಂದು ನೋಡಿದವರಿಗೆ ಅಪೂರ್ವವಾದ ಸುಖಶಾಂತಿಗಳು ಗೋಚರವಾಗುತ್ತವೆ. ಇಲ್ಲಿಯ ತೀರ್ಥಸ್ನಾನ, ದೇವತಾಸೇವೆಗಳಿಂದ ದೈವಭಕ್ತಿಯು ಅಧಿಕವಾಗುತ್ತದೆ. ದುರ್ಗವನ್ನು ಹತ್ತಿನೋಡಿ ನೆಲಪಟ್ಟಣದ ಸ್ಥಿತಿಯನ್ನು ತಿಳಿಯುವುದರಿಂದ ಕೆಂಪೇಗೌಡನು ಎಂತಹ ಮಹಾಪುರುಷನು, ಎಂತಹ ಕಷ್ಟಸಾಧ್ಯವಾದ

ಕೆಲಸಗಳನ್ನು ಮಾಡಿರುವನು ಎಂಬುದು ವೇದ್ಯವಾಗಿ, ಸ್ವಾತಂತ್ರ್ಯಾಭಿಲಾಷೆಯೂ, ಪೂರ್ವೀಕರಲ್ಲಿ ಮರ್ಯಾದೆಯೂ, ದೇಶಾಭಿಮಾನವೂ ಉಕ್ಕೇರುತ್ತದೆ.

ಮುಮ್ಮಡಿ ಕೆಂಪೇಗೌಡನ ಪ್ರಭುತ್ವದಲ್ಲಿ ಮಾಗಡಿಯಲ್ಲಿದ್ದ ವೆಲನಾಡು ವೇ॥ಬ್ರ॥ಶ್ರೀ ಏಕಾಂಬರಶಾಸ್ತ್ರಿಗಳವರು ಸಾವನದುರ್ಗದ ಶ್ರೀ ವೀರಭದ್ರದೇವರನ್ನು ಈ ದೊರೆಗಳು ಮನೆದೇವರಾಗಿ ಪೂಜಿಸುತ್ತಿದ್ದ ವಿಷಯವನ್ನು ಕುರಿತು" ವೀರಭದ್ರವಿಜಯ " ವೆಂಬ ಒಂದು ಚಂಪೂಗ್ರಂಥವನ್ನು ಸಂಸ್ಕೃತಭಾಷೆಯಲ್ಲಿ ರಚಿಸಿ, ರಾಜರಿಗೊಪ್ಪಿಸಿ, ಅವರಿಂದ ಐದು ಗ್ರಾಮಗಳನ್ನು ಪಡೆದು, ಆಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಆ ಗ್ರಂಥವು ಅಚ್ಚಾಗದೆ ತಾಳೆಯೋಲೆಯ ಪುಸ್ತಕದಲ್ಲಿ ಶಿಥಿಲವಾಗುತ್ತಿದ್ದುದನ್ನು ಕಂಡು ಈಗ ಮಾಗಡಿಯಲ್ಲಿರುವ ವೇ॥ ಬ್ರ॥ ಶ್ರೀ ನಂಜುಂಡಶಾಸ್ತ್ರಿಗಳವರ ಸತ್ಪುತ್ರರಾದ ವೇ॥ ಬ್ರ॥ ಶ್ರೀ ಕೃಷ್ಣಶಾಸ್ತ್ರಿಗಳವರು ಅದಕ್ಕೆ ಮನೋರಂಜನೀಯೆಂಬ ಕನ್ನಡದ ಟೀಕನ್ನು ಬರೆದು ಪ್ರಕಟಿಸುವುದಕ್ಕೆ ಸಿದ್ಧಪಡಿಸಿರುತ್ತಾರೆ. ಆ ಗ್ರಂಥದಲ್ಲಿರುವ ಕೆಂಪೇಗೌಡನ ಪ್ರಭಾವವರ್ಣನೆಯನ್ನು ಪಾಠಕರ ಸೌಕರ್ಯಕ್ಕಾಗಿ ಈ ಕೆಳಗೆ ಉದ್ಧರಿಸಿದ್ದೇವೆ.

೧. ಯಲಹಂಕವಂಶನಾಮಾ ನೃಪವಂಶೋಸ್ತೀಹ ಯದ್ಭವಾ ಭೂಪಾಃ ।
ಕರ್ಣಾಟರಾಜ್ಯಲಕ್ಷ್ಮೀಕೋಟೀರನಿಬದ್ಧಮೌಕ್ತಿಕಪ್ರಖ್ಯಾಃ ॥

೨. ತಸ್ಮಿನ್ನಾಸೀದಮಿತಮಹಿಮಾ ಪೆದ್ದಕೆಂಪೇಂದ್ರನಾಮಾ ।
ರಾಜಾ ರಾಜದ್ಗುಣಸಮುದಯೋ ರಮ್ಯಕೀರ್ತಿಪ್ರತಾಪಃ ॥
ಪ್ರತ್ಯಗ್ರಾಭಿರ್ವಿಶದರುಚಿಭಿರ್ಯದ್ಯಶೋಮಂಜರೀಭಿಃ ।
ಕರ್ಣಾಟಾಂಧ್ರದ್ರವಿಡವನಿತಾಕರ್ಣಪೂರಾನ್ವ್ಯತರ್ನ್ಷೀ ॥

೩. ದುಗ್ಧಾಬ್ಧೇರ್ಲಹರೀ ಯಥಾ ಹಿಮಕರಂ ಶುಕ್ತಿರ್ಯಥಾ ಮೌಕ್ತಿಕಂ ।
ಶೌರ್ಯಶ್ರೀರ್ವಿಜಯಂ ಯಥಾಪ್ಯುಪನಿಷದ್ದೇವೀ ಪ್ರಬೋಧಂ ಯಥಾ ॥
ಧನ್ಯಾ ಸಾ ಸಮಸೂತ ಪುತ್ರಮನಘಂ ಶ್ರೀಕೆಂಪಮಾಂಬಾಭಿಧಾ ।
ಶ್ರೀಮನ್ಮುಮ್ಮಡಿಕೆಂಪರಾಯನೃಪತಿಂ ಸಿಂಹಸ್ಫುರದ್ವಿಕ್ರಮಂ ॥

೪. ಯಸ್ಯಾಜ್ಞಾಂ ಶಿರಸಾ ವಹಂತಿ ಸಕಲಾಸ್ಸಾಮಂತಭೂಮೀಶ್ವರಾಃ ।
ಯಸ್ಯಾಹುರ್ಲಿಖಿತಂ ವಿರಿಂಚಲಿಪಿವದ್ವಿಸ್ರಂಭಣೀಯಂ ಬುಧಾಃ ॥
ದೃಷ್ಟಿರ್ಯಸ್ಯ ಪರಾಂಗನಾಸು ಪತಿತಾ ದೂರಂ ಪರಾವರ್ತತೇ ।
ತಸ್ಮಾನ್ಮುಮ್ಮಡಿಕೆಂಪರಾಯನೃಪತೇರ್ಧನ್ಯಃ ಕಿಮನ್ಯೋ ಭುವಿ ॥

೫. ನಾನಾಭಾಷಾವಿಶೇಷಗ್ರಥಿತಮೃದುತರೋದಾರಚಿತ್ರಾಸುಧಾರಾ ।
ಧಾರಾಳಪ್ರೌಢಿಮಾಢ್ಯಾಂಕಿತನವಕವಿತಾಗುಂಭಪುಂಭಾವವಾಣೀ ॥

ಆಸೀದಾಸೇತುಸೀತಾಚಲಮಹಿತಗುಣೋಃ ವೈಭವಾಖಂಡಲಾಭೋಃ ।
ಲಾಭೋಃ ವಾಂಛಾಫಲಾನಾಮಿವ ಭುವಿ ಸುಧಿಯಾವಿಮ್ಮಡೀಹಿರ್ಯಕೆಂಪಃ ॥

೬. ರಮ್ಯಾನ್ವಯಂ ಮಧುರವೃತ್ತಿಮುದಾರರೀತಿಂ ।
ಸಾಲಂಕೃತಿಂ ಸಗುಣಮರ್ಥಗಭೀರಿಮಾಢ್ಯಂ ॥
ಕಾವ್ಯಂ ಕವೇರಿವ ಗಿರಾ ಕಥಯಂತಿ ನಿತ್ಯಂ ।
ಶ್ರೀಹಿರ್ಯಕೆಂಪನೃಪತಿಂ ಸರಸಾಃ ಕವೀಂದ್ರಾಃ ॥

೭. ಯಶ್ಚ ಪುಂಡರೀಕಾಕ್ಷೋಽಪಿ ನ ಜನಾರ್ದನಃ, ಚತುರಾನನೋಽಪಿ ನ ಪಂಕಜಾತಪ್ರಭವಃ, ಸ್ನಿಗ್ಧತೇಜಾಅಪಿ ನ ಕುವಲಯಾಹಿತಃ, ಕಳಾನಿಧಿರಪಿ ನ ದೋಷಾಕರಃ, ವಿಷಮಾಯುಧೋಽಪಿ ನ ಸುಮನಃಪ್ರಹರಣಃ, ಜಿಷ್ಣುರಪಿ ನ ಗೋತ್ರಭೇದೀ, ಶುಚಿರಪಿ ನ ದೇವಸ್ವಹರ್ತಾ, ಧರ್ಮರಾಜೋಽಪಿ ನ ಕಾಲಸಮಾಖ್ಯಃ, ಕರ್ಬುರಾಭಿಖ್ಯೋಽಪಿ ನ ಸನ್ನಿಕಷೋದಯಃ, ಪ್ರಚೇತಾ ಅಪಿ ನ ಜಲಾಧಿಪಃ, ಸದಾಗತಿರಪಿ ನಾನಿಲಃ, ಧನದೋಽಪಿ ನ ಕುಬೇರಃ, ರಾಜಶೇಖರೋಽಪಿ ನ ಕ್ರತುಧ್ವಂಸೀ, ವಿಚಿತ್ರಚಾರಿತ್ರಃ ॥

೮. ಪ್ರತಿಭಾವಿಬುಧಾಮಾತ್ಯೋಃ ಬಲಸಾಹಸಹಸಿತವಿಕ್ರಮಾದಿತ್ಯಃ ।
ಸಜಯತಿ ವಿಚಿತ್ರಕೃತ್ಯೋಃ ಮುಮ್ಮಡಿಕೆಂಪಾಹ್ವಯೋಃ ನೃಪೈಃ ಸ್ತುತ್ಯಃ ॥

೯. ಜನಭರಣಧುರೀಣಸ್ಸರ್ವವಿದ್ಯಾಪ್ರವೀಣಃ ।
ಕರಕಲಿತಕೃಪಾಣಃ ಕಾಮಿನೀಪಂಚಬಾಣಃ ॥
ಜಯತಿ ಮುಮಡಿಕೆಂಪಃ ಛಾಯಯಾ ಧೂತಶಂಪಃ ।
ಪರಿಹೃತರಣಕಂಪಃ ಪಾಲಿತಕ್ಷ್ಮಾನಿಲಿಂಪಃ ॥

ಈ ವೀರಭದ್ರವಿಜಯದಲ್ಲಿ ಕೆಂಪೇಗೌಡರೆಂಬ ಹೆಸರುಳ್ಳವರು ಎಂಟು ಮಂದಿ ರಾಜ್ಯಪಾಲನೆ ಮಾಡಿ ಪ್ರಸಿದ್ಧರಾಗಿರುತ್ತಾರೆಂದು ಹೇಳಿರುವುದು. ಇವರೆಲ್ಲರೂ ಅನೇಕಮಹತ್ಕಾರ್ಯಗಳನ್ನು ಮಾಡಿರುತ್ತಾರೆ. ಒಬ್ಬೊಬ್ಬರ ಆಳ್ವಿಕೆಯ ವಿಷಯವಾಗಿಯೂ ಸಣ್ಣ ಸಣ್ಣ ಚರಿತ್ರೆಗಳೂ ಕವನಗಳೂ ಇರುವುವು. ಅವರುಗಳೆಲ್ಲರ ಕಾಲವೂ ಪರಿಷ್ಕಾರವಾಗಿ ತಿಳಿಯಬಂದಿರುವುದಿಲ್ಲ. ಎಲ್ಲವನ್ನೂ ಕೆಂಪೇಗೌಡರೇ ಮಾಡಿದರೆಂದು ವಾಡಿಕೆಯಿದೆ. ಈ ದೇಶದ ಪುರಾತನ ಚರಿತ್ರೆಯನ್ನು ಶೋಧಿಸಿ ಮೈಸೂರು ಗೆಜೆಟಿಯರ್ ಎಂಬ ಗ್ರಂಥವನ್ನು ಪ್ರಕಟಿಸಿರುವ ಮೆ|| ಬಿ. ಎಲ್. ರೈಸ್‌ರವರು ಕೆಂಪೇಗೌಡರ ಚರಿತ್ರೆಯಲ್ಲಿ ವ್ಯತ್ಯಾಸಗಳನ್ನು ತೋರಿಸಿರುವುದರಿಂದ ಈಗ ಜನಗಳು ಕೆಂಪೇಗೌಡನನ್ನುಕುರಿತು ಹೇಳಿಕೊಳ್ಳುವ ಸಂಗತಿಗಳು ಆವ ಕೆಂಪೇಗೌಡನಿಗೆ ಸಂಬಂಧಪಟ್ಟುವೆಂಬುದನ್ನು ನಿರ್ಧರಿಸುವುದು ಸಾಧ್ಯವಲ್ಲವಾಗಿದೆ. ಆದರೆ ೧, ೨, ೩ ನೆಯ ಕೆಂಪೇಗೌಡರ ರಾಜ್ಯ

ಭಾರಗಳ ವಿಷಯವಾಗಿ ಶಾಸನಗಳು ಇರುವುದರಿಂದ ಅವರ ಚರಿತ್ರೆಯೂ ನಡೆಯಲು ಅವಕಾಶವಾಯಿತು. ಮಾಗಡಿಯಲ್ಲಿರುವ ಗವಿಯ ಗಂಗಾಧರೇಶ್ವರಸ್ವಾಮಿ ದೇವಸ್ಥಾನವೂ, ಬೈಚಾಪುರದ ಚಲುವರಾಯಸ್ವಾಮಿ ದೇವಸ್ಥಾನವೂ ಕೆಂಪೇಗೌಡನು ಕಟ್ಟಿಸಿದುವುಗಳು. ಮಾಗಡಿಗೆ ಪಶ್ಚಿಮಕ್ಕೆ ೯ ಮೈಲಿ ದೂರದಲ್ಲಿ ಹುಲಿಯೂರು ದುರ್ಗದ ಮಾರ್ಗದಲ್ಲಿರುವ ಚಾಪಾಮುದ್ರೀ ಕೆರೆಯೂ, ದಕ್ಷಿಣ ದಿಕ್ಕಿನಲ್ಲಿರುವ ಬರ್ಗಾವತಿ ಕೆರೆಯೂ ಕೆಂಪೇಗೌಡನ ಉಪಪತ್ನಿಯರು ತಮ್ಮ ಹೆಸರುಗಳಲ್ಲಿ ಕಟ್ಟಿಸಿದುವುಗಳು. ಚಾಪಾಮುದ್ರೀ ಕೆರೆಯಲ್ಲಿ ಎಂದಿಗೂ ನೀರು ಬತ್ತುವುದಿಲ್ಲ. ಕೆಂಪೇಗೌಡರು, ದೇವಸ್ಥಾನಗಳಿಗೂ, ಬ್ರಾಹ್ಮಣರಿಗೂ, ಜಂಗಮಮಠಗಳಿಗೂ ವಿಶೇಷವಾಗಿ ಗ್ರಾಮಭೂಮಿಗಳನ್ನು ದಾನ ಮಾಡಿರುತ್ತಾರೆ. (ಆ ವಿಚಾರವಾಗಿ ಹುಟ್ಟಿದ ಶಾಸನಗಳನ್ನು ಅನುಬಂಧದಲ್ಲಿ ಮುದ್ರಿಸಿದ್ದೇವೆ.)

ಮುಮ್ಮಡಿ ಕೆಂಪೇಗೌಡರ ಕಾಲದ ಪ್ರಜೆಗಳ ಸ್ಥಿತಿಯನ್ನು ಈ ರೀತಿ ವರ್ಣಿಸಿರುತ್ತಾರೆ.

ಸರ್ವೇ ದಾಕ್ಷಿಣ್ಯಯುಕ್ತಾಸ್ಸಕಲಜನಮನೋರಂಜನಾಯತ್ತಚಿತ್ತಾಃ ।
ಸರ್ವೇ ಸಂಪೂರ್ಣಕಾಮಾಸ್ಸಮುಚಿತವಿಮಲಾಚಾರಮಾರ್ಗೈಕನಿಷ್ಠಾಃ ॥
ಸರ್ವೇ ನಿರ್ವೈರಲೇಶಾಸ್ಸಮುಪಚಿತಕೃಪಾಸಿಂಧವೋ ಬಂಧುವರ್ಗೇ ।
ಸರ್ವೇ ಸೌಹಾರ್ದ್ರಸಾಂದ್ರಸ್ಫುಟರಚನವಚೋವೀಚಿವಾಚಾಲವಕ್ತ್ರಾಃ ॥

ಕೋಟೆಯಲ್ಲಿ ರಾಮೇಶ್ವರದೇವಸ್ಥಾನದ (ಪಶ್ಚಿಮ ದಕ್ಷಿಣ) ನೈಋತ್ಯ ದಿಕ್ಕಿನಲ್ಲಿ ಕೆಂಪೇಗೌಡನ ಅರಮನೆಯಿದ್ದ ಗುರುತುಗಳು ಇವೆ. ಕೆಂಪೇಗೌಡನ ರಾಜ್ಯಕಾಲದಲ್ಲಿ ಕಛೇರಿಗಳೆಲ್ಲಾ ಕೋಟೆಯಲ್ಲಿಯೇ ನಡೆಯುತ್ತಿದ್ದಿತೆಂದು ಪಾರ್ವತೀವಿಗ್ರಹದ ಪೀಠದಲ್ಲಿ ಬರೆದಿದೆ.

ಸೋಮೇಶ್ವರದೇವಸ್ಥಾನದ ಎಡಬಲಗಡೆಗಳಲ್ಲಿ ೨ ಹಜಾರಗಳಿವೆ. ಒಂದಕ್ಕೆ ಕೆಂಪೇಗೌಡನ ಹಜಾರವೆಂದೂ ಮತ್ತೊಂದಕ್ಕೆ ದೇವರಾಯರ ಹಜಾರವೆಂದೂ ಹೆಸರು. ಅದರ ಮುಂದಣ ಜಗಲಿಯ ಕಂಭಗಳೊಂದರಲ್ಲಿ ೧॥ ಅಡಿ ಪ್ರಮಾಣದ ಶಿಲಾಕೃತಿ ಇದೆ. ಇದು ಮೂಲಪುರುಷ ಕೆಂಪೇಗೌಡನದೆಂತ ಹೇಳುತ್ತಾರೆ. ರಂಗನಾಥದೇವರ ಎಡಬಲಗಡೆಗಳಲ್ಲಿ ಎಲ್ಲಾ ಕಡೆಯೂ ಇರುವಂತೆ ಶ್ರೀದೇವಿ ಭೂದೇವಿಗಳ ಪ್ರತಿಮೆಗಳು ಕಾಣುವದಿಲ್ಲ. ಈ ದೇವರ ಪೂಜೆಯನ್ನೂ ಎಲ್ಲಾ ದೇವಸ್ಥಾನಗಳ ಗರ್ಭಗುಡಿಯ ಪರಿಚಾರಿಕೆಯ ಕೆಲಸಗಳನ್ನೂ ಬಹು ಕಾಲದಿಂದ ಬ್ರಾಹ್ಮ

ಣರಿಂದಲೇ ನಡೆಸುತ್ತ ಸಾತಾನಿಗಳಿಂದ ತುಳಸಿ, ಪುಷ್ಪ, ಮುಂತಾದ ಕೆಲಸಗಳನ್ನು ಮಾತ್ರ ನಡೆಸುತ್ತಿದ್ದರು. ದೇವಸ್ಥಾನದ ಪೂರ್ವಪಾರ್ಶ್ವದ ಪ್ರಾಕಾರದ ಒಂದು ಗೋಪುರವು ಗೌಡರ ಕಾಲದಲ್ಲಿ ಖಿಲ್ಲೆದಾರಿ ಮಾಡುತ್ತಿದ್ದ ಹುಸೇಙ್ ಖಾಙ್ ಎಂಬ ಮುಸಲ್ಮಾಙ್ ಭಕ್ತನಿಂದ ಕಟ್ಟಿಸಲ್ಪಟ್ಟಿದೆ. ವರದರಾಜದೇವಸ್ಥಾನವನ್ನು ವೃದ್ಧಾಪ್ಯದಿಂದ ಕಂಚಿಗೆ ಹೋಗಲಾರದ ತನ್ನ ತಾಯಿಗಾಗಿ ಕೆಂಪೇಗೌಡನು ಕಟ್ಟಿಸಿದನೆಂದು ಹೇಳುತ್ತಾರೆ. ಇದರ ಸಮೀಪದಲ್ಲಿ ಮುಮ್ಮಡಿಗೌಡನ ಪುರವಿದೆ. ಇದನ್ನು ಮುಮ್ಮಡಿ ಕೆಂಪೇಗೌಡನು ಕಟ್ಟಿಸಿದನು. ಮಾಗಡಿಯ ಸುತ್ತಲೂ ಸುಮಾರು ೩೦೦ ಮಠಗಳನ್ನು ಯಲಹಂಕನಾಡ ವಂಶೀಯರು ಕಟ್ಟಿದರು. ಕೆಂಪಸಾಗರದ ಲಿಂಗಾಯತಮಠದ ಒಂದು ಕಂಭದಲ್ಲಿ ಸೋಮೇಶ್ವರದೇವಸ್ಥಾನದಲ್ಲಿರುವಂತೆ ಆದಿ ಕೆಂಪೇಗೌಡನ ೧॥ ಅಡಿಯ ವಿಗ್ರಹವಿದೆ.

ಅಧ್ಯಾಯ—೬.

ಮಾಗಡಿ—ಹುಲಿಕಲ್ಲುದುರ್ಗ.

ಸಾವನದುರ್ಗದಲ್ಲಿ ಮಾಘಮಾಸದ ಶುಕ್ಲಪಕ್ಷದ ಪುಷ್ಯನಕ್ಷತ್ರದಲ್ಲಿ ನಡೆಯುವ ವೀರಭದ್ರಸ್ವಾಮಿಯ ರಥೋತ್ಸವಕ್ಕಾಗಿ ಮುಮ್ಮಡಿ ಕೆಂಪಭೂಪನ ಮಗ ದೊಡ್ಡವೀರಭೂಪನು ಅಲ್ಲಿಗೆ ಬಂದಿದ್ದ ವಿಷಯದಲ್ಲಿ ವೀರಭದ್ರವಿಜಯದಲ್ಲಿ ಈ ರೀತಿ ಬರೆದಿರುತ್ತದೆ.

ಚತುರಂಗಬಲದೊಡನೆ ಈ ಅರಸು ಆನೆಯ ಮೇಲೆ ಕುಳಿತು ಮುಂದೆ ಸಾಗುತ್ತಿದ್ದನು. ನಗರದ ಸಮೀಪದಲ್ಲಿ ಹರಿಯುವ ಅರ್ಕಾವತೀನದಿಯ ಮೇಲೆ ಬೀಸಿಕೊಂಡು ಬರುವ ಗಾಳಿಯು, ಶೈತ್ಯಸೌರಭ್ಯಮಾಂದ್ಯಗುಣಯುಕ್ತವಾಗಿ ಮಾರ್ಗಾಯಾಸವನ್ನು ಪರಿಹರಿಸುತ್ತಿದ್ದಿತು. ಅತಿಶಯವೈಭವದಿಂದ ಪ್ರಯಾಣಮಾಡುತ್ತಿರುವ ಅರಸು ನಗರವೀಧಿಯನ್ನು ಪ್ರವೇಶಿಸಿದನು. ಈತನನ್ನು ನೋಡಬೇಕೆಂಬ ಅಪೇಕ್ಷೆಯಿಂದ ಅಬಲೆಯರು ಸಡಗರದಿಂದ ಗುಂಪು ಸೇರುತ್ತಿದ್ದರು. ಜಾತ್ರೆಗೆ ನೆರೆದಿದ್ದ ಹಲವರು ಈತನು ಆರಿರಬಹುದು ಎಂದು ಪ್ರಶ್ನೆ ಮಾಡಲು, ಈ ಅರಸನ ವಂಶಾವಳಿಯನ್ನು ಅರಿತ ಆ ಸ್ಥಳದ ಜನಗಳು ಈ ಬಗೆಯಲ್ಲಿ ಹೇಳತೊಡಗಿದರು :—

ಯಲಹಂಕವಂಶವೆಂಬ ಒಂದು ನೃಪವಂಶವು ಪ್ರಸಿದ್ಧವಾಗಿದ್ದಿತು. ಆ ವಂಶದ ಅರಸರು ಕರ್ಣಾಟರಾಜ್ಯಲಕ್ಷ್ಮೀಕೋಟೀರನಿಬದ್ಧವಾದ ಮೌಕ್ತಿಕದಂತೆ ಪ್ರಖ್ಯಾತರಾಗಿದ್ದರು. ಆ ವಂಶದಲ್ಲಿ ಹಿರಿಯ ಕೆಂಪ ಎಂಬ ಪ್ರಭುವು ಉದಿಸಿದನು. ಆತನ ಯಶೋಮಂಜರಿಯು ಕರ್ಣಾಟಾಂಧ್ರದ್ರವಿಡವನಿತೆಯರ ಕರ್ಣಪೂರವೆನಿಸಿ ಶೋಭಿಸುತ್ತಿದ್ದಿತು. ಆತನು ತನ್ನ ಬಾಹುವಿನಲ್ಲಿ ಸೆಲಸಿದ ಖಡ್ಗದ ಸಹಾಯದಿಂದ ಹಗೆಯನ್ನೆಲ್ಲ ನಿರ್ಮೂಲನಮಾಡಿದನು. ಆತನಿಗೆ ಇಮ್ಮಡಿ ಕೆಂಪನೆಂಬ ಮಗನು ಅವಿರ್ಭವಿಸಿದನು. ವೀರನಾದ ಆ ಅರಸು ಶ್ರೀರಂಗಪಟ್ಟಣದ ಶ್ರೀರಂಗರಾಯನನ್ನು ತನ್ನ ತೋಳ್ಬಲದಿಂದ ಜಯಿಸಿ ಕೆಲವು ಆನೆ ಕುದುರೆಗಳನ್ನು ಸೆಳೆತಂದನು. ಆತನಿಗೆ ಕೆಂಪಮ್ಮ, ಲಿಂಗಮ್ಮ ಎಂಬ ಈರ್ವರು ಪತ್ನಿಯರು. ಅವರಲ್ಲಿ ಹಿರಿಯವಳಾದ ಕೆಂಪಮ್ಮನ ಗರ್ಭಾಂಬುಧಿಯಲ್ಲಿ ಸಿಂಹವಿಕ್ರಮನಾದ ಮುಮ್ಮಡಿ ಕೆಂಪರಾಯ ನೃಪನು ಉದ್ಭವಿಸಿದನು. ಈತನು ಯುದ್ಧರಂಗದಲ್ಲಿ ಇದಿರಿಸಿದ ಷಹಜಿ ಎಂಬುವನನ್ನು ಆರೇಳು ತಡವೆ ಜಯಿಸಿ ಅವನ ಬಿರುದಗಳನ್ನೆಲ್ಲ ಕಿತ್ತುಕೊಂಡನು. ಮೈಸೂರ ಕಂಠೀರವನರಸರಾಜರನ್ನು ಜಯಿಸಿದನು. ವೀರಭದ್ರಸ್ವಾಮಿಯ ಆಜ್ಞೆಯಂತೆ ಭಕ್ತನೊಬ್ಬನಿಗೆ ಕಣ್ಣನ್ನು ಕೊಟ್ಟು ತಾನು ಸುಬ್ರಹ್ಮಣ್ಯಾಂಶಸಂಭೂತನೆಂಬ ವಿಷಯವನ್ನು ಪ್ರಕಟಗೊಳಿಸಿದನು. ಹಲಸ ಕ್ಷೀರೇಂದ್ರನು ಇವನ ತಮ್ಮನು. ಇವನ ೨ನೆಯ ಹೆಂಡತಿಯಾದ ಲಿಂಗಾಂಬೆಯ ಗರ್ಭದಲ್ಲಿ ಇಮ್ಮಡಿ ಹಿರಿಯ ಕೆಂಪನೃಪತಿಯು ಜನಿಸಿದನು. ಈತನು ನಾನಾಭಾಷೆಗಳಲ್ಲಿ ಕವಿತ್ವವನ್ನು ಮಾಡತಕ್ಕ ಶಕ್ತಿಯನ್ನು ಪಡೆದಿದ್ದನು. ಈ ಮೂವರಲ್ಲಿ ಮುಮ್ಮಡಿ ಕೆಂಪನೃಪತಿಗೆ ನಾಲ್ವರು ಮಕ್ಕಳು; ಉಳಿದವರಿಗೆ ಸಂತಾನವಿಲ್ಲ. ಈ ಮುಮ್ಮಡಿ ಕೆಂಪನೃಪನ ಹಿರಿಯ ಹೆಂಡತಿ ಬಸವಾಂಬೆಯ ಗರ್ಭದಲ್ಲಿ, ಇಮ್ಮಡಿ ಕೆಂಪ, ದೊಡ್ಡವೀರ ಎಂಬಿಬ್ಬರು ಮಕ್ಕಳೂ ಎರಡನೆಯವಳಾದ ತೋಟದಮ್ಮನ ಗರ್ಭದಲ್ಲಿ ಹಲಸನೂ, ಮೂರನೆಯವಳಾದ ಬೈಯಮಾಂಬೆಯಲ್ಲಿ ಮುಮ್ಮಡಿ ಕೆಂಪನೆಂಬ ಮಗನೂ ಹುಟ್ಟಿದರು. ಈ ದೊಡ್ಡವೀರನು ತನ್ನ ಪತ್ನಿಯಾದ ಮುದ್ದುವೀರಮಾಂಬೆಯ ಮಗನಾದ ಮುಮ್ಮ ಕೆಂಪನೊಡನೆ ಉತ್ಸವಕ್ಕೆ ಬಿಜಯಮಾಡಿಸಿದ್ದನು.

ಲಿಂಗಮಾಂಬೆಯ ಮಗನಾದ ಇಮ್ಮಡಿ ಹಿರಿಯಕೆಂಪನೃಪನು ಅನೇಕಭಾಷೆಯಲ್ಲಿ ಕವಿತ್ವಮಾಡುತ್ತಿದ್ದನು. ದೊಡ್ಡವೀರ ನೃಪನು ಪತ್ನೀಪುತ್ರಸಮೇ

ತನಾಗಿ ವೀರಭದ್ರಸ್ವಾಮಿಯ ರಥೋತ್ಸವಕ್ಕೆ ಬಂದಿದ್ದನು. ಇಮ್ಮಡಿ ಕೆಂಪ ನೃಪನ ಹೆಂಡತಿ ಮುದ್ದು ವೀರಮಾಂಬೆಯಲ್ಲಿ ಜನಿಸಿದ ಮುಮ್ಮಡಿ ಕೆಂಪನೃಪನು ಗ್ರಂಥಕರ್ತನೂ ಸಭೆಗೆ ಭೂಷಣಪ್ರಾಯನೂ ಆಗಿದ್ದನು ಎಂದು ವೀರಭದ್ರ ವಿಜಯದಲ್ಲಿ ವಿವರಿಸಿದೆ.


ಈಚೆಗೆ ಗವರ್ನಮೆಂಟ್ ಮುದ್ರಾಲಯದ ಸರ್ವಾಧಿಕಾರಿಗಳಾದ ಬಿ. ಪುಟ್ಟಯ್ಯ ಬಿ. ಎ. ಯವರು ಮಾಗಡಿ ತಾಲ್ಲೂಕು ಹುಲಿಕಲ್ಲು ಪಾಳೆಯಗಾರರಾದ ಶ್ರೀ|| ಚಿಕ್ಕಪ್ಪಯ್ಯನವರಿಂದ ಆರು ಓಲೆಗಳನ್ನು ಪಡೆದು Archaeological Researches ಆಫೀಸಿಗೆ ಕಳುಹಿಸಿ ಇರುತ್ತಾರೆ. ಅದರ ಮೊದಲ ೨ ಓಲೆಗಳಲ್ಲಿ ಹುಲಿಕಲ್ಲ ಸಂಸ್ಥಾನೀಕರಾದ ಯಲಹಂಕನಾಡ ಪ್ರಭುಗಳ ವಂಶವೂ, ಉಳಿದ ನಾಲ್ಕು ಓಲೆಗಳಲ್ಲಿ ಮಾಗಡಿ ಕೆಂಪೇಗೌಡರ ವಂಶಚರಿತ್ರವೂ ಇದೆ. ಒಂದನೆಯದು ಕನ್ನಡದಲ್ಲಿಯೂ, ಎರಡನೆಯದು ತೆಲುಗಿನಲ್ಲಿಯೂ ಇದೆ. ಇದನ್ನು ಬರೆದವರ ಹೆಸರು ಕಾಲ ದೇಶಗಳು ಆವುವೂ ತಿಳಿದುಬರುವುದಿಲ್ಲ.

ಮಾಗಡಿ ಕೆಂಪೇಗೌಡರ ವಂಶಸ್ಥರಾದ ಮುಮ್ಮಡಿ ಕೆಂಪೇಗೌಡರಿಗೂ, ಅವರ ಸಹೋದರರಾದ ಹೊನ್ನಪ್ಪಗೌಡರಿಗೂ ಮನಸ್ತಾಪ ಉಂಟಾಗಿ ಇಬ್ಬರೂ ರಾಜ್ಯವನ್ನು ಎರಡು ಭಾಗಮಾಡಿಕೊಂಡು ಬೇರೆಬೇರೆ ಆಳುತ್ತಿದ್ದರು. ಇಂಗ್ಲೀಷರು ಮೈಸೂರನ್ನುವಶಮಾಡಿಕೊಂಡು ಕೃಷ್ಣರಾಜವೊಡೆಯರಿಗೆ ರಾಜ್ಯವು ಬಂದ ಕಾಲದ ವರೆಗಣ ಚರಿತ್ರವು ಕನ್ನಡ ಭಾಷೆಯಲ್ಲಿಯೂ, ಮಾಗಡಿ ಕೆಂಪೇಗೌಡರು ರಾಜ್ಯವನ್ನು ಸ್ಥಾಪಿಸಿದ ಕಾಲದಿಂದ ಆ ರಾಜ್ಯವು ಮೈಸೂರಿಗೆ ಸೇರಿದ ವರೆಗಣ ಚರಿತ್ರವು ತೆಲುಗು ಭಾಷೆಯಲ್ಲಿಯೂ ಇರುತ್ತದೆ.

ಕೆಂಪೇಗೌಡನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿದ್ದಾಗ ಹುಲಿಕಲ್ಲು ಪಾಳಯಗಾರರಿಗೆ ಬರೆದ ಒಂದು ಓಲೆಯನ್ನು ಹುಲಿಕಲ್ಲ ಪಾಳಯಗಾರರು ಕಳುಹಿಸಿರುತ್ತಾರೆ.

ಓಲೆಯ ನಕಲು—

ಶ್ರೀಮತು ಕೆಂಪವೀರಗೌಡರು ಚಿರಂಜೀವಿ ಹುಲಿಕಲ್ಲು ನಮ್ಮ ಕ್ರಿಷ್ಣರಾಜ ಗವುಡ್ಡರಿಗೆ ಮಾಡುವ ಆಶೀರ್ವಾದ ಅದಾಗಿ|| ಈ ಫಾಲ್ಗುಣ ಬ|| ೧೦ ಯ ವರೆಗೆ ಶ್ರೀರಂಗಪಟ್ಟಣದಲ್ಲಿ ಕ್ಷೇಮದಲ್ಲಿ ಇದ್ದೇವೆ, ಅಲ್ಲಿರುವಂತ ಸಕಲರು ಸಹ



ಉಡುಪುಧಾರಿಯಾದ ಮಾಗಡಿ ಕೆಂಪೇಗೌಡ

ನಿಮ್ಮ ಕ್ಷೇಮಕ್ಕೆ ಬರಸಿ ಕಳುಹಿಸುವದು || ತರುವಾಯ ನಮಗೆ ಸೋಮನಾಥನ ವಿಲಾಸದಿಂದ ಈ ದುರ್ದಶೆ ಬಂದು ಇರುವದು ಸರಿಯಷ್ಟೆ|| ಈಗ ನಮ್ಮ ದೇಹಸ್ಥಿತಿ ಬಹುತರ ಉಪದ್ರವಾಗಿ ಇದೆ. ಸೋಮನಾಥನ ಪಾದಗಳಲ್ಲಿ ಐಕ್ಯವಾಗೋ ಹಾಗೆ ತೋರುತ್ತದೆ, ನಿರ್ವಾಹ ತೋರಿಲ್ಲ|| ನಮ್ಮ ವಂಶಕ್ಕೆ ಬಾಧ್ಯರು ನೀವೇ ಅಲ್ಲದೆ ಮತ್ತೆ ಬೇರೆ ಇಲ್ಲ || ಆದ್ದರಿಂದ ನಿಮ್ಮ ಬಳಿಗೆ ನಮ್ಮ ಸೋಮನ ಕೈಯಲ್ಲಿ ನಮ್ಮ ಮುಖ್ಯ ಪಟ್ಟದ ಆಯುಧ ಶಿಖಿಸರ ಸಹಾ ಕಳುಹಿಸಿ ಇದ್ದೇವೆ || ನೀವು ಬುದ್ಧಿವಂತರಾಗಿ ಕಾಲಾನುಗುಣ್ಯವಾಗಿ ಇದ್ದುಕೊಂಡು ನಮ್ಮ ದೇಹಸ್ಥಿತಿ ವಿಚಾರಿಸಿಕೊಂಡು ಆ ತರುವಾಯ ಆಗತಕ್ಕ ಕೆಲಸಗಳನ್ನು ಆಗಮಾಡಿಸುವದು || ಕಡಿಮೆ ವಿಚಾರ ವಾಲೆ ಮುಖಾಂತರ ಬರೆಯತಕ್ಕದ್ದು ಅಲ್ಲ || ಸೋಮನ ಬಾಯಿಮಾತಿನಿಂದ ಎಲ್ಲ ವಿವರವು ತಿಳಿಯುತ್ತದೆ || ಈ ವಿವರ ನಿಮ್ಮ ಮನಸ್ಸಿಗೆ ತರೋಹಾಗೆ ಮಾಡಿಸುವದು || ನಿಮಗೆ ಆಪ್ತರಾದವರನ್ನು ಇಲ್ಲಿಗೆ ಕಳುಹಿಸುವದು—ಕೆಂಪಯ್ಯ, (ಎಂದು ಬರೆದಿದೆ.)

ಈ ಹುಲಿಕಲ್ಲ ಭೈರವದುರ್ಗದ ನಾಡನ್ನು ಹೊನ್ನಪ್ಪಗೌಡರು ಶಾಲೀವಾಹನ ಶಕ ೧೫೫೦ ರಿಂದ ೧೫೯೪ರ ವರೆಗೆ ಆಳಿ, ಸ್ವರ್ಗಸ್ಥರಾದರು. ತರುವಾಯ ಅವರ ಕುಮಾರ ಅಂಕಣ್ಣಗೌಡನಿಗೆ ಪಟ್ಟವಾಯಿತು. ಇವನು ವೃದ್ಧಾಚಾರದ ಪ್ರಕಾರವಾಗಿ ಶುಕಪುರೀ ಗೃಹಾರಾಮಕ್ಷೇತ್ರಗಳಲ್ಲಿ ಸಮರ್ಪಕವಾಗಿ ಪೂಜೆಗಳೂ ತೀರ್ಥಪ್ರಸಾದಗಳೂ ನಡೆಯುವಂತೆ ಏರ್ಪಡಿಸಿ ಮಾನ್ಯಮಿರಾಸೆಗಳನ್ನು ಕಲ್ಪಿಸಿದನು. ಹುಲಿಕಲ್ಲಿನಲ್ಲಿ ಅರಮನೆಯನ್ನೂ ಕೋಟೆ ಕೊತ್ತಲಗಳನ್ನೂ ಕಟ್ಟಿಸಿ ಅದನ್ನು ಅಭಿವೃದ್ಧಿಪಡಿಸಿದನು.

ಈತನ ಮಗನಾದ ಗಿರಿಯಪ್ಪಗೌಡನಿಗೆ ಶಾ. ೧೬೧೨ ರಲ್ಲಿ ಪಟ್ಟವಾಯಿತು. ಇವನು ಹುಲಿಕಲ್ಲ ಕೋಟೆಯಲ್ಲಿ ದೇವಸ್ಥಾನಗಳನ್ನು ಕಟ್ಟಿಸಿ, ಶಿವವಿಷ್ಣು ಪ್ರತಿಷ್ಠೆಮಾಡಿಸಿ ಬ್ರಾಹ್ಮಣರಿಗೂ ಲಿಂಗಾಯತರಿಗೂ ಗ್ರಾಮಭೂಮಿಗಳನ್ನು ಕೊಟ್ಟು ದಯೆಯಿಂದ ರೈತರನ್ನು ಪಾಲಿಸುತ್ತಾ ಇದ್ದು ಶಾ|| ೧೬೪೦ ರಲ್ಲಿ ಸ್ವರ್ಗಸ್ಥನಾದನು.

ಇವನ ಕುಮಾರ ಮುದ್ದಪ್ಪಗೌಡನು ಪಟ್ಟಕ್ಕೆ ಬಂದು ರಾಜ್ಯವನ್ನು ಧರ್ಮದಿಂದ ಪಾಲಿಸುತ್ತಾ ಇದ್ದನು. ಈತನು ಅಶ್ವಸವಾರಿಯಲ್ಲಿ ಬುದ್ಧಿವಂತನೆಂ

ದು ತಿಳಿದು ಮೈಸೂರದೊಡ್ಡ ಕೃಷ್ಣರಾಜ ಒಡೆಯರವರು ಇವನನ್ನು ತಮ್ಮೆಡೆಗೆ ಕರೆಸಿಕೊಂಡು, ಇವನ ಕುದುರೆ ಸವಾರಿಯನ್ನು ಪರಾಂಬರಿಸಿ ಸಂತೋಷಪಟ್ಟು ಇವನಿಗೆ ಮುದ್ದು ಕೃಷ್ಣರಾಜಗೌಡರೆಂಬ ಹೆಸರ ಕೊಟ್ಟು ಇವನಿಗೆ ನಡೆಯುತ್ತಿದ್ದ ನಾಡುಗಳೊಳಗೆ ಹುಲಿಕಲ್ಲಿಗೆ ಸೇರಿದ ಸೀಮೆಗಳನ್ನು ಎಂಗಡಿಸಿ, ಐದು ನೂರು ವರಹ ಪೊಗದಿ ಕೊಡುವಂತೆ ನಿಗುದಿಮಾಡಿಕೊಂಡು ೨ ಸಾವಿರ ಸೀಮೆಯನ್ನು ಕೊಟ್ಟು ಆನೆ ಕುದುರೆಗಳನ್ನು ದಯೆಪಾಲಿಸಿ ಮಿಕ್ಕುದನ್ನು ಮೈಸೂರಿಗೆ ಸೇರಿಸಿಕೊಂಡರು.

ಇವನು ಶಾ|| ೧೬೮೩ ರಲ್ಲಿ ಸ್ವರ್ಗಸ್ಥನಾದನು. ಹೈದರ್ ಅಲ್ಲೀಖಾನರವರು ಮಾಗಡಿಗೆ ಸವಾರಿಬಂದು ಪಾಳೆಯಗಾರನಾದ ಮುದ್ದಪ್ಪಗೌಡನನ್ನು ಕರೆಸಿಕೊಂಡು, ೧ ಸಾವಿರ ವರಹಗಳ ಪೊಗದಿಯನ್ನು ಮಾಗಡಿ ಕಚೇರಿಗೆ ಕೊಡುವಂತೆ ನಿಗುದಿಮಾಡಿದರು. ಇದು ಶಾ|| ೧೭೧೪ ರ ವರೆಗೆ ನಡೆದು ಬಂದಿತು. ತರುವಾಯ ಟಿಪ್ಪೂಸುಲ್ತಾನರು ಇದನ್ನು ಸರ್ಕಾರಕ್ಕೆ ಸೇರಿಸಿಕೊಂಡರು. ದಿವಾನ್ ಪೂರ್ಣಯ್ಯನವರು ೨೪ ವರಹಾ ಜಮೀನ್ ನಡೆಸಿಕೊಂಡು ಬರುವಂತೆ ಮುದ್ದಪ್ಪಗೌಡನಿಗೆ ಸನ್ನದನ್ನು ಕೊಟ್ಟರು. ಈ ಸನ್ನದು ಬಂದ ಬಳಿಕ ಆತನು ದೈವಾಧೀನನಾದನು. ಅವನ ಮಕ್ಕಳು ಗಿರಿಯಪ್ಪಗೌಡನ ಮೊದಲು ಈಗಿನ ಶ್ರೀ|| ಚಿಕ್ಕಪ್ಪಯ್ಯನವರ ವರೆಗೆ ಮೈಸೂರ ಮಹಾರಾಜಾ ಸರ್ಕಾರದವರು ಈ ಜಮೀನನ್ನು ನಡೆಸಿಕೊಂಡು ಬರುತ್ತಿರುವರು.

ಅಧ್ಯಾಯ—೭.

ದೇವನಹಳ್ಳಿ, ದೊಡ್ಡಬಳ್ಳಾಪುರ, ಗುಡಿಬಂಡೆ.

ಆವತಿಗೆ ನಾಲ್ಕು ಮೈಲಿಯಲ್ಲಿ ದೇವಣ್ಣನೆಂಬ ಒಬ್ಬ ಗೌಡನು ಒಂದು ಸಣ್ಣ ಹಳ್ಳಿಯನ್ನು ಕಟ್ಟಿಕೊಂಡು ಅದಕ್ಕೆ ಅಧಿಪತಿಯಾಗಿದ್ದನು. ಆವತಿ ರಣಭೈರೇಗೌಡನ ತಮ್ಮ ಮಲ್ಲಭೈರೇಗೌಡನು ಒಂದು ದಿನ ಅಲ್ಲಿಗೆ ಹೋಗಿದ್ದು ಸುತ್ತಮುತ್ತಣ ಪ್ರದೇಶವನ್ನು ನೋಡಿ ಅದು ಜಲವಸತಿಯಲ್ಲಿಯೂ, ಆರೋಗ್ಯದಲ್ಲಿಯೂ, ಉತ್ತಮವಾಗಿ ಕಂಡುಬಂದುದರಿಂದ ಅಲ್ಲಿ ಒಂದು ಪಟ್ಟಣ

ವನ್ನು ಕಟ್ಟಬೇಕೆಂದು ಬಯಸಿ, ತನ್ನ ಉದ್ದೇಶವನ್ನು ದೇವಣ್ಣನಿಗೆ ತಿಳಿಸಿ ಆ ಹಳ್ಳಿಯನ್ನು ಕ್ರಯಕ್ಕೆ ಕೊಡಬೇಕೆಂದು ಕೇಳಿದನು. ಅದಕ್ಕೆ ದೇವಣ್ಣನು ನನ್ನ ಹೆಸರಿನಿಂದ ಪಟ್ಟಣವನ್ನು ಕಟ್ಟುವುದಾದರೆ ಕೊಡುತ್ತೇನೆಂದು ಒಪ್ಪಿದನು. ಹಾಗೆಯೇ ಆಗಲೆಂದು ಒಪ್ಪಿ ಮಲ್ಲಭೈರೇಗೌಡನು ಹಳ್ಳಿಯನ್ನು ಕೊಂಡುಕೊಂಡು ಅಲ್ಲಿ ಕೋಟೆ ಕೊತ್ತಳಗಳನ್ನು ಕಟ್ಟುವುದಕ್ಕೆ ವಿಜಯನಗರದ ಚಕ್ರವರ್ತಿಗಳಿಂದ ಅಪ್ಪಣೆಯನ್ನು ಪಡೆದು ಕ್ರಿ. ಶ. ೧೫೦೧ ರಲ್ಲಿ ಪುರವನ್ನು ನಿರ್ಮಾಣಮಾಡಿ ಅದನ್ನು ದೇವಣ್ಣನಹಳ್ಳಿ (ದೇವಂಡಹಳ್ಳಿ) ಎಂಬದಾಗಿ ಕರೆದು ಶಿಲ್ಪಚಾತುರ್ಯಯುಕ್ತವಾದ ದೇವಸ್ಥಾನವನ್ನು ಕಟ್ಟಿಸಿ ಆವತಿಯಲ್ಲಿ ತಮಗೆ ಪೂರಕೆಯ ದೆಸೆಯಿಂದ ಲಭಿಸಿದ್ದ ಶ್ರೀ ವೇಣುಗೋಪಾಲಸ್ವಾಮಿ ವಿಗ್ರಹವನ್ನು ತಂದು ಅದರಲ್ಲಿ ವೈಭವದಿಂದ ಪ್ರತಿಷ್ಠಿಸಿದನು. ಪೂರಕೆಯಿಂದ ಮಹದೈಶ್ವರ್ಯಪ್ರಾಪ್ತವಾದ ಕಾರಣ ದೇವನಹಳ್ಳಿಯ ಗೌಡದೊರೆಗಳು ಅದನ್ನು ಗೌರವದಿಂದ ಕಾಣುತ್ತಿದ್ದರು. ಆ ಪೂರವರು ಈಗಲೂ ಪೂರಕೆಗೆಸಮತ್ವವುಳ್ಳವರಾಗಿದ್ದಾರೆ. ಊರು, ಕೋಟೆ, ಪೇಟೆ, ತಟಾಕ, ಶಿವವಿಷ್ಣುದೇವಾಲಯವನ್ನೆಲ್ಲಾ ಮಲ್ಲಭೈರೇಗೌಡನೇ ಕಟ್ಟಿಸಿ ಜನಭರಿತವನ್ನಾಗಿ ಮಾಡಿ, ವ್ಯವಸಾಯ ವ್ಯಾಪಾರಾಭಿವೃದ್ಧಿಗೆ ಬೇಕಾದ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟು ತರುವಾಯ ತನ್ನ ಸಹೋದರನಾದ ಸಣ್ಣಭೈರೇಗೌಡನಿಗೆ ದೊರೆತನವನ್ನು ವಹಿಸಿ ತಾನು ದೊಡ್ಡಬಳ್ಳಾಪುರವನ್ನು ಕಟ್ಟುವುದಕ್ಕೆ ಹೋದನು.

ಸಣ್ಣಭೈರೇಗೌಡನು ದೇವನಹಳ್ಳಿಗೆ ದೊರೆಯಾಗಿ ದೇಶವನ್ನು ವಿಸ್ತರಿಸಿ, ಕಾಡು ಮೇಡುಗಳನ್ನೆಲ್ಲಾ ವ್ಯವಸಾಯಕ್ಕೆತಂದು ೪೦ ಸಂವತ್ಸರಗಳ ವರೆಗೆ ಸುಖದಿಂದ ಪ್ರಜೆಗಳನ್ನು ಕಾಪಿಟ್ಟು ಪರಲೋಕವನ್ನೈದಿದನು. ಈತನ ಹಿರಿಯ ಮಗ ಭೈರೇಗೌಡನು ೨೫ ಸಂವತ್ಸರ ರಾಜ್ಯವಾಳಿದನು. ಅನಂತರ ದಯ್ಯಾಲ ಭೈಚೇಗೌಡನು ೩೭ ಸಂವತ್ಸರಗಳು ರಾಜ್ಯವಾಳಿದನು. ಈತನ ವಿಷಯವಾಗಿ ಅತ್ಯಾಶ್ಚರ್ಯಕರವಾದ ಸಂಗತಿಗಳನ್ನು ಜನರು ಈಗಲೂ ಹೇಳಿಕೊಳ್ಳುತ್ತಾರೆ. ದಯ್ಯಾಲು ಎಂದರೆ ದೆವ್ವಗಳು; ಈತನು ಅವುಗಳನ್ನು ವಶಪಡಿಸಿಕೊಂಡಿದ್ದನಂತೆ. ಎಲ್ಲಿಗೆ ಹೋಗಿಬರಬೇಕಾಗಿದ್ದರೂ ಪರಿವಾರವನ್ನೆಲ್ಲಾ ಮೊದಲೇ ಕಳುಹಿಸಿ, ತಾನು ರಾತ್ರಿಯ ಕಾಲದಲ್ಲಿ ಒಬ್ಬನೇ ಪಾಲಕಿಯಲ್ಲಿ ಕುಳಿತು

ದೆವ್ವಗಳಿಗೆ ಆಜ್ಞೆಯನ್ನು ಮಾಡುತ್ತಿದ್ದನಂತೆ. ಅವುಗಳು ಪಾಲಕಿಯನ್ನು ಹೊತ್ತು ಕೊಂಡು, ಹಿಂದೆ ಮುಂದೆ ಪಂಜುಗಳನ್ನು ಹಿಡಿದು ಎಲ್ಲಿಗೆ ಹೋಗಬೇಕೋ, ಅಲ್ಲಿಗೆ ಹೋಗಿ ಪಾಲಕಿಯನ್ನಿಳುಹಿ ಮರೆಯಾಗುತ್ತಿದ್ದುವಂತೆ. ಬೈಚೇಗೌಡನು ಪರಿವಾರ ದೊಡನೆ ಊರೊಳಕ್ಕೆ ಹೋಗಿ ತನ್ನ ಕೆಲಸವನ್ನು ನೆರವೇರಿಸಿಕೊಂಡು ಬಂದು ಪಾಲಕಿಯಲ್ಲಿ ಕುಳಿತ ಕ್ಷಣವೇ, ಅವು ಪಾಲಕಿಯನ್ನು ಹೊತ್ತುಕೊಂಡು ಬೆಳಗಾ ಗುವಾಗ ದೇವನಹಳ್ಳಿಗೆ ತಂದು ಬಿಡುತ್ತಿದ್ದುವಂತೆ. ರೈತನು ಬಾವಿಗಳನ್ನು ತೋ ಡುವುದರಲ್ಲಿಯೂ ಕಬ್ಬಿನ ತೋಟಗಳಿಗೂ ಕೈತೋಟಗಳಿಗೂ ಏತದ ಬಾವಿಗ ಳಿಂದ ನೀರೆತ್ತುವುದರಲ್ಲಿಯೂ ಪೂರ್ವಕಾಲದ ಮರದ ಗಾಣಗಳಿಂದ ಬೆಲ್ಲವನ್ನು ಮಾಡುವುದರಲ್ಲಿಯೂ ಕಷ್ಟಪಟ್ಟು ಬೇಸತ್ತಿರುವುದನ್ನು ನೋಡಿ ಕನಿಕರಪಡುತ್ತ, ಬೈಚೇಗೌಡನು ‹ ನೀವುಗಳೆಲ್ಲರೂ ನಿಮ್ಮ ನಿಮ್ಮ ಕೆಲಸಗಳನ್ನು ಹಾಗೆಯೇ ಬಿಟ್ಟು ಸಾಯಂಕಾಲದಲ್ಲಿ ಮನೆಗಳಿಗೆ ಹೋಗಿ ವಿಶ್ರಮಿಸಿಕೊಂಡು ಬೆಳಗಾದ ಮೇಲೆ ಬನ್ನಿರಿ'ಎಂದು ಕಳುಹಿಸಿ ಕೊಡುತ್ತಿದ್ದು ಉಳಿದಿದ್ದ ಕೆಲಸಗಳನ್ನೆಲ್ಲಾ ದೆವ್ವಗ ಳಿಂದ ಸರಿಯಾಗಿ ಮಾಡಿಸಿಡುತ್ತಿದ್ದನಂತೆ. ಅನೇಕ ಮಂದಿ ರೈತರೂ, ಎತ್ತುಗ ಳೂ ಎಷ್ಟೋ ದಿನಗಳು ರಾತ್ರಿಯೂ ಹಗಲೂ ದುಡಿದು ಮಾಡತಕ್ಕ ಆಲೆಯ ಮನೆಯ ಕೆಲಸವನ್ನೆಲ್ಲಾ ಈತನು ಒಂದೇ ರಾತ್ರಿಯಲ್ಲಿ ದೆವ್ವಗಳಿಂದ ಮಾಡಿಸಿಬಿ ಡುತ್ತಿದ್ದನಂತೆ. ಅದರಿಂದ ರೈತರು ದೊರೆಗೆ ತುಂಬ ಕೃತಜ್ಞತೆಯುಳ್ಳವರಾಗಿ ದ್ದರು. ಬೈಚೇಗೌಡನು ತನ್ನ ಅದ್ಭುತಮಹಿಮೆಯಿಂದ ಪ್ರಜೆಗಳನ್ನು ವಿನೋದ ಗೊಳಿಸುತ್ತ ದೇಶವನ್ನು ಅಭಿವೃದ್ಧಿಗೆ ತಂದು ಸ್ವರ್ಗವನ್ನೈದಿದನು. ಈತನು ದೇ ವನಹಳ್ಳಿಯ ಬಳಿಯಿರುವ ಪೊಮ್ಮವಾರದಲ್ಲಿ ಅದ್ಭುತಸಾಮರ್ಥ್ಯದಿಂದ ಮಂಟಪ ಮುಂತಾದುವುಗಳನ್ನು ಕಟ್ಟಿಸಿರುತ್ತಾನೆ. ಅದನ್ನು ಈಗಲೂ ದಯ್ಯಾಲು ಬೈಚೇ ಗೌಡನ ಮಂಟಪವೆಂದು ಕರೆಯುತ್ತಾರೆ. ಅನಂತರ ಮುದ್ದುಬೈರೇಗೌಡನು ೨೦ ಸಂವತ್ಸರಗಳೂ, ಇಮ್ಮಡಿ ಸಣ್ಣಬೈರೇಗೌಡನು ೩೭ ಸಂವತ್ಸರಗಳೂ, ಗೋ ಪಾಲಗೌಡನು ೩೫ ಸಂವತ್ಸರಗಳೂ, ದೊಡ್ಡಬೈರೇಗೌಡನು ೫೪ ಸಂವತ್ಸರಗ ಳೂ ರಾಜ್ಯವಾಳಿದರು. ಕಡೆಗೆ ರಂಗಪ್ಪಗೌಡನು ಪಟ್ಟಕ್ಕೆ ಬಂದು ೧೦ ತಿಂಗಳ ಕಾಲ ಮಾತ್ರ ರಾಜ್ಯವಾಳಿ ದೈವಾಧೀನನಾದನು. ಈತನು ಅಪುತ್ರವಂತನಾದು ದರಿಂದ ಈ ಸಂತತಿಗೆ ಸೇರಿದ ಚಿಕ್ಕಬಳ್ಳಾಪುರದ ಚಿಕ್ಕಪ್ಪಗೌಡನು ದೇವನಹಳ್ಳಿ ಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಇದನ್ನು ಮಲ್ಲಬೈರೇಗೌಡನು ಪಟ್ಟಣವನ್ನಾಗಿ ಮಾಡಿ ಪ್ರಸಿದ್ಧಿಗೆ ತಂದ ಬಳಿಕ ಈತನಿಗೆ ಪಟ್ಟಕ್ಕೆ ಬಂದ ದೊರೆ

ಗಳೆಲ್ಲರೂ, ವಿಶೇಷವಾಗಿ ಅಭಿವೃದ್ಧಿಗೆ ತಂದರು. ಮೊದಲು ತೋಟಗಳಲ್ಲಿ ಗಸೆಗಸೆಯ ಬೆಳೆಯನ್ನು ಮಾಡಿಸುತ್ತ ಅಫೀಂ ಎಂಬ ಮದ್ದನ್ನು ತೆಗೆಯುತ್ತಿದ್ದರು. ಇದರಿಂದ ಹೆಚ್ಚು ಲಾಭ ಬರುತ್ತಿದ್ದಿತು. ಈಚೆಗೆ ಸರ್ಕಾರದವರು ಈ ಬೆಳೆಯನ್ನು ಮಾಡಕೂಡದೆಂದು ಅಪ್ಪಣೆಮಾಡಿದ ಮೇಲೆ ರೇಷ್ಮೆ ವ್ಯವಸಾಯ ಮಾಡುತ್ತ ಕೈತೋಟಗಳಲ್ಲಿ ಕಬ್ಬು, ಅರಿಸಿನ, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಗೆಣಸು, ಕಾಯಿಪಲ್ಯಗಳು, ಉರುಳಿಗಡ್ಡೆ, ಸೌತೇಕಾಯಿ, ಪರಂಗಿಹಣ್ಣು, ಚಕ್ಕೋತದ ಹಣ್ಣು ಮೊದಲಾದುವುಗಳನ್ನು ಬೆಳೆದು ವ್ಯಾಪಾರಮಾಡುತ್ತಿದ್ದರು. ಈಗಲೂ ಇಲ್ಲಿ ಚಕ್ಕೋತದ ಹಣ್ಣು ಬಲು ರುಚಿಯೆಂದು ಪ್ರಸಿದ್ಧವಾಗಿರುವುದು.

ಚಿಕ್ಕಪ್ಪಗೌಡನು ದೇವನಹಳ್ಳಿಗೆ ದೊರೆಯಾದ ಮೂರು ತಿಂಗಳಲ್ಲಿಯೇ ಮೈಸೂರೆ ನಂಜರಾಜವಡೆಯರವರ ಸೈನ್ಯವು ಮುತ್ತಿಗೆಹಾಕಿ ಎಂಟು ತಿಂಗಳ ಕಾಲ ಹೋರಾಡಿ ಕ್ರಿ. ಶ. ೧೭೪೯ ರಲ್ಲಿ ಗೌಡದೊರೆಗಳನ್ನು ಸೋಲಿಸಿ ದೇವನಹಳ್ಳಿಯನ್ನು ಸಾಧಿಸಿತು. ಅಲ್ಲಿಂದೀಚೆಗೆ ಇದು ಮೈಸೂರ ರಾಜ್ಯಕ್ಕೆ ಸೇರಿಹೋಯಿತು.

ಮೈಸೂರ ದೊರೆಗಳ ಕುದುರೆಯ ಸೈನ್ಯದಲ್ಲಿ ಉಮೇದುವಾರನಾಗಿದ್ದ ಹೈದರನು ದೇವನಹಳ್ಳಿಯ ಕೋಟೆಯನ್ನು ಸಾಧಿಸಿ ಪ್ರಸಿದ್ಧಿಗೆ ಬಂದನು. ಇವನ ಮನೆಯಿದ್ದ ಗುರುತು ಈಗಲೂ ಕೋಟೆಗೆ ಪಶ್ಚಿಮದಲ್ಲಿ ಇದೆ. ಇದು ಟೀಪುವಿನ ಜನ್ಮಭೂಮಿ. ಕ್ರಿ. ಶ. ೧೭೬೦ ರಲ್ಲಿ ಹೈದರನೇ ದೇವನಹಳ್ಳಿಗೂ ಮೈಸೂರ ರಾಜ್ಯಕ್ಕೂ ದೊರೆಯಾಗಿ ಮೈಸೂರ ದೊರೆಗಳನ್ನು ಮೂಲೆಗೆ ಕೂರಿಸಿದನು. ದೇವನಹಳ್ಳಿಯು ಹೈದರನ ಅಧಿಕಾರಕ್ಕೆ ಬಂದ ಮೇಲೆ ಅವನು ಮೊದಲಿನ ಮಣ್ಣಿನ ಕೋಟೆಯನ್ನು ಕಲ್ಲಿನಿಂದ ಕಟ್ಟಿಸುವುದಕ್ಕೆ ಉಪಕ್ರಮಿಸಿದನು. ಈ ಕೋಟೆಯ ಕೆಲಸವು ಪೂರ್ತಿಯಾಗುವುದರೊಳಗಾಗಿ ಲಾರ್ಡ್ ಕಾರನ್ವಾಲಿಸನ ಸೈನ್ಯವು ಬಂದು ಕೋಟೆಯನ್ನು ೧೭೯೧ ರಲ್ಲಿ ಜಯಿಸಿತು.

ಒಂದಾನೊಂದು ಕಾಲದಲ್ಲಿ ಗೌಡದೊರೆಗಳು ೭೨ ಜನ ಅಧಿಕಾರಿಗಳ ಸಮೇತ ಮದನಗೋಪಾಲಸ್ವಾಮಿಯ ದರ್ಶನಕ್ಕೆ ಬಂದಿದ್ದರಂತೆ. ದೇವರಿಗೆ ನಿತ್ಯ,

ಪಕ್ಷ, ಮಾಸ, ವರ್ಷಗಳ ಪೂಜೆ, ಉತ್ಸವ, ದೀಪಾರಾಧನೆಗಳು ಆಚಂದ್ರಾರ್ಕ ವಾಗಿ ನಡೆಯುವಂತೆ ಗ್ರಾಮ, ಮಾನ್ಯ, ಮಿರಾಸಿಗಳನ್ನು ಈಯುರಸರು ಕೊಟ್ಟು ಇರುತ್ತಾರೆ. ಈ ವಿಷಯವಾಗಿ ಅನೇಕಶಾಸನಗಳು ದೊರೆತಿರುತ್ತವೆ.

ಇವರು ದೇವಾಲಯದ ಲೆಕ್ಕವನ್ನು ಅರಮನೆಯಲ್ಲಿ ಮಡಗಿಸುತ್ತಿದ್ದರು. ಹೈದರ್‌ಖಾನನೂ ಈ ದೇವರಲ್ಲಿ ಭಕ್ತಿಯುಳ್ಳವನಾಗಿದ್ದನು. ತಾನು ದೇವರಿಗೆ ಅರ್ಪಿಸಿರುವ ಬೆಳ್ಳಿಯ ಬಟ್ಟಲಿನ ಮೇಲೆ ತನ್ನ ವಿಲಾಸವನ್ನು ಕೆತ್ತಿಸಿರುತ್ತಾನೆ.

ವಡಿಗೇನಹಳ್ಳಿ—ದೇವನಹಳ್ಳಿಯ ಈಶಾನ್ಯಕ್ಕೆ ೭ ಮೈಲಿ ದೂರದಲ್ಲಿ ವಡಿಗೇನ ಹಳ್ಳಿಯಿದೆ. ಗೌಡದೊರೆಗಳು ಹೊರಗಣಿಂದ ಕರೆಸಿದ ಲಿಂಗಾಯತವರ್ತಕರಿಗೆ ಇದು ಮೂಲಸ್ಥಾನವಾಗಿದೆ. ಆ ಕಾಲದಲ್ಲಿ ಕಟ್ಟಲ್ಪಟ್ಟ ಈ ಗ್ರಾಮವು ಪೇಟೆಕೋಟೆಗಳಿಂದಲೂ ಸತ್ರ ದೇವಸ್ಥಾನಗಳಿಂದಲೂ, ವರ್ತಕರ ಮನೆಗಳಿಂದಲೂ ಶೋಭಿಸುತ್ತ ಮೊದಲಿಂದಲೂ ವ್ಯಾಪಾರದಲ್ಲಿ ಪ್ರಸಿದ್ಧಸ್ಥಳವಾಗಿದೆ. ಪೂರ್ವಕಾಲದಲ್ಲಿ ಇಲ್ಲಿ ಅರಳೆಯ ವ್ಯಾಪಾರವು ವಿಶೇಷವಾಗಿ ನಡೆಯುತ್ತಿದ್ದಿತು. ಇಲ್ಲಿನ ವರ್ತಕರು ಹೊರದೇಶಗಳೊಡನೆ ವ್ಯಾಪಾರನಡೆಸುತ್ತಿದ್ದರು. ಈಗ ಹಿಂದಿನ ಅರಳೆಯ ಮತ್ತು ಜವಳಿಯ ವ್ಯಾಪಾರವು ನಿಂತು ಹೋಗಿ ಧಾನ್ಯಗಳು, ಅಡಕೆ, ಉರುಳಿಗಡ್ಡೆಯ ವ್ಯಾಪಾರವು ನಡೆಯುತ್ತಿದೆ. ಪ್ರತಿಶುಕ್ರವಾರವೂ ಸಂತೆಯಾಗುತ್ತದೆ. ಕಾಯಿಪಲ್ಯಗಳು, ಹಣ್ಣು ಹಂಪಲು, ರಾಗಿ ವ್ಯಾಪಾರವು ಸಂತೆಯಲ್ಲಿ ಚೆನ್ನಾಗಿ ನಡೆಯುತ್ತದೆ.

ದೊಡ್ಡಬಳ್ಳಾಪುರ—ನಿತ್ಯವೂ ಮೇಯುವುದಕ್ಕೆ ಬರುತ್ತಿದ್ದ ಒಂದು ಹಸುವು ಕಾಡಿನ ಹುತ್ತದ ಮೇಲೆ ಒಂದು ಬಳ್ಳ ಹಾಲನ್ನು ಸುರಿಸಿ ಹೋಗುತ್ತಿದ್ದಿತಂತೆ. ಮನೆಯಲ್ಲಿ ಕರೆಯುವಾಗ ಹಾಲು ಕಡಿಮೆಯಾಗುತ್ತಿದ್ದುದನ್ನು ನೋಡಿ ಆ ಮನೆಯ ಯಜಮಾನಿಯು, ಹಸುವಿನ ಹಿಂದೆಯೇ ಬಂದು ಮರೆಯಲ್ಲಿದ್ದು ನೋಡಿಕೊಂಡುಹೋಗಿ ಯಜಮಾನನಿಗೆ ತಿಳಿಸಿದಳಂತೆ. ಆ ಸಂಗತಿಯು ಅನೇಕರಿಗೆ ತಿಳಿದು ಆ ಸ್ಥಳದಲ್ಲೇನೋ ಮಹತ್ವವಿರಬಹುದೆಂದು ಕೊಂಡು ಅಲ್ಲಿ ಒಂದು ಗ್ರಾಮವನ್ನು ಕಟ್ಟಿ ಅದಕ್ಕೆ "ಬಳ್ಳಹಾಲಪುರ" ವೆಂದು ಹೆಸರಿಟ್ಟರಂತೆ. ಕ್ರಿ. ಶ. ೧೫ ನೆಯ ಶತಮಾನದಲ್ಲಿ ಅದು ಹೊಯ್ಸಳರಾಜ್ಯಕ್ಕೆ ಸೇರಿ ವ್ಯಾಪಾರದಲ್ಲಿ ಪ್ರಸಿದ್ಧಿಗೊಂಡಿತು. ಅದೇ ಹಳೆಯ ದೊಡ್ಡ ಬಳ್ಳಾಪುರ.

ಈಗಣ ದೊಡ್ಡಬಳ್ಳಾಪುರವು ಕ್ರಿ. ಶ. ೧೭ ನೇ ಶತಮಾನದ ಆದಿಯಲ್ಲಿ ಅವತಿ ಮಲ್ಲಬೈರೇಗೌಡನಿಂದ ಕಟ್ಟಲ್ಪಟ್ಟಿತು. ಅವನು ದೇವನಹಳ್ಳಿಯಲ್ಲಿ ಪ್ರಭುತ್ವಮಾಡುತ್ತಿರುವಾಗ ಒಂದು ದಿನ ಬೇಟೆಗಾಗಿ ದೊಡ್ಡಬಳ್ಳಾಪುರ ವಿರುವ ಪ್ರದೇಶಕ್ಕೆಹೋಗಿದ್ದು ಆ ಸ್ಥಳವನ್ನು ನೋಡಿದ ಒಡನೆಯೇ ಅಲ್ಲಿ ಒಂದು ಊರನ್ನು ಕಟ್ಟಬೇಕೆಂದು ಅವನಿಗೆ ತೋರಿತಂತೆ. ಅವನು ಅದೇ ವಿಷಯವಾಗಿ ಚಿಂತಿಸುತ್ತಿರಲು ಒಂದು ದಿನ ರಾತ್ರಿ ಸ್ವಪ್ನದಲ್ಲಿ ಶ್ರೀ ಆದಿನಾರಾಯಣಸ್ವಾಮಿಯು ಪ್ರತ್ಯಕ್ಷನಾಗಿ "ನನ್ನ ಶಿಲಾಮೂರ್ತಿಯು ಕಾಡಿನೊಳಗೆ ಹುತ್ತದಲ್ಲಿರುವುದು; ಅದನ್ನು ತೆಗೆದು ಅಲ್ಲಿಯೇ ದೇವಾಲಯವನ್ನೂ ಸುತ್ತಲೂ ಪಟ್ಟಣವನ್ನೂ ಕಟ್ಟಿ ಸದಾ ನನ್ನನ್ನು ಸ್ಮರಿಸುತ್ತಿರು.'' ಎಂದು ಹೇಳಿ ಅಂತರ್ಧಾನನಾದನಂತೆ. ಬೆಳಗಾಗುತ್ತಲೇ ಗೌಡನೆದ್ದು ಸ್ವಪ್ನವೃತ್ತಾಂತವನ್ನು ನೆನೆದು ತಕ್ಕ ಸಲಕರಣೆಗಳೊಂದಿಗೆ ಹೋಗಿ ಕಾಡನ್ನು ಕತ್ತರಿಸಿ ಹುತ್ತವನ್ನು ಕಂಡು, ಹಸುಗಳು ಹಾಲನ್ನು ಸುರಿಸುವ ಸಮಾಚಾರವನ್ನು ತಿಳಿದು ಅಲ್ಲಿಯೇ ವಿಗ್ರಹವು ಇರಬಹುದೆಂಬ ನಂಬುಗೆಯಿಂದ ಶೋಧಿಸಿ ನೋಡಲಾಗಿ ಶ್ರೀ ಆದಿನಾರಾಯಣಸ್ವಾಮಿಯ ವಿಗ್ರಹವು ದೊರೆಯಿತು. ಅವನು ಅಲ್ಲಿಯೇ ದೇವಾಲಯವನ್ನು ಕಟ್ಟಿಸಿ, ಶಾಸ್ತ್ರೋಕ್ತವಾಗಿ ಶುಭಮುಹೂರ್ತದಲ್ಲಿ ದೇವರನ್ನು ಪ್ರತಿಷ್ಠೆ ಮಾಡಿಸಿ, ಸುತ್ತಲೂ ಊರನ್ನು ಕಟ್ಟಿಸಿದನು. ಅದೇ ಈಗ ಇರುವ ಪ್ರಸಿದ್ಧವಾದ ಆದಿನಾರಾಯಣಸ್ವಾಮಿಯ ಪುರಾತನ ದೇವಾಲಯವು. ದೊರೆಯು ದೂರದೇಶಗಳಿಂದ ವಿದ್ವಾಂಸರನ್ನೂ, ವರ್ತಕರನ್ನೂ, ಕರೆಯಿಸಿ ಅವರುಗಳಿಗೆಲ್ಲಾ ವಿಶೇಷಪ್ರೋತ್ಸಾಹಕೊಟ್ಟು ವ್ಯವಸಾಯ ವ್ಯಾಪಾರಾದಿಗಳಿಂದ ಪ್ರಜೆಗಳನ್ನು ಪುಷ್ಕಳರನ್ನಾಗಿ ಮಾಡಿ, ಸಂತುಷ್ಟಿಯಿಂದ ಸಲಹುತ್ತ ತುಂಟ ಪಾಳೆಯಗಾರರನ್ನು ಭುಜಬಲದಿಂದಡಗಿಸಿ, ವಿಜಯನಗರದ ಚಕ್ರವರ್ತಿಗಳ ಬೆಂಬಲದಿಂದ ಗೋರಿಬಿದನೂರು ಗುಡಿಬಂಡೆಗಳನ್ನು ಸೇರಿಸಿಕೊಂಡು ರಾಜ್ಯವನ್ನು ವಿಸ್ತರಿಸಿ ಸಂವತ್ಸರಕ್ಕೆ ಒಂದು ಲಕ್ಷ ವರಹಾಗಳ ಸುವರ್ಣಾದಾಯವು ಬರುವಂತೆ ಮಾಡಿ ಧರ್ಮಪ್ರಭುವೆನಿಸಿಕೊಂಡು ಕೀರ್ತಿಶೇಷನಾದನು.

ಅನಂತರ ಆತನ ತಮ್ಮ ಹಾವಳಿ ಬೈರೇಗೌಡನು ಪಟ್ಟಕ್ಕೆ ಬಂದು ೨೦ ಸಂವತ್ಸರಗಳು ಸುಸ್ಥಿತಿಯಲ್ಲಿ ದರ್ಪದಿಂದ ರಾಜ್ಯಭಾರಮಾಡಿ ಸ್ವರ್ಗಸ್ಥನಾದನು. ಈತನ ಮಗ ದೊಡ್ಡಹಾವಳಿ ಬೈರೇಗೌಡನು ೨೫ ಸಂ|| ಗಳು ರಾಜ್ಯವಾಳಿ ತನ್ನ ಮಗ ಹಾವಳಿ ಬೈರೇಗೌಡನಿಗೆ ರಾಜ್ಯವನ್ನೊಪ್ಪಿಸಿದನು. ಆತನು ೪೦

ಸಂ|| ಗಳು ಸುಖದಿಂದ ಪ್ರಜೆಗಳನ್ನು ಸಂರಕ್ಷಣೆಮಾಡಿ ದಿವಂಗತನಾದನು. ಆತನ ಮಗ ಚಿಕ್ಕಪ್ಪಗೌಡನು ಪ್ರಾಪ್ತವಯಸ್ಕನಾಗಿರಲಿಲ್ಲವಾಗಿ ಅವನ ಅಣ್ಣನ ಮಗ ತಮ್ಮಣ್ಣಗೌಡನು ದರ್ಪದಿಂದಲೂ, ನಂಬುಗೆಯಿಂದಲೂ ಹತ್ತು ಸಂ|| ಗಳು ರಾಜ್ಯಭಾರಮಾಡಿ ತರುವಾಯ ಪ್ರಬುದ್ಧನಾದ ಚಿಕ್ಕಪ್ಪಗೌಡನಿಗೆ ರಾಜ್ಯವನ್ನು ವಹಿಸಿದನು. ಈತನು ೩ ಸಂ||ಗಳು ಮಾತ್ರ ರಾಜ್ಯವಾಳಿದನು. ಅಲ್ಲಿಗೆ ದೊಡ್ಡಬಳ್ಳಾಪುರದ ನಾಡಿನ ಪ್ರಜೆಗಳ ಸುಯೋಗಕಾಲವು ಕೊನೆಗಂಡಿತು.

ಬಿಜಾಪುರದ ರಣದುಲ್ಲಾಖಾನನು ಯುದ್ಧಸಾಮಗ್ರಿಗಳೊಡನೆ ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದು ದೊಡ್ಡಬಳ್ಳಾಪುರಕ್ಕೆ ಮುತ್ತಿಗೆ ಹಾಕಿದನು. ಪರಾಕ್ರಮಧುರೀಣನಾದ ಚಿಕ್ಕಪ್ಪಗೌಡನೂ ಅವನ ಪರಿವಾರವೂ ಯುದ್ಧಸನ್ನದ್ಧರಾಗಿ ಶೌರ್ಯದಿಂದಲೂ, ದೇಶಾಭಿಮಾನದಿಂದಲೂ, ಕಾದಿದರು. ಇವರಲ್ಲಿ ಅಣಿಯಾದ ಸೈನ್ಯವೂ ಯುದ್ಧಸಾಮಗ್ರಿಗಳೂ ಸಾಲದೆ ಬಂದುದರಿಂದ ಇವರು ಪರಾಜಿತರಾದರು. ಈ ಯುದ್ಧದಲ್ಲಿ ಸೈನಿಕರಲ್ಲದ ಉದ್ಯೋಗಸ್ಥರೂ, ಕರಣಿಕರೂ, ರಾಜಭಕ್ತರಾದ ವರ್ತಕರೂ, ಒಕ್ಕಲಿಗರೂ, ತಿಗಳರೂ, ಬೇಡರೂ, ಶೂರ ಪ್ರಜೆಗಳೂ, ರಾಜಬಂಧುಗಳೂ ದೇಶರಕ್ಷಣೆಗಾಗಿ ವೀರಾವೇಶದಿಂದ ಶತ್ರುಸೈನ್ಯದ ಮೇಲೆ ಬಿದ್ದು ಕಡಿದಾಡಿ ಇದಿರು ಬಿದ್ದವರನ್ನು ಖಂಡಿಸಿ ತುರುಕರ ಪದಾತಿಯನ್ನೆಲ್ಲಾ ಧ್ವಂಸಮಾಡಿ ಸವಾರರ ಗುಂಡಿನ ಪೆಟ್ಟುಗಳನ್ನು ತಪ್ಪಿಸಿಕೊಳ್ಳಲಾರದೆ ದೇಹದಲ್ಲಿ ಪ್ರಾಣವಿರುವ ವರೆಗೂ ಯುದ್ಧಮಾಡಿ ವೀರಸ್ವರ್ಗವನ್ನು ಪಡೆದರು. ಉಳಿದ ರಾಜಕುಟುಂಬದವರು ಹೆಂಗುಸರನ್ನೂ ಮಕ್ಕಳನ್ನೂ ಶತ್ರುಗಳ ಕೈಗೆ ಸಿಕ್ಕಲೀಸದೆ ಪಲಾಯನಮಾಡಿದರು.

ಇತ್ತ ಮುಸಲ್ಮಾನ್ ಸೈನಿಕರು ಊರನ್ನು ಕೊಳ್ಳೆಹೊಡೆದು, ಮನೆ ಮಠಗಳನ್ನು ಹಾಳುಮಾಡಿ, ಗುಡಿ ಗೋಪುರಗಳನ್ನು ಕೆಡವಿ, ವಿಗ್ರಹಗಳನ್ನು ಒಡೆದು, ಮಸೀದಿಗಳನ್ನು ಕಟ್ಟಿಸಿದರು. ತಿಮ್ಮಣ್ಣ ಕುಂಟೆಯ ಬಾಗಿಲಲ್ಲಿರುವ ಬಸವಣ್ಣನ ಗುಡಿಯೂ, ಕೋಟೆಯ ದೊಡ್ಡ ಶಿವಾಲಯವೂ, ತಾಲ್ಲೂಕು ಕಚೇರಿಗೆ ದಕ್ಷಿಣದಿಕ್ಕಿನಲ್ಲಿರುವ ಅತಿಮನೋಹರವಾದ ವಿಷ್ಣುದೇವಾಲಯವೂ ಖಬರಸ್ಥಾನಗಳಾಗಿದ್ದು ಈಗ ಮಸೀತಿಗಳಾಗಿವೆ. ಕೆಲವು ದೇವಾಲಯಗಳ ಕಟ್ಟಡಗ

ಳೆಲ್ಲಾ ನೆಲಸಮವಾದುವು. ಅವರಿಂದ ನಾಶಮಾಡಲ್ಪಟ್ಟ ದೇವತಾ ವಿಗ್ರಹ ಗಳ ಕಲಶಗಳೂ, ಸ್ತಂಭ, ದೂಲ, ಬೋದಿಗೆ ಮೊದಲಾದುವುಗಳ ಮೇಲೆ ಕೆತ್ತಲ್ಪಟ್ಟಿದ್ದ ದಿವ್ಯಸುಂದರವಿಗ್ರಹಗಳ ಸಹಿತ ಚೂರುಚೂರಾದ ಕಲ್ಲುಗಳೂ ನಾಗರಕೆರೆ ಕಟ್ಟೆಯ ಸೋಪಾನದ ಮತ್ತು ಕೋಡಿಯ ಕಲ್ಲುಗಳಲ್ಲಿಯೂ, ಊರ ಸುತ್ತಣ ಅನೇಕಸ್ಥಳಗಳಲ್ಲಿಯೂ ಇರುವುದನ್ನು ನೋಡಬಹುದು. ಅವು ಪೂರ್ವಕಾಲದ ಶಿಲ್ಪಿಗಳ ಚಾತುರ್ಯವನ್ನೂ ಆಗಣ ಮುಸಲ್ಮಾನರ ದುರಾಗ್ರ ಹವನ್ನೂ ವ್ಯಕ್ತಗೊಳಿಸುತ್ತಿವೆ. ಬಿಜಾಪುರದ ತುರುಷ್ಕರು ೪೦ ಸಂ|| ಗಳ ಕಾಲ ದೊಡ್ಡಬಳ್ಳಾಪುರವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದರು. ತರು ವಾಯ ಮರಾಟೆಯವರು ಅವರನ್ನೋಡಿಸಿ ರಾಜ್ಯಕ್ಕೆ ಬಂದು ಕೆಲವು ದೇ ವಾಲಯಗಳನ್ನು ಜೀರ್ಣೋದ್ಧಾರಮಾಡಿದರು. ಹಿಂದುಗಳು ಪೂರ್ವದ ಸಂ ಕಟವನ್ನು ಮರೆಯುವಷ್ಟರಲ್ಲಿ ಎಂದರೆ ೧೦ ಸಂವತ್ಸರಗಳು ಮಾತ್ರ ದೊಡ್ಡ ಬಳ್ಳಾಪುರವು ಮರಾಟೆಯವರ ವಶದಲ್ಲಿದ್ದಿತು. ಮೊಗಲರು ಮತ್ತೆ ಪ್ರವೇ ಶಮಾಡಿ ಅವರನ್ನೋಡಿಸಿದರು. ಅನಂತರ ಹೈದರಾಬಾದಿನವರೂ, ಹೈದರಲ್ಲಿ ಯೂ ಒಬ್ಬರ ಮೇಲೊಬ್ಬರಾಗಿ ಅದನ್ನು ಆಳತೊಡಗಿ ಕೆಲವು ದೇವಾಲಯಗಳ ನ್ನು ಕೆಡವಿ ಮಸೀತಿಗಳನ್ನು ಕಟ್ಟಿದರು. ಅಂತು ದೊಡ್ಡಬಳ್ಳಾಪುರವು ಗೌಡ ದೊರೆಗಳ ತರುವಾಯ ತಲೆಯೆತ್ತಲೇ ಇಲ್ಲ.

ಗುಡಿಬಂಡೆ?— ರಣದುಲ್ಲಾಖಾನನಿಗೆ ಸಿಕ್ಕದೆ ದೊಡ್ಡಬಳ್ಳಾಪುರ ದಿಂದ ತಪ್ಪಿಸಿಕೊಂಡು ಹೋದ ಚಿಕ್ಕಪ್ಪಗೌಡನ ಉತ್ತರಾಧಿಕಾರಿಯಾದ ಹಾ ವಳಿ ಬೈರೇಗೌಡನು ಪ್ರಜೆಗಳಿಗೆ ಪ್ರೀತಿಪಾತ್ರನಾಗಿದ್ದನು. ಅವನ ಕಾಟವ ನ್ನು ತಪ್ಪಿಸಿಕೊಳ್ಳಬೇಕೆಂದು ರಣದುಲ್ಲಾಖಾನನು ಸಂಧಿಯನ್ನು ನಡೆಸಿ ತನ್ನ ಸ್ವಾಧೀನದಲ್ಲಿದ್ದ ಗುಡಿಬಂಡೆಯನ್ನು ಅವನಿಗೆ ಬಿಟ್ಟುಕೊಟ್ಟನು. ತರುವಾಯ ಹಾವಳಿ ಬೈರೇಗೌಡನು ಸಂಸಾರಸಮೇತ ಗುಡಿಬಂಡೆಗೆ ಹೋಗಿ ನಿಂತು ಅದ ಕ್ಕೆ ಅಧಿಪತಿಯಾದನು. ಅಲ್ಲಿದ್ದವರಲ್ಲಿ ತುಂಟರನೇಕರು ತುರುಷ್ಕರ ಕೈಕೆಳಗೆ ಸೇರಿಕೊಂಡು ಪ್ರಜೆಗಳನ್ನು ಕೊಳ್ಳಹೊಡೆದು ದಯಾದಾಕ್ಷಿಣ್ಯಗಳಿಲ್ಲದೆ ದೋ ಚುವುದರಲ್ಲಿ ನಿಸ್ಸೀಮರಾದರು. ದೊರೆಯು ಆ ಜನಗಳನ್ನೆಲ್ಲಾ ಸನ್ಮಾರ್ಗಕ್ಕೆ ತಂದು ನೀತಿವಂತರನ್ನಾಗಿಯೂ ಒಳ್ಳೆಯ ವ್ಯವಸಾಯಗಾರರನ್ನಾಗಿಯೂ ಮಾರ್ಪ ಡಿಸಿ ಹಳೆಯ ಗುಡಿಬಂಡೆಗೆ ಕೋಟೆಯನ್ನು ಕಟ್ಟಿಸಿ ಊರನ್ನು ಅಭಿವೃದ್ಧಿಗೆ ತಂದು

ಪ್ರಜೆಗಳನ್ನು ಕೆಲವು ಕಾಲ ಸುಖದಿಂದ ಪಾಲಿಸಿ ಕೀರ್ತಿಶೇಷನಾದನು. ಇವನಿಗೆ ಸಂತಾನವಿಲ್ಲದೆ ಹೋದುದರಿಂದ ಈತನ ಹೆಂಡತಿಯ ಅಣ್ಣನಾಗಿಯೂ ಪ್ರಬಲನಾಗಿಯೂ ಇದ್ದ ರಾಮೇಗೌಡನು ಪಟ್ಟಕ್ಕೆ ಬಂದು ಗುಡಿಬಂಡೆಯನ್ನಾಳತೊಡಗಿದನು. ಈತನು ಸಮರ್ಥನಾಗಿ ಧರ್ಮಜ್ಞನೆನ್ನಿಸಿಕೊಂಡು ಪ್ರಜಾಸೌಖ್ಯವನ್ನೇ ಗುರಿಯಾಗಿಟ್ಟುಕೊಂಡು ರಾಜ್ಯವಾಳುತ್ತಿದ್ದುದನ್ನು ನೋಡಿ, ಚಿಕ್ಕಬಳ್ಳಾಪುರದ ದೊರೆಯಾದ ಬೈಚೇಗೌಡನು ಈತನ ಶಕ್ತಿಯಿಂದ ಮುಂದೆ ರಾಜ್ಯವು ಇವನ ಸಂತತಿಗೇ ಸೇರಿಹೋಗಬಹುದೆಂಬ ಊಹೆಯಿಂದ ದ್ವೇಷಮಾಡತೊಡಗಿ ಉಪಾಯಾಂತರದಿಂದ ರಾಮೇಗೌಡನನ್ನು ಕೊಲ್ಲಿಸಬೇಕೆಂದು ಕುತಂತ್ರಮಾಡಿ, ತನ್ನ ಮಗನಿಗೆ ಅವನ ಮಗಳನ್ನು ತಂದು ಲಗ್ನ ಮಾಡಬೇಕೆಂಬ ನೆಪವಿಟ್ಟುಕೊಂಡು 'ನೀವು ಚಿಕ್ಕಬಳ್ಳಾಪುರಕ್ಕೆ ಬಿಜಯಮಾಡಿಸಿ ಮಾತನಾಡಿ ಬಾಂಧವ್ಯ ಬೆಳೆಸಬೇಕು' ಎಂದು ವಿನಯದಿಂದ ಕಾಗದವನ್ನು ಬರೆದು ತಕ್ಕವರ ಕೈಯಲ್ಲಿ ಕಳುಹಿಸಿಕೊಟ್ಟನು. ಆ ಕಾಗದವನ್ನು ನೋಡಿ ರಾಮೇಗೌಡನು ಸಂಶಯಗ್ರಸ್ತನಾಗಿ ನಿಜಸ್ಥಿತಿಯನ್ನು ಪರೀಕ್ಷಿಸಬೇಕೆಂದು 'ಚಿಕ್ಕಬಳ್ಳಾಪುರ ಗುಡಿಬಂಡೆ ನಾಡುಗಳ ಗಡಿಯಾದ ಮಂಡಿಕಲ್ಲೆಂಬ ಗ್ರಾಮದ ಬಳಿಗೆ ಕಾರ್ಯಾರ್ಥಿಯಾಗಿ ನಾನು ಬರುತ್ತೇನೆ. ಆ ಕಾಲಕ್ಕೆ ತಾವು ಅಲ್ಲಿಗೆ ಬಿಜಯಮಾಡಿಸಿದರೆ ಮುಂದೆ ಲಗ್ನ ಬೆಳೆಸುವ ಯೋಚನೆಮಾಡಬಹುದು' ಎಂದು ಉತ್ತರಬರೆದು ಕಳುಹಿಸಿ ತಕ್ಕ ಪರಿವಾರದೊಡನೆ ಮಂಡಿಕಲ್ಲಿಗೆ ಹೋಗಿ ತನ್ನ ಪರಿವಾರಕ್ಕೆ ಎಚ್ಚರದಿಂದಿರುವಂತೆ ಅಪ್ಪಣೆಯನ್ನು ಮಾಡಿ ಅಂಗರಕ್ಷಕರೊಡನೆ ಬೈಚೇಗೌಡನಿಳಿದಿದ್ದ ಸ್ಥಳಕ್ಕೆ ಹೋದನು. ಅವನು ರಾಮೇಗೌಡನನ್ನು ಆದರದಿಂದ ಕರೆದುಕೊಂಡು ಹೋಗಿ ಉಚಿತಾಸನದಲ್ಲಿ ಕುಳ್ಳಿರಿಸಿ ಕುಶಲಪ್ರಶ್ನಾನಂತರ ಲಗ್ನವಿಚಾರವಾಗಿ ಮಾತನಾಡುತ್ತ ಕುಳಿತಿದ್ದು ರಾಮೇಗೌಡನ ಹಿಂದೆ ನಿಂತಿದ್ದ ಅಂಗರಕ್ಷಕನಿಗೆ ಸಂಜ್ಞೆಮಾಡಿದನು. ಮೊದಲೇ ಲಂಚತಿಂದಿದ್ದ ಆಸ್ವಾಮಿದ್ರೋಹಿಯು ತನ್ನ ಕಯ್ಯ ಬಾಕಿನಿಂದ ಒಂದೇ ಪೆಟ್ಟಿಗೆ ದಣಿಯನ್ನು ತಿವಿದು ಕೊಂದನು. ಬಳಿಯಲ್ಲಿದ್ದ ಮತ್ತೊಬ್ಬ ಸ್ವಾಮಿಭಕ್ತನಾದ ಅಂಗರಕ್ಷಕನು ತನ್ನ ಕತ್ತಿಯ ಪೆಟ್ಟಿನಿಂದ ಅವನನ್ನು ತುಂಡುತುಂಡಾಗಿ ಕತ್ತರಿಸಿದನು. ಅನಂತರ ಉಭಯಸೈನ್ಯಗಳಿಗೂ ಯುದ್ಧವಾಗಿ ಬೈಚೇಗೌಡನೇ ಜಯವನ್ನು ಪಡೆದು ಗುಡಿಬಂಡೆಯನ್ನು ಚಿಕ್ಕಬಳ್ಳಾಪುರಕ್ಕೆ ಸೇರಿಸಿಕೊಂಡನು.

ಅಧ್ಯಾಯ—೮.

ಹೊಳವನಹಳ್ಳಿ, ಕೊರಟಗೆರೆ ಮೊದಲಾದುವು.

ಹೊಳವನಹಳ್ಳಿ — ಇದನ್ನು ಕರಿಯಂ ಪುರವೆಂದು ಕರೆಯುತ್ತಿದ್ದರು. ಹೊಳವೇಗೌಡನೆಂಬುವನು ಕೆಲವು ಕೀಳುಜಾತಿಯ ಜನರಿಗೆ ಅಧಿಪತಿಯಾಗಿ ಈ ಗ್ರಾಮವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದನು. ಕಂಚಿಯ ಪ್ರಾಂತ್ಯದಿಂದ ಬಂದು ಆವತಿಯಲ್ಲಿ ರಾಜನಾಗಿದ್ದ ರಣಬೈರೇಗೌಡನ ವಂಶದ ಇಮ್ಮಡಿ ರಣಬೈರೇಗೌಡನೂ ವೀರೇಗೌಡನೂ ಕರಿಯಂ ಪುರವನ್ನು ಸ್ವಾಧೀನಪಡಿಸಿಕೊಂಡು ಕೋಟೆ ಪೇಟೆಗಳನ್ನು ಕಟ್ಟಿಸಿ ಆಳತೊಡಗಿದರು. ಅಲ್ಲಿನ ನಿವಾಸಿಗಳು ತಮ್ಮ ಹಿಂದಣ ಒಡೆಯನಾದ ಹೊಳವೇಗೌಡನ ಹೆಸರನ್ನೇ ಈ ಗ್ರಾಮಕ್ಕೆ ಇಡಬೇಕೆಂದು ಕೇಳಿಕೊಂಡುದರಿಂದ ಪ್ರಜೆಗಳ ಇಷ್ಟದಂತೆ ಇಮ್ಮಡಿ ರಣಬೈರೇಗೌಡನು "ಹೊಳವನಹಳ್ಳಿ" ಎಂದು ಹೆಸರಿಟ್ಟನು. ಈ ಗೌಡನು ವಿಜಯನಗರದ ಚಕ್ರವರ್ತಿಗಳ ಕೃಪಾಪಾತ್ರನಾಗಿ ಸಂವತ್ಸರಕ್ಕೆ ೬೦೦೦ ವರಹಗಳ ಉತ್ಪತ್ತಿಯುಳ್ಳ ಭೂಮಿಯನ್ನೂ, ೩೩ ಗ್ರಾಮಗಳ ಜಹಗೀರಿಯನ್ನೂ ಪಡೆದುಕೊಂಡು, ರಾಜ್ಯವನ್ನು ವಿಸ್ತರಿಸಿ ವ್ಯವಸಾಯ ವ್ಯಾಪಾರಗಳನ್ನು ಅಭಿವೃದ್ಧಿಗೊಳಿಸಿ ದೇಶಾಭಿಮಾನಿಯೆನ್ನಿಸಿಕೊಂಡು ಪ್ರಜಾಪ್ರೀತಿಯನ್ನು ಸಂಪಾದಿಸಿ ೭ ಸಂವತ್ಸರಗಳು ರಾಜ್ಯವಾಳಿದನು. ಹೊಳವನಹಳ್ಳಿ, ದೊಡ್ಡಬಳ್ಳಾಪುರ, ಮಾಗಡಿ ಈ ದೊರೆಗಳೆಲ್ಲಾ ಒಂದೇ ಬುಡಕಟ್ಟಿನವರಾದರೂ ಕ್ರಮೇಣ ಜ್ಞಾತಿಮಾತ್ಸರ್ಯದಿಂದ ಒಬ್ಬರ ಮೇಲೊಬ್ಬರು ಬಿದ್ದು ಕಾದುತ್ತಿದ್ದರು. ಮುಮ್ಮಡಿ ರಣಬೈರೇಗೌಡನ ಪ್ರಖ್ಯಾತಿಯನ್ನು ಕೇಳಿ ಮಾಗಡಿ ಕೆಂಪೇಗೌಡನು ದಂಡೆತ್ತಿ ಬಂದು ಹೊಳವನ ಹಳ್ಳಿಯನ್ನು ಮುತ್ತಿ ಅವನನ್ನು ಸೋಲಿಸಿ ತನ್ನ ತಮ್ಮನಾದ ಅಂಕೇಗೌಡನಿಗೆ ಅಲ್ಲಿಯ ದೊರೆತನವನ್ನು ಕಟ್ಟಿದನು. ಈ ಅಂಕೇಗೌಡನು ೭ ಸಂ|| ಗಳು ರಾಜ್ಯವಾಳಿದನು. ದೊಡ್ಡಬಳ್ಳಾಪುರದ ಹಾವಳಿ ಬೈರೇಗೌಡನು ಹೊಳವನಹಳ್ಳಿಯನ್ನು ಕಿತ್ತುಕೊಂಡು ಅಂಕೇಗೌಡನನ್ನೂ ಅವನ ಸಂಬಂಧಿಗಳನ್ನೂ ಹುಲಿಕಲ್ಲಿನಲ್ಲಿ ಸೆರೆಯಿಟ್ಟನು. ಇದಕ್ಕಾಗಿ ರಣಬೈರೇಗೌಡನೂ ಈತನ ಮಗ ದೊಡ್ಡಬೈಚೇಗೌಡನೂ ಶೀರ್ಯದ ನವಾಬರ ಸ್ನೇಹಬೆಳಸಿದರು. ನವಾಬರು ಇವರನ್ನು ಬಹುಮರ್ಯಾದೆಯಿಂದ ಕಂಡು ಇವರಿಗೆ "ಸರ್ವಾಧಿಕಾರಿ" ಎಂಬ ಬಿರುದನ್ನು ಕೊಟ್ಟು ತಮ್ಮ ಅಧೀನದಲ್ಲಿಟ್ಟುಕೊಂಡು ಹೊಳ

ವನಹಳ್ಳಿಯನ್ನು ಸಾಧಿಸಿಕೊಡುವುದಾಗಿ ಒಪ್ಪಿಕೊಂಡರು. ಈ ರಣಬೈರೇಗೌಡನ ಕಿರಿಯ ಮಗನಾದ ಸಣ್ಣ ಬೈರೇಗೌಡನು ದೊಡ್ಡಬಳ್ಳಾಪುರದ ದೊರೆಯ ಸಹಾಯವನ್ನಪೇಕ್ಷಿಸಿ ಆ ಸೈನ್ಯಬಲದಿಂದ ಹೊಳವನಹಳ್ಳಿಯ ಮೇಲೆ ಬಿದ್ದು ಪುಂಡನ್ನಡಗಿಸಿದನು. ಶೀರ್ಯದ ಮುಸಲ್ಮಾನ್ ಸೈನ್ಯದೊಡನೆ ಸೇರಿ ಅಂಕೇಗೌಡನೊಡನೆ ಯುದ್ಧಮಾಡುವಾಗ ರಣಬೈರೇಗೌಡನು ಮೃತನಾದನು.

ಈತನ ಹಿರಿಯ ಮಗನಾದ ದೊಡ್ಡ ಬೈಚೇಗೌಡನಿಗೆ ಶೀರ್ಯದ ನವಾಬರು ಹೊಳವನಹಳ್ಳಿಗೆ ಮತ್ತಷ್ಟು ಸೀಮೆಯನ್ನು ಸೇರಿಸಿ ಪಟ್ಟವನ್ನು ಕಟ್ಟಿ ತಮಗೆ ಪೊಗದಿಯನ್ನು ಕೊಡುತ್ತ ಬರುವಂತೆ ಒಪ್ಪಂದಮಾಡಿಕೊಂಡರು. ಇವರ ಅಂತಃಕಲಹಗಳಿಂದ ಮತ್ತೆ ದೊಡ್ಡಬಳ್ಳಾಪುರವು ಮುಸಲ್ಮಾನರ ಪಾಲಾಯಿತು. ಹೊಳವನಹಳ್ಳಿಯೂ ಮುಸಲ್ಮಾನರಿಗೆ ದಕ್ಕಿಹೋಗಿದ್ದಿತು. ಲಾರ್ಡ್ ಕಾರ್ನ್‌ವಾಲಿಸನು ಕ್ರಿ. ಶ. ೧೭೯೨ ರಲ್ಲಿ ಯುದ್ಧಕ್ಕೆ ಬಂದು ಮುಸಲ್ಮಾನರನ್ನು ಜಯಿಸಿ ಹಕ್ಕುದಾರನಾದ ದೊಡ್ಡ ಬೈರೇಗೌಡನ ವಂಶಸ್ಥ ದೊಡ್ಡರಾಮ ಬೈಚೇಗೌಡನಿಗೆ ಪುನಃ ಪಟ್ಟವನ್ನು ಕಟ್ಟಿದನು. ಅನಂತರ ದೊಡ್ಡರಾಮ ಬೈಚೇಗೌಡನೂ ಆತನ ವಂಶೀಯರೂ ಸ್ವಲ್ಪಕಾಲ ನಿರಾತಂಕವಾಗಿ ರಾಜ್ಯಭಾರಮಾಡಿ ಪ್ರಜೆಗಳನ್ನು ಸುಖದಿಂದ ರಕ್ಷಿಸಿ ಕೀರ್ತಿಶೇಷರಾದರು. ಹೊಳವನ ಹಳ್ಳಿಯಲ್ಲಿ ಗೌಡದೊರೆಗಳು ತ್ರಿಮತಸ್ಥಶ್ರೋತ್ರಿಯಬ್ರಾಹ್ಮಣರಿಗೂ ವಿಶೇಷವಾಗಿ ಪ್ರೋತ್ಸಾಹಕೊಟ್ಟು ವೇದಶಾಸ್ತ್ರಾಭ್ಯಾಸಗಳಿಗೆ ಸಹಾಯಮಾಡಿದರು. ಅಲ್ಲಿನವರು ಈಗಲೂ ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ಪಂಡಿತರಾಗಿದಾರೆ. ಗೌಡರು ಕೊಟ್ಟಿರುವ ದಾನಶಾಸನಗಳು ಅನೇಕವಿವೆ.

ಕೊರಟಗೆರೆ—ಹೊಳವನಹಳ್ಳಿಯನ್ನು ಆಳಿದ ರಣಬೈರೇಗೌಡನು ಕೊರಟಗೆರೆಯ ಬೆಟ್ಟದ ಮೇಲೆ ಕೋಟೆಯನ್ನೂ ಪೇಟೆಯನ್ನೂ ಕಟ್ಟಿಸಿ ಇದನ್ನೇ ರಾಜಧಾನಿಯಾಗಿ ಮಾಡಿಕೊಂಡು ಗುಂಡಕಲ್, ಇರಕಸಂದ್ರ, ಸಾಗ್ಗೆರೆ, ಕೋಳಾಲ, ಮತ್ತು ದಾಸರಹಳ್ಳಿ ಹೋಬಳಿಗಳನ್ನು ಇದಕ್ಕೆ ಸೇರಿಸಿಕೊಂಡು ಕೆರೆ ಕುಂಟೆಗಳನ್ನು ಕಟ್ಟಿಸಿ ರೈತರಿಗೆ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಮಾಡಿಕೊಟ್ಟು ಸಂವತ್ಸರಕ್ಕೆ ೬೦೦೦ ವರಹಗಳ ಸುವರ್ಣಾದಾಯವನ್ನು ಪಡೆಯುತ್ತ ವಿಜಯನಗರದ ಚಕ್ರವರ್ತಿಗಳಿಗೆ ಸಂವತ್ಸರಕ್ಕೆ ೩೦೦೦ ವರಹ ಪೊಗದಿಯನ್ನೂ ಸೈನ್ಯದ ವೆಚ್ಚವನ್ನೂ ಕಟ್ಟಿಕೊಟ್ಟು ಪ್ರಜಾ

ರಂಜಕನಾಗಿ ಪ್ರಭುತ್ವಮಾಡಿ ಈ ಲೋಕವನ್ನು ಬಿಟ್ಟನು. ಈತನ ವಂಶೀಯರು ಅನೇಕಸಂವತ್ಸರಗಳು ಪ್ರಭುತ್ವಮಾಡಿದಾರೆ. ಶ್ರೀ ಗಂಗಾಧರೇಶ್ವರಸ್ವಾಮಿಯ ದೇವಸ್ಥಾನವೂ, ಶ್ರೀ ಪಾರ್ವತೀ ಅಮ್ಮನವರ ದೇವಸ್ಥಾನವೂ, ಬೆಟ್ಟದ ಮೇಲಣ ಶ್ರೀ ಬಸವೇಶ್ವರದೇವಸ್ಥಾನವೂ ಗೌಡದೊರೆಗಳಿಂದ ಕಟ್ಟಲ್ಪಟ್ಟುವು. ಇಲ್ಲಿ ಟಂಕಸಾಲೆಯನ್ನಿಟ್ಟು ಚಿನ್ನದ ನಾಣ್ಯಗಳನ್ನು ಮಾಡಿಸುತ್ತಿದ್ದರೆಂಬುದಕ್ಕೆ ನಿದರ್ಶನವಾಗಿ ಅಪರೂಪವಾಗಿ ಚಿನ್ನದ ನಾಣ್ಯಗಳು ದೊರೆಯುವುದುಂಟು. ಟಂಕಸಾಲೆಯಿದ್ದ ಸ್ಥಳವನ್ನು ಇಲ್ಲಿನವರು ಈಗಲೂ ತೋರಿಸುತ್ತಾರೆ. ಆವ ದೊರೆಯ ಕಾಲದಲ್ಲಿ ಟಂಕಸಾಲೆಯಾಗಿ ಎಲ್ಲಿಯವರೆಗೆ ನಡೆಯುತ್ತಿದ್ದಿತೆಂಬುದಕ್ಕೆ ಸರಿಯಾದ ಆಧಾರ ದೊರೆತಿಲ್ಲ. ಗೌಡ ದೊರೆಗಳ ಕಾಲದಲ್ಲಿ ಈ ಸೀಮೆಯ ಪ್ರಜೆಗಳು ಸಂತುಷ್ಟರಾಗಿ ಇದ್ದರು. ಈಗಲೂ ಜನರು ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಿದಾರೆ.

ಕೊರಟಗೆರೆ ರಣಬೈರೇಗೌಡನ ಸಂತತಿಯ ಕೊನೆಯ ದೊರೆ ಕರಿಯಪ್ಪಗೌಡನಿಗೆ ವೆಂಕಟನಾರಾಯಣಸ್ವಾಮಿ, ಚಿಕ್ಕಪ್ಪಯ್ಯ, ಕಿರೀಟಪ್ಪಯ್ಯ, ಬೈರೇಗೌಡ ಎಂಬ ನಾಲ್ವರು ಮಕ್ಕಳಿದ್ದರು. ಅವರು ಹುಲಿಕಲ್ಲು, ಇನಮಿಂಚೇನಹಳ್ಳಿ ಮುಂತಾದ ಸ್ಥಳಗಳಲ್ಲಿದ್ದರು. ಅವರ ವಂಶಸ್ಥರು ಈಗಲೂ ಆ ಗ್ರಾಮಗಳಲ್ಲಿ ಇದ್ದಾರೆ.

ಈ ದೊರೆಗಳ ಸತ್ಯ, ಸೌಶೀಲ್ಯ, ಪರಾಕ್ರಮ, ಔದಾರ್ಯಾದಿಗಳನ್ನು ಕುರಿತು ಅಲ್ಲಿನ ಜನರು ಕನ್ನಡ ತೆಲುಗು ಭಾಷೆಗಳಲ್ಲಿ ಅನೇಕ ಪದ, ಪದ್ಯಗಳನ್ನು ಹೇಳಿಕೊಳ್ಳುತ್ತಾರೆ. ರಣಬೈರೇಗೌಡನ ಪ್ರಭುತ್ವಕಾಲದಲ್ಲಿ ಒಂದು ದಿನ ಮಳೆಯಿಂದ ಒಬ್ಬ ಬ್ರಾಹ್ಮಣನ ಮನೆಯ ಎರಡು ದೂಲಗಳು ಮುರಿದು ಬಿದ್ದು ಮನೆಯಲ್ಲೆಲ್ಲಾ ನೀರು ತುಂಬಿಕೊಂಡು ಮಕ್ಕಳು ಮರಿಗಳು ನಿಲ್ಲುವುದಕ್ಕಾಗದೆ, ಅಂಧಕಾರಮಯವಾದ ಮಧ್ಯರಾತ್ರಿಯಲ್ಲಿ ಮತ್ತೆಲ್ಲಿಗೆ ಹೋಗಿ ತಲೆತಪ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದೆ ಹೋಯಿತಂತೆ. ಆಗ ಆ ಬ್ರಾಹ್ಮಣನು ಅರಮನೆಗೆ ಹೋಗಿ ಕೂಗಿಕೊಳ್ಳಲು ಆ ಆರ್ತಧ್ವನಿಯನ್ನು ಕೇಳಿ ರಾಜನು ಎಚ್ಚತ್ತು ಆ ಬ್ರಾಹ್ಮಣನನ್ನು ಒಳಕ್ಕೆ ಕರೆಸಿಕೊಂಡು ನಿಮಗೇನು ಬೇಕೆಂದು ಕೇಳಿದುದಕ್ಕೆ ಆತನು,

ಕಂ|| ನೀಲಾಲ ಪೋಗುಲುನ್ನವಿ |
ಚಾಲಾ ನೀವಿಚ್ಚಿನಟ್ಟಿಸಂಪದಲುನ್ನವಿ ||
ದೂಲಾಲು ರೆಂಡು ಕಾವಲೆ |
ಲೋಲಾ ರಣಬೈರಭೂಪ ನೃಪಕುಲದೀಪ ||

ನೀನು ಕೊಟ್ಟಿರುವ ಸಕಲಸಂಪತ್ತುಗಳೂ ನನಗಿವೆ. ಪ್ರಕೃತ ಎರಡು ದೂಲಗಳನ್ನು ಮಾತ್ರ ಬೇಡುವೆನು ಎಂಬದಾಗಿ ಪದ್ಯರೂಪದಿಂದ ಹೇಳಲು ಬೇರೆ ದೂಲಗಳನ್ನು ತರಿಸಿ ಕೊಡುವಷ್ಟು ಕಾಲವಿಲ್ಲದುದರಿಂದ ದೊರೆಯು ಅರಮನೆಯ ಎರಡು ದೂಲಗಳನ್ನು ಕೀಳಿಸಿ ಕೊಟ್ಟನಂತೆ.

೧೬೩೩ ರಲ್ಲಿ ಸಣ್ಣ ಬೈರೇಗೌಡನು ತನ್ನ ಸೇನಾನಾಯಕರಾದ ಬೈಚೇ ಗೌಡ, ತಿಂಮೇಗೌಡ, ರಂಗೇಗೌಡ, ಸಂಜೀವೇಗೌಡ ರಾಮೇಗೌಡ ರುಗಳನ್ನು ಸೈನ್ಯಸಮೇತವಾಗಿ ಮಿಡಿಗೇಶಿಯ ಪಾಳೆಯಗಾರನ ಮೇಲೆ ಯುದ್ಧ ಮಾಡುವುದಕ್ಕೆ ಕಳುಹಿಸಿದನು. ಉಭಯ ಸೈನ್ಯಗಳೂ ಮುಸುವಿನ ಕಲ್ಲಿನ ಬಳಿ ಸಂಧಿಸಿ ಪರಾಕ್ರಮದಿಂದ ಯುದ್ಧಮಾಡಿ ಮಿಡಿಗೇಶಿ ಚಿಕ್ಕಪ್ಪಗೌಡನನ್ನು ಹಿಮ್ಮೆಟ್ಟಿಸಿ, ಪರಿಗಿ ಎಂಬ ಊರಿನ ಸಮೀಪದಲ್ಲಿ ಆತನ ತಲೆಯನ್ನು ಕಡಿದು ಸನೀನಿಗೆ ಚುಚ್ಚಿಕೊಂಡು ಒಡೆಯನಾದ ಸಣ್ಣಬೈರೇಗೌಡನ ಬಳಿಗೆ ತಂದು "ಇಗೋ ನಿಮ್ಮ ವೈರಿಯ ತಲೆಯನ್ನು ತಂದಿರುವೆವು" ಎಂದು ಬಿನ್ನವಿಸಿದರು. ಅವರ ಪರಾಕ್ರಮಕ್ಕೆ ಮೆಚ್ಚಿ, ಗೌಡನು ಅವರಿಗೆ ಕೆಲವು ಗ್ರಾಮಗಳನ್ನು ಜಹಗೀರಾಗಿ ಕೊಟ್ಟು ಸನ್ನದನ್ನು ಬರೆಯಿಸಿದನು. ಅದರ ಕೆಳಗಡೆಯಲ್ಲಿ ಸಣ್ಣಬೈರೇ ಗೌಡರು ಬರೆಸಿರುವ ಸನ್ನದು ಎಂದಿದೆ. ಇದನ್ನು ಕೊರಟಗೆರೆ ನಾಗಲಿಂಗಾ ಚಾರ್ಯರು ಶಾಸನದ ಇಲಾಖೆಗೆ ಒಪ್ಪಿಸಿರುತ್ತಾರೆ.

ಕೊರಟಗೆರೆಯ ಬೆಟ್ಟದ ಹಿಂದೆ ಈಗ ದಳವಾಯಿ ಗುಂಡುಗಳೆಂದು ಕರೆಯಲ್ಪಡುತ್ತಿರುವುದೇ ಗೌಡ ಪಾಳೆಯಗಾರನ ಮಗಳಾದ ಬೈಯಮ್ಮನ ದ್ರೋಹಿಗಳಾದ ದಳವಾಯಿಗಳ ತಲೆಗಳೆಂದು ಪ್ರತೀತಿಯಿದೆ. ಗೋಕುಲದ ಊರಲ್ಲಿರುವ ಶ್ರೀ ಆಂಜನೇಯಸ್ವಾಮಿಯ ಗುಡಿಯ ಬಳಿಯಲ್ಲಿ ಬೈಯಮ್ಮನು ತನ್ನ ಹೆಸರಿಂದ ಕಟ್ಟಿಸಿರುವ ಜಲಾಶಯವೂ, ಯುದ್ಧದ ಗುರುತುಗಳನ್ನು ತೋರಿಸುವ ಮಾಸ್ತಿ ಕಲ್ಲುಗಳೂ, ಅಲ್ಲಲ್ಲಿಯೇ ಇರುತ್ತವೆ. ಇದಕ್ಕೆ ರಣಭೈರೇಗೌಡನ ಕೊರಟಗೆರೆ ಎಂದು ಪ್ರತೀತಿ ಇದೆ.

ರಾಂಪುರ—ಇದು ಕೊರಟಗೆರೆ ತಾಲ್ಲೂಕಿನಲ್ಲಿ ಜಯಮಂಗಲೀ ನದಿಯ ತೀರದಲ್ಲಿದೆ. ಇದು ಹೊಳವನಹಳ್ಳಿ, ಕೊರಟಗೆರೆ ದೊರೆಗಳ ಪಾಳೆಯಪಟ್ಟಿಗೆ ಸೇರಿ ಬಹುಕಾಲ ಗೌಡದೊರೆಗಳಿಂದ ಪರಿಪಾಲಿಸಲ್ಪಟ್ಟು ಶ್ರೋತ್ರಿಯ ಬ್ರಾಹ್ಮಣರ ಮತ್ತು ಲಿಂಗಾಯತರ ನಿವಾಸಸ್ಥಾನವಾಗಿ ಪ್ರಸಿದ್ಧಿಗೊಂಡಿದೆ. ಈ ಗ್ರಾಮದ ದೇವಸ್ಥಾನದ ಬಳಿ ಕಲ್ಲಿನ ಮೇಲೆ ೧|| ಅಡಿ ಎತ್ತರದ ಕೆಂಪೇಗೌಡನ ಮೂರ್ತಿಯು ಕೆತ್ತಲ್ಪಟ್ಟಿದೆ. ಇದರಿಂದ ಈ ದೇವಾಲಯವನ್ನು ಕೆಂಪೇಗೌಡನು ಕಟ್ಟಿಸಿರಬಹುದೆಂದು ತಿಳಿಯುತ್ತದೆ.

ದುರ್ಗಗಳು—ಹೊಳವನಹಳ್ಳಿ ನಾಡಿನ ದೊರೆಗಳು ದೇವರಾಯ ದುರ್ಗ, ಚನ್ನರಾಯದುರ್ಗ, ಮಾಕಳಿದುರ್ಗ ಮೊದಲಾದುವನ್ನು ಸ್ವಾಧೀನಪಡಿಸಿಕೊಂಡು, ಕೋಟೆ ಕೊತ್ತಳಗಳನ್ನು ಕಟ್ಟಿಸಿ, ಯುದ್ಧೋಪಕರಣಗಳನ್ನೂ, ಧನಧಾನ್ಯಗಳನ್ನೂ ಸಂಗ್ರಹಿಸಿ ಬೆಟ್ಟಗಳ ಮೇಲೆ ಕಟ್ಟಿಸಿರುವ ಉಗ್ರಾಣಗಳಲ್ಲಿಡುತ್ತಿದ್ದರು. ಈಗಲೂ ಆ ಬೆಟ್ಟಗಳ ಮೇಲೆ ಹಳೆಯ ಕಟ್ಟಡಗಳೂ, ಕೋಟೆಗಳೂ ಇರುತ್ತಿವೆ.

ಮದ್ದಗಿರಿಯ ಪಾಳೆಯಗಾರನ ವಂಶಸ್ಥ ಚನ್ನಪ್ಪಗೌಡನಿಂದ ೧೭ ನೆಯ ಶತಮಾನದಲ್ಲಿ ಚನ್ನರಾಯನ ದುರ್ಗವು ಕಟ್ಟಲ್ಪಟ್ಟಿತು. ಅದರ ಮೇಲೆ ಚನ್ನರಾಯ ದೇವಸ್ಥಾನವೂ, ಈಶ್ವರದೇವಸ್ಥಾನವೂ ಇವೆ. ಅರ್ಧಚಂದ್ರಾಕಾರವಾಗಿರುವ ದೊಣೆಯು ನೀರಿನಿಂದ ತುಂಬಿದೆ. ಶಿಥಿಲವಾಗುತ್ತಿರುವ ಕೋಟೆಯೂ, ಮದ್ದಿನ ಮನೆಯೂ, ಧಾನ್ಯದ ಕಣಜಗಳೂ ನಿಂತಿರುವವು. ಬೆಟ್ಟದ ಕಿಬ್ಬಿಯಲ್ಲಿ ಮುರಾರಿ ಸ್ವಾಮಿಯ ಮಠವಿದೆ. ಈ ಗುರುವು ಶರೀರಸಮೇತ ಕೈಲಾಸಕ್ಕೆ ಹೋದನೆಂದು ಹೇಳುತ್ತಾರೆ. ಈತನ ಪಾದರಕ್ಷೆಗಳನ್ನು ಈಗಲೂ ಭಕ್ತರು ಪೂಜಿಸುತ್ತಾರೆ. ಗವಿಯ ಬಳಿ ವೈಕುಂಠಪ್ಪನ ಸಮಾಧಿಯೂ, ಮುರಾರಿಸ್ವಾಮಿಯ ಭಕ್ತೆಳಾದ ಅನ್ನಪೂರ್ಣಮ್ಮನ ಸಮಾಧಿಯೂ ಇವೆ. ಈಕೆಯು ಅರ್ಧಸೇರು ಅಕ್ಕಿಯಿಂದ ಅನ್ನಮಾಡಿ ಅನೇಕ ಜನರಿಗೆ ತೃಪ್ತಿಗೊಳಿಸುತ್ತಿದ್ದಳಂತೆ.

ಮದ್ದಗಿರಿ--ಹದಿಮೂರನೆಯ ಶತಮಾನದ ಕೊನೆಯ ಭಾಗದಲ್ಲಿ ಇದಕ್ಕೆ ಮಧುಗಿರಿ ಎಂಬ ಹೆಸರಿದ್ದಿತು. ಹಿರೇ ವೀರಪ್ಪಗೌಡನು ಮಧುಗಿರಿ ಬೆಟ್ಟವನ್ನೂ ಪಕ್ಕದ ಗ್ರಾಮಗಳನ್ನೂ ವಶಪಡಿಸಿಕೊಂಡು ಬಹಳ ಪ್ರಬಲನಾಗಿ

ಪರಾಕ್ರಮದಿಂದ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿ ಪ್ರಜೆಗಳ ವಾಸಕ್ಕೆ ಊರನ್ನು ಕಟ್ಟಿಸಿ ರಾಜಹಿರೇಗೌಡನೆಂದು ಪ್ರಖ್ಯಾತಿಗೆ ಬಂದನು. ಇವನ ಅನಂತರ ಇವನ ಮಗ ವೀರಪ್ಪಗೌಡನು ಪ್ರಬಲಕ್ಕೆ ಬಂದು ಸುತ್ತಲೂ ಇರುವ ನಾಡುಗಳನ್ನು ವಶಪಡಿಸಿಕೊಂಡು ಕೋಟೆ ಕೊತ್ತಲಗಳನ್ನು ಅಭಿವೃದ್ಧಿಪಡಿಸಿ ಧನ ಧಾನ್ಯಗಳನ್ನೂ, ಮದ್ದು ಗುಂಡು ಮೊದಲಾದ ಯುದ್ಧೋಪಕರಣಗಳನ್ನೂ ಕೋಟೆಯಲ್ಲಿ ಇಟ್ಟುಕೊಂಡು ಅಲ್ಲಿಯೇ ರಾಜಕಾರ್ಯಗಳನ್ನು ಮಾಡುತ್ತಿದ್ದನು. ಈತನ ಮಗ ಕಾಳೆ ಚಿಕ್ಕಪ್ಪಗೌಡನು ವಿಜಯನಗರದ ಶ್ರೀರಂಗರಾಯರ ಅಪ್ಪಣೆಯಂತೆ ತಮ್ಮ ಹಿರಿಯರು ಆರ್ಜಿಸಿದ ನಾಡುದುರ್ಗಗಳನ್ನು ಅಭಿವೃದ್ಧಿಪಡಿಸಿ ಪ್ರತಿ ಗ್ರಾಮಗಳ ಎಲ್ಲೆಕಟ್ಟುಗಳನ್ನೂ ನಿರ್ಧರಿಸಿದನು. ಮದ್ದಗಿರಿ ಗ್ರಾಮದ ಗೌಡಿಕೆಯನ್ನು ರಂಗೇಗೌಡ, ರಾಮೇಗೌಡರಿಗೆ ವಹಿಸಿ ೧೬೪೮ ರಲ್ಲಿ ಒಂದು ಸನ್ನದನ್ನು ಬರೆಸಿ ಅದಕ್ಕೆ ಮಂತ್ರಿ ಭಾಸ್ಕರಪಂತ, ಸೇನಾನಾಯಕ ಹರಿನರಸೈಯ್ಯ, ಮುನಷಿ ರಂಗನಾಥರಾಯ ಇವರುಗಳ ಕೈಬರಹಮಾಡಿಕೊಟ್ಟಿದ್ದಾನೆ. ಅದನ್ನು ಮದ್ದಗಿರಿ ಪಟೇಲ ದೊಡ್ಡರಂಗೇಗೌಡ ಚಿಕ್ಕರಂಗೇಗೌಡರು, ಶಾಸನದ ಆಫೀಸಿಗೆ ಒಪ್ಪಿಸಿರುತ್ತಾರೆ. ಇವನಮಗ ಇಮ್ಮಡಿ ಚಿಕ್ಕಪ್ಪಗೌಡನು ಮಹಾನಾಡು ವಿಜಯನಗರದ ಒಂದನೆಯ ವೆಂಕಟಪತಿರಾಯರ ಕಾಲದಲ್ಲಿ ಮದ್ದಗಿರಿಗೆ ೧ ಮೈಲಿ ದೂರದಲ್ಲಿರುವ ಸಿದ್ದಾಪುರವನ್ನು ಕಟ್ಟಿಸಿ ಅಲ್ಲಿ ತನ್ನ ಗುರುವಾದ ಬಲಾರಾಧ್ಯರಿಗೆ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ಮಾನ್ಯ ಮಿರಾಸೆಗಳನ್ನು ಕೊಟ್ಟನು. ತರುವಾಯ ಇವನ ಮಗ ಮುಮ್ಮಡಿ ಚಿಕ್ಕಪ್ಪಗೌಡನು ಬೆಟ್ಟದ ಪಶ್ಚಿಮ ಪಾರ್ಶ್ವದ ಭೀಮನ ದೊಣೆಯನ್ನು ಮಾಡಿಸಿ, ಸುಂದರವಾದ ಆಂಜನೇಯವಿಗ್ರಹವನ್ನು ಪ್ರತಿಷ್ಠಿಸಿದನು. ಈ ವಿಷಯವಾಗಿ ವಿಗ್ರಹದ ಎಡಪಾರ್ಶ್ವದಲ್ಲಿ ಶಾಸನವಿದೆ. ಇವನು ಸಿದ್ದಾಪುರದ ಕೋಟೆಯನ್ನೂ ಮದ್ದಗಿರಿಗೆ ಮೂರು ಮೈಲಿ ದೂರದಲ್ಲಿರುವ ಬಿಜ್ಜವರದ ಕೋಟೆಯನ್ನೂ ಕಟ್ಟಿಸಿದನು. ಈತನು ಮಿಡಗೇಶಿಯನ್ನು ಗೆದ್ದು ಕೆಲವು ಕಾಲ ಆಳುತ್ತಿದ್ದು ಶತ್ರುಗಳ ಹಾವಳಿಯನ್ನು ತಾಳಲಾರದೆ ಬಿಜ್ಜವರದಲ್ಲಿ ಸಮಯೋಚಿತವಾಗಿ ವಾಸಿಸುತಿದ್ದನು. ಇವನ ಅನಂತರ ಇವನ ಸಂತತಿಯವರು ಬಹುಕಾಲ ಆಳುತ್ತಿದ್ದರು. ೧೭೬೮ ರಲ್ಲಿ ಮೈಸೂರು ದೊರೆಗಳು ಮದ್ದಗಿರಿ ಗೌಡರಾಜನನ್ನು ಸೆರೆ ಹಿಡಿದು ಶ್ರೀರಂಗಪಟ್ಟಣದಲ್ಲಿ ಮಡಗಿದ್ದರು. ಕೆಲವು ಕಾಲದ ಮೇಲೆ ಮೈಸೂರು ದೊರೆಗಳಿಗೆ ಕನಿಕರವುಂಟಾಗಿ, ಆತನನ್ನು ಸೆರೆಯಿಂದ ಬಿಡಿಸಿ ಮಿಡಗೇಶಿಯನ್ನು ಜಹಗೀರಾಗಿ ಕೊಟ್ಟು ಅಲ್ಲಿರುವಂತೆ

ಕಟ್ಟುವಮಾಡಿ ಕಳುಹಿಸಿದರು. ಅದರಂತೆ ಅವನೂ ಆತನ ವಂಶೀಯರೂ ಮಿಡ ಗೇಶಿಯಲ್ಲಿ ನಿಂತರು.

ಮದ್ದಗಿರಿ ದುರ್ಗವು ೩೯೩೫ ಅಡಿಗಳ ಎತ್ತರವಿದೆ. ಬೆಟ್ಟದ ಮೇಲೆ ಶತ್ರುಗಳ ಸುಳಿವನ್ನು ಅರಿತು ವರ್ತಮಾನಕೊಡಲು ಇಟ್ಟಿಗೆ ದೊಣೆಯ ಸಮೀಪ ದಲ್ಲಿ ಗುಡಿಗುಡಿ ಎಂಬ ಗುಂಡಿ ಇದೆ. ಇದು ೨|| ಗಜ ಚೌಕನಾಗಿರುತ್ತದೆ. ಇದರ ಕಲ್ಲಿನ ಕಂಭದ ಮಧ್ಯೆ ರಂಧ್ರವಿದೆ. ಇದರಲ್ಲಿ ಸದ್ದ ಮಾಡಿದರೆ ಒಳಗಡೆ ೨೦ ಗಜ ದೂರವಿರುವ ಇಟ್ಟಿಗೆ ದೊಣೆಯ ಗಾರೆಕಟ್ಟಡದಲ್ಲಿ ಕೇಳುತ್ತದೆ. ಇಲ್ಲಿ ಶ್ರೀ ವೆಂಕಟರಮಣಸ್ವಾಮಿಯ ಮತ್ತು ಮಲ್ಲೇಶ್ವರಸ್ವಾಮಿಯ ದೇವಾಲಯಗ ಳಿವೆ. ಇಲ್ಲಿಯ ದಿವ್ಯೋದಕದ ದೊಣೆಗಳೂ, ಗುಹೆಗಳೂ, ಮನೋಹರವಾದ ಸ್ಥಳಗಳೂ, ದವಸ ಧಾನ್ಯಗಳನ್ನು ಸೇರಿಸಿ ಇಡುತ್ತಿದ್ದ ಗಾರೆಯ ಕಣಜಗಳೂ ನೋಟಕರಿಗೆ ಆನಂದವನ್ನು ಉಂಟುಮಾಡುತ್ತವೆ. ಒಬ್ಬ ಇಂಗ್ಲೀಷ್ ಶೋಧಕ ನು ಈ ದುರ್ಗವನ್ನು ನೋಡಿ ಇಂತಹ ಅಂದವಾದ ಪ್ರಕೃತಿಯ ನೋಟವು ಇನ್ನೆ ಲ್ಲಿಯೂ ಇಲ್ಲವೆಂದು ವರ್ಣಿಸಿದ್ದಾನೆ.

ಇದರ ಬುಡದಲ್ಲಿ ಕೆಲವು ಗವಿಗಳಿರುವವು. ಅವುಗಳಲ್ಲಿ ಸಾಧುಗವಿ, ಮೇ ಕೆಗವಿ, ಪಟ್ಟಲದಮ್ಮನ ಗವಿ ಸಿದ್ಧೇಶ್ವರನ ಗವಿ ಎಂಬಿವು ಮುಖ್ಯವಾದುವು. ಇಲ್ಲಿಯ ದಾಳಿಂಬದ ಹಣ್ಣು ಉತ್ಕೃಷ್ಟವಾದುವು. ಇಲ್ಲಿ ಕೆರೆ ತಲಪರಿಗೆಯ ಆಸರೆಯಿಂದ ಭತ್ತದ ಬೆಳೆ ಆಗುತ್ತದೆ.

ಮಿಡಗೇಶಿಯಲ್ಲಿ ಆಳುತ್ತಿದ್ದ ಕುಂಚಿಟಿಗ ಗೌಡರ ಮನೆದೇವರೂ ಮಲ್ಲೇಶ್ವರ; ಮದ್ದಗಿರಿ ಬೆಟ್ಟದ ಮೇಲೆ ಇರುವ ದೇವರೂ ಮಲ್ಲೇಶ್ವರ; ಆದಿಯಿಂದಲೂ ಮದ್ದ ಗಿರಿ ಗೌಡಿಕೆಯನ್ನು ಕುಂಚಿಟಿಗ ಗೌಡರೇ ನೋಡುತ್ತಿರುತ್ತಾರೆ. ಆದುದರಿಂದ ಮದ್ದಗಿರಿಯದೊರೆಯು ಕುಂಚಿಟಿಗ ಗೌಡನಾಗಿರಬೇಕೆಂದು ಊಹಿಸಬಹುದು.

ಮಿಡಗೇಶಿ—ಇದನ್ನು ನಾಗರೆಡ್ಡಿ ಎಂಬ ಪಾಳೆಯಗಾರನು ಆಳು ತ್ತಿದ್ದನು. ಈತನ ಹೆಂಡತಿಯು ತಲೆಗೂದಲು ಉದ್ದವಾಗಿ ಮಡದ ವರೆಗೂ ಬೀಳುತ್ತಿದ್ದುದರಿಂದ ಮಡಕೇಶಿ ಎಂದು ಅವಳನ್ನು ಕರೆಯುತ್ತ ಆ ವೂರಿಗೆ ಆ ಹೆಸರನ್ನೇ ಇಟ್ಟನು. ಅದೇ ಈಗ "ಮಿಡಗೇಶಿ" ಎಂದು ಕರೆಯಲ್ಪಡುತ್ತಿ ರುವುದು. ಇಲ್ಲಿಯ ವೆಂಕಟರಮಣಸ್ವಾಮಿಯ ದೇವಸ್ಥಾನದ ದಕ್ಷಿಣಭಾಗದಿಂದ

ಪಾಳೆಯಗಾರನ ಅರಮನೆಗೆ ಸುರಂಗಮಾರ್ಗ (ಒಳಮಾರ್ಗ) ಇದ್ದಿತು. ಈಗ ಅದು ಮುಚ್ಚಲ್ಪಟ್ಟಿದೆ. ದೇವಸ್ಥಾನದ ಇದಿರಿನಲ್ಲಿ ಕೈ ಜೋಡಿಸಿಕೊಂಡಿರುವ ಒಂದೂವರೆ ಅಡಿಯ ವಿಗ್ರಹವೇ ನಾಗರೆಡ್ಡಿಯದೆಂದು ಹೇಳುತ್ತಾರೆ. ದೇವಸ್ಥಾನದ ಇದಿರಿಗಿರುವ ಗರುಡವಿಗ್ರಹದ ಎರಡು ತೋಳುಗಳ ರಂಧ್ರದಿಂದಲೂ ಉದಯಸೂರ್ಯನ ಕಿರಣಗಳು ದೇವರ ಪಾದದ ಮೇಲೆ ಬೀಳುವಂತೆ ಶಿಲ್ಪಿಗಳು ಚಾತುರ್ಯದಿಂದ ನಿರ್ಮಿಸಿದ್ದಾರೆ.

ಮಲ್ಲೇಶ್ವರದೇವಸ್ಥಾನವು ಕುಂಚಿಟಿಗ ಗೌಡರಿಂದ ಕಟ್ಟಲ್ಪಟ್ಟಿರುವುದು. ಆಗ ಅಲ್ಲಿ ಇವರ ಆಳ್ವಿಕೆಯು ಇದ್ದಿತು. ಒಂದು ಸಮಯದಲ್ಲಿ ಮುಸಲ್ಮಾನರು ಮಿಡಗೇಶಿಗೆ ಮುತ್ತಿಗೆ ಹಾಕಿದರು. ‹‹ಸೆಟ್ಟೇಸೋರು'' ಗೋತ್ರದ ಗೌಡನ ಕುಮಾರಿ ಪತಿವ್ರತಾಶಿರೋಮಣಿಯಾದ ಚಿಕ್ಕಮಲ್ಲಮ್ಮನೆಂಬ ಕನ್ಯಾರತ್ನವು ಸೆರೆಸಿಕ್ಕಿದಳು. ತಪ್ಪಿಸಿಕೊಂಡು ಬರಲು ಉಪಾಯವಿಲ್ಲದೆ ಅವಳ ಮನೆದೇವರಾದ ಮಲ್ಲೇಶ್ವರನನ್ನು ದೃಢಭಕ್ತಿಯಿಂದ ಪ್ರಾರ್ಥಿಸಿದಳು. ಆಗ ಸೆರೆಮನೆಯ ಕೋಟೆಯು ಸೀಳಿಹೋಗಿ ದಾರಿಯಾಯಿತು. ಈಕೆಯು ಅಲ್ಲಿಂದ ಬೆಟ್ಟವನ್ನಿಳಿದು ಬಂದು ಮಲ್ಲೇಶ್ವರ ಸ್ವಾಮಿಯ ಇದಿರಿನಲ್ಲಿ ನಿಂತು ಮಾನರಕ್ಷಣೆಮಾಡಿದ ಆ ದೇವರನ್ನು ಕೊಂಡಾಡಿ, ಮುಂದೆ ಏನಾಗುವುದೋ ಎಂಬ ಭಯದಿಂದ ಅಗ್ನಿಪ್ರವೇಶಮಾಡಿದಳಂತೆ. ಬೆಟ್ಟದ ಮಧ್ಯದ ಬಂಡೆಯ ಮೇಲೆ ಬಲಗೈಯಲ್ಲಿ ಕತ್ತಿ ಹಿಡಿದು ನಿಂತಿರುವ ಎರಡಡಿ ಎತ್ತರದ ಪ್ರತಿಮೆಯೇ ಈಕೆಯೆಂದು ಹೇಳುತ್ತಾರೆ. ಮಲ್ಲೇಶ್ವರದೇವಸ್ಥಾನದ ತಾಮ್ರಶಾಸನದಿಂದ ಕುಂಚಿಟಿಗರ ಮತದ ಸೆಟ್ಟೇಸೋರು, ಅಲ್ಪೇನೋರು, ಗೋವಿನೋರು ಗೋತ್ರದವರಿಂದ ಇದು ಅಭಿವೃದ್ಧಿಯಲ್ಲಿದ್ದಿತೆಂದು ತಿಳಿಯಬರುತ್ತದೆ. ಇಲ್ಲಿ ಮುಸಲ್ಮಾನರ ಒಂದು ಸುಂದರವಾದ ಮಸೀದಿಯೂ ಇದೆ.

ಮದ್ದಗಿರಿ ಗೌಡದೊರೆಯ ವಂಶಸ್ಥರು ಮಿಡಗೇಶಿಯನ್ನು ಮೈಸೂರು ರಾಜರಿಂದ ಜಹಗೀರಿಯಾಗಿ ಪಡೆದುಕೊಂಡು ಬಹುಕಾಲ ಅನುಭವಿಸಿದರು. ಇವರು ಕೋಟೆ ಕೊತ್ತಳಗಳನ್ನು ಬಹುದ್ರವ್ಯವ್ಯಯದಿಂದ ಕಟ್ಟಿಸಿ, ಪ್ರಜೆಗಳನ್ನು ಪಾಲಿಸುತ್ತಿದ್ದರು. ಇಲ್ಲ ಪತಿವ್ರತಾಶಿರೋಮಣಿಯಾದ ರಾಣಿಯೊಬ್ಬಳು ಸಹಗಮನ ಮಾಡಿದಳಂತೆ. ಅಲ್ಲಿಂದೀಚೆಗೆ ಕೆಲವು ಕಾಲ ರಾಣಿಯರೇ ಜಹಗೀರಿಯನ್ನು ಅನುಭವಿಸುತ್ತಾ ಬಂದರು. ಕಡೆಗೆ ಇದು ಇಮ್ಮಡಿ ಚಿಕ್ಕಪ್ಪಗೌಡನ ವಶವಾಯಿತು.

ಹೈದರನು ಅವನನ್ನು ಓಡಿಸಿದನು. ಇಮ್ಮಡಿ ಚಿಕ್ಕಪ್ಪಗೌಡನು ಕೊರಟಗೆರೆಯ ಬಳಿಯಿರುವ ಮುಸುವಿನ ಕಲ್ಲು ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ರಣಭೈರೇ ಗೌಡನ ವಂಶಜನಾದ ಸಣ್ಣಭೈರೇಗೌಡನಿಂದ ೧೬೩೩ ರಲ್ಲಿ ಕೊಲ್ಲಲ್ಪಟ್ಟನು. ಇದನ್ನು ಮರಾಟೆಯುವರು ಹೈದರನಿಂದ ಕಿತ್ತುಕೊಂಡು ತಮ್ಮ ಸ್ವಾಧೀನದಲ್ಲಿಟ್ಟು ಕೊಂಡಿದ್ದರು. ಕೊನೆಗೆ ಇದು ಮೈಸೂರು ರಾಜ್ಯಕ್ಕೆ ಸೇರಿಹೋಯಿತು.

ಹೆಬ್ಬೂರು—ಇದು ತುಮಕೂರಿಗೆ ಸಮೀಪದಲ್ಲಿದೆ. ಪೂರ್ವದಲ್ಲಿ ಹೆಬ್ಬು ಲಿಯು ವಾಸಮಾಡಿಕೊಂಡಿದ್ದುದರಿಂದ ಈ ಗ್ರಾಮಕ್ಕೆ ಈ ಹೆಸರಾಯಿತಂತೆ. ವಿಜಯನಗರದ ಕರ್ಣಾಟಕ ಚಕ್ರಾಧಿಪತ್ಯಕ್ಕೆ ಸೇರಿದ್ದ ಇದನ್ನು ಕಟ್ಟಿಕಾಮಣ್ಣ ನೆಂಬ ಅಧಿಕಾರಿಯು ಆಳುತ್ತಿದ್ದನು. ಹಳೇಗೌಡ, ತಿಮ್ಮೇಗೌಡರೆಂಬವರು ಗ್ರಾ ಮಾಧಿಕಾರಿಗಳಾಗಿದ್ದರು. ಈ ಕಟ್ಟಿಕಾಮಣ್ಣನು ಸ್ವೇಚ್ಛಾವಿಹಾರಿಯಾಗಿ, ನೀತಿಭ್ರಷ್ಟನಾಗಿ, ರಾಜದಾಯವನ್ನು ಚಕ್ರವರ್ತಿಗಳಿಗೊಪ್ಪಿಸದೆ, ದುರುಪಯೋಗ ಪಡಿಸಿಕೊಂಡುದರಿಂದ, ಚಕ್ರವರ್ತಿಗಳು ಇವನ ಕಣ್ಣನ್ನು ಕೀಳಿಸಿ, ಇವನ ಸ್ಥಾ ನದಲ್ಲಿ ಆ ಗೌಡರನ್ನು ನಿಯಮಿಸಿದರು. ಕೆಲವು ಕಾಲಾನಂತರ ಇದು ಮಾ ಗಡಿ ಕೆಂಪೇಗೌಡನ ಆಧೀನಕ್ಕೆ ಬಂದು ಆತನಿಂದ ಗ್ರಾಮವು ಅಭಿವೃದ್ಧಿಗೆ ಬಂ ದಿತು. ತರುವಾಯ ಇದು ಚಿಕ್ಕನಾಯಕನಹಳ್ಳಿಯ ಪಾಳೆಯಗಾರರ ವಶವಾಗಿ ಅನಂತರ ಚಿಕ್ಕದೇವರಾಜರವರ ಕಾಲದಲ್ಲಿ ಮೈಸೂರ ರಾಜ್ಯಕ್ಕೆ ಸೇರಿಹೋ ಯಿತು.

ಕುಣಿಗಲು—ಪುರಾಣಪ್ರಸಿದ್ಧವಾದ ಈ ಸ್ಥಳದಲ್ಲಿ ಈಶ್ವರನು ತಾಂಡ ವಲೀಲೆಯನ್ನು ಮಾಡಿದುದರಿಂದ ಈ ಹೆಸರು ಬಂದಿತು. ಶಿವಗಂಗಾಪರ್ವತದಲ್ಲಿ ಉದ್ಭವಿಸುವ ನಳಿನಿ, ನಾಗಿನಿ, ಕಮಲಾ ಎಂಬ ಮೂರು ನದಿಗಳೂ ಇಲ್ಲಿ ಕೂಡು ವುದರಿಂದ ಇದು ತ್ರಿವೇಣೀಸಂಗಮವೆನ್ನಿಸಿಕೊಂಡಿದೆ. ನೃಗಚಕ್ರವರ್ತಿಯು ಇಲ್ಲಿ ಸ್ನಾನಮಾಡಿದುದರಿಂದ ಅವನ ಕುಷ್ಠವ್ಯಾಧಿಯು ನಿವಾರಣೆಯಾಯಿತಂತೆ. ಈರೀತಿ ರೋಗವು ನಿವಾರಣೆಯಾಗಿ ದೇಹವು ದಿವ್ಯತೇಜಃಪುಂಜವಾಗಲು, ಆತನು ಪರ ಮಾಹ್ಲಾದಪರವಶನಾಗಿ, ಅಲ್ಲಿ ವಿಶಾಲವಾದ ತಟಾಕವನ್ನು ಕಟ್ಟಿಸಿದನಂತೆ. ಅದರ ಕಟ್ಟೆಯ ಬುಡದಲ್ಲಿದ್ದ ನಿಕ್ಷೇಪಕ್ಕೆ ಏಳು ಹೆಡೆಯ ಸರ್ಪವು ಕಾವಲಾಗಿದ್ದಿತಂತೆ. ಹಿಮಾಲಯದಿಂದ ಬಂದಿದ್ದ ಏಳು ಮಂದಿ ಬೈರಾಗಿಗಳು ಹಾವನ್ನು ವಧಿಸಿ ಆ ಧನ ವನ್ನು ತೆಗೆದುಕೊಂಡು ಹೋದರಂತೆ.

ಕ್ರಿ. ಶ. ೧೫೯೦ ರಲ್ಲಿ ವೀರಕಂಬಳರಾಯನೆಂಬ ಅರಸು ಕುಣಿಗಲನ್ನು ಸ್ವಾಧೀನಪಡಿಸಿಕೊಂಡು ಕೋಟೆ ಕೊತ್ತಲಗಳನ್ನು ಕಟ್ಟಿಸಿ ಆಳುತ್ತಿದ್ದನು. ಬಹುಕಾಲಾನಂತರ ಮಾಗಡಿಯ ದೊರೆಗಳು ಇದನ್ನಾಕ್ರಮಿಸಿ ಪೇಟೆ ಕೋಟೆಗಳನ್ನು ಅಭಿವೃದ್ಧಿಗೊಳಿಸಿ ಪ್ರಜೆಗಳನ್ನು ಸುಖದಿಂದ ಪಾಲಿಸುತ್ತಿದ್ದನು. ಈ ತಾಲ್ಲೂಕಿನಲ್ಲಿರುವಷ್ಟು ಮಾನ್ಯದ ಭೂಮಿಗಳು ಇನ್ನಾವ ತಾಲ್ಲೂಕಿನಲ್ಲಿಯೂ ಇಲ್ಲ. ೧೫೯೯ ರಲ್ಲಿ ಯಲಹಂಕನಾಡ ಹಿರಿಯ ಕೆಂಪಯ್ಯನ ಪುಣ್ಯಸ್ತ್ರೀಯಾದ ವೆಂಕಟಕೃಷ್ಣಾಜಮ್ಮನು ೧೫ ವೃತ್ತಿಗಳನ್ನು ಇಮ್ಮಡಿ ಕೆಂಪಯ್ಯನವರ, ಅತ್ತೆ ಲಿಂಗಾಜಮ್ಮನವರ ಪ್ರೀತ್ಯರ್ಥವಾಗಿ ದಾನಮಾಡಿದಳು. ಇಮ್ಮಡಿ ಹಿರಿಯ ಕೆಂಪೇಗೌಡರ ಅರಮನೆ ನಾಟಕಶಾಲೆಯ ಶೃಂಗಾರಮ್ಮನು ಶೃಂಗಾರಸಾಗರದ ಅಗ್ರಹಾರವನ್ನು ದಾನಮಾಡಿ ದೊರೆಗಳ ಮನೆತನಕ್ಕೆ ಪುಣ್ಯವುಂಟಾಗಲೆಂದು ಶಾಸನ ಬರೆಸಿದ್ದಾಳೆ. ಇದು ಶೃಂಗಾರಸಾಗರದ ಬಸವಣ್ಣನ ಗುಡಿ ಬಳಿಯ ಕಲ್ಲಿನಲ್ಲಿ ಇದೆ. ಫಲವತ್ತಾದ ಭೂಮಿಯೂ ದೇವ, ಬ್ರಾಹ್ಮಣ, ಲಿಂಗಾಯತ ಭಟಮಾನ್ಯಗಳೂ ಮಾಗಡಿ ಕೆಂಪೇಗೌಡರ ಆಳ್ವಿಕೆಯಲ್ಲಿ ಕೊಡಲ್ಪಟ್ಟುವು. ಈಚಿನ ಪ್ರಭುಗಳ ಕಾಲದಲ್ಲಿ ಕ್ವಿಟ್ರೆಂಟ್, ಲೋಕಲ್ ಸೆಸ್ ಎಂಬ ತೆರಿಗೆಗಳು ಹೆಚ್ಚಿ ಕೆಲವಕ್ಕೆ ಹೊಸ ಸನ್ನದುಗಳಾಗಿವೆ. ಬ್ರಾಹ್ಮಣಾಗ್ರಹಾರ, ಭಟಮಾನ್ಯ, ಲಿಂಗಾಯತ ಮಠ ಮೊದಲಾದುವುಗಳಿಗೆಲ್ಲಾ ಶಿಲಾಶಾಸನ, ಸನ್ನದುಗಳಿವೆ. ಅವುಗಳಿಂದ ಕೆಂಪೇಗೌಡರು ದಾನಮಾಡಿದ ಕಾಲ, ಕಾರಣ ಮೊದಲಾದುವೂ, ಅವರ ಧರ್ಮಾಭಿಮಾನ, ಔದಾರ್ಯ, ಸೌಜನ್ಯಾದಿಗಳೂ ಗೊತ್ತಾಗುತ್ತವೆ. ಕೆರೆಯು ತುಂಬಿದರೆ ಸುತ್ತಳತೆಯು ೧೪ ಮೈಲಿಗಳ ವಿಸ್ತೀರ್ಣವುಳ್ಳದಾಗಿ ಶೋಭಿಸುವುದು. ಇಲ್ಲಿಯ ಸರ್ಕಾರದ ಅಶ್ವಶಾಲೆ, ಗೋಶಾಲೆಗಳು ಸುಪ್ರಸಿದ್ಧವಾಗಿವೆ.

ಗುಬ್ಬಿ-- ಇದನ್ನು ಸೊಣಬ ಒಕ್ಕಲಿಗರ ವಂಶಸ್ಥನಾದ ಹೊನ್ನಪ್ಪಗೌಡನು ಗುಬ್ಬಿ, ತುಮಕೂರುಗಳನ್ನು ಹಿಡಿದು ಆಳುತ್ತಿದ್ದನು, ಈತನು ಶ. ೧೬೮೨ ರಲ್ಲಿ ಗುಬ್ಬಿಪೇಟೆ ಚನ್ನಪ್ಪಶೆಟ್ಟರ ಪೌತ್ರ ಚನ್ನಸೆಟ್ಟಿಗೆ ಗುಬ್ಬಿ ಪೇಟೆಯ ಸೆಟ್ಟಿತನವನ್ನು ಕೊಟ್ಟು ಪ್ರಜೆಗಳನ್ನು ಸರಿಯಾಗಿ ನೋಡಿಕೊಂಡು ಬರುವಂತೆ ಸರ್ವಮಾನ್ಯವಾಗಿ ೫ ಕೊಳಗದ ಗದ್ದೆಯನ್ನೂ ಕೊಟ್ಟನೆಂದು ತಾಮ್ರಶಾಸನವಿದೆ. ಅನಂತರ ಗುಬ್ಬಿಯು ಅದೇ ಸಂತತಿಯವರಾದ ಹೊ

ಸಹಳ್ಳಿಯ ಗೌಡರ ಆಳ್ವಿಕೆಗೆ ಬಂದಿತು. ಅವರು ೩೦೦೦ ವರಹಗಳ ರಾಜ ದಾಯವನ್ನು ಪಡೆಯುತ್ತ, ಮೈಸೂರು ದೊರೆಗಳ ಅಧೀನರಾಗಿ, ಸಂವತ್ಸ ರಕ್ಕೆ ೫೦೦ ವರಹಗಳ ಪೊಗದಿಯನ್ನು ಕೊಡುತ್ತಿದ್ದರು. ಮೈಸೂರಿಗೆ ಹೈದರನು ನವಾಬನಾದ ಮೇಲೆ ಪೊಗದಿಯನ್ನು ೨೫೦೦ ವರಹಗಳಿಗೆ ಹೆಚ್ಚಿ ಸಿದನು. ಅವನ ಮಗನಾದ ಟಿಪ್ಪುಸುಲ್ತಾನನು ಗುಬ್ಬಿಯನ್ನು ತನ್ನ ರಾ ಜ್ಯಕ್ಕೇ ಸೇರಿಸಿಕೊಂಡನು. ಅಲ್ಲಿಂದೀಚೆಗೆ ಸೊಣಬ ದೊರೆಗಳು ರಾಜ್ಯದ ಚಿಂತೆಯನ್ನೇ ತೊರೆದು ವ್ಯವಸಾಯಗಾರರಾದರು. ಈಗಲೂ ಆ ವಂಶೀ ಯರು ಇದ್ದಾರೆ. ಇನ್ನೂ ಕೆಲವು ಪಂಗಡಗಳಿಗೆ ಸೇರಿದ ಒಕ್ಕಲಿಗಗೌಡರು ಮೈಸೂರ ನಾಲ್ಕನೆಯ ಯುದ್ಧವಾಗುವ ವರೆಗೂ ಈ ದೇಶದ ನಾನಾ ಭಾಗ ಗಳಲ್ಲಿ ಪ್ರಭುತ್ವಮಾಡುತ್ತಿದ್ದರು. ಅವರೆಲ್ಲರೂ ಮಾಗಡಿ ವಂಶದ ಗೌಡದೊರೆ ಗಳಿಗೆ ಸಮೀಪಸಂಬಂಧಿಗಳು

ಆನೆಕಲ್ಲು--ಹೊಸಕೋಟೆಯ ಗೌಡದೊರೆಯಾದ ಚಿಕ್ಕತಿಮ್ಮೇಗೌ ಡನು ಕ್ರಿ. ಶ. ೧೬೦೩ ರಲ್ಲಿ ಆನೆಕಲ್ಲನ್ನು ಕಟ್ಟಿದನು. ಪೂರ್ವಕಾಲದಲ್ಲಿ ಆನೆಯ ದಪ್ಪವುಳ್ಳ ಆಲಿ ಕಲ್ಲು ಈ ಸ್ಥಳದಲ್ಲಿ ಬಿದ್ದಿದ್ದುದರಿಂದ ಇದಕ್ಕೆ ಆನೆಕಲ್ಲು ಎಂದು ಹೆಸರಾಗಿದೆ. ಈಗ ತಾಲ್ಲೂಕು ಕಚೇರಿ ಆಸ್ಪತ್ರೆಗಳಿರುವ ಸ್ಥಳಗಳಲ್ಲಿ ಅರಮನೆ ಯ ಗುರುತುಗಳೂ ಬಾವಿಯೂ ಇವೆ. ದೊರೆಯು ಮೊದಲು ಸಣ್ಣ ಕೋಟೆಯ ನ್ನು ಕಟ್ಟಿ ಅನಂತರ ಪೇಟೆಯನ್ನು ಪಶ್ಚಿಮಕ್ಕೆ ವಿಸ್ತರಿಸಿ ದೊಡ್ಡ ಕೆರೆಯನ್ನು ಕಟ್ಟಿದನು. ಇದೇ ಈಗ ಇರುವ ತಿಮ್ಮಾಂಬುಧಿ ಕೆರೆ. ಈಗ ಇದನ್ನು ಅಮಾನಿ ಕೆರೆ ಎಂದು ಕರೆಯುತ್ತಾರೆ. ಈ ಪ್ರದೇಶವು ಫಲವತ್ತಾಗಿ ವ್ಯವಸಾಯಕ್ಕೆ ಅನು ಕೂಲವಾಗಿದ್ದುದರಿಂದ ತಿಮ್ಮೇಗೌಡನು ಸುತ್ತುಮುತ್ತಣ ಪ್ರಾಂತ್ಯಗಳನ್ನು ಆಕ್ರ ಮಿಸಿಕೊಂಡು ಹೊರಗಿನಿಂದ ರೈತರನ್ನು ಕರೆಸಿ ಅವರಿಗೆ ಬೇಕಾದ ಉಪಕರಣಗಳ ನ್ನೊದಗಿಸಿಕೊಟ್ಟು ವ್ಯವಸಾಯಾಭಿವೃದ್ಧಿಗೊಳಿಸಿದನು. ನೀಲಿಯ ಬೆಳೆ, ಬಣ್ಣ ದ ಕೆಲಸ, ನೇಯಿಗೆಯ ಕೆಲಸಗಳಿಗೆ ವಿಶೇಷ ಪ್ರೋತ್ಸಾಹ ಕೊಟ್ಟು ಉತ್ತರದೇಶ ದಿಂದಲೂ ದಕ್ಷಿಣ ದೇಶದಿಂದಲೂ ಕರೆಸಲ್ಪಟ್ಟವರನೇಕರು ಈ ತಾಲ್ಲೂಕಿನಲ್ಲಿ ಯೂ, ದೊಮ್ಮಸಂದ್ರ ಮೊದಲಾದ ಗ್ರಾಮಗಳಲ್ಲಿಯೂ ಇದ್ದಾರೆ. ಈತ ನು ತಿಮ್ಮಯ್ಯಸ್ವಾಮಿ ದೇವಸ್ಥಾನವನ್ನೂ ಚನ್ನಕೇಶವದೇವಸ್ಥಾನವನ್ನೂ ಕಟ್ಟಿಸಿ, ಶಿಥಿಲವಾಗಿದ್ದ ಅರ್ಜುನಪ್ರತಿಷ್ಠೆಯ ಮಲ್ಲಿಕಾರ್ಜುನದೇವಸ್ಥಾನವನ್ನು ಜೀರ್ಣೋ ದ್ಧಾರಮಾಡಿ, ಅಗ್ರಹಾರ ಮಾನ್ಯಗಳನ್ನು ಕೊಟ್ಟು ತ್ರಿವೇದಿಗಳಾದ ಬ್ರಾಹ್ಮಣ

ರನ್ನು ಆಸ್ಥಾನಪಂಡಿತರನ್ನಾಗಿಮಾಡಿಕೊಂಡು ೩೦ ಸಂವತ್ಸರಗಳು ರಾಜ್ಯವಾಳಿ ನಾಡನ್ನು ಸುಸ್ಥಿತಿಗೆ ತಂದು ದೈವಾಧೀನನಾದನು. ಈತನ ಮಗ ತಿಮ್ಮೇಗೌಡನು ಕ್ರಿ. ಶ. ೧೬೩೩ ರಲ್ಲಿ ಪಟ್ಟಕ್ಕೆ ಬಂದು ೨೦ ಸಂವತ್ಸರಗಳ ವರೆಗೆ ಧರ್ಮದಿಂದ ಪ್ರಜಾಪಾಲನೆಯನ್ನು ಮಾಡಿ ಕ್ರಿ. ಶ. ೧೬೫೩ ರಲ್ಲಿ ತನ್ನ ಮಗ ದೊಡ್ಡತಿಮ್ಮೇಗೌಡನಿಗೆ ಪಟ್ಟವನ್ನು ಕಟ್ಟಿ ವಿಶ್ರಾಂತಿಯನ್ನು ಪಡೆದನು. ಆ ಕಾಲದಲ್ಲಿ ಆನೇಕಲ್ಲು ಎಲ್ಲಾ ವಿಷಯದಲ್ಲಿಯೂ ಪರೀಕ್ಷಾಕ್ಷೇತ್ರವಾದ ಊರಾಗಿದ್ದಿತು.

ದೊಡ್ಡತಿಮ್ಮೇಗೌಡನ ಕಾಲದಲ್ಲಿ ಆನೇಕಲ್ಲು ಮೈಸೂರ ರಾಜರಿಂದ ಜಯಿಸಲ್ಪಟ್ಟಿತು. ಆಯರಸರು ವರ್ಷ ೧ಕ್ಕೆ ೨೦೦೦ ರೂ. ಪೊಗದಿಯನ್ನು ಕಟ್ಟಿಕೊಂಡು ಸ್ವತಂತ್ರವಾಗಿ ಅನುಭವಿಸಿಕೊಂಡು ಬರುವಂತೆ ಅದನ್ನು ಗೌಡನಿಗೇ ಕೊಟ್ಟರು. ಕ್ರಿ. ಶ. ೧೭೧೩ರ ವರೆಗೆ ಅವನು ಆನೇಕಲ್ಲ ನಾಡನ್ನು ಪಾಲಿಸಿದನು. ಆತನ ಮಗ ವೀರನಂಜನ ತಿಮ್ಮೇಗೌಡನು ರಾಜ್ಯಕ್ಕೆ ಬಂದು ೧೭೩೭ ರ ವರೆಗೆ ಪ್ರಭುತ್ವಮಾಡಿದನು. ಆತನ ಮಗ ಚಾಮೇಗೌಡನ ತರುವಾಯ ಪಟ್ಟಕ್ಕೆ ಬಂದ ಅಯ್ಯಪ್ಪಗೌಡನು ಅಸಮರ್ಥನಾಗಿದ್ದುದರಿಂದ ಪ್ರಬಲನಾಗಿದ್ದ ಹೈದರನು ಸಮಯವರಿತು ಅವನನ್ನು ಸೆರೆಯಲ್ಲಿಟ್ಟು ಆನೇಕಲ್ಲನ್ನು ಕಿತ್ತುಕೊಂಡನು. ಇಂಗ್ಲೀಷಿನವರು ಅವನನ್ನು ಸೆರೆಯಿಂದ ಬಿಡಿಸಿ ಮರಳಿ ಆನೇಕಲ್ಲಿಗೆ ಕಳುಹಿಸಿದರು. ಅವನ ವಂಶೀಯರು ಬ್ರಿಟಿಷ್ ಎಲ್ಲೆಕಟ್ಟಿನಲ್ಲಿ ಬೇರಿಕಿ, ಪುಂಗನೂರು, ಸೂಲಗಿರಿನಾಡುಗಳನ್ನು ಕಟ್ಟಿ ಆಳತೊಡಗಿದರು. ಈಗಲೂ ಈ ಪಾಳೆಯ ಪಟ್ಟುಗಳು ಆ ವಂಶೀಯರ ವಶದಲ್ಲಿವೆ. ಈ ಆನೇಕಲ್ಲ ನಾಡು ಬಿಜಾಪುರದ ರಣದುಲ್ಲಾಖಾನನಿಂದ ಗೌಡದೊರೆಗಳ ಆಳ್ವಿಕೆಗೆ ಬಂದಿದ್ದು ಕೊನೆಗೆ ಹೈದರನಿಂದ ಮೈಸೂರಿಗೆ ಸೇರಿಸಲ್ಪಟ್ಟಿತು. ಅನಂತರ ದಿವಾನ್ ಪೂರ್ಣಯ್ಯನವರು ಗೌಡದೊರೆಗಳ ವಂಶೀಯರಿಗೆ ೨೨೫ ರೂಪಾಯಿಗಳ ಪೆನ್ಷನ್ ಮಾಡಿದರು. ಈಗ ಇರುವ ಅವರ ದತ್ತ ವಂಶೀಯರಾದ ವೀರಚಿಕ್ಕರಾಯರೂ, ಅವರ ತಮ್ಮಂದಿರೂ ಆ ಪೆನ್ಷನನ್ನು ಅನುಭವಿಸುತ್ತಿರುವರು. ಸೀಮೆಯ ಬಣ್ಣವು ಬರುವುದಕ್ಕೆ ಮೊದಲು ಆನೇಕಲ್ಲ ಬಣ್ಣವೂ, ಆನೇಕಲ್ಲು ದೊಮ್ಮಸಂದ್ರ ಮೊದಲಾದ ಸ್ಥಳಗಳ ಸೀರೆ ಕುಪ್ಪುಸಗಳೂ ಗಟ್ಟಿ ಬಣ್ಣದುವೆಂದು ಹೆಸರುವಾಸಿಯನ್ನು ಪಡೆದಿದ್ದುವಲ್ಲದೆ ಕಮ್ಮಿಯ ಬೆಲೆಗೆ ದೊರೆಯುತ್ತಿದ್ದುವು. ಈಗಲೂ ಅಲ್ಲಿನ ಸೀರೆ ಕುಪ್ಪುಸಗಳು ಬಣ್ಣ ಬಾಳಿಕೆಗಳಲ್ಲಿ ಭದ್ರವಾಗಿ ಕಡಿಮೆಯ ಕ್ರಯಕ್ಕೆ ದೊರೆಯುತ್ತಿವೆ.

ಈಚೆಗೆ ಸ್ವದೇಶೀಯವಸ್ತುಗಳಿಗೆ ಪ್ರೋತ್ಸಾಹವು ಕಮ್ಮಿಯಾಗಿ ಅಲ್ಲಿರುವ ಆ ಕಸಬುದಾರರನೇಕರು ಹೀನಸ್ಥಿತಿಗೆ ಬಂದು ಇತರವೃತ್ತಿಗಳಿಂದ ಜೀವಿಸುತ್ತಿದಾರೆ. ಅಲ್ಲಿ ರಾಗಿ, ಸಾಸಿವೆ, ಕಾಳುಗಳ ವ್ಯಾಪಾರವು ನಡೆಯುತ್ತಿದೆ.

ನಂದಿ—ಆವತಿನಾಡ ಪ್ರಭುವಾದ ರಣಭೈರೇಗೌಡನು ನಂದೀದುರ್ಗದ ಬಳಿ "ನಂದಿ" ಎಂಬ ಊರನ್ನು ಕಟ್ಟಿದನು. ಪುರಾಣಪ್ರಸಿದ್ಧವಾದ ಈ ನಂದಿಗಿರಿಯೂ ಸೇರಿ ಪಂಚಗಿರಿಗಳಲ್ಲಿ ಪಂಚನದಿಗಳು ಉತ್ಪನ್ನವಾಗಿವೆ. ಇಲ್ಲಿ ಶಿವವಿಷ್ಣುಕ್ಷೇತ್ರಗಳೂ ಋಷ್ಯಾವಾಸಗಳಾಗಿ ರಹಸ್ಯವಾಗಿರುವ ಗುಹೆಗಳೂ ಅನೇಕವಿವೆ. ನಂದಿಯ ಬೆಟ್ಟದ ಮೇಲೆ ಪುರಾತನಕಾಲದಿಂದ ಇರುವ ಶ್ರೀಯೋಗನಂದೀಶ್ವರಸ್ವಾಮಿಯ ದೇವಾಲಯವೂ, ಕೆಳಗೆ ಊರಲ್ಲಿ ಇರುವ ಶ್ರೀ ಭೋಗನಂದೀಶ್ವರ, ಶ್ರೀ ಪ್ರಸನ್ನಪಾರ್ವತೀ ಅಮ್ಮನವರ ದೇವಾಲಯಗಳೂ ಮುಖ್ಯವಾದುವು. ರಣಭೈರೇಗೌಡನೂ ಈಚೆಗೆ ಬಂದ ಚಿಕ್ಕಬಳ್ಳಾಪುರದ ದೊರೆಗಳೂ, ದೇವಸ್ಥಾನಪ್ರಾಕಾರಾದಿಗಳನ್ನು ವಿಚಿತ್ರ ಶಿಲ್ಪಕಲಾಕುಶಲತೆಯಿಂದ ವಿಶಾಲವಾಗಿ ಕಟ್ಟಿಸಿ, ಪೂಜೆ ಉತ್ಸವಾದಿಗಳು ಶಾಶ್ವತವಾಗಿ ನಡೆಯುವಂತೆ ಏರ್ಪಡಿಸಿದರು. ಈ ದೊರೆಗಳು ಬೆಟ್ಟದ ಮೇಲೆ ಇದ್ದ ಪುರಾತನದೇವಾಲಯಗಳ ಪ್ರಾಕಾರ ಮುಂತಾದುವುಗಳನ್ನೂ, ಕೋಟೆ ಕೊತ್ತಲಗಳನ್ನೂ ಬಲಪಡಿಸಿ ಆಳುತ್ತಿದ್ದರು.

ನಂದೀದುರ್ಗವನ್ನು ಸ್ವಾಧೀನಕ್ಕೆ ತೆಗೆದುಕೊಂಡ ತರುವಾಯ ಹೈದರನೂ ಇವನ ಮಗ ಟಿಪ್ಪೂಸುಲ್ತಾನನೂ ಬೆಟ್ಟದ ಮೇಲಿನ ಕೋಟೆಯನ್ನು ಉತ್ಕೃಷ್ಟ ರೀತಿಯಲ್ಲಿ ಭದ್ರಪಡಿಸಿದರು. ಈ ಪುಣ್ಯಕ್ಷೇತ್ರವು ಮುಸಲ್ಮಾನರ ಆಳ್ವಿಕೆಗೆ ಒಳಪಟ್ಟಿದ್ದರೂ ಗೌಡದೊರೆಗಳ ಪುಣ್ಯಪ್ರಭಾವದಿಂದ ಅಪರಿಶುದ್ಧವಾಗದೆ ಮೊದಲಿನಂತೆಯೇ ಇರುವುದು. ಟಿಪ್ಪುಸುಲ್ತಾನನ ತರುವಾಯ ಇದು ಚೀಫ್ ಕಮಿಷನರ್ ಸರ್‌ಮಾರ್ಕ್ ಕಬ್ಬನ್‌ರವರ ಕಾಲದಲ್ಲಿ ಕೇವಲ ಆರೋಗ್ಯಸ್ಥಳವೆನಿಸಿ, ಅಮೃತಸರೋವರದ ದಿವ್ಯೋದಕದಿಂದ ಸುಖಾವಾಸವಾಗಿ ಬೆಟ್ಟದ ಮೇಲೆ ಬೇಸಗೆಯಲ್ಲಿ ಯೂರೋಪಿಯನರೂ ಇತರ ದೊಡ್ಡಮನುಷ್ಯರೂ ವಾಸಮಾಡುವುದಕ್ಕೆ ಮೊದಲಾಯಿತು. ಈಚೆಗೆ ನಮ್ಮ ಮಹಾರಾಜರವರ ಸರ್ಕಾರದವರು ಸರ್ವರಿಗೂ ಅನುಕೂಲಿಸುವಂತೆ ಬಂಗಲೆಗಳನ್ನೂ, ಕಟ್ಟಡಗಳನ್ನೂ, ಭೋಜನ (ಹೋಟಲ್) ಸೌಕರ್ಯಗಳನ್ನೂ ಕಲ್ಪಿಸಿರುವುದರಿಂದ ಮದ್ರಾಸು, ಬೊಂಬಾಯಿ, ಮೊದಲಾದ

ದೂರದೇಶಗಳಿಂದಲೂ ಜನರು ಆರೋಗ್ಯಲಾಭಕ್ಕಾಗಿ ಇಲ್ಲಿಗೆ ಬರುತ್ತಿರುವರು. ಈಗ ಇಲ್ಲಿಗೆ ರೈಲ್ ಮಾರ್ಗವಾಗಿರುವುದರಿಂದ ಈ ಸ್ಥಳದ ಮಾಹಾತ್ಮ್ಯವು ದೂರ ದೇಶಗಳಲ್ಲೆಲ್ಲಾ ಪ್ರಸಿದ್ಧವಾಗಿದೆ. ಪ್ರತಿವರ್ಷವೂ ಶಿವರಾತ್ರಿಯ ಹಬ್ಬದಲ್ಲಿ ರಥೋತ್ಸವವೂ, ಎತ್ತುಗಳ ಪರಿಸೆಯೂ ಭಾರಿಯಾಗಿ ನಡೆಯುತ್ತಿದೆ. ಗೌಡದೊರೆಗಳ ಕಾಲದಲ್ಲಿ ಕಟ್ಟಿಸಿರುವ ಸುಮಾರು ೨೦ಸಾವಿರ ಪ್ರಜೆಗಳು ಸೇರುವಷ್ಟು ವಿಶಾಲವಾದ ಪ್ರಾಕಾರವುಳ್ಳ ಸತ್ರ ದೇವಸ್ಥಾನಗಳು ಈಗಲೂ ಉಪಯೋಗಿಸಲ್ಪಡುತ್ತಿವೆ. ದೇವಸ್ಥಾನಾಭಿವೃದ್ಧಿಗಾಗಿ ಗೌಡರು ಕೊಟ್ಟಿರುವ ಶಾಸನಗಳು ಅನೇಕವಿವೆ.

ಕ್ರಿ. ಶ. ೧೪೧೮ ರಲ್ಲಿ ಆವತಿನಾಡ ಪ್ರಭುವಾದ ರಣಭೈರೇಗೌಡನು ಸುಗಟೂರನ್ನು ಸ್ವಾಧೀನಪಡಿಸಿಕೊಂಡು ಇದ್ದನು. ಇದು ಆ ಕಾಲದಲ್ಲಿ ಪ್ರಸಿದ್ಧವಾದ ರಾಜಧಾನಿಯಾಗಿದ್ದು ಈಗ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆಯ ಬಳಿಯಲ್ಲಿ ಒಂದು ಸಣ್ಣ ಗ್ರಾಮವಾಗಿದೆ. ಆವತಿನಾಡ ಪ್ರಭುಗಳ ಸಹೋದರನಾದ ತಮ್ಮೇಗೌಡನು ಯಶೋವಂತನಾಗಿ ಬಾಳಿದನು. ಈತನು ವಿಜಯನಗರದ ಕರ್ಣಾಟಕಚಕ್ರವರ್ತಿಗಳವರ ದಯಕ್ಕೆ ಪಾತ್ರವಾಗಿ ಅವರಿಂದ ಸುಗುಟೂರನಾಡು ಪ್ರಭುವೆಂಬ ಬಿರುದನ್ನು ಪಡೆದನು. ಸುಗಟೂರಿನ ಬಳಿ ಬಂಡೆಯ ತಳದಲ್ಲಿ ಒಂದು ನಿಕ್ಷೇಪವನ್ನು ಕಂಡುಹಿಡಿದು ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಯತ್ನಿಸಲು, ಯರ್ರಾಲು ಕೊರಚರ ಯರ್ರಗಂಗ, ಚಲುವ ಗಂಗ ಎಂಬವರಿಬ್ಬರು ಅದು ತಮಗೆ ಸೇರಿದುದೆಂದು ಆಟಂಕಪಡಿಸಿದರು. ಅದನ್ನು ಹಾಗೆಯೇ ಬಿಟ್ಟು ತಮ್ಮೇಗೌಡನು ವಿಜಯನಗರಕ್ಕೆ ಹೋಗಿ ಚಕ್ರವರ್ತಿಗಳ ಕೈಕೆಳಗೆ ಒಂದು ಸಣ್ಣ ಸೈನ್ಯಕ್ಕೆ ಅಧಿಪತಿಯಾಗಿ ನಿಯಮಿಸಲ್ಪಟ್ಟು, ಕೆಲಸವನ್ನು ಬಹುಶ್ರದ್ಧೆಯಿಂದ ನಿರ್ವಹಿಸುತ್ತಿದ್ದನು. ಆ ಕಾಲದಲ್ಲಿ ದೆಹಲಿಯಲ್ಲಿದ್ದ ಮುಸಲ್ಮಾನ್ ದೊರೆಗಳು ದಕ್ಷಿಣದಲ್ಲಿ ತಮಗೆ ಆತಂಕವಾಗಿದ್ದ ವಿಜಯನಗರದ ಮೇಲೆ ಸೈನ್ಯವನ್ನು ಕಳುಹಿಸಿದರು. ಅದು ಅತಿಕ್ರೌರ್ಯದಿಂದ ವಿಜಯನಗರರಾಜ್ಯಕ್ಕೆ ನುಗ್ಗಿ, ಪ್ರಜೆಗಳನ್ನು ಪೀಡಿಸಿ, ಊರುಗಳನ್ನು ಸುಟ್ಟು, ಬೆಳೆಗಳನ್ನು ಹಾಳುಮಾಡಿ ಮುಂದುವರಿಯುತ್ತ ಇದಿರಿಸಿದ ಗಡಿಗಳಲ್ಲಿದ್ದ ಸೈನಿಕರನ್ನೂ, ರಾಜವಂಶೀಯರಾದ ಅಧಿಕಾರಿಗಳನ್ನೂ ಯುದ್ಧದಲ್ಲಿ ಕೊಂದು, ಉಳಿದವರನ್ನು ಸೆರೆಯಲ್ಲಿಟ್ಟಿತು. ಈ ಸಂಗತಿಯು ವಿಜಯನಗರಕ್ಕೆ ಮುಟ್ಟುತ್ತಲೇ ಚಕ್ರವರ್ತಿಗಳು ಸೈನ್ಯಾಧಿಪತಿಗಳೊಡನೆ ಆಲೋಚನೆಮಾಡಲಾಗಿ ಸುಗಟೂರುನಾಡ ಪ್ರಭುವಾದ ತಮ್ಮೇಗೌಡನು ಮುಂದೆ ಬಂದು 'ನನ್ನ

ಸೈನ್ಯದೊಡನೆ ಹೋಗಿ ತುರುಷ್ಕರನ್ನು ಓಡಿಸಿ ಸೆರೆಸಿಕ್ಕಿರುವ ನಿಮ್ಮ ಕಡೆಯವರನ್ನು ಸುರಕ್ಷಿತವಾಗಿ ಕರೆದುಕೊಂಡು ಬರುತ್ತೇನೆ ; ಅಪ್ಪಣೆಯಾಗಬೇಕು' ಎಂದು ಧೈರ್ಯದಿಂದ ಕೇಳಿಕೊಂಡನು. ಈತನ ಸಾಮರ್ಥ್ಯದಲ್ಲಿ ನಂಬುಗೆಯಿದ್ದುದರಿಂದ ರಾಯರು ತಮ್ಮೇಗೌಡನಿಗೆ ವೀಳಯವನ್ನು ಕೊಟ್ಟು ಅವನ ಸಹಾಯಕ್ಕೆ ಮತ್ತೊಂದು ದೊಡ್ಡ ಸೈನ್ಯವನ್ನು ಜತೆಮಾಡಿ ಕಳುಹಿಸಿಕೊಟ್ಟರು. ಶತ್ರುಸೈನ್ಯದ ಬಲಾಬಲವನ್ನೂ, ಅದು ಬರತಕ್ಕ ಮಾರ್ಗವನ್ನೂ ತಿಳಿದುಕೊಂಡು, ಒಂದು ಇಕ್ಕಟ್ಟಾದ ಕಣಿವೆಯಲ್ಲಿ ಅದನ್ನು ಸಂಧಿಸಿ, ಮುಸಲ್ಮಾನರನ್ನು ಜಯಿಸಬೇಕೆಂದು ಅವರ ಸೈನ್ಯವನ್ನು ಸುತ್ತಿಕೊಂಡು ಹಿಂದುಮುಂದಕ್ಕೆ ಬಿಡದೆ ತುಂಡಿಸಿ ಸೈನ್ಯಾಧಿಪತಿಯನ್ನು ಸೆರೆಹಿಡಿದು, ಯುದ್ಧಸಾಮಗ್ರಿಗಳನ್ನು ಲೂಟಿಸಿ, ತಮ್ಮ ಕಡೆಯವರನ್ನು ಬಿಡಿಸಿಕೊಂಡು ಬಂದು ರಾಯರ ಸನ್ನಿಧಿಯಲ್ಲಿ ನಿಲ್ಲಿಸಿ ನಡೆದ ಸಂಗತಿಯನ್ನು ಅರಿಕೆಮಾಡಿದನು. ರಾಯರು ಮಹದಾನಂದಭರಿತರಾಗಿ ತಮ್ಮೇಗೌಡನ ಸಾಹಸಕ್ಕೆ ಮೆಚ್ಚಿ ಅವನಿಗೆ ವಿಶೇಷಬಹುಮಾನಗಳನ್ನು ಕೊಟ್ಟು ತಮ್ಮ ಮನೆತನಕ್ಕೆ ಬಂದಿರುವ ಅತಿಗೌರವವಾದ "ರಾಯಲು" ಎಂಬ ಬಿರುದನ್ನು ದಯೆಪಾಲಿಸಿ "ರಾಯಲು ತಮ್ಮೇಗೌಡ" ನೆಂದು ಕರೆದರು. ಈರೀತಿ ಚಕ್ರವರ್ತಿಗಳ ಪೂರ್ಣಾನುಗ್ರಹಕ್ಕೆ ಪಾತ್ರವಾಗಿ ಗೌಡನು ಸುಗಟೂರಿಗೆ ಬಂದು ಅಲ್ಲಿ ಇದ್ದ ನಿಕ್ಷೇಪವನ್ನು ಸ್ವಾಧೀನಪಡಿಸಿಕೊಂಡು ರಾಜ್ಯವನ್ನು ವಿಸ್ತರಿಸಿ, ಸಕಲ ಸಂಪತ್ತುಗಳಿಂದಲೂ ಪ್ರಜೆಗಳನ್ನು ಸುರಕ್ಷಿತವಾಗಿ ಕಾಪಿಡುತ್ತಿದ್ದನು.

ಅವನ ಅಗಲಿಕೆಯಿಂದ ದುಃಖಿತರಾಗಿ ಆತನ ಆಗಮನವನ್ನೇ ಬಯಸುತ್ತಿದ್ದ ಸ್ವಕೀಯರೂ, ಪ್ರಜೆಗಳೂ, ಮಹೋನ್ನತನಾಗಿ ಬಂದ ತಮ್ಮ ದೊರೆಯನ್ನು ವಿಶೇಷವಾಗಿ ಅಭಿನಂದಿಸಿದರು. ತಮ್ಮೇಗೌಡನು ತನಗೆ ದೊರೆತ ನಿಕ್ಷೇಪವನ್ನು ದೇಶಾಭಿವೃದ್ಧಿಕರವಾದ ಕಾರ್ಯಗಳಿಗೆ ವಿನಿಯೋಗಿಸತೊಡಗಿದನು. ಈತನಿಗಿದ್ದ ಪ್ರಜಾವಾತ್ಸಲ್ಯ, ಧರ್ಮರಕ್ಷಣೆ, ಪರೋಪಕಾರಬುದ್ಧಿಗಳಿಗೆ ತಕ್ಕಂತೆ ದ್ರವ್ಯಾನುಕೂಲವೂ, ಮಂತ್ರಿಸೈನ್ಯಾಧಿಪತಿಗಳೂ, ದೊರೆತು ರಾಜ್ಯವು ವಿಸ್ತರಿಸಲಾರಂಭಿಸಿತು. ಇವನು ಕೋಲಾರವನ್ನೂ, ಹೊಸಕೋಟೆಯನ್ನೂ ಹಿಡಿದುಕೊಂಡು ಅವೆರಡರ ಕೋಟೆಕೊತ್ತಳಗಳನ್ನೂ ಭದ್ರವಾಗಿ ಕಟ್ಟಿಸಿ, ದೇವಾಲಯಗಳನ್ನೂ ಕೆರೆಗಳನ್ನೂ ಜೀರ್ಣೋದ್ಧಾರಮಾಡಿ ಕೃಷಿ, ವಾಣಿಜ್ಯದವರಿಂದ ಆ ಊರುಗಳನ್ನು ಜನಭರಿತವಾಗುವಂತೆ ಮಾಡಿದನು. ಅನಂತರ ಮುಳಬಾಗಲು ಪುಂಗನೂರುಗಳನ್ನು ಮುತ್ತಿ ಅಲ್ಲಿದ್ದ ಲಕ್ಕಣ್ಣ, ಮಾದಣ್ಣ, ಎಂಬವರನ್ನು ಓಡಿಸಿ ಆ ಸ್ಥಳಗಳನ್ನು ತನ್ನ ಸಾ

ಧೀನವಮಾಡಿಕೊಂಡು ವೇಮಗಲ್ಲು, ಬೇಲ್‌ಸುಗಟೂರು, ಕೈವಾರ, ಬುರಡಗುಂಟೆ, ಬೂದಿಕೋಟೆ ಈ ಐದನ್ನೂ ಹೋಬಳಿಗಳಾಗಿ ಮಾಡಿ ಕೋಲಾರಕ್ಕೆ ಸೇರಿಸಿಕೊಂಡನು. ಈ ರೀತಿ ರಾಜ್ಯವನ್ನು ವಿಸ್ತರಿಸಿಕೊಂಡು ಶತ್ರುಭಯಂಕರನೂ, ಆಶ್ರಿತರಕ್ಷಕನೂ, ಪ್ರಜಾವತ್ಸಲನೂ ಎಂಬ ಖ್ಯಾತಿಯನ್ನು ಪಡೆದನು. ಮುಸಲ್ಮಾನ್ ನವಾಬರಿಗೂ ದೆಹಲಿಯ ಚಕ್ರವರ್ತಿಗೂ ರಾಯಲು ತಮ್ಮೇಗೌಡನ ಪ್ರತಾಪವು ಚೆನ್ನಾಗಿ ತಿಳಿದಿದ್ದಿತು.

ಆ ಕಾಲದಲ್ಲಿ ಸಾಧಾರಣವಾಗಿ ಮುಸಲ್ಮಾನ್ ದೊರೆಗಳೂ, ಅವರ ಕೈಕೆಳಗಿನ ಅಧಿಕಾರಿಗಳೂ ಹಿಂದೂಗಳನ್ನು ಪೀಡಿಸಿ ಬಲಾತ್ಕಾರದಿಂದ ಅವರ ಆಸ್ತಿಪಾಸ್ತಿಗಳನ್ನು ದೋಚಿಕೊಳ್ಳುತ್ತಿದ್ದರು. ಆದಕಾರಣ ಮುಸಲ್ಮಾನ್ ರಾಜ್ಯಗಳಿಂದ ಹಿಂದೂ ಪ್ರಜೆಗಳು ತಲೆಯನ್ನು ತಪ್ಪಿಸಿಕೊಂಡು ಹಿಂದೂರಾಜರ ಆಶ್ರಯವನ್ನು ಪಡೆಯುತ್ತಿದ್ದರು.

ಬಿಜಾಪುರದ ನವಾಬರ ಹಿಂಸೆಗೆ ಗುರಿಯಾದ ಚಿಕ್ಕಣ್ಣಶೆಟ್ಟಿ ಕಲಸಣ್ಣಶೆಟ್ಟಿ ಎಂಬ ಮಾನಿಷ್ಠರಾದ ಲಿಂಗಾಯತವ್ಯಾಪಾರಸ್ಥರಿಬ್ಬರು, ತಮ್ಮ ಮರ್ಯಾದೆಯನ್ನೂ ಕುಲಧರ್ಮವನ್ನೂ ಕಾಪಿಟ್ಟುಕೊಳ್ಳುವುದಕ್ಕಾಗಿ, ರಾಯಲು ತಮ್ಮೇಗೌಡನ ಪ್ರಾಬಲ್ಯವನ್ನೂ, ಧರ್ಮಪರತೆಯನ್ನೂ ಕೇಳಿ, ಆತನ ಆಶ್ರಯವನ್ನು ಬೇಡಿದರು. ಆಶ್ರಿತರಕ್ಷಕನಾದ ಆ ದೊರೆಯು ಬಿಜಾಪುರದ ನವಾಬರನ್ನು ಲಕ್ಷ್ಯಮಾಡದೆ ಆ ವರ್ತಕರಿಗೆ ಬೇಕಾದ ಸೌಕರ್ಯಗಳನ್ನೊದಗಿಸಿಕೊಟ್ಟು ಬಂಧುಪರಿವಾರಸಮೇತ ಅವರನ್ನು ಸುರಕ್ಷಿತವಾಗಿ ತನ್ನ ದೇಶಕ್ಕೆ ಬರಮಾಡಿಕೊಂಡು ಒಬ್ಬನನ್ನು ಹೊಸಕೋಟೆಗೂ, ಮತ್ತೊಬ್ಬನನ್ನು ಕೋಲಾರಕ್ಕೂ ಕಳುಹಿಸಿ ಇಬ್ಬರಿಗೂ ಪಟ್ಟಣಸೆಟ್ಟಿಗಳೆಂಬ ಅಧಿಕಾರವಿತ್ತು ಗೌರವಿಸಿದನು. ಆ ವರ್ತಕರು ತಮ್ಮ ಸದ್ವೃತ್ತಿಗಳಿಂದ ಗೌಡದೊರೆಗಳ ಕೃಪಾಪಾತ್ರವಾಗಿ, ಧನಧಾನ್ಯಗಳನ್ನೂ, ಯುದ್ಧಸಾಮಗ್ರಿಗಳನ್ನೂ ಒದಗಿಸಿಕೊಡುತ್ತ ದೇಶದಲ್ಲಿ ಕೃಷಿವಾಣಿಜ್ಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ರಾಜಕಾರ್ಯಗಳಿಗೆ ಸಹಾಯಕರಾಗಿ ನಿಂತರು. ಈಗಲೂ ಕೆಲವು ಸ್ಥಳಗಳಲ್ಲಿ ಸರ್ಕಾರಿ ಸರಾಫ್ ಕೆಲಸವನ್ನು ಆ ಸೆಟ್ಟಿಗಳ ವಂಶೀಯರೇ ನೋಡುತ್ತಿದಾರೆ. ಗೌಡದೊರೆಗಳು ಆಳಿದ, ಬೆಂಗಳೂರು, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವಡಿಗೇನಹಳ್ಳಿ, ಸೂಲಿಬೆಲೆ, ಜಂಗಮಕೋಟೆ, ಹೊಸಕೋಟೆ, ನಂದಗುಡಿ, ಕೋಲಾರ, ದೇವನಹಳ್ಳಿ ಮತ್ತು

ಇವುಗಳ ಸುತ್ತುಮುತ್ತಿನ ಕೆಲವು ಗ್ರಾಮುಗಳಲ್ಲಲ್ಲದೆ ಮತ್ತೆಲ್ಲಿಯೂ ಈ ಜನಗಳು ನೆಲಸಿಲ್ಲ. ಇವರಲ್ಲಿ ಶೈವರು ವೈಷ್ಣವರೆಂದು ಎರಡು ಗುಂಪು. ಇವರಿಗೆ ನಗರ್ತರೆಂದು ರೂಢಿಯಾದ ಹೆಸರು. (ನಗರ+ ತರು = ನಗರ್ತರು ಎಂದರೆ ಪಟ್ಟಣಗಳಿಗೆ ಕಲ್ಪವೃಕ್ಷದೋಪಾದಿಯಲ್ಲಿರುವರೆಂದು ಅರ್ಥ.) ಇವರ ಪೂರ್ವಿಕರು ಅಯೋಧ್ಯಾನಗರದಿಂದ ಬಿಜಾಪುರಕ್ಕೆ ಬಂದವರೆಂದು ಹೇಳುತ್ತಾರೆ. ಇವರ ಸಂಗಡ ಈ ದೇಶಕ್ಕೆ ಬಂದ ಜಂಗಮಯ್ಯಗಳಿಗೆ ಗೌಡದೊರೆಗಳು ಜಂಗಮಕೋಟೆ ಎಂಬ ಗ್ರಾಮುವನ್ನು ಕಟ್ಟಿಸಿ ಅಲ್ಲಿ ಅವರನ್ನು ಸುಖವಾಗಿ ನೆಲೆಗೊಳಿಸಿದನು.

ಈ ನಗರ್ತ ವರ್ತಕರು ಲಿಂಗಧಾರಿಗಳಾದರೂ ಮತದ್ವೇಷವಿಲ್ಲದೆ ಶಿವ ವಿಷ್ಣುಗಳನ್ನು ಆರಾಧಿಸುತ್ತಾರೆ. ಇವರು ಯಜ್ಞೋಪವೀತವನ್ನು ಧರಿಸಿ ಬ್ರಾಹ್ಮಣರಂತೆ ಗೋತ್ರ, ಸೂತ್ರ, ಪ್ರವರಗಳುಳ್ಳವರಾಗಿ ಲಿಂಗಾಯತ ಗುರುಗಳನ್ನೂ, ಬ್ರಾಹ್ಮಣಗುರುಗಳನ್ನೂ ಸಮನಾಗಿ ಗೌರವಿಸುತ್ತಾರೆ. ಇವರಲ್ಲಿ ಪಾನಭಕ್ಷಣಾದಿ ದುರಾಚಾರವುಳ್ಳವರಾಗಲಿ ಜಾತಿಭ್ರಷ್ಟರಾಗಿ ಮತಾಂತರಗಳಿಗೆ ಸೇರಿದವರಾಗಲಿ ಇಲ್ಲ. ವೃದ್ಧಾಚಾರವನ್ನು ಬಿಡದೆಯೂ, ಡಾಂಭಿಕಕ್ಕೊಳಗಾಗದೆಯೂ, ಕುಲವೃತ್ತಿಯಾದ ವ್ಯಾಪಾರವಲ್ಲದೆ ಅನ್ಯವೃತ್ತಿಯನ್ನನುಸರಿಸದೆಯೂ ಬೂದಿ ಮುಚ್ಚಿದ ಕೆಂಡದ ಹಾಗೆ ಇರತಕ್ಕವರೆಂದರೆ ಈ ಜನಗಳೇ. ರಾಯಲು ತಿಮ್ಮೇಗೌಡನು ಅನೇಕ ವಿದ್ವಾಂಸರುಗಳನ್ನೂ, ಕೆಲಸಗಾರರನ್ನೂ ದೇಶಾಂತರಗಳಿಂದ ಕರೆಸಿ ತನ್ನ ದೇಶದಲ್ಲಿ ನೆಲೆಗೊಳಿಸಿ ದೇಶದ ನಾಗರಿಕತೆ, ಐಶ್ವರ್ಯ, ಉದ್ಯೋಗಗಳನ್ನು ಅಭಿವೃದ್ಧಿಗೆ ತಂದು ಪ್ರಜೆಗಳನ್ನು ಸುಖಸಾಗರದಲ್ಲಿ ತೇಲಿಸಿದನು.

ಹೊಸಕೋಟೆಯಲ್ಲಿ ಅವಿಮುಕ್ತೇಶ್ವರದೇವಾಲಯವನ್ನು ದ್ರಾವಿಡ ಮರ್ಯಾದೆಯಲ್ಲಿ ಕಟ್ಟಿಸಿ ಹನಹರದಲ್ಲಿ ಇರುವಂತೆ ೨೫ ಅಡಿ ಎತ್ತರದ ಒಂದು ಕಂಭವನ್ನು ಅದರ ಮುಂದೆ ನಿಲ್ಲಿಸಿ ಕಂಭದ ನಾಲ್ಕು ಪಾರ್ಶ್ವದಲ್ಲಿಯೂ ಸುತ್ತಿ ಳಳ ದೀಪದ ಬಟ್ಟಲುಗಳನ್ನು ಮಾಡಿಸಿದನು. ದೇವರ ಪೂಜೆ ಮುಂತಾದುವುಗಳಿಗೆ ಅನೇಕವಾಗಿ ಮಾನ್ಯಮಿರಾಸೆಗಳನ್ನು ಏರ್ಪಡಿಸಿದನು. ಈತನು ದೀರ್ಘಕಾಲವಾಳಿ ಪರಲೋಕವನ್ನೈದಿದ ತರುವಾಯ ಈತನ ಮಗ ಇಮ್ಮಡಿ ಚಿಕ್ಕರಾಯಲು ತಮ್ಮೇಗೌಡನು ದೊರೆಯಾದನು. ಈತನು ತಂದೆಯಂತೆಯೇ ಧರ್ಮದಿಂದ ಬಹುಕಾಲ ರಾಜ್ಯವಾಳಿ ನಾಡುಗಳನ್ನು ಬಲಪಡಿಸಿ ದೇವಕಾರ್ಯಗಳನ್ನು ನಿರ್ವಹಿಸುತ್ತ, ತನ್ನ

ಇಬ್ಬರು ಮಕ್ಕಳಿಗೂ ರಾಜ್ಯವನ್ನು ಭಾಗಮಾಡಿ ಕೊಟ್ಟು ಈ ಲೋಕವನ್ನು ಬಿಟ್ಟನು.

ಅವರಲ್ಲಿ ಹಿರಿಯವನಾದ ಮುಮ್ಮಡಿ ಚಿಕ್ಕರಾಯಲು ತಿಮ್ಮೇಗೌಡನು ಹೊಸಕೋಟೆಯನ್ನು ರಾಜಧಾನಿಯಾಗಿ ಮಾಡಿಕೊಂಡನು. ಇವನು ತನ್ನ ಹಿರಿಯರ ಮೇಲುಪಙ್ತಿಯನ್ನನುಸರಿಸಿ ಪ್ರಜೆಗಳನ್ನು ಧರ್ಮದಿಂದ ಆಳುತ್ತಾ ಹೊಸಕೋಟೆಯನ್ನು ಉತ್ತಮಸ್ಥಿತಿಗೆ ತಂದನು. ಇವನ ತರುವಾಯ ಮೂರು ತಲೆಯವರು ಆಳಿದರು. ಎರಡನೆಯವನಾದ ತಿಮ್ಮೇಗೌಡನು ಕೋಲಾರದಲ್ಲಿ ನಿಂತು ವಂಶಪಾರಂಪರ್ಯವಾಗಿ ರಾಜ್ಯವಾಳುತ್ತ ಕೋಟೆಯನ್ನೂ ಪೇಟೆಯನ್ನೂ ಬಲಪಡಿಸಿದನು. ಸೋಮೇಶ್ವರದೇವಸ್ಥಾನವೂ, ಕೋಳಾಲಮ್ಮನ ದೇವಾಲಯವೂ ಕೆರೆಗಳೂ ಆ ಕಾಲದಲ್ಲಿ ಕಟ್ಟಲ್ಪಟ್ಟುವು. ದೇವತಾಕಾರ್ಯಗಳು ನಡೆಯಲು ತಕ್ಕ ಮಾನ್ಯ ಮಿರಾಸೆಗಳು ಕೊಡಲ್ಪಟ್ಟುವು. ಕ್ರಿ. ಶ. ೧೬೩೯ ರಲ್ಲಿ ಬಿಜಾಪುರದ ಮುಸಲ್ಮಾನರು ದಂಡೆತ್ತಿ ಬಂದು ಕೋಲಾರವನ್ನು ಹಿಡಿದುಕೊಂಡರು. ಅಂದಿನಿಂದ ಅಲ್ಲಿ ಮುಸಲಮಾನರ ಪ್ರಜಾಸಂಖ್ಯೆ ಹೆಚ್ಚಾಗಿದೆ. ಅಲ್ಲಿ ರೇಶ್ಮೆ, ಬೆಲ್ಲ, ಸಕ್ಕರೆಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತಿದೆ. ಲೋಕಪ್ರಖ್ಯಾತವಾದ ಚಿನ್ನದ ಗಣಿಯು ಈ ಡಿಸ್ಟ್ರಿಕಟ್ಟಿನಲ್ಲಿ ಇರುತ್ತದೆ.

ಆಗ ಅಲ್ಲಿನ ಗೌಡದೊರೆಯು ಮುಳಬಾಗಲಿಗೆ ಬಂದು ನಿಂತನು. ಕ್ರಿ. ಶ. ೧೭೬೮ ರ ವರೆಗೂ ಮುಳಬಾಗಲು ಪುಂಗನೂರ ಸೀಮೆಗಳನ್ನು ಗೌಡದೊರೆಗಳೇ ಆಳುತ್ತ ಬಂದರು. ಅನಂತರ ಟೀಪುವಿಗೂ ಇಂಗ್ಲಿಷರಿಗೂ ಕದನವುಂಟಾಗಿ ಮುಳಬಾಗಲು ಗೌಡದೊರೆಗಳ ಕೈತಪ್ಪಿ ಮೈಸೂರಿಗೆ ಸೇರಿತು. ಇದು ಪೂರ್ವದಲ್ಲಿ ಲಕ್ಕಣ್ಣ ದಣಾಯಕ ಮಾರಣ್ಣ ದಣಾಯಕರಿಂದ ತಮ್ಮೇಗೌಡನ ಸ್ವಾಧೀನಕ್ಕೆ ಬಂದಿತು.

ಈ ಮುಳಬಾಗಲು ಶತಕವಾಟಪುರಿ ಮತ್ತು ಭಾಸ್ಕರಕ್ಷೇತ್ರನೆಂದು ಪುರಾಣಪ್ರಸಿದ್ಧವಾದ ಯಾತ್ರಾಸ್ಥಳವಾಗಿರುವುದು. ಇಲ್ಲಿ ಶ್ರೀಸೋಮೇಶ್ವರ ದೇವಾಲಯವೂ, ಶ್ರೀ ಆಂಜನೇಯದೇವಾಲಯವೂ, ಶ್ರೀಪಾದರಾಯಸ್ವಾಮಿಗಳ ಮಠವೂ ಪ್ರಸಿದ್ಧವಾಗಿವೆ.

ಸುಗಟೂರುನಾಡ ಪ್ರಭುಗಳ ವಂಶಾವಳಿಯು ಬಹಳ ಮಹತ್ವವುಳ್ಳುದಾಗಿರುವುದು. ಇವರಲ್ಲಿ ರಾಯಲು ತಮ್ಮೇಗೌಡ, ಮುಮ್ಮಡಿ ತಮ್ಮೇಗೌಡ, ಮುಮ್ಮಡಿ ಚಿಕ್ಕರಾಯಲು ತಮ್ಮೇಗೌಡ ಶಿವನಪ್ಪಗೌಡನೇ ಮೊದಲಾದವರು ಮಹತ್ಕಾರ್ಯಗಳನ್ನು ನಡೆಸಿರುತ್ತಾರೆ. ಇವರೆಲ್ಲರು ಕ್ರಿ. ಶ. ೧೪೯೪ ರಿಂದೀಚೆಗೆ ಪ್ರಬಲಕ್ಕೆ ಬಂದರು.

ಹೊಸಕೋಟೆಯ ದೊರೆಯಾದ ತಮ್ಮೇಗೌಡನು ಹೊಸಹಳ್ಳಿಯೆಂಬ ಗ್ರಾಮವನ್ನು ತನ್ನ ಗುರುವಾದ ನಿಜಗುಣಸಜ್ಜನಸ್ವಾಮಿಗೆ ಅರ್ಪಿಸಿ ಅದಕ್ಕೆ ಅಯ್ಯನ ಹೊಸಹಳ್ಳಿಯೆಂದು ಹೆಸರಿಟ್ಟು ಮನುಷ್ಯನ ಜೀವಿತಕ್ಕೆ ಸದ್ಗುಣ, ಸಂಪತ್ತು, ಸದ್ವಾಂಛೆ, ಮುಕ್ತಿ ಈ ನಾಲ್ಕೇ ಮುಖ್ಯವಾದುವುಗಳೆಂದು ತೋರಿಸುವುದಕ್ಕೋ ಎಂಬಂತೆ ಆ ಗ್ರಾಮದ ನಾಲ್ಕು ದಿಕ್ಕುಗಳಲ್ಲಿಯೂ ಲಿಂಗಗಳನ್ನು ಪ್ರತಿಷ್ಠಿಸಿ ತಾನು ದಾನಮಾಡಿರುವ ಈ ಪರಿಶುದ್ಧವಾದ ಗ್ರಾಮವನ್ನು ಮುಂದಣ ರಾಜರು ನಡೆಸಿಕೊಂಡು ಬರಬೇಕೆಂದೂ, ಈ ಧರ್ಮವನ್ನು ಕಾಪಿಟ್ಟವರಿಗೆ ಶಿವಾಭಿಷೇಕನ ಗಣಾರಾಧನೆಗಳನ್ನು ಮಾಡಿದ ಪುಣ್ಯವು ಪ್ರಾಪ್ತವಾಗಿ ಅಭಿವೃದ್ಧಿಯನ್ನೈದುವರೆಂದೂ, ಇದನ್ನು ಕಾಪಿಡದವರು ಸೂರ್ಯಚಂದ್ರಾಗ್ನಿಗಳ ಸಾಕ್ಷಿಯಾಗಿ ಪಾಪಕ್ಕೆ ಗುರಿಯಾಗುವರೆಂದೂ, ಇದು ಶಿವಪ್ರೀತ್ಯರ್ಥವೆಂದೂ ತಾಮ್ರಶಾಸನವನ್ನು ಬರೆಸಿದನು.

ಇಮ್ಮಡಿ ತಮ್ಮೇಗೌಡನು ರಾಜ್ಯಭಾರಮಾಡುತ್ತಿರುವಾಗ ಬಸವೇಗೌಡನ ಮಗನಿಗೆ ದಾನಮಾಡಿದ ಒಂದು ಶಾಸನವು ಭಕ್ತರ ಹಳ್ಳಿಯಲ್ಲಿ ಸಿಕ್ಕಿರುತ್ತದೆ.

ಮುಮ್ಮಡಿ ಚಿಕ್ಕರಾಯಲು ತಮ್ಮೇಗೌಡನು ಪ್ರಬಲಕ್ಕೆ ಬಂದು ನಾಡನ್ನು ಪ್ರಜೆಗಳ ಸುಖಸಂತೋಷಗಳಿಗೆ ಅನುಕೂಲವಾಗಿ ಆಳಿಕೊಂಡು ಪ್ರಖ್ಯಾತಿಗೆ ಬಂದನು. ಈತನು ಲಿಂಗಾಯತರಿಗೆಲ್ಲ ಗುರುವಾದ ಸಜ್ಜೆ ಸಿದ್ಧಲಿಂಗದೇವರ ಮಗ ಗುರುಬಸವಣ್ಣನಿಗೆ ಕ್ರಿ. ಶ. ೧೬೭೧ ರಲ್ಲಿ ಒಂದು ಮಠವನ್ನು ಕಟ್ಟಿಸಿ ದಾನಮಾಡಿದ ಶಾಸನವು ಹೊಸಕೋಟೆ ತಾಲ್ಲೂಕು ಗೋನಕಾನ ಹಳ್ಳಿಯಲ್ಲಿದೆ.

ಈ ಮುಮ್ಮಡಿ ಚಿಕ್ಕರಾಯಲು ತಮ್ಮೇಗೌಡನು ಶೈವಮತಾವಲಂಬಿಯೂ, ಭಕ್ತಾಗ್ರೇಸರನೂ, ಪ್ರಜಾರಂಜಕನೂ ಆಗಿದ್ದುದಲ್ಲದೆ ಮಹಾವಿದ್ವಾಂಸನೂ ಕವಿರತ್ನವೂ ಎನಿಸಿ ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಪ್ರೌಢ

ಕವಿಯಾಗಿದ್ದನು. ಈತನು ಕರ್ಣಾಟಕಭಾಷೆಯಲ್ಲಿ ೪೧೦೦ ಷಟ್ಪದಿಗಳುಳ್ಳ ಶಂಕರಸಂಹಿತೆ ಎಂಬ ಗ್ರಂಥವನ್ನೂ, ತೆಲುಗಿನಲ್ಲಿ ರಾಜೇಂದ್ರಚೋಳಚರಿತ್ರೆ, ಕುಮಾರಾರ್ಜುನೀಯವೆಂಬ ಗ್ರಂಥಗಳನ್ನೂ, ಸಂಸ್ಕೃತದಲ್ಲಿ ಕೌಮುದೀವ್ಯಾಖ್ಯಾನ, ರಸಿಕಮನೋರಂಜನೀ ಎಂಬುವುಗಳನ್ನೂ ರಚಿಸಿದ್ದಾನೆ. ಇತರ ರಾಜರುಗಳಂತೆ ಪಂಡಿತರಿಂದ ಗ್ರಂಥಗಳನ್ನು ಬರೆಯಿಸಿ ತಮ್ಮ ಹೆಸರಿನಲ್ಲಿ ಪ್ರಕಟಪಡಿಸದೆ, ಸ್ವಸಾಮರ್ಥ್ಯದಿಂದಲೇ ಬರೆದುವುಗಳೆಂದು ಹೇಳಿಕೊಂಡಿರುತ್ತಾನೆ.

ಇದಲ್ಲದೆ ಈತನು ಇತರಪಂಡಿತರುಗಳಿಂದ ರಚಿಸಲ್ಪಟ್ಟಿದ್ದ ಅನೇಕಗ್ರಂಥಗಳನ್ನು ಸೇರಿಸಿ ಒಂದು ಪುಸ್ತಕಭಂಡಾರವನ್ನೇರ್ಪಡಿಸಿದನು. ಅವುಗಳಲ್ಲಿ ಶಿವದರ್ಪಣವೆಂಬುದು ಮುಖ್ಯವಾದುದು.

ಮುಮ್ಮಡಿ ತಮ್ಮೇಗೌಡನ ತಾಯಿತಂದೆಗಳು ಸಜ್ಜನಮೂರ್ತಿಯೆಂಬ ವೀರಶೈವಗುರುವಿನ ಭಕ್ತರಾಗಿದ್ದುದರಿಂದ ಸುಗಟೂರು ಪ್ರಭುಗಳ ಸಂತತಿಯವರು ಸುಜ್ಞಾನಮೂರ್ತಿದೇಶಿಕರ ಉಪದೇಶದಿಂದ ಉನ್ನತಪದವಿಯಲ್ಲಿದ್ದರೆಂದು ತಿಳಿದು ಬಂದಿದೆ.

ಸುಜ್ಞಾನಸ್ವಾಮಿಗಳಿಗೆ ೧೪೪೯ ರಲ್ಲಿ ತಮ್ಮೇಗೌಡನು ದಾನಮಾಡಿದ ಮಠ ಗ್ರಾಮಾದಿಗಳಿಂದ ಈ ವಂಶೀಯರು ಅವರ ಭಕ್ತರೆಂದೂ, ಶೈವಮತಾವಲಂಬಿಗಳೆಂದೂ ತಿಳಿದುಬಂದಿದೆ.

ಕ್ರಿ. ಶ. ೧೬೬೨ ರಲ್ಲಿ ಮುಮ್ಮುಡಿ ಚಿಕ್ಕರಾಯುಲು ತಮ್ಮೇಗೌಡನು ವಡೆಯರೆಂಬುವರಿಗೆ ದಾನಮಾಡಿದ ವಿಷಯದಲ್ಲಿ ಹೊಸಕೋಟೆಯ ಈದಿಗದ ಬಳಿ ತೆಲುಗುಭಾಷೆಯ ಶಾಸನವಿದೆ. ಈತನ ಮೊಮ್ಮಗನು ೧೭೯೩ ರಲ್ಲಿ ಹೊರಕೋಟೆಯನ್ನು ಆಳಿದ ನಿದರ್ಶನಗಳಿವೆ.

ಸುಗಟೂರು ಚಿಕ್ಕತಮ್ಮಯ್ಯಗೌಡನ ಅಕ್ಕ ಹಲಸರಾತಮ್ಮನೆಂಬ ದೈವಭಕ್ತಳು ಮುಳಬಾಗಿಲ ತಾಲ್ಲೂಕು ಆವನಿ ಬೆಟ್ಟದ ಧನುಷ್ಕೋಟಿತೀರ್ಥದ ಉತ್ತರಪಾರ್ಶ್ವದ ಬಂಡೆಯ ಮೇಲೆ ವಿಷ್ಣು, ರುದ್ರ, ರಾಮ, ಸೀತಾ, ಕಾರ್ತಿಕೇಯ, ಕಾಮದೇವ, ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಮೊದಲಾದ ೧೬ ದೇವಪಾದಗಳನ್ನು ಕೆತ್ತಿಸಿ, ವಾಲ್ಮೀಕಿಪ್ರೋಕ್ತರೀತ್ಯಾ ಗಯಾಪಿಂಡ

ಸದೃಶ ತನ್ನ ಪಿತೃಗಳಿಗೆ ತಿಲೋದಕಪಿಂಡಪ್ರದಾನಗಳನ್ನು ಮಾಡಿದ ಶಾಸನವೂ, ಚಿಕ್ಕರಾಯಲು ತಮ್ಮೇಗೌಡನ ಮಗ ಇಮ್ಮಡಿ ತಮ್ಮೇಗೌಡನ ಮುಳಬಾಗಿಲ ದಾನಶಾಸನವೂ ಕ್ರಿ. ಶ. ೧೬೦೦ ರಲ್ಲಿ ಕೆತ್ತಿದುವುಗಳಾಗಿವೆ.

ಈ ಇಮ್ಮಡಿ ತಮ್ಮೇಗೌಡನ ಮಗಳಾದ ಕೆಂಪಮ್ಮನೆಂಬ ಸಾಧ್ವೀಮಣಿಯು ಮಹಾಧರ್ಮಶೀಲಳಾಗಿದ್ದಳು. ಈಕೆಯು ಯಜ್ಞವನ್ನು ಮಾಡಿಸಿದ ಯೂಪಸ್ತಂಭವೂ, ಶಾಸನವೂ ಆವನಿಯ ಬಳಿ ನಾಗರಕೋಟೆಯ ಪಕ್ಕದ ಬಂಡೆಯ ಮೇಲಿವೆ.

ಚಿಕ್ಕರಾಯಲು ತಿಮ್ಮೇಗೌಡನೂ ಯಜ್ಞವನ್ನು ಮಾಡಿಸಿರುತ್ತಾನೆ. ಈ ಯಜ್ಞಗಳು ಸುಮಾರು ಕ್ರಿ. ಶ. ೧೬೩೦ ರಲ್ಲಿ ನಡೆದಿರುವಂತೆ ತಿಳಿಯ ಬರುತ್ತದೆ

ಈ ಸಂತತಿಯ ಕೊನೆಯ ದೊರೆ ಶಿವನಪ್ಪಗೌಡನು ಹೊಸಕೋಟೆ ತಾಲ್ಲೂಕು ಬಿಸನಹಳ್ಳಿ, ಕಟ್ಟಿಗೇನಹಳ್ಳಿ, ಗ್ರಾಮಗಳಲ್ಲಿ ವಾಸಮಾಡಿಕೊಂಡು ತನ್ನ ಹಿರಿಯರಂತೆ ಧರ್ಮಕಾರ್ಯನಿರತನಾಗಿದ್ದನು.

ಈತನು ಬಿಸನಹಳ್ಳಿ ಕೆಂಪಣ್ಣಗೌಡನೆಂಬವನಿಗೆ ಒಂದು ಹೊಲವನ್ನು ಕೆರೆ ಕೊಡಿಗೆಯಾಗಿ (ಮಾನ್ಯವಾಗಿ)ಯೂ, ಶಿವಾಚಾರದ ವಿರಕ್ತಯ್ಯದೇವ ಎಂಬವರಿಗೆ ಮಠವನ್ನು ಕಟ್ಟಿಸಿ ದಾನವಾಗಿಯೂ ಕೊಟ್ಟು ಕೆತ್ತಿಸಿರುವ ಶಿಲಾಶಾಸನ ಕ್ರಿ. ಶ. ೧೭೦೬ ರಲ್ಲಿ ಸ್ಥಾಪಿಸಿದುದಾಗಿದೆ.

೧೬೭೮ರಲ್ಲು ಇಮ್ಮಡಿ ತಮ್ಮೇಗೌಡರ ಭಾರ್ಯೆಯೂ ಚಿಕ್ಕರಾಯಲು ತಮ್ಮೇಗೌಡನೂ ಆವನಿ ರಾಮೇಶ್ವರ ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಅಗ್ನಿಷ್ಟೋಮವೆಂಬ ಯಜ್ಞವನ್ನು ತಿರುಮಲ ಸೋಮಯಾಜಿವಂಶದ ಕೃಷ್ಣಸೋಮಯಾಜಿಯಿಂದ ಮಾಡಿಸಿದಂತೆ ಶಾಸನವಿದೆ. ೧೬೭೧ ರಲ್ಲು ಮುಮ್ಮಡಿ ಚಿಕ್ಕರಾಯಲು ತಮ್ಮೇಗೌಡನು ತನ್ನ ಸೈನ್ಯದ ಮುಸಲ್ಮಾನ್ ಇಸೂಪ್ ಅಜೆಯೆಂಬುವನ ಪರಾಕ್ರಮಕ್ಕೆ ಮೆಚ್ಚಿ ಕೊಡಿಗೆಹಳ್ಳಿ ಬಾಗವಾಡಿ ಕೆರೆಯ ಕೆಳಗೆ ಮಾನ್ಯಕೊಟ್ಟು ಇದನ್ನು ಆರಾದರೂ ಭಂಗಪಡಿಸಿದರೆ ಕಾಶಿಯಲ್ಲಿ ಗೋವನ್ನು ಕೊಂದಂತೆ, ಮಕ್ಕಾದಲ್ಲಿ ಹಂದಿ ತಿಂದಂತೆ ಹರಿಹರ ಸಾಕ್ಷಿಯಾಗಿ ಎಂದು ಶಾಸನ ಬರೆಸಿದ್ದಾನೆ.

೧೫೬೪ ರಲ್ಲಿ ಚಿಕ್ಕರಾಯಲು ತಮ್ಮೇಗೌಡನು ಇಷ್ಟದೇವರಾದ ಸೋಮೇಶ್ವರ, ವೀರಭದ್ರದೇವರ ಅಮೃತಪಡಿಗೆ ಒಂದು ಗ್ರಾಮವನ್ನು ಅರ್ಚಕ ನೀಲಕಂಠಯ್ಯನಿಗೆ ದಾನಮಾಡಿ ಸದಾಶಿವಗೋತ್ರದ ಚಿಕ್ಕರಾಯ ತಮ್ಮಪ್ಪ ಎಂದು ಶಾಸನವನ್ನು ಬರೆಸಿರುತ್ತಾನೆ.

ಸುಗಟೂರು ನಾಡು ಪ್ರಭುಗಳು ಅನೇಕವಾಗಿ ಗ್ರಾಮ, ಮಾನ್ಯ, ಭೂಮಿ ಗಳನ್ನು ದಾನಮಾಡಿದ ಶಾಸನಗಳಿವೆ.

ಹೊಸಕೋಟೆ ಕೆರೆಯು ಬೆಂಗಳೂರ ಡಿಸ್ತ್ರಿಕ್ಟಿನಲ್ಲಿ ದೊಡ್ಡದು. ಇದು ತುಂಬಿದರೆ ೧೦ ಮೈಲಿಯ ಸುತ್ತಳತೆಯಾಗುವುದು. ಇದು ಭತ್ತ, ಉರುಳಿಗಡ್ಡೆ, ಬೆಳ್ಳುಳ್ಳಿ, ಈರುಳ್ಳಿ ಮುಂತಾದುವು ರಫ್ತಾಗಿ ಒಳ್ಳೇ ವ್ಯಾಪಾರಸ್ಥರಿರುವ ಸ್ಥಳವಾಗಿದೆ.

ಅಬ್ಲೂಡು—ಉಜ್ಜಯಿನಿ ಪಟ್ಟಣದ (ರಣಬೈರೇಗೌಡನ ಬಂಧುವಾದ) ಕೆಂಪೇಗೌಡನು ಗರ್ಭಿಣಿಯಾಗಿದ್ದ ಹೆಂಡತಿಯೊಡನೆ ಸಿಡ್ಲಘಟ್ಟದ ಬಳಿಯಿರುವ ಅಬ್ಲೂಡು ಗ್ರಾಮಕ್ಕೆ ಬಂದು ಪಾಳೆಯಗಾರನಾಗಿ ತನ್ನ ಭುಜಬಲಪರಾ ಕ್ರಮದಿಂದಲೂ, ಧೈರ್ಯವನ್ನು ಕೊಡುತ್ತಿದ್ದ ತನ್ನ ಹೆಂಡತಿಯ ಸಹಾಯ ದಿಂದಲೂ ಪ್ರಬಲನಾಗಿದ್ದನು. ಇವನಿಗೆ ಶಿವನೇಗೌಡನೆಂಬ ಪುತ್ರನು ೧೫೧೪ ರಲ್ಲಿ ಹುಟ್ಟಿದನು. ಶಿವನೇಗೌಡನು ವೇಲೂರ ಮುತ್ತಿಗೆಯಲ್ಲಿ ಶತ್ರುಗಳಿಂದ ಹತನಾದನು. ಇವನ ಹೆಂಡತಿಯಾದ ಹಲಸೂರಮ್ಮನು ಧೈರ್ಯಗಿಡದೆ ಪತಿವಿ ಯೋಗದುಃಖವನ್ನು ಸಹಿಸಿಕೊಂಡು ದಕ್ಷತೆಯಿಂದ ಸುತ್ತುಮುತ್ತಣ ಗ್ರಾಮ ಗಳನ್ನು ಸ್ವಾಧೀನಪಡಿಸಿಕೊಂಡು ೧೫ ಸಂ|| ಗಳ ಕಾಲ ರಾಜ್ಯವನ್ನು ನಿರ್ವಹಿಸಿ ದೈವವಶಾತ್ ತನಗೆ ಲಭಿಸಿದ ನಿಧಿಯಿಂದ ಅಬ್ಲೂಡು ಗ್ರಾಮಕ್ಕೆ ಕೋಟೆಯನ್ನು ಕಟ್ಟಿಸಿ ತನ್ನ ತಂದೆಯಾದ ಸಿಡ್ಲಗೌಡನ ಹೆಸರಿನಲ್ಲಿ ೧೫೨೭ ರಲ್ಲಿ ಸಿಡ್ಲಘಟ್ಟವನ್ನು ಸ್ಥಾಪಿಸಿ, ತನ್ನ ಮಗನಾದ ಶಿವನೇಗೌಡನನ್ನು ಅಲ್ಲಿಯ ಪಟ್ಟಕ್ಕೆ ತಂದು ತನ್ನ ಹೆಸರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿದಳು. ಸಿಡ್ಲಘಟ್ಟದ ಎರಡು ಕೆರೆಗಳೂ ಅಮ್ಮನ ಕೆರೆ. ಗೌಡನ ಕೆರೆಯೆಂಬ ಹೆಸರುಳ್ಳುವಾಗಿ, ಅದ್ಯಾಪಿ ತಾಯಿ ತಂದೆಗ ಳಂತೆ ಗ್ರಾಮವನ್ನು ಕಾಪಿಡುತ್ತಿವೆ.

ಶಿವನೇಗೌಡನು ತನ್ನ ತಾಯಿಯಾದ ಧೈರ್ಯಲಕ್ಷ್ಮಿಯ ಒತ್ತಾಸೆಯಿಂದ ಪ್ರಬಲನಾಗಿ ಪರಾಕ್ರಮದಿಂದ ೪೭ ವರ್ಷಗಳು ರಾಜ್ಯಭಾರಮಾಡಿದನು. ಈತನ ಹೆಂಡತಿ ಶಿವಾಜಮ್ಮನು ತುಂಬಾ ಗುಣವತಿಯಾಗಿದ್ದಳು.

ಗ್ರಾಮದ ಮಧ್ಯೆ ಹಳೆಯ ತಾಲ್ಲೋಕು ಕಚೇರಿಯಿರುವ ಸ್ಥಳವೇ ಅವರ ಅರಮನೆಯಾಗಿದ್ದಿತು. ಸ್ಕೂಲಿನ ಅಂಗಳದಲ್ಲಿ ೬×೫ ಅಡಿಯ ಅಳತೆಯುಳ್ಳ ೧೦ ಅಂಗುಲ ದಪ್ಪದ ಚಪ್ಪಡಿಯ ಕಲ್ಲು ಇದೆ. ಶಿವನೇಗೌಡನು ಆಯುಷ್ಕರ್ಮಕಾಲ ದಲ್ಲಿ ಅದರ ಮೇಲೆ ಕುಳಿತುಕೊಳ್ಳುತ್ತಿದ್ದನಂತೆ.

ಈತನ ಮಗ ಇಮ್ಮಡಿ ಶಿವನೇಗೌಡನು ೧೫೭೬ ರಲ್ಲಿ ಪಟ್ಟಕ್ಕೆ ಬಂದು ೪೦ ವರ್ಷಗಳ ಕಾಲ ಆಳಿದನು. ೧೬೧೬ ರಲ್ಲಿ ಮರಾಟೆಯವರು ದಂಡೆತ್ತಿ ಬಂದು ಶಿಡ್ಲಘಟ್ಟವನ್ನು ಸ್ವಾಧೀನಪಡಿಸಿಕೊಂಡು ಗೌಡನನ್ನು ಬೆಂಗಳೂರಿಗೆ ಸಾಗಿಸಿದರು ಇದು ೧೬೬೧ರ ವರೆಗೆ ಮರಾಟೆಯವರ ಸ್ವಾಧೀನವಲ್ಲಿದ್ದು ತರು ವಾಯ ಮೊಗಲರ ಸ್ವಾಧೀನವಾಯಿತು. ಪುನಃ ೧೬೮೯ ರಲ್ಲಿ ಮರಾಟೆಯವರು ಇದನ್ನು ಗೆದ್ದು ೧೬೯೧ ರಲ್ಲಿ ಚಿಕ್ಕಬಳ್ಳಾಪುರದ ಅಣ್ಣಯ್ಯಗೌಡನಿಗೆ ಮಾರಿ ದರು. ಈತನು ೧೭೬೨ ವರೆಗೆ ಆಳುತ್ತಿದ್ದು ಹೈದರನಿಂದ ಪರಾಜಿತನಾ ದನು.

ಶಿಡ್ಲಘಟ್ಟವು ಒಳ್ಳೆಯ ವ್ಯಾಪಾರಸ್ಥಳ. ಉರುಳೀಗಡ್ಡೆ, ಅರಶಿನ, ಬೆಲ್ಲ, ಸಕ್ಕರೆ ಇವು ಗಳು ರಫ್ತಾಗುತ್ತವೆ.

ಸರ್ಜಾಪುರ—ಸುಗಟೂರುನಾಡ ತಮ್ಮಗೌಡನು ಸರ್ಜಾಪುರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅಭಿವೃದ್ಧಿಪಡಿಸಿ ೧೫೨೭ ರಲ್ಲಿ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದನು. ಈಗ ಅದು ಶಿಥಿಲವಾಗಿದೆ. ವಿಗ್ರಹಗಳನ್ನು ಉಳಿಯಿಂದ ಭಿನ್ನಮಾಡಿರುತ್ತಾರೆ. ಸರ್ಜಾಪುರದ ಜಹಗೀರದಾರರು ಮಹ ಮ್ಮದನ ಪವಿತ್ರವಾದ ಕೂದಲನ್ನು ಶಾಶ್ವತಪಡಿಸಲೋಸುಗ ಈ ದೇವಸ್ಥಾನದ ಮೇಲೆ ಕಟ್ಟಡ ಕಟ್ಟಿಸಿರುತ್ತಾರೆ. ದೇವಸ್ಥಾನದ ಪೂರ್ವ ಭಾಗವು ಮಹಮದೀ ಯರ ವಾಸಸ್ಥಳವಾಗಿ ಇದೆ. ಪಶ್ಚಿಮಭಾಗವು ಹೇಸಿಗೆಯಾಗಿದೆ. ಈ ಊರ ಪಟಲದಮ್ಮನ ವಿಗ್ರಹವನ್ನು ಕಿತ್ತುಹಾಕಿರುತ್ತಾರೆ.

ಅಧ್ಯಾಯ—೧೦

ಚಿಕ್ಕಬಳ್ಳಾಪುರದ ನಾಡ ಪ್ರಭುಗಳು.

ಆವತಿ ರಣಬೈರೇಗೌಡನ ಸಂತತಿಯಲ್ಲಿ ಯಲಹಂಕನಾಡ ಪ್ರಭುಗಳಂತೆ ಯೇ ಚಿಕ್ಕಬಳ್ಳಾಪುರದ ನಾಡ ಪ್ರಭುಗಳೂ ಪ್ರಖ್ಯಾತರಾದವರು. ಈ ವಂಶೀ

ಯರು ಈಗಲೂ ಇನಮಿಂಚೇನ ಹಳ್ಳಿ ಬೋಡೇನ ಹಳ್ಳಿ ಗ್ರಾಮಗಳಲ್ಲಿ ಪಾಳೆಯ ಗಾರರೆನ್ನಿಸಿಕೊಂಡು ಇದಾರೆ.

ಆವತಿಯಲ್ಲಿ ಪ್ರಭುತ್ವಮಾಡಿಕೊಂಡಿದ್ದ ಈರೇಗೌಡನೂ ಈತನ ಸಹೋದರನಾದ ಮರೇಗೌಡನೂ ಕಂದವರದ ಶ್ರೀವರದರಾಜಸ್ವಾಮಿಯ ಸೇವೆಗಾಗಿ ಹೋಗಿದ್ದು, ಈಗ ಚಿಕ್ಕಬಳ್ಳಾಪುರವಿರುವ ಹಿಂದೆ ಕಾಡಾಗಿದ್ದ ಪ್ರದೇಶಕ್ಕೆ ಬೇಟೆಯಾಡುವುದಕ್ಕಾಗಿ ಹೋದರು. ಒಂದು ಮೊಲವು ಮುಂದೆ ಹೋಗುತ್ತಿದ್ದ ಬೇಟೆಯ ನಾಯಿಯನ್ನು ಇದಿರಿಸಿ ಅಟ್ಟಿಕೊಂಡು ಬರುತ್ತಿದ್ದಿತು. ಅದನ್ನು ಕಂಡು ಸಹೋದರರಿಬ್ಬರೂ ಆಶ್ಚರ್ಯಗೊಂಡು ಕುದುರೆಗಳಿಂದಿಳಿದು ಒಂದು ಗಿಡದ ಕೆಳಗೆ ಕುಳಿತುಕೊಂಡು ಯೋಚನೆಮಾಡಿ, ಈ ಸ್ಥಳವು ಪುರುಷಭೂಮಿಯಾಗಿಯೂ, ಜಲವಸತಿಯುಳ್ಳದಾಗಿಯೂ, ಸಮಪ್ರದೇಶವಾಗಿಯೂ ಇರುವುದು. ಆದುದರಿಂದ ಇಲ್ಲಿ ಒಂದು ಪಟ್ಟಣವನ್ನು ಕಟ್ಟಬೇಕೆಂದು ನಿಶ್ಚಯಿಸಿಕೊಂಡರು. ಆಗ ಬಚ್ಚೇಗೌಡ, ಬೈರೇಗೌಡರೆಂಬವರ ಅಧೀನದಲ್ಲಿದ್ದ ಕೋಡಿಮಂಚೇನ ಹಳ್ಳಿಯೆಂಬ ಗ್ರಾಮವು ವಿಜಯನಗರದ ಚಕ್ರಾಧಿಪತ್ಯಕ್ಕೆ ಸೇರಿದ್ದಿತು. ಅದನ್ನರಿತು ಮರೇಗೌಡನು ಅಮೂಲ್ಯವಸ್ತ್ರಾಭರಣಗಳನ್ನು ತೆಗೆದುಕೊಂಡು, ಆಪ್ತಪರಿವಾರದೊಡನೆ ಚಕ್ರವರ್ತಿಗಳ ದರ್ಶನಾರ್ಥವಾಗಿ ವಿಜಯನಗರಕ್ಕೆ ಹೋಗಿ ತಾನು ಬಂದಿರುವ ಸಂಗತಿಯನ್ನು ಪ್ರಭುಗಳಿಗೆ ತಿಳುಹಿಸಿದನು. ಅವರು ಆತನನ್ನು ಪ್ರೀತಿಪೂರ್ವಕವಾಗಿ ಮರ್ಯಾದೆಯೊಡನೆ ರಾಜಸಭೆಗೆ ಬರಮಾಡಿಕೊಂಡರು. ಮರೇಗೌಡನು ಗಂಭೀರಭಾವದಿಂದ ಸಭಾಪ್ರವೇಶಮಾಡಿ ಚಕ್ರವರ್ತಿಗಳಿಗೆ ಕಾಣಿಕೆಯನ್ನೊಪ್ಪಿಸಿ, ಸಭೆಯಲ್ಲಿದ್ದ ಇತರಾಧಿಕಾರಿಗಳಿಗೆಲ್ಲಾ ತಕ್ಕ ಮರ್ಯಾದೆಯನ್ನು ತೋರಿ ಉಚಿತಾಸನದಲ್ಲಿ ಮಂಡಿಸಿದನು. ಚಕ್ರವರ್ತಿಗಳವರಿಗೆ ಆತನಲ್ಲಿ ಆದರವುಂಟಾಗಿ ಕುಶಲಪ್ರಶ್ನಾನಂತರ, ನೀವು ಇಲ್ಲಿಗೆ ಬಂದ ಉದ್ದೇಶವೇನೆಂದು ಬೆಸಗೊಂಡರು.

ಅದಕ್ಕೆ ಗೌಡನು ''ಮಹಾಪ್ರಭೋ, ಕೋಡಿಮಂಚೇನ ಹಳ್ಳಿಯಿರುವ ಪ್ರದೇಶದಲ್ಲಿ ಒಂದು ಪಟ್ಟಣವನ್ನು ಕಟ್ಟಿಕೊಂಡು, ನನ್ನ ಹಿರಿಯರಂತೆ ರಾಜ್ಯವನ್ನು ಕಟ್ಟಿ ದೇವಬ್ರಾಹ್ಮಣರಿಗೆ ಬಾಧೆ ತೋರದಂತೆ, ಪ್ರಜೆಗಳಿಗೆ ಹಿತವಾಗಿ ಧರ್ಮದಿಂದ ರಾಜ್ಯಭಾರವನ್ನು ನಿರ್ವಹಿಸುತ್ತ ತಮ್ಮ ಅಧೀನದಲ್ಲಿರಬೇಕೆಂಬ ಕುತೂಹಲವುಂಟಾಗಿ, ಪ್ರಭುಗಳವರ ಅಪ್ಪಣೆಯನ್ನು ಪಡೆಯಬೇಕೆಂದು ಸನ್ನಿಧಾನಕ್ಕೆ ಬಂದಿದೇನೆ'' ಎಂದು ಬಿನ್ನೈಸಿದನು. ಅದನ್ನು ಕೇಳಿ ಚಕ್ರವರ್ತಿಗಳು ಸಂತುಷ್ಟರಾಗಿ ಕೋಡಿ

ಮಂಜೇನಹಳ್ಳಿಯಿರುವ ಪ್ರದೇಶವನ್ನು ಕೊಟ್ಟು "ಪ್ರಜಾನುಕೂಲಕ್ಕಾಗಿ ಗ್ರಾಮ ಗಳನ್ನೂ ಕೆರೆ, ಕುಂಟೆ, ಕೋಟೆ, ಕೊತ್ತಲಗಳನ್ನೂ ಬೇಕಾದೆಡೆಯಲ್ಲಿ ಕಟ್ಟಿಕೊಂಡು ರಾಜ್ಯವನ್ನು ವಿಸ್ತರಿಸಿ, ಪ್ರಜೆಗಳನ್ನು ಸುಖದಿಂದ ಕಾಪಿಡುತ್ತ ನಮಗೆ ಅಧೀನ ರಾಗಿದ್ದುಕೊಂಡು ಬರುವುದು" ಎಂದು ಕಟ್ಟುಮಾಡಿ ವಿಶೇಷವಾಗಿ ಬಹುಮಾನ ಗಳನ್ನು ಕೊಟ್ಟು ಕಳುಹಿಸಿದರು.

ಧರ್ಮಸಂಸ್ಥಾಪನೆಗಾಗಿ ಶ್ರೀವಿದ್ಯಾರಣ್ಯಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದ್ದ ವಿಜಯನಗರದ ಕರ್ಣಾಟಕಚಕ್ರಾಧಿಪತ್ಯದ ಅಧಿಪತಿಗಳೆಲ್ಲರೂ ದೇಶ ವತ್ಸಲರೂ, ಧರ್ಮೋದ್ಧಾರಕರೂ, ಭಾಷಾಭಿಮಾನಿಗಳೂ, ಪ್ರಜೆಗಳು ಸ್ವಾತಂತ್ರ್ಯದಿಂದ ಅಭಿವೃದ್ಧಿಗೆ ಬರಬೇಕೆಂಬ ಆಶಯವುಳ್ಳವರೂ ಆಗಿದ್ದರು. ಅವರ ಕೈಕೆಳಗಿದ್ದ ಸಾಮಂತರಾಜರೂ ದುಷ್ಟಶಿಕ್ಷಣ ಶಿಷ್ಟಪರಿಪಾಲನವನ್ನು ಮಾಡಿಕೊಂಡು ಆರ್ಯಧರ್ಮವನ್ನು ರಕ್ಷಿಸಿಕೊಂಡು ಬರುತ್ತಿದ್ದರು. ಕ್ರಿ. ಶ. ೧೩೩೬-೧೫೬೫ ರ ವರೆಗೆ ಭಾರತಮಾತೆಗೆ ತಿಲಕಪ್ರಾಯವಾಗಿ ಜಗತ್ಪ್ರಖ್ಯಾತ ವಾಗಿದ್ದ ವಿಜಯನಗರಚಕ್ರಾಧಿಪತ್ಯವು ಕಾಲವಶದಿಂದ ಮುಸಲ್ಮಾನರ ಮೂಲಕ ವಿನಾಶವನ್ನೈದಿತು. ಆ ಚರಿತ್ರೆಯನ್ನೋದಿ ಕಣ್ಣೀರಿಡದ ಭಾರತೀಯನೊಬ್ಬನೂ ಇಲ್ಲವು.

ಮರೇಗೌಡನು ಸಂಭ್ರಮದಿಂದ ಹಿಂತಿರುಗಿ ಬಂದು ವೇದಗಳಲ್ಲಿಯೂ, ಬ್ರಾಹ್ಮಣರಲ್ಲಿಯೂ ತನಗೆ ಅಪಾರವಾದ ವಿಶ್ವಾಸವಿದ್ದುದರಿಂದ, ದೈವಜ್ಞರನ್ನು ಕರೆಯಿಸಿ ಪುರನಿರ್ಮಾಣಕ್ಕೆ ಶುಭಮುಹೂರ್ತವನ್ನು ನಿರ್ಣಯಿಸಿ, ಲಗ್ನಕಾಲಕ್ಕೆ ಸರಿಯಾಗಿ ಕೊಂಬುಗಳನ್ನು ಊದುವಂತೆಯೂ, ಅದನ್ನು ಕೇಳಿ ಗುಂಡುಗಳನ್ನು ಹಾರಿಸುವಂತೆಯೂ, ಆ ಶಬ್ದವಾದೊಡನೆಯೇ ಸುತ್ತಲೂ ಸಿದ್ಧವಾಗಿ ನಿಂತಿರುವ ಕೆಲಸಗಾರರು ಗುರುತ ಮಾಡಿರುವಂತೆ ಕೋಟೆಯ ತಳಪಾಯವನ್ನು ತೋಡುವುದಕ್ಕೆ ಪ್ರಾರಂಭಿಸುವಂತೆಯೂ ಸಂಕೇತಮಾಡಿಕೊಂಡು ಸಕಲವನ್ನೂ, ಸಿದ್ಧಪಡಿಸಿಕೊಂಡು ಲಗ್ನವನ್ನು ನಿರೀಕ್ಷಿಸಿಕೊಂಡಿದ್ದು, ಅಷ್ಟರಲ್ಲಿ ಸಹೋದರನೊಡನೆ ಲಗ್ನಕಾಲವು ಸನ್ನಿಹಿತವಾಯಿತೆಂದು ಕೆಲಸಗಾರರಿಗೆ ಎಚ್ಚರಕೊಡುವುದಕ್ಕೆ ಮತ್ತೊಂದೆಡೆಗೆ ಹೋಗುತ್ತಿದ್ದನು. ಎಲ್ಲಿಂದಲೋ ಬಂದಿದ್ದ ತಿರುಪಗಾರನೊಬ್ಬನು ದೊರೆಗಳ ಸವಾರಿಯು ಚಿತ್ತೈಸುತ್ತಿರುವುದನ್ನು ನೋಡಿ, ಅವುದೂ ತಿಳಿಯದೆ ಮಂಗಳಾರ್ಥವಾಗಿ ತನ್ನ ಕೊಂಬನ್ನೂದಿದನು. ಆ ಶಬ್ದವನ್ನು ಕೇಳಿ

ದೂರದಲ್ಲಿದ್ದ ಫಿರಂಗಿಯವರು ಇದೇ ಲಗ್ನಸೂಚನೆಯೆಂದು ಗುಂಡುಗಳನ್ನು ಹಾರಿಸಿದರು. ಅದನ್ನು ಕೇಳಿ ಅಪ್ಪಣೆಯಾಗಿದ್ದ ಮೇರೆಗೆ ಕೆಲಸಗಾರರು ತಮ್ಮ ತಮ್ಮ ಕೆಲಸಗಳನ್ನು ಮಾಡತೊಡಗಿದರು. ಅನಿರೀಕ್ಷ್ಯವಾಗಿ ಸಂಭವಿಸಿದ ಈ ಸನ್ನಿವೇಶದಿಂದ ಲಗ್ನಕಾಲಕ್ಕೆ ಒಂದು ಮುಹೂರ್ತ ಮುಂಚಿತವಾಗಿಯೇ ಹಸ್ತಿಭಾಗಸಮಾರಂಭವು ನಡೆದುಹೋಯಿತು. ಕೈಮೀರಿ ಹೋದ ಕೆಲಸಕ್ಕಾಗಿ ಮೌಹೂರ್ತಿಕರು ಪಶ್ಚಾತ್ತಾಪಪಟ್ಟು ತತ್ಕಾಲಗ್ರಹಸಂಪತ್ತಿಯನ್ನು ನೋಡಿ, ಈ ಪಟ್ಟಣವು ೩೦೦ ಸಂವತ್ಸರಗಳ ವರೆಗೆ ಈ ಪ್ರಭುಗಳಿಗೆ ರಾಜಧಾನಿಯಾಗಿ ಪ್ರಖ್ಯಾತಿಗೊಂಡಿರುವುದು. ಈ ವಂಶೀಯರಲ್ಲಿ ರಾಜ್ಯಕ್ಕೆ ಬರತಕ್ಕವರೆಲ್ಲರೂ, ಧರ್ಮದಿಂದಲೂ ದೇಶಾಭಿಮಾನದಿಂದಲೂ ಪ್ರಜಾವಾತ್ಸಲ್ಯದಿಂದಲೂ ರಾಜ್ಯವಾಳಿ ಯಶಸ್ಸನ್ನು ಪಡೆಯುವರು, ಎಂದು ಹೇಳಿದರು.

ಮೊದಲು ನಿಶ್ಚಯಿಸಿದ್ದಂತೆ ಲಗ್ನಸಾಧನೆಯಾಗಿದ್ದರೆ, ಈ ವಂಶೀಯರುಗಳ ಪ್ರಭುತ್ವವು ಸ್ಥಿರವಾಗಿ ನಿಂತು, ಚಿಕ್ಕಬಳ್ಳಾಪುರವು ಮಹೋನ್ನತದಶೆಯಲ್ಲಿರುತ್ತಿದ್ದಿತು. ದೈವಯತ್ನದಿಂದ ಹೀಗಾದುದಕ್ಕಾಗಿ ಮರೇಗೌಡನು, ಚಿಂತಿಸದೆ ಸಮಾಧಾನವನ್ನು ತಾಳಿ, ಕೋಟೆ ಪೇಟೆ ಸಹಿತವಾಗಿ ಪಟ್ಟಣವನ್ನು ಕಟ್ಟಿ ಪೂರೈಸಿ, ನಾನಾ ದೇಶಗಳಿಂದ ವಿದ್ವಾಂಸರನ್ನೂ, ವರ್ತಕರನ್ನೂ, ಜಟ್ಟಿಗಳನ್ನೂ, ಕುಶಲಕಲಾನಿಪುಣರನ್ನೂ ಕರೆಯಿಸಿ ಪಟ್ಟಣವನ್ನೂ, ದೇಶವನ್ನೂ ಅಭಿವೃದ್ಧಿಗೆ ತಂದು ೨೪ ಸಂವತ್ಸರಗಳ ಕಾಲ ಸುಖದಿಂದ ರಾಜ್ಯವಾಳಿ ಸ್ವರ್ಗಾರೋಹಣಮಾಡಿದನು.

ಅನಂತರ ಅವನ ಮಗ ದೊಡ್ಡಬೈರೇಗೌಡನು ೩ ಸಂವತ್ಸರಗಳು ರಾಜ್ಯವಾಳಿದನು. ತರುವಾಯ ಅವನ ಮಗ ರಂಗಪ್ಪಗೌಡನು ಪಟ್ಟಕ್ಕೆ ಬಂದು ೪೨ ಸಂವತ್ಸರಗಳು ರಾಜ್ಯಭಾರಮಾಡಿದನು. ಈ ರಂಗಪ್ಪಗೌಡನು ಅಪುತ್ರವಂತನಾದುದುದರಿಂದ ಈತನ ಸಹೋದರ ಜೋಗಿಬೈರೇಗೌಡನಿಗೆ ಪಟ್ಟವಾಯಿತು. ಈತನು ೩೦ ಸಂವತ್ಸರಗಳು ರಾಜ್ಯವಾಳಿದನು. ಆ ಮೇಲೆ ಈತನ ಮಗ ದೊಡ್ಡಬೈರೇಗೌಡನು ೪೬ ಸಂವತ್ಸರಗಳು ಧರ್ಮದಿಂದ ಪ್ರಜಾಪಾಲನೆಯನ್ನು ಮಾಡಿ ಕೀರ್ತಿಶೇಷನಾದನು. ಈ ದೊಡ್ಡಬೈರೇಗೌಡನಿಗೆ ಸಂತಾನವಿಲ್ಲದ ಕಾರಣ ಈತನ ಧರ್ಮಪತ್ನಿಯಾದ ವೆಂಕಟಮ್ಮನೆಂಬ ಸಾಧ್ವೀಮಣಿಯು ರಾಜ್ಯವನ್ನು ವಹಿಸಿ, ಮಂತ್ರಿಗಳ ಸಹಾಯದೊಡನೆ ಸುವ್ಯವಸ್ಥೆಯಿಂದ ೧೫ ಸಂವತ್ಸರಗಳ ಕಾಲ ರಾಜ್ಯವಾಳಿದಳು.

ಈಕೆಯ ಸಾಕುಮಗನಾದ ಮರೇಗೌಡನು ೪೫ ಸಂವತ್ಸರಗಳು ರಾಜ್ಯವಾಳಿ, ಕೊನೆಗೆ ರಾಜ್ಯಕ್ಕೆ ಅನರ್ಹನೆಂದೆನಿಸಿಕೊಂಡುದರಿಂದ ಈತನ ದೊಡ್ಡಣ್ಣ ಅಣ್ಣೀಗೌಡನು ರಾಜ್ಯಭಾರವನ್ನು ವಹಿಸಿದನು. ಈತನು ೧೮ ಸಂವತ್ಸರಗಳು ರಾಜ್ಯವನ್ನಾಳಿ ತಿಡ್ಲಘಟ್ಟವನ್ನು ಉಜ್ಜಯಿನಿ ಕೆಂಪೇಗೌಡನ ವಂಶಸ್ಥರಿಂದ ಒಂದು ಲಕ್ಷ ವರಹಗಳಿಗೆ ಕೊಂಡುಕೊಂಡು ಚಿಕ್ಕಬಳ್ಳಾಪುರಕ್ಕೆ ಸೇರಿಸಿದನು. ಬೈಚೇಗೌಡನು ಸಾದಲಿಯೆಂಬ ಗ್ರಾಮವನ್ನು ೧೪೮೯ ರಲ್ಲಿ ಸೀರ್ಯದ ನವಾಬರಿಂದ ಪಡೆದು ಆಳುತ್ತಿದ್ದನು. ಇವನ ತರುವಾಯ ಸೀರ್ಯದವರು ಅದನ್ನು ಚಿಕ್ಕಬಳ್ಳಾಪುರದ ನಾಡಿಗೆ ಸೇರಿಸಿಕೊಂಡರು. ಅಣ್ಣೀಗೌಡನು ರಾಜ್ಯವನ್ನು ವಿಸ್ತರಿಸಿ ೨೧ ಲಕ್ಷ ವರಹಗಳನ್ನು ಸೇರಿಸಿ ಪ್ರಜಾಪ್ರೀತಿಯನ್ನು ಪಡೆದು ಕಾಲವಾದನು. ಚಿಕ್ಕಬಳ್ಳಾಪುರದ ದೊರೆಗಳಲ್ಲಿ ಈತನೇ ಸಮರ್ಥನು. ರಾಜ್ಯಭ್ರಷ್ಟನಾಗಿದ್ದ ಜೋಗಿ ಬೈರೇಗೌಡನು, ಸಾದಲಿ, ಇಟಕಲ್ ದುರ್ಗಗಳನ್ನು ಜಹಗೀರಾಗಿ ಅನುಭವಿಸುತ್ತಿದ್ದನು. ಅಣ್ಣೀಗೌಡನ ಮಗ ಹಾವಳಿ ಬೈರೇಗೌಡನು ೪ ತಿಂಗಳು ಮಾತ್ರ ರಾಜ್ಯವಾಳಿ ಅನರ್ಹನೆನಿಸಿಕೊಂಡುದರಿಂದ ಅವನ ಜ್ಞಾತಿಯಾದ ಬೈಚೇಗೌಡನಿಗೆ ರಾಜ್ಯಪ್ರಾಪ್ತಿಯಾಯಿತು. ಈತನ ಆಳಿಕೆಯು ೧೬ ಸಂವತ್ಸರಗಳು ನಡೆಯಿತು. ಆ ಕಾಲದಲ್ಲಿ ಮೈಸೂರ ಕಂಠೀರವರಾಜರ ದಳವಾಯಿಯು ಚಿಕ್ಕಬಳ್ಳಾಪುರದ ಕೋಟೆಯನ್ನು ಮುತ್ತುವುದಕ್ಕೆ ಪ್ರಯತ್ನಪಟ್ಟನು. ಸಾಹಸಿಯಾದ ಬೈಚೇಗೌಡನು ಮರಾಟೆಯವರ ಸಹಾಯವನ್ನು ಪಡೆದು, ಅವನನ್ನು ಅಟ್ಟಿಕೊಂಡು ಹೋಗಿ ಕೋತಿಕೊಂಡದ ಬಳಿ ಘೋರವಾದ ಯುದ್ಧಮಾಡಿ ಅವನ ತಲೆಯನ್ನು ಕತ್ತರಿಸಿ ಹಿಂದಿರುಗಿದನು. ಚಿಕ್ಕಬಳ್ಳಾಪುರಕ್ಕೆ ಸೇರಿದ್ದ ಕೆಲವು ಗ್ರಾಮಗಳು ಈತನ ಕಾಲದಲ್ಲಿ ಕೈಬಿಟ್ಟು ಹೋದುವು. ಈತನು ಬುರುಡುಗುಂಟೆಯನ್ನು ಕ್ರಯಕ್ಕೆ ತೆಗೆದು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

ಇವನ ಮಗನಾದ ದೊಡ್ಡಬೈರೇಗೌಡನು ೨ ಸಂವತ್ಸರಗಳು ರಾಜ್ಯವಾಳಿದನು. ಅನಂತರ ಇವನ ತಮ್ಮ ವೆಂಕಟನಾರಾಯಣಗೌಡನು ೩೩ ಸಂವತ್ಸರಗಳು ರಾಜ್ಯವಾಳಿದನು. ಈತನ ಮಗ ಬೈಚೇಗೌಡನು ಪಟ್ಟಕ್ಕೆ ಬಂದು ೯ ತಿಂಗಳು ರಾಜ್ಯವಾಳಿ ಸಾಮರ್ಥ್ಯವಿಲ್ಲದೆ ತನ್ನ ಚಿಕ್ಕಪ್ಪನಾದ ಚಿಕ್ಕಪ್ಪಗೌಡನಿಗೆ ವಹಿಸಿದನು. ಈತನು ಪಟ್ಟಕ್ಕೆ ಬಂದ ೩ ಸಂವತ್ಸರಗಳೊಳಗೆ ಹೈದರನು ಸೈನ್ಯ ಸಮೇತ ಚಿಕ್ಕಬಳ್ಳಾಪುರಕ್ಕೆ ಬಲವಾಗಿ ಮುತ್ತಿಗೆಯನ್ನು ಹಾಕಿ ಫಿರಂಗಿಗಳಿಂದ ಕೋಟೆಯನ್ನು ಒಡೆದು ಮೂರು ತಿಂಗಳಾದರೂ ಮುತ್ತಿಗೆಯ

ನ್ನು ತೆಗೆಯದೆ ಹಠದಿಂದ ಇದಿರಿಸಿದನು. ಚಿಕ್ಕಪ್ಪಗೌಡನು ಹೈದರನನ್ನು ಹಿಂದಕ್ಕಟ್ಟಿ ಪಟ್ಟಣವನ್ನು ಕಾಪಿಟ್ಟುಕೊಳ್ಳುವ ಭರವಸೆಯಿಲ್ಲದೆ, ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗಲು, ೫ ಲಕ್ಷ ವರಹಗಳನ್ನೂ, ಜಯಸೂಚಕವಾಗಿ ಕಂಠೀರವರಾಜರ ಅರಮನೆಯಲ್ಲಿಡುವುದಕ್ಕೆ ಒಂದು ಚಿನ್ನದ ತಲೆಯನ್ನೂ ಕೊಡುವುದಕ್ಕೊಪ್ಪಿ, ಆಗಲೇ ಅರ್ಧ ಹಣವನ್ನು ಕೊಟ್ಟುಬಿಟ್ಟನು. ಹೈದರನು ಉಳಿದ ಅರ್ಧ ಹಣವನ್ನು ಬರಮಾಡಿಕೊಳ್ಳುವುದಕ್ಕಾಗಿ ರಹಸ್ಯದಲ್ಲಿ ಒಬ್ಬ ಅಧಿಕಾರಿಯನ್ನು ಚಿಕ್ಕಬಳ್ಳಾಪುರದಲ್ಲಿ ನಿಲ್ಲಿಸಿ ಹಿಂತಿರುಗಿದನು. ಈ ಒಪ್ಪಂದದಿಂದ ಚಿಕ್ಕಪ್ಪಗೌಡನಿಗೆ ಅಪಮಾನವಾಯಿತು. ಹೈದರನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಸಬೇಕೆಂದು ಅವನು ಗುತ್ತಿಯ ಮುರಾರಿರಾಯನಿಗೆ ತನ್ನ ದುಃಖವನ್ನು ತಿಳಿಸಿ, ಸಹಾಯ ಮಾಡಬೇಕೆಂದು ಹೇಳಿ ಕಳುಹಿಸಿದನು. ಅದನ್ನು ಕೇಳಿದ ಕೂಡಲೇ ಮುರಾರಿರಾಯನು ಮನಸೊಂದು ಕೆಲವು ಸೈನ್ಯವನ್ನು ಚಿಕ್ಕಬಳ್ಳಾಪುರಕ್ಕೆ ಕಳುಹಿಸಿದನು. ಆ ಸೈನ್ಯವು ಬಂದೊಡನೆಯೇ ಚಿಕ್ಕಪ್ಪಗೌಡನು ಕೋಟೆಯನ್ನು ಭದ್ರವಾಗಿ ನೋಡಿಕೊಳ್ಳುವಂತೆ ಅವರಿಗೆ ಒಪ್ಪಿಸಿ, ಸಂಸಾರಸಮೇತ ನಂದೀದುರ್ಗಕ್ಕೆ ಹೋಗಿ, ಅಲ್ಲಿ ಮನೆಯವರನ್ನು ಸುರಕ್ಷಿತವಾಗಿರಿಸಿ, ತನ್ನ ಸೈನ್ಯವನ್ನು ಸರಿಪಡಿಸಿಕೊಂಡು ಹೈದರಲ್ಲಿಯನ್ನು ಜೆನ್ನಟ್ಟಬೇಕೆಂದಿದ್ದನು. ಅಷ್ಟರಲ್ಲಿಯೇ ಅಲ್ಲಿನ ಸಂಗತಿಗಳನ್ನೆಲ್ಲಾ ಹೈದರಲ್ಲಿಯು ಕೇಳಿ ಮಧ್ಯಮಾರ್ಗದಿಂದ ಚಿಕ್ಕಬಳ್ಳಾಪುರಕ್ಕೆ ಹಿಂತಿರುಗಿ ಗುತ್ತಿಯಿಂದ ಬಂದಿದ್ದ ಮುರಾರಿರಾಯನ ಸೈನ್ಯವನ್ನು ಕೆಣಕಿ ಧ್ವಂಸಮಾಡಿ, ಹತಶೇಷರಾದವರನ್ನು ವಿರೂಪಮಾಡಿ ಹಿಂದಕ್ಕೆ ಅಟ್ಟಿ ಅಷ್ಟಕ್ಕೇ ತೃಪ್ತನಾಗದೆ ಚಿಕ್ಕಬಳ್ಳಾಪುರವನ್ನು ತನ್ನ ಸ್ವಾಧೀನಪಡಿಸಿಕೊಂಡು ಕೊಳ್ಳೆ ಹೊಡಿಸಿದನು. ನಂದೀದುರ್ಗ, ತಳವಾರದುರ್ಗ, ಇಟಕಲ್‌ದುರ್ಗ, ಗುಡಿಬಂಡೆ, ಕೋತಿಕೊಂಡ ಇವುಗಳ ಮೇಲೆ ಸೈನ್ಯವನ್ನು ಕಳುಹಿಸಿ, ನಂದೀದುರ್ಗದಲ್ಲಿದ್ದ ಚಿಕ್ಕಪ್ಪಗೌಡನನ್ನೂ ರಾಜ್ಯಭ್ರಷ್ಟನಾಗಿದ್ದ ಬೈಚೇಗೌಡನನ್ನೂ ಸಂಸಾರಸಮೇತ ಹಿಡಿದು ಬೆಂಗಳೂರಿನಲ್ಲಿ ಕಾರಾಗೃಹದಲ್ಲಿಡಿಸಿದನು. ಆ ವೇಳೆಗೆ ಚಿಕ್ಕಬಳ್ಳಾಪುರವನ್ನು ಕಟ್ಟಿ ಮುನ್ನೂರು ಸಂವತ್ಸರಗಳು ಆಗಿದ್ದುವು. ಶಾಸ್ತ್ರಜ್ಞರ ಹೇಳಿಕೆಯಂತೆ ಚಿಕ್ಕಬಳ್ಳಾಪುರವು ವಿರೂಪವಾಗಿ, ಗೌಡರಸರ ಪ್ರಭುತ್ವವು ಕೊನೆಗಂಡಿತು. ಚಿಕ್ಕಪ್ಪಗೌಡನು ಸಂತಾನವಿಲ್ಲದೆ ಸೆರೆಮನೆಯಲ್ಲಿಯೇ ಕಾಲವಾದನು. ಈತನ ಹೆಂಡತಿಯೂ ಬೈಚೇಗೌಡನ ಕುಟುಂಬದವರೂ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಪಟ್ಟರೆಂದು ಹೈದರಲ್ಲಿಯು ಅವರನ್ನೆಲ್ಲಾ

ಕೋಯಮುತ್ತೂರಿಗೆ ಸಾಗಿಸಿ ನಿರ್ಬಂಧದಲ್ಲಿಡಿಸಿದನು. ಕೆಲವು ಕಾಲಾನಂತರ ಮೈಸೂರಿಗೆ ತಾನೇ ಒಡೆಯನೆನಿಸಿಕೊಂಡು ಹೈದರಲ್ಲಿಯು ಕೋಯಮುತ್ತೂರಿಗೆ ಹೋಗಿ, ಕಾರಾಗೃಹದಲ್ಲಿಡಿಸಿದ್ದವರನ್ನೆಲ್ಲಾ ತನ್ನಿದಿರಿಗೆ ಕರೆಯಿಸಿದನು. ಕೆಲವರು ಅವನಿಗೆ ವಿಧೇಯರಾಗಿ ಸೆರೆಯಿಂದ ಬಿಡುಗಡೆಯಾದರು. ಗೌರವಶಾಲಿಯೂ ಧರ್ಮಪರಾಯಣನೂ ಆದ ಚಿಕ್ಕಬಳ್ಳಾಪುರದ ಬೈಚೇಗೌಡನು ಅವನ ಮುಖಾವಲೋಕನವನ್ನು ಮಾಡುವುದಕ್ಕೆ ಒಪ್ಪಲಿಲ್ಲ. ಹೇಗಾದರೂ ಮಾಡಿ ಅವನನ್ನು ತನಗೆ ವಿಧೇಯನಾಗುವಂತೆ ಮಾಡಿಕೊಳ್ಳಬೇಕೆಂದು, ಹೈದರನು ಆಸೆಗಳನ್ನು ಹುಟ್ಟಿಸಿದನು. ಆವ ಯುಕ್ತಿಗೂ ಸಾಧ್ಯವಾಗದೆ ಹೋಗಲು, ಅಧಿಕಾರದರ್ಪದಿಂದ, ಗಿಡ್ಡಬಾಗಿಲಿನಲ್ಲಿ ತಲೆಯನ್ನು ಬಗ್ಗಿಸಿಕೊಂಡು ಅವನು ತನಿದಿರಿಗೆ ಬರುವಂತೆ ಏರ್ಪಡಿಸಿ, ಆ ಬಾಗಿಲಿಗಿದಿರಾಗಿ ತಾನು ಅಟ್ಟಹಾಸದಿಂದ ಕುಳಿತುಕೊಂಡಿದ್ದನು. ಈ ಕುಹಕವನ್ನು ತಿಳಿದು ಚತುರನಾದ ಬೈಚೇಗೌಡನು ಆ ಬಾಗಿಲ ಬಳಿಗೆ ಬಂದು ನಿಂತು, ತನ್ನ ಎಡಗಾಲನ್ನು ಅವನ ಇದಿರಿಗೆ ಚಾಚಿ ಒಳಗಿನಿಂದಲೇ ಗಟ್ಟಿಯಾಗಿ "ಕೃತಘ್ನನಿಗೆ ನಾನು ಮಾಡುವ ಮರ್ಯಾದೆಯಿದೇ ; ಸ್ವಾರ್ಥಕ್ಕೋಸ್ಕರ ಧರ್ಮತ್ಯಾಗಮಾಡಿ ದೀನತೆಯಿಂದ ಬದುಕುವುದಕ್ಕಿಂತಲೂ, ಸ್ವಧರ್ಮವನ್ನೂ, ಆತ್ಮಗೌರವನ್ನೂ ಕಾಪಿಟ್ಟುಕೊಂಡು ದುಷ್ಟರಿಂದುಂಟಾಗುವ ಸಂಕಟಗಳನ್ನೆಲ್ಲ ಸ್ವರ್ಗಭೋಗಗಳೆಂದು ಸಂತೋಷವಾಗಿ ಅನುಭವಿಸುತ್ತೇನೆ" ಎಂದು ಹೇಳಿದನಂತೆ. ಅದನ್ನು ಕೇಳಿ ಹೈದರಲ್ಲಿಯು ಕ್ರುದ್ಧನಾಗಿ ಭಾರವಾದ ಸರಪಣಿಗಳಿಂದ ಗೌಡನ ಕೈಕಾಲುಗಳನ್ನು ಕಟ್ಟಿಸಿ ಅವನನ್ನು ಕತ್ತಲ ಮನೆಗೆ ತಳ್ಳಿಸಿದನು. ಅದೊಂದನ್ನೂ ಲಕ್ಷ್ಯಮಾಡದೆ ಬೈಚೇಗೌಡನು ಸೆರೆಮನೆಯಲ್ಲಿಯೇ ದೇಹತ್ಯಾಗಮಾಡಿದನು. ತರುವಾಯ ಟಿಪ್ಪುಸುಲ್ತಾನನು ಇಂಗ್ಲಿಷರಿಗೆ ವಿರೋಧಿಯಾಗಲು, ಲಾರ್ಡ್ ಕಾರ್ನವಾಲಿಸನು ಬೈಚೇಗೌಡನ ಸಂತತಿಯವನಾದ ನಾರಾಯಣಗೌಡನನ್ನು ಚಿಕ್ಕಬಳ್ಳಾಪುರದ ಒಡೆತನಕ್ಕೆ ತಂದನು. ಈತನು ಇಂಗ್ಲಿಷರಿಗೆ ಸಹಾಯಕನಾಗಿ ಅವರ ಆಶ್ರಯದಿಂದ ಟಿಪ್ಪುವಿನ ಕಾಟವಿಲ್ಲದೆ ಕೆಲವು ಕಾಲ ದೊರೆಯಾಗಿದ್ದನು. ಕ್ರಿ. ಶ. ೧೭೯೦ ರಲ್ಲಿ ಬ್ರಿಟಿಷರು ನಂದೀದುರ್ಗವನ್ನು ಟಿಪ್ಪೂ ಸುಲತಾನನಿಂದ ಕಿತ್ತುಕೊಂಡರು. ಅನಂತರ ನಾರಾಯಣಗೌಡನು ಚಿಕ್ಕಬಳ್ಳಾಪುರಕ್ಕೆ ನಾಮಮಾತ್ರದ ದೊರೆಯಾಗಿದ್ದನು. ಟಿಪ್ಪುವಿಗೂ ಇಂಗ್ಲೀಷರಿಗೂ ಒಪ್ಪಂದವಾದ ಮೇಲೆ ಗೌಡನಿಗೆ ಇಂಗ್ಲಿಷರ ಆಶ್ರಯವು ತಪ್ಪಿಹೋಯಿತು.

ಈ ಸುಳಿವನ್ನು ತಿಳಿದು ಟಿಪ್ಪುವು ಆಗಿಂದಾಗ ಚಿಕ್ಕಬಳ್ಳಾಪುರವನ್ನು ಮುತ್ತಿ ಯುದ್ಧಮಾಡುತ್ತಲೇ ಇದ್ದನು. ಈ ಮಧ್ಯೆ ೧೭೯೦ ರಲ್ಲಿ ಲಾರ್ಡ್ ಕಾರ್ನವಾಲೀಸನಿಗೂ ಕರ್ನಲ್ ರೀಡ್ ಸಾಹೇಬನಿಗೂ, ಚಿಕ್ಕಬಳ್ಳಾಪುರದ ಗೌಡರಸನಾದ ರಾಯಲು ಬಚ್ಚೇಗೌಡನಿಗೂ, ಪತ್ರಗಳು ನಡೆಯುತ್ತಿದ್ದುವು. ಬಚ್ಚೇಗೌಡನು ೧೭೯೨ ನೆಯ ಇಸವಿಯಲ್ಲಿ, ಸೈನ್ಯಸಹಾಯಕ್ಕೋಸ್ಕರ ಇಂಗ್ಲೀಷರಿಗೆ ದ್ರವ್ಯವೊದಗಿಸಿಕೊಟ್ಟನು. ಟಿಪ್ಪುವಿನ ಹಾವಳಿಯನ್ನು ಅಡಗಿಸಲು ಹೈದರಾಬಾದಿನ ನಿಜಾಮನೂ ಮಹಾರಾಷ್ಟ್ರರೂ ಇಂಗ್ಲೀಷರೂ ಸಂಕಲ್ಪ ಮಾಡಿದರು. ಅದರಂತೆ ಜನರಲ್ ಹ್ಯಾರಿಸ್ ಸಾಹೇಬನ ಕೈಕೆಳಗೆ ನಿಜಾಮರ, ಮಹಾರಾಷ್ಟ್ರರ, ಇಂಗ್ಲೀಷರ ಸೈನ್ಯಗಳು ೧೭೯೯ ನೇ ಮಾರ್ಚಿಯಲ್ಲಿ ಹೊರಟವು. ಈ (ದಳಗಳಿಗೆ) ಬೇಕಾದ ಸಹಾಯಗಳನ್ನು ಒದಗಿಸಿ ಕೊಡುವುದಕ್ಕೂ, ಆಗಿಂದಾಗ ಸುಲತಾನನ ಸುದ್ದಿಯನ್ನು ಅಂತರಂಗವಾಗಿ ಬ್ರಿಟಿಷರಿಗೆ ತಿಳಿಸುವುದಕ್ಕೂ ಗೌಡನು ಒಪ್ಪಿಕೊಂಡನು. ಈ ದೊರೆಯು ತನಗೆ ಇಂಗ್ಲೀಷರು ಕಳುಹಿಸಿಕೊಟ್ಟ ಹುಕುಂನಾಮೆಯನ್ನು ಇತರ ಪಾಳೆಯ ಪಟ್ಟಿನವರಿಗೂ ತಿಳಿಸಿ ಸೈನ್ಯಕ್ಕೆ ಬೇಕಾದ ದವಸ ಧಾನ್ಯಗಳನ್ನೂ, ಹುಲ್ಲ ಹೇರುಗಳನ್ನೂ, ಯುದ್ಧ ಸಾಮುಗ್ರಿಗಳನ್ನೂ ಒದಗಿಸಿಕೊಟ್ಟು, ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿ, ನಮ್ಮ ನಾಡನ್ನು ರಕ್ಷಿಸಿಕೊಡಬೇಕೆಂದು ಅವರನ್ನು ಕೇಳಿಕೊಂಡು ಆ ಅರ್ಥಕ್ಕೆ ಅವರಿಂದ ವಾಗ್ದಾನವನ್ನು ಪಡೆದಿದ್ದನು.

ಇಂಗ್ಲೀಷರು ಟೀಪೂ ಸುಲತಾನನನ್ನು ಜಯಿಸಿ ಮೈಸೂರು ರಾಜ್ಯವನ್ನು ಶ್ರೀಮನ್ಮಹಾರಾಜಾ ಮುಮ್ಮಡಿ ಕೃಷ್ಣರಾಜವೊಡೆಯರವರಿಗೆ ಒಪ್ಪಿಸಿದ ಮೇಲೆಯೂ ಗೌಡರಸರ ಸಂತತಿಯವರು ತಮ್ಮ ನಾಡಿನ ಆಡಳಿತಕ್ಕಾಗಿ ಪ್ರಯತ್ನಪಡುತ್ತಿದ್ದರು.

ಇದೇ ಸಂತತಿಯವರಾದ ವೆಂಕಟನಾರಾಯಣಸ್ವಾಮಿ, ರಾಮಸ್ವಾಮಿ, ರಂಗಪ್ಪಯ್ಯ, ಪಾರ್ವತಮ್ಮ ಇವರುಗಳು, ತಮ್ಮ ವಂಶೀಯರು ಇಂಗ್ಲೀಷ್ ಸೈನ್ಯಕ್ಕೆ ಮಾಡಿದ ಸಹಾಯವನ್ನು ಕುರಿತು ಲಾರ್ಡ್ ಲಿಟ್ಟನರವರಿಗೆ ಬಿನ್ನಹ ಮಾಡಿಕೊಂಡಿದ್ದರಂತೆ.

ಆಳಿದ ವಿಕ್ಟೋರಿಯಾಮಹಾರಾಜ್ಞಿಯವರು ೧೮೭೭ ನೆಯ ಜನವರಿ ಮೊದಲನೆಯ ದಿನ ಇಂಡಿಯಾ ಚಕ್ರವರ್ತಿನಿಯವರಾಗಿ ಪಟ್ಟಕ್ಕೆ ಬಂದರಷ್ಟೆ; ಆ

ಸಮಯದಲ್ಲಿ ಅವರ ಪರವಾಗಿ ಮೈಸೂರಾಯರವರು ಬ್ರಿಟಿಷ್ ಸೈನ್ಯಕ್ಕೆ ಬೆಂಬಲವಾಗಿಯೂ, ಒತ್ತಾಸೆಯಾಗಿಯೂ ನಿಂತು ಸಹಾಯಮಾಡಿದ ಮಹಾರಾಜರುಗಳಿಗೂ ದೊಡ್ಡ ದೊಡ್ಡ ಪಾಳೆಯ ಪಟ್ಟಿನವರಿಗೂ ವಂದನೆಗಳನ್ನು ಸಮರ್ಪಿಸಿದ್ದಾರೆ. ಆ ಗೌರವಕ್ಕೆ ಈ ಸಂತತಿಯವರೂ ಪಾತ್ರವಾಗಿದ್ದಾರೆ.

೧೮೦೯ ನೆಯ ಇಸವಿಯಲ್ಲಿ ದಿವಾನ್ ಪೂರ್ಣಯ್ಯನವರು ಚಿಕ್ಕಬಳ್ಳಾಪುರದ ಗೌಡದೊರೆಗಳ ಸಂತತಿಯವರಾದ ರಾಮಸ್ವಾಮಿ, ನಾರಾಯಣಸ್ವಾಮಿ, ರಾಯಲು ಬಚ್ಚೇಗೌಡ, ಬೈರೇಗೌಡಪ್ಪಯ್ಯ, ಚರಣಪ್ಪಯ್ಯ, ಚಿಕ್ಕಪ್ಪಯ್ಯ ಮತ್ತು ರಂಗಪ್ಪಯ್ಯ ಇವರುಗಳಿಗೆ ಸರ್ಕಾರದಿಂದ ಪೆನ್ಷನ್ ದೊರೆಯುವಂತೆ ಏರ್ಪಾಡ ಮಾಡಿದ್ದರು. ಅಲ್ಲಿಂದೀಚೆಗೆ ಸುಮಾರು ೨೫ ಗಂಡು ಸಂತತಿಯವರೂ ೧೫ ಹೆಣ್ಣು ಸಂತತಿಯವರೂ ಎ. ಬಿ. ಸಿ. ಡಿ. ಎಂಬ ನಾಲ್ಕು ಪ್ರತ್ಯೇಕ ಭಾಗಗಳಾಗಿ ವಿಭಾಗಿಸಲ್ಪಟ್ಟು, ಇವರ ವಂಶೀಯರಿಗೆಲ್ಲ ಶ್ರೀಮನ್ಮಹಾರಾಜಾ ಸರಕಾರದವರು ದಯೆಪಾಲಿಸಿ ಪೆನ್ಷನ್ ನಡೆಯಿಸಿಕೊಂಡು ಬರುತ್ತಿರುವರು. ಒಂದನೆಯದಾದ ಎ ವಿಭಾಗಕ್ಕೆ ಸೇರಿದವರಲ್ಲಿ ಕಡೆಯವರಾದ ಪುಟ್ಟಪಾರ್ವತಮ್ಮಣ್ಣಿಯವರು ೧೯೧೩ ರಲ್ಲಿಯೂ, ವೆಂಕಟಲಕ್ಷ್ಮಮ್ಮಣ್ಣಿಯವರು ೧೯೧೮ ರಲ್ಲಿಯೂ ಸ್ವರ್ಗಸ್ಥರಾದ ಕಾರಣ ಚರಣಪ್ಪಯ್ಯನವರಿಗೂ, ಬಿ. ವಿಭಾಗದ ರಂಗಪ್ಪಯ್ಯನ ದತ್ತು ಮಗ ವೆಂಕಟನಾರಾಯಣಸ್ವಾಮಿಯವರಿಗೂ, ಸಿ. ಡಿ. ವಿಭಾಗಗಳಿಗೆ ಒಳಪಟ್ಟ ಮಲಿಸೆಟ್ಟಿಪುರದ ಲಕ್ಷ್ಮಮ್ಮಣ್ಣಿಗೂ, ಚಿಕ್ಕಪ್ಪಯ್ಯನವರಿಗೂ, ಅನಂತರಾಮಸ್ವಾಮಿಯವರಿಗೂ ಪೆನ್ಷನ್‌ಗಳು ಸಲ್ಲುತ್ತಿದೆ. ಕೊರಟಗೆರೆ ಸಂತತಿಯವರಾದ ಕರಪ್ಪಯ್ಯಗೌಡ, ಈತನ ಮಕ್ಕಳು ವೆಂಕಟನಾರಾಯಣಸ್ವಾಮಿ, ಚಿಕ್ಕಪ್ಪಯ್ಯ, ಕಿರೀಟಪ್ಪಯ್ಯ, ರಂಗಪ್ಪಯ್ಯ, ಬೈರೇಗೌಡ ಮತ್ತು ಚೆನ್ನಪ್ಪಯ್ಯ ಮುಂತಾದವರ ವಂಶೀಯರು ಮಾಗಡಿ ಹುಲಿಕಲ್ಲು ಸ್ಥಳಗಳಲ್ಲಿ ಈಗಲೂ ಇದಾರೆ. ಇವರಲ್ಲದೆ ಪೂರ್ವದಲ್ಲಿ ಈ ಗೌಡದೊರೆಗಳು ಅನೇಕಶಾಖೆಗಳಾಗಿ ಬೇರೆ ಬೇರೆ ನಾಡುಗಳನ್ನು ಕಟ್ಟಿಕೊಂಡು ಆಳುತ್ತಿರುವ ಕಾಲದಲ್ಲಿ, ಕೆಲವು ಶಾಖೆಗಳವರು ನಾಗರಿಕರೆನಿಸಿ ಅಭಿವೃದ್ಧಿ ಪಡೆದು ಲಿಂಗಧಾರಿಗಳಾಗಿ ಶೈವಮತವನ್ನು ಅವಲಂಬಿಸಿದರು. ಅವರು ಈಗಲೂ ಮೈಸೂರು ದೇಶದ ಎಲ್ಲೆಕಟ್ಟುಗಳ ಆಚೆ ಬ್ರಿಟಿಷ್ ಅಧಿಪತ್ಯಗಳಲ್ಲಿ ಪಾಳೆಯಪಟ್ಟುಗಳನ್ನು ಉಳಿಸಿಕೊಂಡು ಇರುವರೆಂತಲೂ, ಇವರಿಗೂ ಅವರಿಗೂ ಬಂಧುವಾತ್ಸಲ್ಯವು ಇರುವುದೆಂತಲೂ ಇವರ ವಂಶೀಯರು ಹೇಳುತ್ತಾರೆ.

ಮಂಜಿಪುತ್ತೂರಿನಿಂದ ಬಂದ ಪರಾಕ್ರಮಿಗಳಾದ ಏಳು ಜನ ಅಣ್ಣ ತಮ್ಮಂದಿರು ಆವತಿಯಲ್ಲಿ ನೆಲಸಿ, ಅಭಿವೃದ್ಧರಾಗಿ ಕ್ರಮೇಣ ಅನೇಕಶಾಖೆಗಳಾಗಿ ಒಡೆದು ಒಂದೊಂದು ಶಾಖೆಯಲ್ಲಿ ೧೦-೧೫ ಸಂಸಾರಗಳೂ, ಒಂದೊಂದು ಸಂಸಾರದಲ್ಲಿ ೧೫-೨೦ ತಲೆಗಳೂ ಆಗಿ ಸಂಖ್ಯೆಯಲ್ಲಿ ಹೆಚ್ಚಿ ಮುಖ್ಯವಾಗಿ ಬೆಂಗಳೂರು, ತುಮಕೂರು, ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ನಾಡುಗಳನ್ನು ಕಟ್ಟಿ ಪರಾಕ್ರಮದಿಂದ ಆಳಿದರು. ಆ ಕಾಲದಲ್ಲವರು ಸ್ಥಾಪಿಸಿ ಅಭಿವೃದ್ಧಿಗೆ ತಂದ ನಾಡು, ನಗರ, ಗ್ರಾಮಗಳಲ್ಲಿ ದೇವಸ್ಥಾನಗಳೂ, ಕೋಟೆಗಳೂ ವ್ಯವಸಾಯಾಭಿವೃದ್ಧಿಗೆ ನಿರ್ಮಿಸಿದ ಕೆರೆಕುಂಟೆಗಳೂ, ಪ್ರಯಾಣಿಕರಿಗೂ ದನಕರುಗಳಿಗೂ ಆಯಾಸಪರಿಹಾರಾರ್ಥವಾಗಿ ಹಾಕಿರುವ ಸಾಲ ತೋಪುಗಳೂ, ತಮ್ಮ ಸಂಸಾರಗಳ ರಕ್ಷಣೆಗೆ ದುರ್ಗಗಳ ಮೇಲೆ ಯುಕ್ತಿ ಸಾಮರ್ಥ್ಯಗಳಿಂದ ಕಟ್ಟಿಸಿರುವ ಕೋಟೆ ಕೊತ್ತಲಗಳೂ, ನಗರಗಳಲ್ಲಿ ಶತ್ರುಗಳ ಸುಳಿವನ್ನು ತಿಳಿಸುವ ಶಿಖರಗಳೂ ಧಾರ್ಮಿಕಕಾರ್ಯಗಳಿಗೆ ಕೊಟ್ಟಿರುವ ಗ್ರಾಮ, ಭೂಮಿ ಮುಂತಾದುವುಗಳೂ, ಈಗಲೂ ಬೆಂಗಳೂರು, ಮಾಗಡಿ, ಶಿವಗಂಗೆ, ಸಾವನದುರ್ಗ, ನಂದೀದುರ್ಗ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಕೊರಟಗೆರೆ, ಮಿಡಗೇಸಿ, ಚನ್ನರಾಯನದುರ್ಗ, ಹೊಸಕೋಟೆ, ಆನೆಕಲ್ಲು ಮುಂತಾದ ಸ್ಥಳಗಳಲ್ಲಿ ಕಾಣುತ್ತವೆ.

ರಾಜ್ಯಸ್ಥಿತಿ--ರಣಭೈರೇಗೌಡನ ಕಾಲದಿಂದ ಜಯಗೌಡನ ಕಾಲದವರಿಗೆ ಕಾಡುಗಳ ಫಲವತ್ತಾದ ಪ್ರದೇಶಗಳಲ್ಲಿ ಗ್ರಾಮಗಳೂ ದೊಡ್ಡ ಊರುಗಳೂ ಸ್ಥಾಪಿಸಲ್ಪಟ್ಟು ಎಲ್ಲೆಲ್ಲಿಯೂ ಜಲಾಶಯಗಳು ನಿರ್ಮಿತವಾಗಿ ವ್ಯವಸಾಯಕ್ಕೂ ಪ್ರಜೆಗಳ ಸೌಕರ್ಯಕ್ಕೂ ಅನುಕೂಲವಾದುವು. ಭಗವದನುಗ್ರಹದಿಂದ ದೊರೆತ ನಿಧಿಯಿಂದ ಅಭಿವೃದ್ಧಿಕಾರ್ಯಗಳು ನಡೆಸಲ್ಪಟ್ಟುವು. ಆ ಕಾಲದಲ್ಲಿ ಗೋವಧೆಯಿಲ್ಲದುದರಿಂದಲೂ ಮೇಯುವುದಕ್ಕೆ ವಿಶಾಲವಾದ ಕಾಡುಗಳಿದ್ದುದರಿಂದಲೂ ಗೋಸಂತತಿ ಹೆಚ್ಚಿ ಉಳುವುದಕ್ಕೆ ಎತ್ತುಗಳೂ, ಭೂಮಿಗೆ ರಸವತ್ತಾದ ಗೊಬ್ಬರವೂ ಹೇರಳವಾಗಿರುತ್ತಿದ್ದುದರಿಂದ, ದವಸ ಧಾನ್ಯಗಳು ಹೆಚ್ಚಾಗಿ ಬೆಳೆಯುತ್ತಿದ್ದುವು. ಜನರು ಮತದ್ವೇಷಗಳು ಇಲ್ಲದೆ ಗುರುಭಕ್ತಿ ದೈವಭಕ್ತಿಯುಳ್ಳವರಾಗಿದ್ದರು. ಆ ಕಾಲದಲ್ಲಿ ವಿದೇಶದ ನಡೆವಳಿಗಳು ಇಲ್ಲದಿದ್ದುದರಿಂದ ಪ್ರಜೆಗಳೂ ರಾಜ್ಯಪಾಲಕರೂ ತಮ್ಮ ಕಾಲವನ್ನು ದೇಶಾಭ್ಯುದಯಕ್ಕಾಗಿಯೇ ವಿನಿಯೋಗಿಸುತ್ತಿದ್ದರು.

ಈ ರೀತಿ ಗೌಡದೊರೆಗಳು ಕಟ್ಟಿಸಿರುವ ದೇವಾಲಯತಟಾಕಾದಿಗಳು, ಈ ವರೆಗೂ ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದಿಂದ ರಕ್ಷಿಸಲ್ಪಟ್ಟು ಜೀರ್ಣೋದ್ಧಾರವಾಗುತ್ತಿವೆ. ಅವರು ಆಳಿದ ನಾಡುಗಳು ಮುಸಲ್ಮಾನರ ಕೈಸೇರಿದ್ದು ಧರ್ಮಪ್ರಭುಗಳಾದ ಇಂಗ್ಲಿಷ್‌ನವರಿಂದ ಜಯಿಸಲ್ಪಟ್ಟು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟುವು. ಅಂದಿನಿಂದಲೂ ಈ ದೇಶವು ಕಲ್ಪವೃಕ್ಷದಂತೆ ವಿದ್ಯಾ, ವಾಣಿಜ್ಯ, ಕೈಗಾರಿಕೆ, ನವೀನಯಂತ್ರೋಪಕರಣಗಳಿಂದ ಅಭಿವೃದ್ಧಿಗೆ ಬಂದು ಲೋಕಪ್ರಸಿದ್ಧವಾಗಿ ರಾಮರಾಜ್ಯದಂತೆ ನಮ್ಮ ಶ್ರೀಮತ್ ಮಹಾರಾಜಾ ಸರ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರಿಂದ ಆಳಲ್ಪಡುತ್ತಿದೆ.

GOD SAVE OUR MAHARAJA.

ಸಮಾಪ್ತಿ.

ಅಪೆಂಡಿಕ್ಸ್ ೧.

ಶಾಸನಗಳು.

ಆವತಿ, ಯಲಹಂಕ, ಬೆಂಗಳೂರು, ಮಾಗಡಿ, ದೇವನ ಹಳ್ಳಿ, ದೊಡ್ಡ ಬಳ್ಳಾಪುರ, ಸುಗಟೂರು, ಹೊಸಕೋಟೆ, ಕೊರಟಗೆರೆ, ಕುಣಿಗಲು, ಗೋರಿ ಬಿದನೂರು, ಆನೆಕಲ್ಲು, ಮುಳಬಾಗಲು, ಚಿಂತಾಮಣಿ, ನಂದಿ, ಮುಂತಾದೆಡೆಗಳಲ್ಲಿ ಗೌಡಪ್ರಭುಗಳು, ದೇವಸ್ಥಾನ ಕೆರೆ ಕುಂಟೆಗಳನ್ನು ಕಲ್ಪಿಸಿ ಭೂದಾನಮಾಡಿರುವ ಶಾಸನಗಳು ಸುಮಾರು ೭೦ ಇರುವುವು. ಅವುಗಳೆಲ್ಲವೂ ಶಾಸನದ ಇಲಾಖೆಯಲ್ಲಿ ಸೇರಿಸಲ್ಪಟ್ಟು ಇರುವುವು. ಕೆಲವನ್ನು ಈ ಕೆಳಗೆ ಕೊಟ್ಟಿದೆ.

೧. ಮಾಗಡಿ ತಾಲ್ಲೂಕು ಕೆಂಪಸಾಗರ ಅಗ್ರಹಾರದ ಬಸವೇಶ್ವರ ದೇವಸ್ಥಾನದ ಮುಂದಿರುವ ಶಿಲಾಶಾಸನ.

ಶುಭಮಸ್ತು:—ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೫೭ ನೇ ಆನಂದಸಂವತ್ಸರದ ಆಷಾಢಶುದ್ಧ ೧೫ ರಲ್ಲು ಶ್ರೀಮದ್ರಾಜಾಧಿರಾಜರಾದ ರಾಜಪರಮೇಶ್ವರರಾಜಶ್ರೀ ವೀರಪ್ರತಾಪಶ್ರೀರಂಗರಾಯರಯ್ಯನವರು ಘನಗಿರಿಸಿಂಹಾಸನಾರೂಢರಾಗಿ ಪೃಥ್ವೀಸಾಮ್ರಾಜ್ಯವನ್ನು ಅನುಭವಿಸುತ್ತಿರಲಾಗಿ—ಯಲಹಂಕನಾಡ ಪ್ರಭು ಮುಮ್ಮಡಿ ಕೆಂಪೇಗೌಡರಯ್ಯನವರು ತಮಗೆ ಸಲ್ಲುವಂಥ ಮಾಗಡಿ ಹೋಬಳಿಯಲ್ಲು ಹೊರಳಿಗನ ಹಳ್ಳಿಯೆಂಬ ಗ್ರಾಮಕ್ಕೆ ಪ್ರತಿನಾಮಧೇಯವಾಗಿದ್ದಂಥ ಮುಮ್ಮಡಿ ಕೆಂಪಸಾಗರದಲ್ಲಿ ಕ್ಷೇತ್ರಗಳು ೧೨ ಮಾಡಿದ ವಿವರ:—ನರಸಿಂಹಭಟ್ಟರು, ಅಯ್ಯಂಭಟ್ಟರು, ನರಸಿಂಹದೀಕ್ಷಿತರು, ನಾರಾಯಣಭಟ್ಟರು, ತಿಮ್ಮಾವಧಾನಿಗಳು, ಕಪನಿಭಟ್ಟರು, ನಂಜುಂಡಯ್ಯ, ಲಿಂಗನ್ನ ಸೋಮಯಾಜಿಗಳು, ಭಾಗಂಭಟ್ಟರು, ಕೋನಪ್ಪ, ಶಿಖಾಮಣಯ್ಯ, ಕಾಳಂಭಟ್ಟರು, ಇವರು ಹನ್ನೆರಡು ಮಂದಿಗೂ ಕೊಟ್ಟ ಭೂಮಿ ಕ್ಷೇತ್ರ ೧ ಕ್ಕೆ ಹೊಲ ೩೦ ಕೊಳಗ ಗದ್ದೆ ೩೦ ಕೊಳಗ ಅಡಿಕೆ ಮರ ೫೦೦ ಈ ಗ್ರಾಮದಲ್ಲಿ ಭೂಮಿ ಸಾಲದೆ ಇರಲಾಗಿ ಹಾಲಶೆಟ್ಟಿಹಳ್ಳಿಯಲ್ಲು ಹೊಲ ೩೦ ಕೊಳಗ ಸಾತನೂರಲ್ಲು ಗದ್ದೆ ೩೦ ಕೊಳಗ ಈ ಗ್ರಾಮಕ್ಕೆ ಸಲ್ಲುವಂಥ ನಿಧಿನಿಕ್ಷೇಪಜಲತರುಪಾಷಾಣಅಕ್ಷೀಣಿಆಗಾಮಿಸಿದ್ಧಿಸಾಧ್ಯಂಗಳೆಂಬಂಥ ಅಷ್ಟಭೋಗ ತೇಜಸ್ಸ್ವಾಮ್ಯಂಗಳನ್ನು ಪುತ್ರಪೌತ್ರಪಾರಂಪರ್ಯವಾಗಿ ನಾವು ಕೊಟ್ಟ ಪ್ರಕಾರದಲ್ಲಿ ಸ್ಥಿರವಾಗಿ, ಆಚಂದ್ರಾರ್ಕವಾಗಿ, ಬಂದ ಉಪದ್ರವ ಪರಿಹರಿಸಿಕೊಂಡು ೧೨ ಮಂದಿ ಸುಖದಲ್ಲು ಅನುಭವಿಸಲುಳ್ಳವರು ಎಂದು ಸೋಮೋಪರಾಗಪುಣ್ಯಕಾಲದಲ್ಲು ಸಹಿರಣ್ಯೋದಕದಾನಧಾರಾಪೂರ್ವಕವಾಗಿ ಕೊಟ್ಟ ದಾನಶಾಸನಾ.

ಸ್ವದತ್ತಾದ್ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ ।
ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್ ॥
ದಾನಪಾಲನಯೋರ್ಮಧ್ಯೇ ದಾನಾಚ್ಛ್ರೇಯೋಽನುಪಾಲನಂ ।
ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥
ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾಂ ।
ಷಷ್ಟಿರ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥
ಸ್ವದತ್ತಾ ಪುತ್ರಿಕಾ ಧಾತ್ರೀ ಪಿತೃದತ್ತಾ ಸಹೋದರೀ ।
ಪರದತ್ತಾ ಸ್ವಯಂ ಮಾತಾ ದತ್ತಾಂ ಭೂಮಿಂ ಪರಿತ್ಯಜೇತ್ ॥
ಏಕೈವ ಭಗಿನೀ ಲೋಕೇ ಸರ್ವೇಷಾಮಪಿ ಭೂಭುಜಾಂ ।
ನ ಭೋಜ್ಯಾ ನ ಕರಗ್ರಾಹ್ಯಾ ವಿಪ್ರದತ್ತಾ ವಸುಂಧರಾ ॥

೨. ಮಾಗಡಿ ತಾಲ್ಲೂಕು ಮಾಯಕನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಮುಂದಿನ ಶಾಸನ.

ಶುಭಮಸ್ತು:—ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ ।
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ॥

ಸ್ವಸ್ತಿಶ್ರೀವಿಜಯಾಭ್ಯುದಯ ಶಾಲೀವಾಹನ ಶಕ ವರ್ಷಂಗಳು ೧೬೩೪ ನೇ ನಂದನಸಂವ ತ್ಸರ ವೈಶಾಖ ಬ॥ ೫ ರಲ್ಲು ಶ್ರೀಮದ್ರಾಜಾಧಿರಾಜರಾಜಪರಮೇಶ್ವರಪ್ರೌಢಪ್ರತಾಪಶ್ರೀವೀ ನರಪತಿ ಶ್ರೀರಂಗರಾಯಮಹಾರಾಯರಯ್ಯನವರು ಘನಗಿರಿಯಲ್ಲು ರತ್ನಸಿಂಹಾಸನಾರೂಢರಾಗಿ ಪೃಥ್ವೀ ಸಾಮ್ರಾಜ್ಯಂಗೆಯುತ್ತಿರಲು ಸದಾಶಿವಗೋತ್ರದ ಯಲಹಂಕನಾಡ ಪ್ರಭುಗಳಾದ ಮುಮ್ಮಡಿ ಕೆಂಪಯ್ಯಗೌಡರಯ್ಯನವರ ಪೌತ್ರರಾದ ಮುಮ್ಮಡಿ ದೊಡ್ಡವೀರಪ್ಪಗೌಡರಯ್ಯನವರ ಪುತ್ರರಾದ ಮುಮ್ಮಡಿ ಕೆಂಪವೀರೇಗೌಡರಯ್ಯನವರು ನಮ್ಮ ಅಗ್ರಹಾರದ ೨೪ ವೃತ್ತಿಯ ಮಹಾಜನಂಗಳಿಗೆ ಬರೆಸಿಕೊಟ್ಟ ಭೂದಾನಧರ್ಮಶಾಸನಕ್ರಮವೆಂತೆಂದರೆ:—ನಮ್ಮ ಮಾಗಡಿ ಶೀಮೆಗೆ ಸಲ್ಲುವ ಮಾ ಯಕನಹಳ್ಳಿ, ಮುತ್ತನಪಾಳ್ಯ, ಹನುಮಂತನಪಾಳ್ಯ ಕೆಂಪಸಾಗರದ ಕೆರೆಯು ಕೆಳಗೆರೆ ತೋಟದಲ್ಲಿ ೭೨೦೦ ಮರದ ಸ್ಥಳದ ತೋಟ ಸಹ ಪ್ರತಿನಾಮಧೇಯವಾದ ಮುಮ್ಮಡಿ ಕೆಂಪವೀರಸಾಗರ ಅಗ್ರಹಾ ರವಲ್ಲಿ ಗಣಸಂಖ್ಯೆ ೨೪ ರಲ್ಲು ಶ್ರೀವತ್ಸಗೋತ್ರದ ಆಪಸ್ತಂಬಸೂತ್ರದ ಅಣ್ಣಾಜಯ್ಯನಿಗೆ ವೃತ್ತಿ ೨- ಭಾರದ್ವಾಜಸಗೋತ್ರದ ಆಶ್ವಲಾಯನ ಸೂತ್ರದ ವೆಲ್ಲಾಲ ಉಮ್ಮಣ್ಣನವರಿಗೆ ವೃತ್ತಿ ೧- ಕೌಂಡಿ ನ್ಯಸಗೋತ್ರದ ಕೈಪಿ ಪಾಪಭಟ್ಟರಿಗೆ ವೃತ್ತಿ೧— ಕೌಂಡಿನ್ಯಸಗೋತ್ರದ ಆಪಸ್ತಂಬಸೂತ್ರದ ಸಾಧು ವೆಂಕಟಯ್ಯನವರಿಗೆ ವೃತ್ತಿ ೧— ಹರಿತಸಗೋತ್ರದ ಆಪಸ್ತಂಬಸೂತ್ರದ ಶ್ರೀಧರ ರಂಗಾವಧಾನಿಗೆ ವೃತ್ತಿ ೧— ಕಾಶ್ಯಪಗೋತ್ರದ ಬೋಧಾಯನಸೂತ್ರದ ಚಂದ್ರಶೇಖರಯ್ಯನಿಗೆ ವೃತ್ತಿ ೧— ಕಾಶ್ಯಪ ಗೋತ್ರದ ಬೋಧಾಯನಸೂತ್ರದ ಅಭಳನಾಶೀಭಟ್ಟರಿಗೆ ವೃತ್ತಿ ೧— ಶ್ರೀವತ್ಸಗೋತ್ರದ ಆಪಸ್ತಂಬ ಸೂತ್ರದ ಕಾನಾಲುದಾಸಂಭಟ್ಟರಿಗೆ ವೃತ್ತಿ ೧— ಕೌಂಡಿನ್ಯಸ ಗೋತ್ರದ ಆಪಸ್ತಂಬಸೂತ್ರದ ಪಾ ನ್ಯಂ ವೆಂಕಟಶಾಸ್ತ್ರಿಗೆ ವೃತ್ತಿ ೧— ಹರಿತಸಗೋತ್ರದ ಆಪಸ್ತಂಬಸೂತ್ರದ ವೇದಾಂತ ಉಮಾಪತಿಗೆ ವೃತ್ತಿ ೧— ಕಾಶ್ಯಪಗೋತ್ರದ ಆಪಸ್ತಂಬಸೂತ್ರದ ಶ್ರೌತಿ ವೆಂಕಟನಾರಾಯಣಭಟ್ಟರಿಗೆ ವೃತ್ತಿ ೧— ಹರಿತಸಗೋತ್ರದ ಆಪಸ್ತಂಬಸೂತ್ರದ ಪಾನ್ಯಂ ನರಹರಿಭಟ್ಟರಿಗೆ ವೃತ್ತಿ ೧— ಕಾಶ್ಯಪಗೋ ತ್ರದ ದ್ರಾಹ್ಯಾಯನಸೂತ್ರದ ಆನೆಗೊಂದಿ ಶಂಕರಭಟ್ಟರಿಗೆ ವೃತ್ತಿ ೧— ಕಾಶ್ಯಪಗೋತ್ರದ ದ್ರಾ

ಹ್ಯಾಯನ ಸೂತ್ರದ ಉಡುನೆಗೆರೆ ನಂಜುಂಡಯ್ಯನಿಗೆ ವೃತ್ತಿ ೧— ಕೌಂಡಿನ್ಯಸಗೋತ್ರದ ಆಪಸ್ತಂಬ ಸೂತ್ರದ ಚೋಲಕುಂಟ್ಲ ವೆಂಕಟಶಾಸ್ತ್ರಿಗೆ ವೃತ್ತಿ ೧— ಕೌಶಿಕಗೋತ್ರದ ಆಪಸ್ತಂಬಸೂತ್ರದ ವೆಲ ನಾಡು ಅಚ್ಚಭಟ್ಟರಿಗೆ ವೃತ್ತಿ ೧— ಭಾರದ್ವಾಜಸ ಗೋತ್ರದ ಆಪಸ್ತಂಬಸೂತ್ರದ ಸಾಧು ಶಿಂಗರ ಯ್ಯನಿಗೆ ವೃತ್ತಿ ೧— ಮೌನಭಾರ್ಗವಸಗೋತ್ರದ ಅಶ್ವಲಾಯನ ಸೂತ್ರದ ತಿಮ್ಮಣ್ಣನಿಗೆ ವೃತ್ತಿ ೧— ವಿಶ್ವಾಮಿತ್ರಗೋತ್ರದ ಅಶ್ವಲಾಯನ ಸೂತ್ರದ ವಿಟಲಭಟ್ಟರಿಗೆ ವೃತ್ತಿ ೧— ಕೌಶಿಕಗೋತ್ರದ ಆಪಸ್ತಂಬಸೂತ್ರದ ಉಪಾಧ್ಯ ರಂಗಯ್ಯನಿಗೆ ವೃತ್ತಿ ೧— ಕೌಂಡಿನ್ಯಸಗೋತ್ರದ ಆಪಸ್ತಂಬಸೂ ತ್ರದ ಮುದ್ದರಂಗಯ್ಯನಿಗೆ ವೃತ್ತಿ ೧— ಭಾರದ್ವಾಜಸಗೋತ್ರದ ಅಶ್ವಲಾಯನಸೂತ್ರದ ರೂಪಾವ ತಾರ ನರಸಿಂಹಶಾಸ್ತ್ರಿಗೆ ವೃತ್ತಿ ೧— ಹರಿತಸಗೋತ್ರದ ಅಶ್ವಲಾಯನಸೂತ್ರದ ತಿಮ್ಮಣ್ಣ ಭಟ್ಟನಿಗೆ ವೃತ್ತಿ ೧— ಅಂತು ಗಣಸಂಖ್ಯೆ ೨೪ ವೃತ್ತಿಯ ಅಗ್ರಹಾರವನ್ನು ಸೋಮೇಶ್ವರಸ್ವಾಮಿಯವರ ಪ್ರತಿ ಷ್ಠಾಕಾಲದಲ್ಲಿ ನಮ್ಮ ಮಾತಾಪಿತೃಗಳಿಗೆ ಧರ್ಮವಾಗಲಿಯೆಂದು ಸಹಿರಣ್ಯೋದಕದಾನಧಾರಾಪೂರ್ವ ಕವಾಗಿ ನಿಮಗೆ ಕೊಟ್ಟಿವಾದ ಕಾರಣ ಈ ಅಗ್ರಹಾರ ಚತುಶ್ಸೀಮೆ ಒಳಗಾದ ನಿಧಿನಿಕ್ಷೇಪಜಲಪಾ ಷಾಣಅಕ್ಷಿಣ್ಯಾಗಾಮಿಸಿದ್ಧಿಸಾಧ್ಯಗಳೆಂಬ ಅಷ್ಟಭೋಗತೇಜಸ್ಸ್ವಾಮ್ಯಗಳನ್ನು ದಾನಾದಿ ಕ್ರಯವಿನಿಮ ಯಗಳಿಗೆ ಯೋಗ್ಯವಾಗಿ ನಿಮ್ಮ ಪುತ್ರಪೌತ್ರಪಾರಂಪರ್ಯವಾಗಿ ಸುಖದಲ್ಲಿ ಅನುಭವಿಸಿಕೊಂಡು ಇರಲುಳ್ಳವರು ಎಂದು ಬರೆಸಿಕೊಟ್ಟ ಭೂದಾನಧರ್ಮಶಾಸನ.

ಧಾತ್ರೀಶ್ವರೇಣಾದ್ಯಮಯಾ ಪ್ರದತ್ತಾಂ ಧಾತ್ರೀಂ ಚತುರ್ವಿಂಶತಿಧಾ ವಿಭಕ್ತಾಂ ।
ಆವದ್ಧ್ವಮಾನಂದಧುಮಾವಹಧ್ವಮಾಚಂದ್ರತಾರಾರ್ಕಮಬಾಧಮಾಧ್ವಂ ॥

ಅಪೆಂಡಿಕ್ಸ ೨.

ಮಾಗಡಿ ಸೋಮೇಶ್ವರದೇವರ ಅರ್ಚಕರ ಬಳಿ ತಾಮ್ರಶಾಸನ.

ಕ್ರಿ. ಶ. ೧೬೩೦ರಲ್ಲು ಯಲಹಂಕನಾಡು ಕೆಂಪನಂಜೇಗೌಡರ ಪೌತ್ರರಾದ ಹಿರಿಯ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡರು ಬಿನ್ನಹಮಾಡಿ ಬರಿಸಿದ ಶಾಸನ.

ಕೆಂಚುಗಾರಿಹಳ್ಳಿ ಹಾಲುಶಿಂಗನಹಳ್ಳಿಗಳೆರಡನ್ನು ದೇವರ ಪಡಿತರದ ದೀಪಾರಾಧನೆ, ರಥೋ ತ್ಸವ, ಪರ್ವತಿಥಿ ಮೊದಲಾದುವುಗಳಿಗೆ ಮನಃ ಪೂರ್ವಕವಾಗಿ ಆಗಮಸಹ ಶಿಖಾಮಣಯ್ಯನಿಗೆ ಬರೆಸಿ ಕೊಟ್ಟ ಶಾಸನ ಇದರ ಕೆಳಗೆ ಇಮ್ಮಡಿ ಕೆಂಪೇಗೌಡರ ವಪ್ಪಿತ ಡಿಟೋ ೧೮೭೦ ರಲ್ಲು ಯಿದೆ. ಯಿಮ್ಮಡಿ ಕೆಂಪೇಗೌಡರು ಹಂಟಿಕುಪ್ಪೆ, ಪೋತ, ಅತಿಮಿಗೆರೆ, ಕೆಂಪಾಪುರ ಈ ನಾಲ್ಕು ಗ್ರಾಮ ಗಳನ್ನು ದೇವರ ಸೇವಾರ್ಥವಾಗಿ ನಿಶ್ಯಕಟ್ಟಳೆ ವಗೈರೆಗೆ ನಮುಶ್ಶಿವಾಯ ಶಿಖಾಮಣಿದೀಕ್ಷಿತರಿಗೂ ಕೊಟ್ಟ ಶಾಸನ; ಇದರ ಕೆಳಗೆ ಇಮ್ಮಡಿ ಕೆಂಪೇಗೌಡರ ಒಪ್ಪಿತವಿಧೆ.

೧೬೩೪ ವಿಜಯ ಸಂ॥ಲ್ಲಿ ಗಂಗಾಧರೇಶ್ವರಸ್ವಾಮಿಯ ಸೇವೆಗೆ ಯಲಹಕ್ಕನಾಡಪ್ರಭು ಸದಾ ಶಿವಗೋತ್ರದ ಮುಮ್ಮಡಿ ಕೆಂಪೇಗೌಡರ ಪೌತ್ರರಾದ ಮುಮ್ಮಡಿ ದೊಡ್ಡವೀರಪ್ಪಗೌಡರ ಪುತ್ರರಾದ ಮುಮ್ಮಡಿ ಕೆಂಪವೀರಪ್ಪಗೌಡರು ಉದ್ದರಹಳ್ಳಿ ಗ್ರಾಮವನ್ನು ಆಚಂದ್ರಾರ್ಕವಾಗಿ ದೇವರ ಸೇವೆಗೆ

ಆಗೆಮ ಕೊಪೂರಯ್ಯನಿಗೆ ಶಿವಾರ್ಪಿತವಾಗಿ ಮತ್ತು ಪಂಚಾಂಗದ ಉಮ್ಮಣ್ಣಗೆ ಕೊಟ್ಟಿದ್ದು. ಕೆಂಪ ವೀರಪ್ಪ ಎಂದು ಇಧೆ.

ತಿರುಮಲೆ ಶಿಂಗಯ್ಯಂಗಾರರ ವಶದಲ್ಲಿದ್ದ ತಾಮ್ರಶಾಸನ.

ಶಾಲಿವಾಹನ ಶಕ ೧೬೦೩ ದುರ್ಮತಿ ಸಂ॥ ಭಾದ್ರಪದ ೧೫ ಯಲ್ಲು. ಚತುರ್ಥಗೋತ್ರದ ಯಲಹಂಕನಾಡ ಪ್ರಭುಗಳಾದ ಇಮ್ಮಡಿ ಕೆಂಪಯ್ಯಗೌಡರವರ ಪೌತ್ರರಾದ ಮುಮ್ಮಡಿ ಕೆಂಪಯ್ಯಗೌಡರವರ ಪುತ್ರರಾದ ಮುಮ್ಮಡಿ ದೊಡ್ಡವೀರಪ್ಪಗೌಡರಯ್ಯನವರು ಶ್ರೀವತ್ಸಗೋತ್ರದ ತಿಮ್ಮಪ್ಪಯ್ಯಂಗಾರು ಮುಂತಾದ ೧೫ ಜನ ಬ್ರಾಹ್ಮಣರಿಗೆ ಮಾಗಡಿಶೀಮೆಗೆ ಸಲ್ಲುವ ದಿನಭಾಗಕ್ಕೆ ಯೆಲೆಯೂರು ಹೋಬಳಿ ಕಲ್ಲಕೆರೆ ೧, ಡೊಂಕನಪುರ ೧, ಈ ೨ ಗ್ರಾಮಗಳನ್ನು ಕನ್ಯಾಸಂಕ್ರಾಂತಿ ಪುಣ್ಯಕಾಲದಲ್ಲಿ ಅರ್ಪಿಸಿದ್ದು.

೧೬೮೪ ರಲ್ಲಿ ಮುಮ್ಮಡಿ ದೊಡ್ಡವೀರಪ್ಪಗೌಡರು ಮತ್ತು ಇಮ್ಮಡಿ ಕೆಂಪವೀರಪ್ಪಗೌಡರು ಮಾಗಡಿ ಲಕ್ಷ್ಮೀಪತಿಭಟ್ಟರೆಂಬುವರಿಗೆ ಕೊಟ್ಟಿರುವ ದಾನ. ಮಾಗಡಿ ವೆಂಕಟಪತಿಭಟ್ಟರಿಂದ ಹಾಜರಾದ ತಾಮ್ರದ ಶಾಸನಗಳ ಮೂಲಕ ತಿಳಿದುಬಂದಿರುತ್ತೆ. (೧) ಶಾಸನದ ಅಳತೆ ೯ಫೈ×೬ಇಂ. ಇವರ ಸಾರಾಂಶ:—ಶ್ರೀ ರಂಗರಾಜಮಹಾರಾಯರು ಘನಗಿರಿಯಲ್ಲಿ ಆಳುತ್ತಿದ್ದ ಕಾಲದಲ್ಲಿ ಅಂದರೆ ಶಕ ಸಂವತ್ಸರ ೧೬೮೪ ಕ್ಕೆ ಸರಿಯಾದ ರಕ್ತಾಕ್ಷಿಸಂವತ್ಸರದ ಮಾರ್ಗಶಿರ ಶುದ್ಧ ೧೫ ಚಂದ್ರಗ್ರಹಣ ಕಾಲದಲ್ಲಿ ಇಮ್ಮಡಿ ಕೆಂಪೇಗೌಡರ ಮೊಮ್ಮಗ ಮತ್ತು ಮುಮ್ಮಡಿ ಕೆಂಪೇಗೌಡರ ಮಗನಾದ ಯಲಹಂಕನಾಡ ಪ್ರಭು ಮುಮ್ಮಡಿ ದೊಡ್ಡವೀರಪ್ಪಗೌಡರು ಶ್ರೀ ರಾಮೇಶ್ವರಸ್ವಾಮಿ ಸನ್ನಿಧಿಯಲ್ಲಿ ತಮ್ಮ ಪಿತೃಗಳಿಗೆ ಸದ್ಗತಿಯುಂಟಾಗಲು ಕಲ್ಲದೇವನಹಳ್ಳಿ, ನೇಗನಹಳ್ಳಿ, (ಮಾಗಡಿ ಸೀಮೆಗೆ ಸೇರಿದ) ಮತ್ತು ಹುಣಸೇಕುಪ್ಪೆ ಗ್ರಾಮಗಳನ್ನು ಸಾತನೂರು, ಅಗಲಕೋಟೆ, ಅಲ್ಕಾಳಕುಪ್ಪೆ ಮತ್ತು ಚಕ್ರಭಾವಿಗಳಲ್ಲಿ (ಪ್ರತಿ ಗ್ರಾಮದಲ್ಲು) ಮನೆ ಮತ್ತು ಜಮೀನುಗಳನ್ನು ಸಹ ಅಶ್ವಲಾಯನಸೂತ್ರದ ವಿಶ್ವಾಮಿತ್ರಗೋತ್ರದ ಲಕ್ಷ್ಮೀಪತಿಭಟ್ಟರೆಂಬುವರಿಗೆ ದಾನಮಾಡಿರುವುದಾಗಿ ತಿಳಿದು ಬರುತ್ತದೆ. ಆದರೆ ಈ ಪೈಕಿ ಕೆಲವು ಮನೆ ಮತ್ತು ಭಟಮಾನ್ಯಗಳನ್ನು ಇವರ ಹಿರಿಯರು ಸಾತನೂರು ಕೆರೆ ಕಟ್ಟುವ ಕಾಲದಲ್ಲಿ ಕೊಟ್ಟಿರುವಂತೆ ವಿನಂತಿ ಇದೆ. ಇವರಲ್ಲಿ ಶ್ರೀ ಶೃಂಗೇರಿಯ ಮಠಕ್ಕೆ ಸೀಗೆಕುಪ್ಪೆಯನ್ನು ಕೊಟ್ಟಿರುವ ಸಂಗತಿಯೂ ಅರೆಬಿದರಹಳ್ಳಿ ಸುಬ್ರಹ್ಮಣ್ಯೇಶ್ವರಸ್ವಾಮಿಗೆ ಕೊಟ್ಟಿರುವ ಸಂಗತಿಯೂ ಗೊತ್ತಾಗುತ್ತದೆ. ಆರಲಕುಪ್ಪೆಯನ್ನು ಕಾಶಿಯಲ್ಲಿ ತಮ್ಮ ಹೆಸರಿನಲ್ಲಿನ ಧರ್ಮಕಾರ್ಯ ನಡೆಸಲು ಇವರ ಪೂರ್ವಿಕರು ಕೊಟ್ಟಂತೆ ಕಾಣಬರುತ್ತದೆ. ಶಾಸನದ ಅಂತ್ಯದಲ್ಲಿ ಶ್ರೀರಾಮ ಎಂದು ದಾನಶಾಸನಕರ್ತನ ರುಜುವಿರುತ್ತೆ.

ಇಮ್ಮಡಿ ಕೆಂಪವೀರಪ್ಪಗೌಡರು.

ಈ ಶಾಸನವು ೧೬೯೭ ರಲ್ಲಿ ಕೊಟ್ಟಿದ್ದು. ಅಳತೆ ೯ಫೈ×೮ಫೈ ೧೬೮೧ನೆ ಇಸವಿಯ ಹಿಂದಿನ ಶಾಸನದ ಮುಖ್ಯ ವಿಷಯಗಳ ಸಂಕ್ಷೇಪವಾಗಿ ತಿಳಿಸಿದ ಅನಂತರ ಹುತ್ರಿ ದುರ್ಗದ ಶ್ರೀ ಶಂಕರೇಶ್ವರ ಸ್ವಾಮಿದೇವರ ಕಲ್ಯಾಣೋತ್ಸವಕಾಲದಲ್ಲಿ (ಶ್ರೀರಂಗರಾಯರು ಘನಗಿರಿಯಲ್ಲಿ ಆಳುತ್ತಿದ್ದ ಕಾಲದಲ್ಲಿ) ಯಲಹಂಕನಾಡಿನ ಪ್ರಭುವಾದ ಸದಾಶಿವಗೋತ್ರಕ್ಕೆ ಸೇರಿದ ಮುಮ್ಮಡಿ ಕೆಂಪೇಗೌಡರ ಮೊಮ್ಮಗ ಮತ್ತು ಮುಮ್ಮಡಿ ದೊಡ್ಡವೀರಪ್ಪಗೌಡರ ಮಕ್ಕಳು ಇಮ್ಮಡಿ ಕೆಂಪವೀರಪ್ಪಗೌಡರು ಅಳವಹಳ್ಳಿ (ತಲಿಕೆರೆ) ಮತ್ತು ಡೊಂಕನಪುರ ಗ್ರಾಮಗಳಲ್ಲಿ ೧ ವೃತ್ತಿಗಳನ್ನು ಬ್ರಾಹ್ಮಣರಿಗೆ ದಾನಮಾಡಿ

ರುತ್ತಾರೆ. ಈ ೨ ಗ್ರಾಮಗಳನ್ನು ಮುಮ್ಮಡಿ ದೊಡ್ಡವೀರ ಸಾಗರವೆಂತಲೂ ಹೇಳುತ್ತಾರೆ. ಇವು ಮಾಗಡಿಶೀಮೆಗೆ ಸೇರಿದ ಹುತ್ರಿದುರ್ಗಕ್ಕೆ ನೈಋತ್ಯದಿಕ್ಕಿನಲ್ಲಿರುತ್ತದೆ. ಆಪಸ್ತಂಬ ಸೂತ್ರದ ಹರಿತಸಗೋತ್ರದ ತಿರುಮಲಸೋಮಯಾಜಿಗಳಿಗೆ ತಡಸಿಂಗನಹಳ್ಳಿ ಗ್ರಾಮವನ್ನು ಆಪಸ್ತಂಬ ಸೂತ್ರದ ಶ್ರೀ ವತ್ಸಗೋತ್ರಕ್ಕೆ ಶೇರಿದ ದೊಡ್ಡೈಂಗಾರ್ರೆಂಬುವರಿಗೆ ಕ್ಯಾಗಲವೆಂಬ ಗ್ರಾಮವನ್ನು ಕೊಟ್ಟಿರುತ್ತಾರೆ. ಇವೆಲ್ಲಾ ತಮ್ಮ ಹಿರಿಯರಿಗೆ ಸದ್ಗತಿಯುಂಟಾಗಬೇಕೆಂಬ ಉದ್ದೇಶ್ಯದಿಂದ ಕೊಟ್ಟಿರುವುದು.

ಶಕ ೧೭೧೨—೧೫ ಲ್ಲು ಮುಮ್ಮಡಿ ಕೆಂಪವೀರಪ್ರಭುಗಳ ಮೊಮ್ಮಗ ಮತ್ತು ಮುಮ್ಮಡಿ ಕೆಂಪವೀರಪ್ಪಗೌಡರ ಮಗ ಸದಾಶಿವಗೋತ್ರದ ಮುಮ್ಮಡಿ ಕೆಂಪವೀರಪ್ಪಗೌಡನು ವಿಜಯನಗರದ ಶ್ರೀರಂಗರಾಯನು ಘನಗಿರಿಯಲ್ಲಿ (ಪೆನಗೊಂಡೆ) ಆಳುತ್ತಿರುವ ಕಾಲದಲ್ಲಿ ಮಾಗಡಿಗೆ ಪಶ್ಚಿಮ ದಿಕ್ಕಿನಲ್ಲಿ ಜೀರ್ಣಾವಸ್ಥೆಯಲ್ಲಿದ್ದ ಸೋಮೇಶ್ವರದೇವಸ್ಥಾನದ ಗರ್ಭಗುಡಿಯ ಉತ್ತರಗೋಡೆಯ ಒಳಗಡೆಯಲ್ಲಿ ಇರುವ ಶಾಸನದಿಂದ ಸದರಿ ದೇವಸ್ಥಾನದಲ್ಲಿ ಸೋಮೇಶ್ವರಲಿಂಗವನ್ನು ಪ್ರತಿಷ್ಠಿಸುವ ಕಾಲದಲ್ಲಿ ಆಗಮಿಕ ಕೊಮಾರಯ್ಯನವರಿಗೆ ದೇವರ ಪಡಿತರ ದೀಪಾರಾಧನೆಗೂ, ಉತ್ಸವಾದಿಗಳಿಗೂ ನಡಶಿಕೊಂಡು ಬರಲು ೪ ಗ್ರಾಮಗಳನ್ನು ಕೊಟ್ಟಿರುವವಲ್ಲದೆ ದೇವಸ್ಥಾನದ ನೌಕರುಮಾನೇರಿಗೂ ಮಾನ್ಯ ಮಿರಾಸೆಗಳನ್ನು ದಯೆಪಾಲಿಸಿರುವಂತೆ ಇದೆ. (ಈ ಲಿಂಗವನ್ನು ಪೂರ್ವ ವಿದೇಶಬ್ರಾಹ್ಮಣರಿಂದ ಪ್ರತಿಷ್ಠೆ ಮಾಡಿದ್ದು ದೇಶಕ್ಕೆ ಅರಿಷ್ಟವೆಂದು ತಿಳಿದು ಬಂದ ಮೇಲೆ ಹೊಸದಾಗಿ ಮೇಲ್ಕಂಡ ಕುಮಾರಯ್ಯನವರೇ ಪುನರಪಿ ಪ್ರತಿಷ್ಠೆ ಮಾಡಿಸಿರುವರೆಂದು ಗೊತ್ತಾಗುತ್ತೆ.

ಬೆಂಗಳೂರು ಬಳ್ಳಾಪುರದಪೇಟೆ ರಂಗನಾಥದೇವಾಲಯದಲ್ಲಿರುವ

ಕಲ್ಲಿನ ಶಾಸನ.

೧೬೨೭ ರಲ್ಲು ಯಲಹಂಕ ನಾಡು ಪ್ರಭು ಕೆಂಪನಂಜೇ ಗೌಡ್ರ ಮೊಮ್ಮಗ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡರು ಇವರ ಧರ್ಮಪ್ರಜೆಗಳಾದ ಸ್ವದೇಶಪರದೇಶಗಳ ವಾಸಸ್ಥರಾದ ವರ್ತಕರು ತಮ್ಮ ವ್ಯಾಪಾರಗಳ ಉತ್ಪತ್ತಿಯ ಲಾಭದಲ್ಲಿ ೧ ಭಾಗವನ್ನು ರಂಗನಾಥದೇವರ ಪಡಿತರ ದೀಪಾರಾಧನೆ ಮೊದಲಾದ ಧರ್ಮ ಕಾರ್ಯಗಳಿಗಾಗಿ ಗೌಡ ಪ್ರಭುಗಳಿಗೆ ಅರಿಕೆ ಮಾಡಿ ಕೊಟ್ಟ ವಪ್ಪಿತದ ಶಾಸನ. ಇದಕ್ಕೆ ದೊಡ್ಡ ಚಿಕ್ಕಣ್ಣಶೆಟ್ಟಿ, ಕೆಂಪಮಲ್ಲಶೆಟ್ಟಿ, ತಿರುಮಲಶೆಟ್ಟಿ, ದಾನಪ್ಪಶೆಟ್ಟಿ ಮುಂತಾದವರು ರುಜು ಮಾಡಿರುತ್ತಾರೆ.

ದೇವನಹಳ್ಳಿ— ಮದನಗೋಪಾಲಸ್ವಾಮಿ ದೇವರಿಗೆ ಆವತಿ ನಾಡಪ್ರಭು ಮುದ್ದುಬೈರೇಗೌಡನ ಮೊಮ್ಮಗ ಸೊಣ್ಣಬೈರೇಗೌಡ ಈತನ ಧರ್ಮಪತ್ನಿ ಮತ್ತು ಮಗ ಗೋಪಾಲಗೌಡನು ಕ್ರಿ. ಶ. ೧೬೯೪ ರಲ್ಲಿ ಅನೇಕ ಗ್ರಾಮಗಳನ್ನು ದಾನಮಾಡಿರುವನು. ದೇವರಿಗೆ ನಿತ್ಯಕಟ್ಲೆ. ಪಕ್ಷಕಟ್ಲೆ ನಡೆಯುವದಕ್ಕೆ ಪಡಿತರ ದೀಪಾರಾಧನೆ ಉತ್ಸವಗಳೂ, ದೀಪಾರಾಧನೆಗೆ ಸಹಾ ಅರ್ಚಕರು, ಕೆಲಸಗಾರರು ಆಯಾ ಕಾಲಗಳಲ್ಲಿ ನಡೆಯುವ ಕೆಲಸಗಳನ್ನು ನಿಗುದಿಮಾಡಿ ಕ್ಲುಪ್ತಕಾಲಗಳಲ್ಲಿ ದೇವರ ಕಾರ್ಯಗಳನ್ನು ಮಾಡಿಕೊಂಡು ಹೋಗುವಂತೆಯೂ, ಗೈರಾಜರು ಆದರೆ ಬದಲಿ ನೇಮಿಸಿ ಕಾರ್ಯ ನೆರವೇರಿಸಬೇಕು. ಕಾರ್ಯಗಳಿಗೆ ಆಗಿ ಮಿಗುವ ಹಣ ಮತ್ತು ದವಸದಿಂದ, ದೇವರಿಗೆ ಒಡವೆಗಳನ್ನು ಮಾಡಿಸುವುದು, ಉತ್ಪತ್ತಿ ಕಮ್ಮಿ ಆದರೆ ಅರಮನೆಯಿಂದ ಭರ್ತಿಮಾಡು

ವಂತೆಯೂ, ನಿತ್ಯಪೂಜಾಕಾಲಗಳಲ್ಲಿ ಬರುವ ಭಕ್ತಾದಿಗಳಿಗೆ ಪೊಂಗಲನ್ನವನ್ನು ಧಾರಾಳವಾಗಿ ವಿನಿಯೋಗಿಸುವಂತೆಯೂ, ವರ್ಷೋತ್ಸವಸಮಾರಂಭಕಾಲಗಳಲ್ಲಿ ಅರಮನೆಯಿಂದ ೪೦ ಖಂಡಿ ಭತ್ತ ಕೊಡುವಂತೆ ದೇವಸ್ಥಾನದಲ್ಲಿ ಬಹಾವರ್ಧ ಮಾಡಿರುವ ಲೆಕ್ಕದ ಪ್ರಕಾರ ಅರಮನೆಯಲ್ಲೂ ನಕಲು ವಿವರವಾಗಿರಬೇಕು. ೪ ವರ್ಣದವರಲ್ಲಿ ಯಾರಾದರೂ ವಿರೋಧವಾಗಿ ನಡೆದಲ್ಲಿ ಅವರು ಮತಭ್ರಷ್ಟರೆಂತಲು ಗೊತ್ತುಮಾಡಿ ಬರಸಿರುವ ಶಾಸನ ದೇವನಹಳ್ಳಿಯಲ್ಲಿರುತ್ತದೆ. ಕ್ರಿ. ಶ. ೧೬೭೭ ರಲ್ಲಿ ಈತನು ಪ್ರತ್ಯೇಕವಾಗಿ ಮತ್ತೆ ಎರಡು ಶಾಸನಗಳನ್ನು ಬರೆಸಿರುವನು. ವಡಿಗೇನಹಳ್ಳಿ, ಸೋಮೇಶಿಹಳ್ಳಿ, ಮಾಲೂರು, ಮಡ್ಲೂರು, ಹೊಸಕೆರೆ ಮುಂತಾದ ಗ್ರಾಮಗಳನ್ನೂ, ಅರ್ಚಕರುಗಳಿಗೆ ಸೋಮನಹಳ್ಳಿ ಛತ್ರಿ ಕಾಳೆಯವರಿಗೆ ಸಾವನಹಳ್ಳಿ, ಬೈಚಾಪುರ ಇವುಗಳನ್ನೂ ದಾನಮಾಡಿ ಇರುತ್ತಾನೆ.

ಕೊರಟಗೆರೆ—ನಾಗಲಿಂಗಾಚಾರ್ರಲ್ಲಿದ್ದ ತಾಮ್ರಶಾಸನದಲ್ಲಿ ಹೊಳವನಹಳ್ಳಿ ದೊಡ್ಡರಣಭೈರೆಗೌಡರು ೧೬೭೮ರಲ್ಲಿ ಕಾಳಿ ಕಾಮಟೇಶ್ವರ ದುರ್ಗಾ ಮಹಂಕಾಳಿ ದೇವರ ಪಡಿತರ ದೀಪಾರಾಧನೆಗೆ ನಿರಂಕುಶವಾಗಿ ನಡಿಯಲು ಹೂಲಿಕುಂಟೆ ಗ್ರಾಮದಲ್ಲಿ ಒಂದು ಹೊಲ, ಬಸವನ ಕಾಲವೆಯಲ್ಲಿ ಒಂದು ಗದ್ದೆಯೂ, ಪಾಂಚಾಳದವರು ಮತ್ತು ಇತರರು ಮದಿವೆ, ಮುಂಜಿ, ಶೋಭನ, ನಾಮಕರಣ, ಆಲೇಮನಗಳ ಬಡಗಿಯವರು, ಕೊಡುವಂತೆ ಕ್ಲಪ್ತ ಮಾಡಿದ ರೊಕ್ಕ, ಮತ್ತು ಕಾಮೇನಹಳ್ಳಿ, ಗಂಟಿನಹಳ್ಳಿ, ಹೊಸಹಳ್ಳಿ, ಬಿದಲೋಟಿ, ದ್ಯಾವರಹಳ್ಳಿ, ಬಗತ್ತರಹಳ್ಳಿ, ಮಾವಾರ, ನವಲುಗುರಿಕೆ ಮುಂತಾದ ಗ್ರಾಮಗಳವರು ಕ್ಲಪ್ತಮಾಡಿದ ದವಸಗಳೂ, ಸಗರ್ತರು, ಬೇರಿಯವರು, ದೇವಾಂಗನವರು ಮನೆ ೧ ಕ್ಕೆ ವರ್ಷ ೧ ಕ್ಕೆ ೧ ಹಣ ಕೊಡುವಂತೆ ನಿಗದಿಮಾಡಿ ಪಡಿತರದೀಪಾರಾಧನೆ ನಿತ್ಯೋತ್ಸವ, ಮಾಸ, ಸಂವತ್ಸರೋತ್ಸವ ಮುಂತಾದ ಸೇವೆಗಳನ್ನು ನೆರವೇರಿಸಿಕೊಂಡು ಬರುವದು; ಇದಕ್ಕೆ ಪಾಂಚಾಳದ ಗುರುವು ಕಾಳಹಸ್ತಾಚಾರಿ ತೊಳಸಾಚಾರಿ ಮುಂತಾದ ೧೧ ಆಚಾರಿಗಳು ಸಾಕ್ಷೀಭೂತವಾಗಿ ಪುತ್ರ ಪೌತ್ರ ಪಾರಂಪರ್ಯವಾಗಿ ನಡೆಸಿಕೊಂಡು ಬರುವಂತೆ ಶಾಸನವನ್ನು ಬರಿಸಿ ಸುಬೇದಾರ್ ಚಿಕ್ಕಪ್ಪಯ್ಯನವರು, ವೆಂಕಟೇಶಯ್ಯನವರು ಮುಂತಾದ ೭ ಜನ ಸಾಕ್ಷಿಗಳು ನಿಶಿ ಗೌಡರ ರುಜು ಇರುತ್ತೆ.

ದೊಡ್ಡಬಳ್ಳಾಪುರ—ಶ|| ೧೫೩೨ ರಲ್ಲು ಸಾಧಾರಣ ಸಂ|| ಆವತಿನಾಡಪ್ರಭು ಬೈರೇಗೌಡಯ್ಯನವರ ಪೌತ್ರರಾದ ಹಾವಳಿ ಭೈರಪ್ಪಗೌಡರ ಮಗ, ಮುಮ್ಮಡಿ ಹಾವಳಿ ಬೈರಪ್ಪಗೌಡರು ತಮ್ಮ ಆಸ್ಥಾನದ ವೈದ್ಯರಿಂದ ಪುಟ್ಟಣ್ಣ ಪಂಡಿತರಿಗೆ ಇಮ್ಮಡಿ ಬೈರಾಪುರವನ್ನು ಸರ್ವಮಾನ್ಯವಾಗಿ ಕೊಟ್ಟ ಶಾಸನ.

A. D. ೧೫೯೮ ರಲ್ಲಿ ಬಳ್ಳಾಪುರದಲ್ಲಿ ಶಿಥಿಲವಾಗಿರುವ ಆದಿನಾರಾಯಣದೇವಸ್ಥಾನದ ಮಹಾದ್ವಾರದಲ್ಲಿನ ಶಾಸನ. ಆವತಿನಾಡ ಪ್ರಭು ಇಮ್ಮಡಿ ಹಾವಳಿ ಬೈರೇಗೌಡನ ಸೇವಕರು ಹಿರಿಯ ಹಾವಳಿ ಬೈರೇಗೌಡ ಇಮ್ಮಡಿ ಹಾವಳಿ ಬೈರೇಗೌಡರಿಗೆ ಪ್ರೀತ್ಯರ್ಥವಾಗಿ ನಾಗಂಭಟ್ಟ, ಅನ್ನಾಂಭಟ್ಟ, ಭಾನುಭಟ್ಟರಿಗೆ ಧಾನ್ಯದ ವರ್ಷಾಶನ ಶಾಸನವಿದೆ.

ಆನೆಕಲ್ಲು—೧೬೧೪ ರಲ್ಲು ಸೋಮೋಪರಾಗಪುಣ್ಯಕಾಲದಲ್ಲಿ ಸುಗಟೂರನಾಡು ಪ್ರಭು ಚಿಕ್ಕರಾಯಲು ತಮ್ಮಪ್ಪಗೌಡರ ಪೌತ್ರರಾದ ಇಮ್ಮಡಿ ತಮ್ಮಪ್ಪಗೌಡರ ಪುತ್ರರಾದ ಮುಮ್ಮಡಿತಮ್ಮಪ್ಪಗೌಡರು ಕಪಿಲಗೋತ್ರದ ಭಾರತೀ ತಿಮ್ಮಯ್ಯನಿಗೆ ಆಲಾಕಲ್ಲು ತಾಲ್ಲೋಕು ಹಲಸಿಹಳ್ಳಿ ೧ ಇದರ ಉಪಗ್ರಾಮ ತಿಪ್ಪಸಂದ್ರ ಸಹಾ ಕೊಟ್ಟ ಭೂದಾನ ಶಾಸನ.

ಕ್ರಿ. ಶ. ೧೬೨೪ ರಲ್ಲಿ ಸುಗಟೂರು ಮುಮ್ಮಡಿ ತಮ್ಮೇಗೌಡರು ಜಯಶಿಂಗನಮಗ...... ಶಿಂಗನಾಥ ಸೇನಾನಾಯಕನಿಗೆ ಜಗಳದಲ್ಲಿ ಪರಾಕ್ರಮ ತೋರಿಸಿ ಜಯಪ್ರದ ಹೊಂದಿದಕ್ಕೆ ಆನೆಕಲ್ಲು ತಾಲ್ಲೋಕು ಕಾಳಿನಾಯ್ಕನಹಳ್ಳಿ ಗ್ರಾಮವನ್ನು ನೆತ್ತರಕೊಡಿಗೆಯಾಗಿ ಕೊಟ್ಟುದಕ್ಕೆ ಕಾಮನಾಯ್ಕನಹಳ್ಳಿಗೆ ಪೂರ್ವ ಚಿಕ್ಕಣ್ಣನ ಕಂದಾಯದ ಹೊಲದ ಬಳಿ ಗುಂಡಿನಮೇಲೆ ಶಾಸನವಿದೆ.

ಮುಳಬಾಗಲು—A.D. ೧೬೩೦ ರಲ್ಲಿ ಮುಳಬಾಗಲು ತಾಲ್ಕು ಆವನಿ ಬಳಿಗೆ ಯಾತ್ರಾರ್ಥವಾಗಿ ಪರಿವಾರ ಸಮೇತ ಯಲಹಂಕನಾಡು ಪ್ರಭು ಇಮ್ಮಡಿ ಕೆಂಪಭೂಪನು ಬಂದ ಜ್ಞಾಪಕಾರ್ಥವಾಗಿ ಗಿಂಡಿ ತೀರ್ಥದ ಪಶ್ಚಿಮದಲ್ಲಿ ಕಲ್ಲಿನ ಮೇಲೆ ಶಾಸನನಿದೆ.

A.D. ೧೬೨೮ ಲ್ಲಿ ಸುಗಟೂರು ತಮ್ಮಗೌಡ ಪೌತ್ರ ಇಮ್ಮಡಿ ತಮ್ಮಗೌಡರ ಭಾರ್ಯ ಮತ್ತು ಚಿಕ್ಕರಾಯಲು ತಮ್ಮಗೌಡರು ಸಹಾ ತಿರುಮಲ ಸೋಮಯಾಜಿ ವಂಶಸ್ಥನಾದ ಕೃಷ್ಣಸೋಮಯಾಜಿಯವರ ಕೈಯಲ್ಲಿ ಆವನಿರಾಮೇಶ್ವರಕಾಶೀವಿಶ್ವನಾಥನ ಸನ್ನಿಧಿಯಲ್ಲಿ ಅಗ್ನಿಷ್ಟೋಮವೆಂಬ ಯಜ್ಞವನ್ನು ಮಾಡಿಸಿದ ಶಾಸನ.

ಸುಗಟೂರು ಚಿಕ್ಕತಮ್ಮಯ್ಯಗೌಡರ ಅಕ್ಕ ಹಲಸರಾತಮ್ಮನೆಂಬ ದೇವಭಕ್ತೆಳು ಆವನಿಬೆಟ್ಟದ ಧನುಷ್ಕೋಟಿತೀರ್ಥದ ಬಡಗ ಬಂಡೆಯ ಮೇಲೆ ಪುರೋಹಿತಕೃಷ್ಣಂಭಟ್ಟ ತಿರುಮಲ ಸೋಮಯಾಜಿಯವರ ಕೈಯಲ್ಲಿ ದೇವರುಗಳ ಪಾದಗಳನ್ನು ಪ್ರತಿಷ್ಠಿಸಿ ತಿಲೋದಕಪಿಂಡಪ್ರದಾನವನ್ನು ಮಾಡಿಸಿ, ಕಾಶಿ, ಗಯ, ಪ್ರಯಾಗಗಳಲ್ಲಿ ಮಾಡಿದ ಫಲ ವಾಲ್ಮೀಕಿ ಪ್ರೋಕ್ತಂ ಎಂದು ಬರೆದಿವೆ.

ಕ್ರಿ. ಶ. ೧೬೭೭ ರಲ್ಲಿ ಮುಮ್ಮಡಿ ಚಿಕ್ಕರಾಯಲು ತಮ್ಮಗೌಡರು ತನ್ನ ಸೈನ್ಯದ ಮುಸಲ್ಮಾನ್ ಇಸೂಪ್ ಆಜಿಯವರಿಗೆ ಅವರ ಪರಾಕ್ರಮಕ್ಕೆ ಮೆಚ್ಚಿ ಕೋಡಿಹಳ್ಳಿ ಚಂಗವಾಡಿ ಕೆರೆಗಳ ಕೆಳಗೆ ಜಮೀನು ಮಾನ್ಯ ಕೊಟ್ಟು ಇದಕ್ಕೆ ಯಾರಾದರೂ ಭಂಗಪಡಿಸಿದರೆ ಕಾಶಿಯಲ್ಲಿ ಗೋವು ಕೊಂದಂತೆ ಮಕ್ಕಾದಲ್ಲಿ ಹಂದಿ ತಿಂದಂತೆಯೆಂದು ಬರೆದು ಹರಿಹರಸಾಕ್ಷಿಯಂದಿದೆ.

ಕ್ರಿ. ಶ. ೧೫೭೮ ರಲ್ಲಿ ಸುಗಟೂರು ಇಮ್ಮಡಿ ತಮ್ಮಯ್ಯಗೌಡರು ತಮ್ಮ ಸೈನ್ಯದ ಶಿಪಾಯಿಯಾದ ಹಿರಿಯ ಚನ್ನಯ್ಯನು ಆಕಸ್ಮಿಕವಾಗಿ ಯುದ್ಧದಲ್ಲಿ ಮಡಿಯಲಾಗಿ ಆತನ ಮಕ್ಕಳಿಗೆ ಭೂದಾನ ಮಾಡಿದ ಶಾಸನ.

ಕ್ರಿ. ಶ. ೧೬೯೭ ರಲ್ಲಿ ಆವತಿನಾಡ ಪ್ರಭು ಇಮ್ಮಡಿ ಬೈರೇಗೌಡರ ಪುತ್ರರಾದ ಇಮ್ಮಡಿ ಸೊಣ್ಣಬೈರೇಗೌಡರ ಪುತ್ರರಾದ ಗೋಪಾಲ ಗೌಡರು ಈತನ ತಾಯಿ ಸಂಪಮ್ಮ ಮದನ ಗೋಪಾಲಸ್ವಾಮಿ ದೇವರಿಗೆ ಪಡಿತರ ದೀಪಾರಾಧನೆ ನಿತ್ಯೋತ್ಸವ ರಥೋತ್ಸವ ಮುಂತಾದ ಸ್ವಾಮಿ ಕಾರ್ಯಕ್ಕೆ ಮಡ್ಲೂರು, ಮೇಲೂರು, ಗ್ರಾಮಗಳನ್ನು ದಾನಮಾಡಿ ಸಕಲ ಮತಸ್ಥರು ನಡಸಿಕೊಂಡು ಬರಬೇಕೆಂದು ಶಾಸನವನ್ನು ಬರಿಸಿರುವುದು ಮೇಲೂರು ಗ್ರಾಮದ ಊರ ಬಾಗಿಲಲ್ಲಿದೆ.

ಗೌರೀಬಿದನೂರು—ಕ್ರಿ. ಶ. ೧೫೬೪ ರಲ್ಲು ಆವತಿನಾಡ ಪ್ರಭು ಸೊಣ್ಣಪ್ಪ ಗೌಡಯ್ಯನವರು ಸದಾಶಿವ ಮಹಾರಾಯರಿಗೂ, ತಿರುಮಲ ರಾಚೈಯ್ಯನವರಿಗೂ ತಮ್ಮ ಮಾತಾ ಪಿತೃಗಳಿಗೂ ಪುಣ್ಯಪ್ರಾಪ್ತಿಯಾಗಲೆಂದು ಚಂದ್ರಗ್ರಹಣಪುಣ್ಯಕಾಲದಲ್ಲಿ ಶ್ರೀ ಚನ್ನಕೇಶವದೇವರ ಅಮೃತಪಡಿ ದೀಪಾರಾಧನೆ ವಗೈರೆ ಸೇವೆ ಆ ಚಂದ್ರಾರ್ಕವಾಗಿ ನಡಿಯುವಂತೆ ಮುಡಿಗೆರೆ ಗ್ರಾಮ

ವನ್ನು ಹಿರಣ್ಯೋದಕದಾನಧಾರಾಪೂರ್ವಕವಾಗಿ ಅರ್ಪಿಸಿದ ಶಾಸನ ಚನ್ನಕೇಶವದೇವಸ್ಥಾನದಲ್ಲಿದೆ.

ನಂದಿ—ಕ್ರಿ. ಶ. ೧೫೭೫ರಲ್ಲು ಆವತಿನಾಡ ಪ್ರಭು ಮಲ್ಲಬೈರೇಗೌಡರ ಕೊಮಾರ ಬೈರೇಗೌಡರ ತಮ್ಮಂದಿರು ಮಾದೈಯಗೌಡರು ತಮ್ಮ ಮಾತಾಪಿತೃಗಳಿಗೆ ಪುಣ್ಯಲೋಕಪ್ರಾಪ್ತವಾಗಲೆಂದು ಹಿರಣ್ಯೋದಕದಾನದಾನಧಾರಾಪೂರ್ವಕ ಕೊಟ್ಟ ಶಾಸನ ನಂದಿ ಗ್ರಾಮದ ಉತ್ತರ ಗೊಲ್ಲರ ತಿಮ್ಮಯ್ಯನ ಹೊಲದ ಆಗ್ನೇಯದಲ್ಲಿದೆ.

ಕ್ರಿ. ಶ. ೧೪೭೮ ಆವತಿವಂಶಜ ಕಾರೆಪುರದ ಪಾಳಯಗಾರ ಬೈರಭೂಪಾಲನು ಶಿವರಾತ್ರೆಯಲ್ಲಿ ಪಂಚನಂದೀಶನ ದರ್ಶನಮಾಡಿ ಬಂದ ವಿಷಯವಾಗಿ ಅಂಗಾಚಾರಿ ಎಂಬುವನಿಂದ ಕೆತ್ತಿಸಿದ ತಾಮ್ರಶಾಸನ ನಂದೀಗ್ರಾಮದ ಕುಡುವತಿಗೆಯಲ್ಲಿ ದೊರೆತಿರುತ್ತೆ. ಮತ್ತು ಇವನ ಸೇನೆ ಮುಖ್ಯಾಧಿಕಾರಿಗಳು, ಭದ್ರಪ್ಪ, ನಂದಪ್ಪ, ಮುದ್ದಪ್ಪ ಇವರು ಸಹಾ ಹಾಜರಿದ್ದರು.

ಕುಣಿಗಲು – ಹೋಬಳಿ ಬೇಚರಾಕು ಕೃಷ್ಣಸಾಗರಗ್ರಾಮದಲ್ಲಿರುವ ಕಲ್ಲ ಶಾಸನ· ಶಾ. ೧೫೨೧ ನೆ ವಿಕಾರಿ ಸಂ॥ ಜ್ಯೇಷ್ಠ ಬ॥ ೧೩ ರಲ್ಲು ಯಲಹಂಕನಾಡ ಪ್ರಭು ಹಿರಿಯ ಕೆಂಪಯ್ಯ ಗೌಡರಯ್ಯನವರ ಪುಣ್ಯಸ್ತ್ರೀಗಳಾದ ವೆಂಕಟಕೃಷ್ಣಾಜಮ್ಮನವರು ಮಾಡಿದ ಅಗ್ರಹಾರಕ್ಕೆ ದಾನಧರ್ಮಸಾಧನ ಶಿಲಾಶಾಸನ.

ವೆಂಕಟಕೃಷ್ಣಸಾಗರದ ಗ್ರಾಮ ೧ಕ್ಕೆ ಏರ್ಪಾಡ ಮಾಡಿದ ಬೀಜವರಿ ಪ್ರಕಾರ ಹೊಲ ಖಂ. ೩೦ ದೊಡ್ಡ ಕೆರೆವಳಗೆ ಗದ್ದೆ ಖಂ. ೨೦ ಗಣಸಂಖ್ಯೆಯ ವೃತ್ತಿ ೧೯ ಇವುಗಳನ್ನು ನಮ್ಮ ಮಾವ ಇಮ್ಮಡಿ ಕೆಂಪೇಗೌಡರಯ್ಯನವರಿಗೂ ನಮ್ಮ ಅತ್ತೆ ಲಿಂಗಾಜಮ್ಮನವರಿಗೂ ಪುಣ್ಯವಾಗಲಿ ಎಂದು ಅರ್ಪಿಸಿದ ದಾನ.

ಕುಣಿಗಲು ತಾಲ್ಲೂಕು ಶೃಂಗಾರ ಸಾಗರದ ಬಸವಂಣನ ಗುಡಿ ಬಳಿಯಿರುವ ಕಲ್ಲಿನಲ್ಲಿ ಶ್ರೀಮತ್ತು ಯಲಹಂಕ ನಾಡು ಪ್ರಭು ಇಮ್ಮಡಿ ಹಿರಿಯ ಕೆಂಪಯ್ಯ ಗೌಡರವರ ಅರಮನೆ ನಾಟಕಶಾಲೆಯ ಶೃಂಗಾರಮ್ಮನು ಮಾಡಿಸಂಥ ಶೃಂಗಾರಸಾಗರದ ಅಗ್ರಹಾರವನ್ನು ಗೌಡರಾಜರುಗಳ ಪ್ರೀತ್ಯರ್ಥವಾಗಿ ಕೊಟ್ಟಿದ್ದು ಅದೇ ಗ್ರಾಮದ ಶೃಂಗಾರಕಟ್ಟೆಯ ಕೆಳಗೆ ಬಿದ್ದಿರುವ ಕಲ್ಲಿನಲ್ಲಿ ಇದೆ.

ಶ. ೧೬೪೮ ರಲ್ಲು ಹೊಳವನಹಳ್ಳಿ ಮುಮ್ಮಡಿ ದೊಡ್ಡ ರಣಬೈರೇಗೌಡರಯ್ಯನವರು ಕೊರಟಿಗೆರೆಯಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯಕ್ಕೆ ಸಮರ್ಪಿಸಿದ ದಾನದ ವಿಷಯ ಅದೇ ಗುಡಿ ಜಗತಿಕಟ್ಟೆಯ ಕಲ್ಲಿನಮೇಲೆ ಇದೆ.

ಹೊಳವನಹಳ್ಳಿ ರಣಬೈರೇಗೌಡನ ಕೈಕೆಳಗೆ ರಾಮನಾಯ್ಕನಪಳ್ಳಿ ನಾಡನ್ನು ಆಳುತ್ತಿದ್ದ ಹೊನ್ನೇಗೌಡರು ಹೊನ್ನಯ್ಯ ಎಂಬುವನಿಗೆ ತೊಗರಿಗಟ್ಟದಲ್ಲಿ ಒಂದು ಜಮೀನನ್ನು ಸರ್ವಮಾನ್ಯವಾಗಿ ಕೊಟ್ಟಿರುವ ಶಾಸನ ಅದೇ ಊರ ತಳವಾರನ ಜಮೀನಿನಲ್ಲಿರುವ ಕಲ್ಲಿನಲ್ಲಿದೆ.

ಸೆಲಮಂಗಲದ ತಾಲ್ಲೂಕು ಗೊಂಡ್ಲುಗೆ ಉತ್ತರದಲ್ಲಿರುವ ಹೊಲದಲ್ಲಿ ೧೬೬೧ ಪ್ಲವಸಂವತ್ಸರದ ಸುಮಾರಿನಲ್ಲಿ ರಣರಂಗದಲ್ಲಿ ಸ್ವಾಮಿಕಾರ್ಯಕ್ಕಾಗಿ ಕಡಿದಾಡಿ ತನ್ನ ಯಜಮಾನನನ್ನು ರಕ್ಷಿಸುವುದಕ್ಕೆ ಪ್ರಾಣವನ್ನು ಕೊಟ್ಟ ಜ್ಞಾಪಕಾರ್ಥವಾಗಿ "ರಕ್ತಕೊಡಗೆ" ಗೆ ಹೊಲವನ್ನು ಕೆಂಪೇಗೌಡನು ಕೊಟ್ಟಂತೆ ಶಾಸನದಿಂದ ತಿಳಿಯಬರುತ್ತದೆ.

ಯಲಹಂಕನಾಡು ಪ್ರಭುವಾದ ಕೆಂಪನಂಜೇಗೌಡನ ಮಗ ಹಿರಿಯ ಕೆಂಪೇಗೌಡ ಇವನ ಮಗ ಇಮ್ಮಡಿ ಕೆಂಪೇಗೌಡನು ವಿಜಯನಗರದ ೨ನೆ ವೆಂಕಟಪತಿರಾಯರು ಸಿಂಹಾಸನಾಧಿಪತ್ಯವನ್ನು ಮಾಡುವ ಕಾಲದಲ್ಲಿ ರಾಮೇಶ್ವರದೇವರ ಸಾನ್ನಿಧ್ಯದಲ್ಲಿ (ಸಾಕ್ಷೀಭೂತರಾಗಿ) ಆವುಬಲ ನಾರಾಯಣ ಭಟ್ಟನಿಗೆ ಕಾಲ್ಲ್ವ, ಮಾದಬಾಲು, ತಿರುಮಾಲೆ, ಹಾರತಿ ಮತ್ತು ಮಾಗಡಿ ಗ್ರಾಮಗಳಲ್ಲಿ ಪಂಚಾಂಗವನ್ನು ವಂಶಪಾರಂಪರ್ಯವಾಗಿ ಓದಿಕೊಂಡು ಬರುತ್ತಾ ಹಣವನ್ನು ವಸೂಲ್ಮಾಡಿಕೊಂಡು ಬರುವಂತೆ ಒಂದು ತಾಮ್ರದ ಶಾಸನವನ್ನು ೧೬೨೦—೧೬೪೦ ಬರೆಮಕೊಟ್ಟಿರುವದು ಮಾಗಡಿ ವೆಂಕಟಪತಿ ಭಟ್ಟರಿಂದ ದೊರೆತ ೨ ತಾಮ್ರದ ಶಾಸನಗಳಲ್ಲಿ ಒಂದು ಯೋಗಿ ವೆಂಕಯ್ಯನ ಪ್ರತ್ಯಕ್ಷ ಕ್ರಿಷ್ಣಯ್ಯನಿಂದ ಬರೆಸಿ ಕೆಳಗಡೆ ಇಮ್ಮಡಿ ಕೆಂಪೇಗೌಡ ಎಂದು ಇದೆ.

ಅಪೆಂಡಿಕ್ಸ್ ೩.

ಒಂದು ಕೋರ್ಟ್‌ಪೈಸಲ್.

ಬೆಂಗಳೂರು ಡಿವಿಜನ್ ಪ್ರಿನ್ಸಿಪಲ್ ಕದೀಮು ಸದರ ಅಮೀನ್‌ಶೀಪ್ ಕೋರ್ಟ್
೧೮೩೭ ನೇ ಇಸವಿ ದಿವಾನಿ ಅದಾಲತ್ತು ಅಸಲ್ ನಂಬರು ೩೦.
ಭೂಸ್ಥಿತಿ ವಗೈರೆ ವ್ಯವಹಾರ.

ವಾದಿಗಳು.

ಮಳೂರು ರಂಗಾಚಾರ್ಯರ ಕುಮಾರ್ರು ಗೋವಿಂದಾಚಾರ್ಯರು, ಚಿಂತಾಮಣಿ ಅಯ್ಯಂಗಾರ್ರು—೨.

ಪ್ರತಿವಾದಿಗಳು.

ಮಾಗಡಿ ತಾಲ್ಲೂಕ್ ತಿರುಮಲೆಯಲ್ಲಿರುವ ವೆಂಕಟಾಚಾರ್ರ ಅಣ್ಣ ರಾಘವಾಚಾರಿ, ಇವರ ತಮ್ಮ ಕೃಷ್ಣಾಚಾರಿ, ವೆಂಕಟಾಚಾರಿ ಮಗ ತಿರುಮಲತಾತಾಚಾರಿ—೩.

ಸರ್ ೧೮೩೭ ನೇ ಇಸವಿ ಫೆಬ್ರವರಿ ತಾರೀಖು ೧ ರಲ್ಲು-ವಾದಿಗಳ ಅರ್ಜಿ.

ಮಾಗಡಿ ಸ್ಥಳದ ಪಾಳ್ಯೆಗಾರ್ ಕೆಂಪೇಗೌಡರಯ್ಯನವರಿಂದ ತಮ್ಮ ಹಿರಿಯರಿಗೆ ಧಾರಾಸಹಿತವಾಗಿ ಬಹುಕಾಲದಿಂದ ನಡೆದು ಬಂದ ಕನಬೆ ತಿರುಮಲೆ ಗ್ರಾಮದಲ್ಲಿ ಹೊಲ ಖಂ ||. ಗದ್ದೆ ಖಂ. ೧. ಪಣಕನಕಲ್ಲು ಗ್ರಾಮದಲ್ಲಿ ಹೊಲ ೦ |||. ಬೈಚಾಪುರ ಗ್ರಾಮದಲ್ಲಿ ಹೊಲ ಖಂ. ||. ಅಂತು ಖಂ. ೧|||೦ ಭೂಮಿ..................................

೩ನೆಯ ಪುಟ.—ಮಾಗಡಿ ಸಂಸ್ಥಾನದಲ್ಲಿನ ಮಾಗಡಿ ಕೆಂಪೇಗೌಡರ ದಾನಶಾಸನಗಳು ೧-೮ ನೇ ಸಂಖ್ಯೆಯುಳ್ಳ ದಾನಶಾಸನ-ಶಾಲಿವಾಹನ ಶಕ ೧೬೩೭ ನೇ ಮನ್ಮಥನಾಮ ಸಂ|| ಮಾಘ ಶುದ್ಧ ೭ ಯಲ್ಲೂ—ಸ್ವಸ್ತಿ ಶ್ರೀಯಲಹಂಕವಂಶತಿಲಕಶ್ರೀಕೆಂಪಭೂಪಾತ್ಮಜ, । ಶ್ರೀವೀರಕ್ಷಿತಿಪಾಲಸೂನುರಖಿಲಕ್ಷ್ಮಾಮಂಡಲಾಧೀಶ್ವರಃ ॥ ಶ್ರೀಮನ್ಮುಮ್ಮಡಿಕೆಂಪವೀರನೃಪತಿಃ ಸೋಮೇಶ್ವರಸ್ಥಾಪನೋ । ಜೀಯಾತ್ಸಜ್ಜನಪಾಲನಾಯ ರಚಿತಕ್ಷೇಮಾಗ್ರಹಾರಸ್ಥಿರಂ ॥ ಸದಾಶಿವಗೋತ್ರ ಯಲಹಂಕನಾಡ ಪ್ರಭುಗಳಾದ ಮುಮ್ಮಡಿ ಕೆಂಪವೀರಪ್ಪ ಗೌಡರಯ್ಯನವರು-ಭಾರದ್ವಾಜಗೋತ್ರದ ಆಪಸ್ತಂಬ ಸೂತ್ರದ ಯಜುಶ್ಶಾಖಾಧ್ಯಾಯಿಗಳಾದ ವೃತ್ತಮಣಿಕುಲತಿಲಕ ತಿರುವರಂಗಂ ತಿರುಪತಿ ಅಂಬಾರ ಶ್ರೀರಂಗಾಚಾರ್ಯರ ಪೌತ್ರರಾದ ಚಲ್ಲ ತಿರುಮಲಾಚಾರ್ಯರ ಪುತ್ರರಾದ ಗೋವಿಂದಾಚಾರ್ಯರಿಗೆ ಬರಿಸಿಕೊಟ್ಟ ಭೂದಾನಶಾಸನಕ್ರಮವೆಂತೆಂದರೆ.—ನಮ್ಮ ಮಾಗಡಿ ಶೀಮೆಗೆ ಸಲ್ಲುವ ದೇವಸ್ಥಾನದ ಹೋಬಳಿ ತಿರುಮಣಿ ಗ್ರಾಮದಲ್ಲಿ ಬೀಜವರಿ ಪ್ರಕಾರ ಹೊಲ .||. ಹತ್ತು ಕೊಳಗ ಗದ್ದೆ .||. ಪಣಕನಕಲ್ಲು ಗ್ರಾಮದಲ್ಲಿ ಬೀಜವರಿ ಪ್ರಕಾರ ಹೊಲ ೧||. ಒಂದು ಖಂಡುಗ ನಿವೇಶನ ಗೃಹ ಒಂದು..................ಮತ್ತೊಂದು ಮಲೆರಂಗಸ್ವಾಮಿ ದೇವಸ್ಥಾನದಲ್ಲಿ ಮುತ್ತೀರ್ಥ ಅರಳವಾಗಿನ ಬಗ್ಯೆ ವರುಷಾಶನ ಹನ್ನೆರಡು ವರಹ, ಪ್ರಸಾದ ಯರಡುಪಡಿ ಬಗ್ಯೆ ಒಂದಕೆ ಕಜ್ಜಾಯ ಒಂದು—೧-೯ ನೇ ಸಂಖ್ಯೆಯುಳ್ಳ ದಾನಶಾಸನ.—ಶಾಲಿ. ೧೬೪೦ ನೇ ವಿಳಂಬಿ ಸಂವತ್ಸರ ಮಾಘ ಶು|| ೭ ಯಲ್ಲು ಸ್ವಸ್ತಿಶ್ರೀ ಯಲಹಂಕವಂಶತಿಲಕಶ್ರೀಕೆಂಪಭೂಪಾತ್ಮಜಃ । ಶ್ರೀವೀರಕ್ಷಿತಿಪಾಲಸೂನುರಖಿಲಲಕ್ಷ್ಮಾಮಂಡಲಾಧೀಶ್ವರಃ ॥ ಶ್ರೀಮನ್ಮುಮ್ಮಡಿಕೆಂಪವೀರನೃಪತಿಃ ಸೋಮೇಶ್ವರಸ್ಥಾಪಿತೋ । ಜೀಯಾತ್ಸಜ್ಜನಾಪಾಲನಾಯರಚಿತಕ್ಷೇಮಾಗ್ರಹಾರಸ್ಥಿರಂ ॥................ ಮುಮ್ಮಡಿ ಕೆಂಪವೀರಪ್ಪ ಗೌಡರಯ್ಯನವರು ಮೇಲ್ಕಂಡವರಿಗೆ ಬರಿಸಿಕೊಟ್ಟ ಭೂದಾನ ಧರ್ಮಶಾಸನ..............ಬೈಚಾಪುರವೆಂಬ ಗ್ರಾಮದಲ್ಲಿ ಬೀಜವರಿ ಪ್ರಕಾರ ಹೊಲ ಒಂದು ಖಂಡಗ ೨ ವೇಶನವ ಗೃಹ ಒಂದು ನಮ್ಮ ಕೆಂಪಸಾಗರದ ಕರ್ತರಾದಾರಭ್ಯ ನಡೆದುಬರುವ ವರದರಾಜಸ್ವಾಮಿಯವರ ದೇವಸ್ಥಾನದಲ್ಲಿ ಮುತ್ತೀರ್ಥ ಅರಳುಪಾಡಿನ ಬಗ್ಯೆ ವರುಷಾಶನ ೧೨|೦ ವರಹಾ ಅಕ್ಕಿಪಡಿ ಬಗ್ಯೆ ೧ ಕ್ಕೆ ಕಜ್ಜಾಯ ಒಂದು. (ಅಗ್ರತೀರ್ಥ, ತಿರುಮಾಲೆ ತಿರುಪರಿವಟ್ಟ, ತಾಂಬೂಲ ಚಂದನ ಪ್ರಸಾದ ಕಜ್ಜಾಯ ಮೊದಲಾದವು.) ಈ ಶಾಸನಗಳ ಆಧಾರವೇ ಮುಖ್ಯವಾಗಿ—ವಾದಿಗಳ ಪರ ತೀರ್ಮಾನವಾಗಿದೆ. ಜಡ್ಜ್‌ಮೆಂಟ್ ತಾರೀಖು ೨೦-೮-೧೮೩೮ ! ಪ್ರತಿವಾದಿಗಳು ಕೃತ್ರಿಮದಿಂದ ಸ್ವಾಧೀನಪಡಿಸಿಕೊಂಡಿದ್ದ ಭಟಮಾನ್ಯಗಳು, ವರುಷಾಶನ, ದೇವಸ್ಥಾನದ ಮರ್ಯಾದೆ ಮೊದಲಾದುವುಗಳನ್ನು ಪ್ರತಿವಾದಿಗಳಿಂದ ವಾದಿಗಳಿಗೆ ಬಿಡಿಸಿಕೊಟ್ಟು ಬರತಕ್ಕ ಬಾಕಿ(೨೦೫೨-೧-೬) ರೂ||ಗೆ ಡಿಕ್ರಿ ಕೊಟ್ಟಿದೆ.